ಸಂವಾದ

ಏಪ್ರಿಲ್ ೨೦೦೮ ರೂ.೧೦

ಅಂಬೇಡ್ಕರ್ ವಿಶೇಷಾಂಕ

ನೈಜ ಅಂಬೇಡ್ಕರ್ ಅನ್ವೇಷಣೆಯಲ್ಲಿ...

ಸಂವಾದ

ಮಾಸ ಪತ್ರಿಕೆ

ಸಂಪುಟ ೪ ಸಂಚಿಕೆ ೬
ಏಪ್ರಿಲ್ ೨೦೦೬

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : **samvaada@hotmail.com**

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೩
❑ ಪ್ರತಿಕ್ರಿಯೆ ೪
❑ ಅಂತರಂಗ ೫
❑ ಅಂಬೇಡ್ಕರ್: ಸ್ಫೂರ್ತಿಯಿಂದ ಪೂಜೆಯ ಕಡೆಗೆ ೬
○ ಡಾ॥ ಬಿ.ಎಂ. ಪುಟ್ಟಯ್ಯ
❑ ಮಹಾನ್ ಪ್ರಜಾಪ್ರಭುತ್ವವಾದಿ ೧೦
○ ಸಿ.ಎಚ್. ಜಾಕೋಬ್ ಲೋಬೊ

❑ ನೈಜ ಅಂಬೇಡ್ಕರರ ಅನ್ವೇಷಣೆಯಲ್ಲಿ... ೧೨
○ ಡಾ॥ ಆನಂದ್ ತೇಲ್‌ತುಂಬ್ಡೆ
❑ ಮಹಿಳಾ ಸಬಲೀಕರಣ: ಅಂಬೇಡ್ಕರ್ ದೃಷ್ಟಿಕೋನ ೧೭
○ ಮಹೇಶ್ ತಿಪ್ಪಶೆಟ್ಟಿ
❑ ದಲಿತ ಪ್ರಜ್ಞೆ ಮತ್ತು ಕುಲ ಮೀಮಾಂಸೆ: ಕೆಲವು ಪ್ರಶ್ನೆಗಳು ೨೦
○ ಡೊಮಿನಿಕ್. ಡಿ
❑ ದಲಿತ ಎನ್ನುವುದು ಆಧುನಿಕೋತ್ತರ ಸಾಂಸ್ಕೃತಿಕ ವಿದ್ಯಮಾನವೇ? ೨೬
○ ಡಾ॥ ಪಿ.ಕೆ. ಪೋಕರ್
❑ ಅಂಬೇಡ್ಕರ್ V/S ಆರ್‌ಎಸ್‌ಎಸ್ ೩೨
○ ಸನತ್ ಕುಮಾರ ಬೆಳಗಲಿ

❑ ಶಿಕ್ಷಣ, ದಲಿತರು ಮತ್ತು ಭಾಷೆ ೩೪
○ ಡಾ॥ ಕಾ.ವೆಂ. ಶ್ರೀನಿವಾಸ ಮೂರ್ತಿ
❑ ಡಾ॥ ಅಂಬೇಡ್ಕರ್: ಆದಿವಾಸಿಗಳ ಕುರಿತು ೩೮
○ ಡಾ॥ ಎ.ಎಸ್. ಪ್ರಭಾಕರ
❑ ದಲಿತ್ ಡೈರಿ ೪೬
○ ಚಂದ್ರಭಾನ್ ಪ್ರಸಾದ್
❑ ಬುದ್ಧಾಯಣ ೫೦
○ ಸಿ.ಎಚ್.ರಾಜಶೇಖರ್

ಕವನಗಳು : ❑ ಸೊಳ್ಳು ಸೊಲ್ಲಾಯಿತು ೧೬

ಮುಖಪುಟ ಕಲೆ: ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಒಳಮೀಸಲಾತಿ: ವಿವೇಕ ಮುಖ್ಯವಾಗಲಿ

ಮಾನ್ಯ ಸಂಪಾದಕರೇ,

ಬಹಳ ದಿನಗಳಿಂದ 'ಸಂವಾದ'ದಲ್ಲಿ ನಡೆಯುತ್ತಿರುವ ಅಹಿಂದ ಹಾಗೂ ಒಳಮೀಸಲಾತಿ ಚರ್ಚೆ ಗಮನಿಸುತ್ತಿರುವೆನು. ಎರಡೂ ಚರ್ಚೆಗಳ ಮೂಲಕ, ಸಮಕಾಲೀನ ಸಂದರ್ಭದ ಯಾವ ಪತ್ರಿಕೆಯೂ ಮಾಡದ ಅದ್ಭುತ ಚರ್ಚೆಗೆ 'ಸಂವಾದ' ಕಾರಣವಾದದ್ದು ಮಹತ್ವದ ಸಂಗತಿಯಾಗಿದೆ.

ಆದರೆ ಒಳಮೀಸಲಾತಿ ವಿಚಾರವನ್ನು ಚರ್ಚಿಸುವಾಗ ಅದರ ಸಾಮಾಜಿಕ ಆರ್ಥಿಕ ಫಲಾಪೇಕ್ಷೆಗಳ ಹೊರತಾಗಿ, ಜನಾಂಗ ದ್ವೇಷ-ಜಾತಿ ಅವಹೇಳನಗಳು ಅಲ್ಲಲ್ಲಿ ಇಣುಕಿದ್ದು ಮಾತ್ರ ವಿಪರ್ಯಾಸ. ಹಿಂದುಳಿದ ವರ್ಗಗಳ ಒಳಮೀಸಲಾತಿ ಚರ್ಚಿಸುವಾಗ ಕುರುಬರು ಮತ್ತು ಈಡಿಗರನ್ನು 'ಕಬಳಿಸುವವರು' ಎಂಬಂತೆ ನೋಡಲಾಗಿದೆ. ಹಾಗೆಯೇ ಪರಿಶಿಷ್ಟ ಜಾತಿಯ ಒಳಮೀಸಲಾತಿ ಚರ್ಚೆಯಲ್ಲಿ ಬಲಗೈ ಹೊಲೆಯರನ್ನು ಅಪರಾಧಿಗಳೆಂಬಂತೆ ವಿಶ್ಲೇಷಿಸಲಾಗಿದೆ. ಅದೂ ಅಲ್ಲದೆ, ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ 'ಅರೆಸ್ಪೃಶ್ಯ' ಜಾತಿಗಳನ್ನೂ ಒಂದು ರೀತಿಯಲ್ಲಿ ಅಸ್ಪೃಶ್ಯರ ಸವಲತ್ತುಗಳನ್ನು ಕಬಳಿಸುವವರು ಎಂದೇ ದೂರಲಾಗಿದೆ. ಈ ಎಲ್ಲಾ ಸಂದರ್ಭದಲ್ಲಿ ವಸ್ತುನಿಷ್ಠ ವಿಶ್ಲೇಷಣೆಗಿಂತ ಒಂದು ಬಗೆಯ ದ್ವೇಷ-ಅಸೂಯೆಯ ಧ್ವನಿಯೇ ಎದ್ದು ಕಾಣುತ್ತಿತ್ತು.

ಪರಿಶಿಷ್ಟ ಜಾತಿಗಳನ್ನು ಗುರುತಿಸುವಿಕೆ ಸಮಯದಲ್ಲಾಗಲಿ, ಹಿಂದುಳಿದ ಜಾತಿಗಳನ್ನು ಗುರುತಿಸುವಿಕೆ ಸಮಯದಲ್ಲಾಗಲಿ ಈಗಿನ ಸ್ಥಿತಿಗತಿಗಳ ಬಗ್ಗೆ ಮುಂದಾಲೋಚನೆ ಮಾಡಿದ್ದರೆ ಬಹುಷಃ ಈ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲವೇನೋ ಅನಿಸುತ್ತಿದೆ. ಪರಿಶಿಷ್ಟ ಜಾತಿಗಳ ವಿಂಗಡಣೆಗೆ ಅನುಸರಿಸಿದ ಮಾನದಂಡ ಕೂಡ ಕೇವಲ ಅಸ್ಪೃಶ್ಯತೆ ಆಗಿರಲಿಲ್ಲ. ಅಷ್ಟಕ್ಕೂ ಅಸ್ಪೃಶ್ಯತೆ ಎನ್ನುವುದು ಒಂದೇ ಪ್ರಮಾಣದ ಮಾನದಂಡವಲ್ಲ. ಹಿಂದೂ ಜಾತಿ ಪದ್ಧತಿಯಲ್ಲಿ ಒಬ್ಬರ ತಲೆಮೇಲೆ ಒಬ್ಬರು ನಿಂತಿರುವುದೇ ಈ ಅಸ್ಪೃಶ್ಯತೆಯ ಆಧಾರದ ಮೇಲೆ. ಬ್ರಾಹ್ಮಣನಿಗೆ ಲಿಂಗಾಯಿತ, ಲಿಂಗಯಿತನಿಗೆ ಒಕ್ಕಲಿಗ, ಒಕ್ಕಲಿಗನಿಗೆ ಕುರುಬ, ಕುರುಬನಿಗೆ ಮಡಿವಾಳ, ಮಡಿವಾಳನಿಗೆ ಕ್ಷೌರಿಕ, ಕ್ಷೌರಿಕನಿಗೆ ಬೋವಿ, ಬೋವಿಗೆ ಹೊಲೆಯ, ಹೊಲೆಯನಿಗೆ ಮಾದಿಗ, ಮಾದಿಗನಿಗೆ ಜಾಡಮಾಲಿ... ಹೀಗೆ ಅಸ್ಪೃಶ್ಯತೆಯ ಪ್ರಮಾಣ ಒಬ್ಬರಿಂದ ಮತ್ತೊಬ್ಬರಿಗೆ ಭಿನ್ನ, ಎಲ್ಲರೂ ಅವರವರ ಪ್ರಮಾಣದಲ್ಲಿ ಅಸ್ಪೃಶ್ಯರು. ಹಾಗಾಗಿ ಯಾವುದೇ ಮೀಸಲಾತಿ ಆಯ ಜನಾಂಗದ ಜನಸಂಖ್ಯೆ ಆಧರಿಸಿ ಹಂಚಿಕೆಯಾದರೆ ಮಾತ್ರ ನ್ಯಾಯ ಸಿಕ್ಕುತ್ತದೆಯೇ ಹೊರತು, ಬೇರಾವುದೇ ವಿಧಾನದಿಂದ ಅಲ್ಲ ಎಂಬ ಸತ್ಯವನ್ನು ಎಲ್ಲರೂ ಮನಗಾಣಬೇಕಾಗಿದೆ.

ಹೀಗೆ ಜನಸಂಖ್ಯೆ ಆಧಾರದ ಮೇಲೆ ಹಂಚಿಕೆ ಮಾಡುವಾಗ ಅತೀ ಕಡಿಮೆ ಜನಸಂಖ್ಯೆಯ ಅಲಕ್ಷಿತರು ಹಾಗೂ ಅಸಂಘಟಿತ ಜಾತಿಗಳಿಗೆ ಏನು ಮಾಡಬೇಕೆಂಬ ಬಗ್ಗೆ ಸರಿಯಾಗಿ ಆಲೋಚಿಸಬೇಕು. ಅವುಗಳಿಗೆ ಇದೇ ಜನಸಂಖ್ಯೆ ಮಾನದಂಡವನ್ನು ಅನುಸರಿಸಿದಲ್ಲಿ ಸಿಕ್ಕುವುದು ಸೊನ್ನೆ ಮಾತ್ರ. ಅಂಥ ಜನಸಮುದಾಯಗಳನ್ನು ಗುರುತಿಸಿ ಅವರಿಗೆ ಸರಿಯಾದ ನ್ಯಾಯ ದೊರಕಿಸಿ ಕೊಡಬೇಕಾದ ಹೊಣೆಗಾರಿಕೆಯನ್ನು ಉಳಿದ ಬಹುಸಂಖ್ಯಾತ ಜಾತಿಗಳು ಹೊರಬೇಕಾಗುತ್ತದೆ. ಕಬಳಿಕೆಯೇ ಮುಖ್ಯ ಗುರಿಯಾಗಿರುವ ಸಮುದಾಯಗಳು ಇಂಥ ತ್ಯಾಗಕ್ಕೆ ಮುಂದಾಗದಿದ್ದರೆ ಅದರಿಂದ ಅತ್ಯಂತ ಅನ್ಯಾಯವೇ ನಡೆದು ಹೋಗುವ ಅಪಾಯ ಎದುರಾಗುತ್ತದೆ.

ಈಗ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ವಿವಿಧ ಜಾತಿಗಳು ತಮ್ಮ ಜನಸಂಖ್ಯೆಯ ಬಗೆಗೆ ನೀಡುತ್ತಿರುವ ವಿವರಗಳನ್ನು ನೋಡಿದರೆ ಇಡೀ ಕರ್ನಾಟಕ ಪೂರ್ತಿ ಪರಿಶಿಷ್ಟ ಜಾತಿಯವರೇ ತುಂಬಿರಬೇಕಾಗುತ್ತಿತ್ತು. ಅಷ್ಟು ಉತ್ಪ್ರೇಕ್ಷಿತ ವಿವರಗಳನ್ನು ಈ ಜಾತಿಗಳು ನೀಡುತ್ತಿವೆ. ಅಲ್ಲದೆ ಒಂದು ಜಾತಿ ಮತ್ತೊಂದು ಜಾತಿಯನ್ನು ದ್ವೇಷಿಸುವ ಮಟ್ಟಕ್ಕೆ ಹೋಗಿವೆ. ವಿವೇಕ ಇರಬೇಕಾದಲ್ಲಿ ಅಸಹನೆ ತುಂಬಿದಂತೆ ಕಾಣುತ್ತಿದೆ. ಅದುದರಿಂದ ಆಯಾ ಜನಾಂಗಗಳ ಮುಖಂಡರು ಈ ವಿಚಾರವನ್ನು ಜಾಣ್ಮೆ ಮತ್ತು ವಿವೇಕದಿಂದ ಬಗೆಹರಿಸಿಕೊಳ್ಳುವುದೇ ಹೆಚ್ಚು ಸೂಕ್ತವಾದುದಾಗಿದೆ.

ರಾಜಕಾರಣಿಗಳು ಈಗಾಗಲೇ ಈ ವಿಚಾರವನ್ನು ತಮ್ಮ ಓಟಿನ ಬಂಡವಾಳ ಮಾಡಿಕೊಳ್ಳಲು ತುದಿಗಾಲ ಮೇಲೆ ನಿಂತಂತಿದೆ. ಅದರಲ್ಲೂ ಜೆಡಿ(ಎಸ್)-ಬಿಜೆಪಿ ಸಮ್ಮಿಶ್ರ ತಳಿ ರಾಜಕಾರಣ ಈ ದಿಕ್ಕಿನಲ್ಲಿ ಬಹಳ ಮುಂದುವರೆದ ಸೂಚನೆಗಳೂ ಇವೆ. ಇದು ಇನ್ನೂ ಮುಂದುವರೆದರೆ ಎಲ್ಲ ಕೆಳಜಾತಿಗಳ ನಡುವೆ ಜಗಳ ತಂದಿಟ್ಟು, ಉರಿವ ಬೆಂಕಿಯಲ್ಲಿ ಮೈ ಕಾಯಿಸಿಕೊಳ್ಳಲು ರಾಜಕಾರಣಿಗಳು ಸಿದ್ಧರಾಗಿರುತ್ತಾರೆ!

ಲಲಿತಾ ಚಂದ್ರಶೇಖರ ಸ್ವಾಮಿ
ಬಳ್ಳಾರಿ



ಪತ್ರಗಳು

> **ಅಂಬೇಡ್ಕರ್ ವಿಶೇಷಾಂಕದ ಕಾರಣ 'ದೇವರಾಯ' ಜೀವನ ಚಿತ್ರಣದ ಉಳಿದ ಭಾಗವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು – ಸಂಪಾದಕ.**

ಬುಷ್ ಓಡಿಸಿದರೆ ಸಾಲದು...

ಪ್ರೀತಿಯ ಇಂದೂಧರ ಅವರೇ,

ಬುಷ್ ಭಾರತ ಭೇಟಿ ಹಿನ್ನೆಲೆಯಲ್ಲಿ ಶಿವಸುಂದರ್ ಅವರ ಲೇಖನ ಅತ್ಯಂತ ಸೊಗಸಾಗಿ ಮೂಡಿಬಂದಿದೆ. ಬುಷ್ ಮತ್ತವನ ಸಂತಾನ ಜಗತ್ತಿನಾದ್ಯಂತ ಮಾಡುತ್ತಿರುವ ದಾಂಧಲೆ ತಿಳಿದು ಎದೆ ದಸಕ್ಕೆಂದಿತು. ಇಂಥ ಯುದ್ಧ ಕೋರ ಹಾಗೂ ಜನಾಂಗ ದ್ರೋಹಿಯನ್ನು ಭಾರತದಂತ ಪ್ರಜಾಪ್ರಭುತ್ವ ರಾಷ್ಟ್ರ ಸ್ವಾಗತಿಸಬೇಕಾಯಿತಲ್ಲ ಅಂತ ನೋವು ಆಯಿತು.

ವಿಚಿತ್ರ ಎಂದರೆ ಬುಷ್ ನಮ್ಮೊಳಗೆಲ್ಲೋ ಓಡಾಡುತ್ತಿದ್ದಾನೆ ಎಂದೇ ನನಗೆ ಅಂಜಿಕೆಯಾಗುತ್ತಿದೆ. ಬುಷ್ ಪ್ರತಿನಿಧಿಸುವ ಹತ್ತು ಹಲವು ಮೌಲ್ಯಗಳಿಗೆ ನಾವೆಲ್ಲಾ ಈಗಾಗಲೇ ಅಡಿಯಾಳುಗಳಾಗಿ ಬಿಟ್ಟಿದ್ದೇವೆ. ಗ್ರಾಹಕ ಸಂಸ್ಕೃತಿಯ ದಾಸರಾಗಿ, ಐ.ಟಿ.ಬಿಟಿಗಳ ಪಾಲುದಾರರಾಗಿ. ಟಿ.ವಿ. ಚಾನಲ್ಲುಗಳ ಮುಂದೆ ಕುಳಿತು ಭವಿಷ್ಯವನ್ನೇ ಮರೆಯುತ್ತಿದ್ದೇವೆ.

ಹಾಗಾಗಿ ನಾವು ಅಮೆರಿಕಾ ಅಧ್ಯಕ್ಷ ಬುಷ್‌ನನ್ನು ಓಡಿಸಿದರೆ ಮಾತ್ರ ಸಾಲದು, ನಮ್ಮೊಳಗಿನ ಲಾಲಸೆ ಎಂಬ ಬುಷ್‌ನನ್ನೂ ಓಡಿಸಬೇಕಾಗಿದೆ.

ಮಣಿಕಂಠ ಆರ್. ಸೇಡಂ,
ಗುಲ್ಬರ್ಗ

ಗ್ರಹಚಾರ ಬಿಡಿಸಿದ ಕೃಷಿ

ಗೌರವಾನ್ವಿತ ಹೊನ್ನಾಪುರ ಅವರಿಗೆ ಸಪ್ರೇಮ ವಂದನೆಗಳು,

ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಕುರಿತಾದ ಸ್ವಾಮಿ ಆನಂದ್ ಅವರ ಪುಸ್ತಕ ಕುರಿತಂತೆ ಶಿವನಂಜಯ್ಯ ಬಾಳೆಕಾಯಿ ಅವರು ಬರೆದ ಪುಸ್ತಕ ಅವಲೋಕನ ಓದಿ ತುಂಬಾ ನೋವಾಯಿತು. ಶಿವನಂಜಯ್ಯ ಅವರು ವಿನಾ ಕಾರಣ ಸುಭಾಷ್ ಪಾಳೇಕರ್ ಅವರನ್ನು ಕುರಿತು ಸಲ್ಲದ ಮಾತುಗಳನ್ನು ಬರೆದಿದ್ದಾರೆ. ಬಹುಷಃ ಪಾಳೇಕರರ ಕೃಷಿ ಪದ್ಧತಿ ಕುರಿತಂತೆ ಲೇಖಕರು ಪೂರ್ವಾಗ್ರಹಗಳನ್ನು ತುಂಬಿಕೊಂಡಿರುವುದರಿಂದ ಅವರಿಗೆ ಸಹಜವಾಗಿ ಅದು ಇಷ್ಟವಾಗಿಲ್ಲ ಅನ್ನಿಸುತ್ತದೆ. ಪಾಳೇಕರರ ಕೃಷಿ ಪದ್ಧತಿ ಅನುಸರಿಸಿ ಕೃಷಿ ಮಾಡಿರುವ ನನ್ನ ಗೆಳೆಯರೊಬ್ಬರ ಪ್ರಕಾರ ಈಗ ಅವರ ಗ್ರಹಚಾರ ಬಿಟ್ಟಿದೆ. ಕೈಯಲ್ಲಿ ನಾಲ್ಕು ಕಾಸು ನೋಡುತ್ತಿದ್ದಾರೆ!

ದಯವಿಟ್ಟು ಇಂಥ ಅಪ ಪ್ರಚಾರದ ಲೇಖನಗಳನ್ನು ಪ್ರಕಟಿಸಬೇಡಿರಿ.

ಕೆ. ಹನುಮಂತರೆಡ್ಡಿ, ಚಿತ್ರದುರ್ಗ

ಚಂದಾ ವಿವರ
ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

'ಇಡಿ' 'ಬಿಡಿ' ನಾಯಕರನ್ನು ಕುರಿತು ಗಡಿಬಿಡಿಯಾಗಿ....

ಪ್ರತಿಕ್ರಿಯೆ

ವೀರಭದ್ರ ಚೆನ್ನಮಲ್ಲ ಸ್ವಾಮೀಜಿಯವರು ಬುದ್ಧ, ಬಸವ ಮತ್ತು ಅಂಬೇಡ್ಕರರನ್ನು ಆಧುನಿಕ ತ್ರಿಮೂರ್ತಿಗಳು ಎಂಬುದಾಗಿ ವಿಶ್ಲೇಷಿಸಿದ್ದರು. ಈ ಸಾಲಿಗೆ ಬೇರೆಯವರನ್ನು ತರುವುದು ಸ್ವಲ್ಪ ಕಷ್ಟ ಯಾಕೆಂದರೆ ಈ ಮೂವರೂ ವೇದಗಳನ್ನು, ವೈದಿಕ ಧರ್ಮವನ್ನು ಸಾರಾಸಗಟಾಗಿ ಅಲ್ಲಗಳೆದವರು. 'ವೇದಕ್ಕೆ ಹೊರೆಯ ಕಟ್ಟುವೆ' ಎಂದ ಬಸವಣ್ಣ ಅದಕ್ಕೆ ಪರ್ಯಾಯವಾದ ಆದರ್ಶವಾದ ಧರ್ಮ ಮಾರ್ಗವನ್ನು ನೀಡಿದ್ದಾನೆ. ಆದ್ದರಿಂದಲೇ ಇನ್ನೂ ಆರಾಧ್ಯಮೂರ್ತಿಯಾಗಿ ಉಳಿದಿದ್ದಾನೆ. ವೇದ ಧರ್ಮವನ್ನು ನಿರಾಕರಿಸಿದ ಇನ್ನೂ ಅನೇಕ ಸುಧಾರಕರಿದ್ದಾರೆ.

○ ಡಾ|| ಮೂಡ್ನಾಕೂಡು ಚಿನ್ನಸ್ವಾಮಿ

"But the world owes much to rebels who would dare to argue in face of the pontiff and insist that he is not infallible" –B.R Ambedkar

ಮಾರ್ಚ್ ೨೦೦೪ ರ ಸಂಚಿಕೆಯಲ್ಲಿ ಲೋಹಿಯಾವಾದಿಯೆಂದು ಹೆಸರುಗಳಿಸಿರುವ ಲೇಖಕ ಮಿತ್ರ ಡಿ.ಎಸ್. ನಾಗಭೂಷಣ ಅವರ 'ಚಳವಳಿಗಳ ಬಲಿ ಕೇಳುವ ಜಾತಿ ಕಾರಣ' ಲೇಖನವನ್ನು ಓದಿ, ಅಲ್ಲಿರುವ ಸಾಂಸ್ಕೃತಿಕ ಒಳನೋಟಗಳನ್ನು ಕುರಿತು ಕೆಲವು ಸಂದೇಹಗಳನ್ನು ವ್ಯಕ್ತಪಡಿಸಲು ಬಯಸಿದ್ದೇನೆ.

ಭಾರತದ ಜಾತಿ ಪದ್ಧತಿ ಅತ್ಯಂತ ಸಂಕೀರ್ಣವಾದ, ಕ್ಲಿಷ್ಟವಾದ, ಬೇರೆ ಜನವರ್ಗದಲ್ಲಿ ಅಸಂಭಾವ್ಯವಾದ ಸಾಮಾಜಿಕ ವ್ಯವಸ್ಥೆಯಾಗಿ ಕಂಡುಬಂದಿದೆ. ಆದ್ದರಿಂದಲೇ ಅದು ಹೊರಗಿನವರಿಗೆ ಅಷ್ಟು ಸುಲಭವಾಗಿ ಅರ್ಥವಾಗುವುದಿಲ್ಲ. ಆಧುನಿಕ ಮನಸ್ಸಿಗೆ ಅದು ಅತ್ಯಂತ ಅಮಾನವೀಯವಾದ, ಕೀಳು ಅಭಿರುಚಿಯ, ನಾಚಿಕೆಪಟ್ಟುಕೊಳ್ಳುವ ಅಸಂಬದ್ಧ ಸಮಾಜ ವ್ಯವಸ್ಥೆಯಾಗಿ ಕಾಣಬರುತ್ತದೆ. ಜಾತಿ ಹುಟ್ಟಿನೊಂದಿಗೇ ಅಂಟಿಕೊಳ್ಳುವುದರಿಂದ ಯಾವೊಬ್ಬ ಸಮಾಜ ವಿಜ್ಞಾನಿಗೂ ಭಾರತ ಸಮಗ್ರವಾಗಿ ಕಾಣುವುದೇ ಇಲ್ಲ. ನಮ್ಮ ಪಾರ್ಲಿಮೆಂಟ್ ಭವನವನ್ನು ಒಂದು ಮೂಲೆಯಲ್ಲಿ ನಿಂತು ಕ್ಲಿಕ್ಕಿಸಿದ ಹಾಗೆ ಕಾಣುತ್ತದೆ. ಪೂರ್ವಗ್ರಹಗಳಿಂದ ಪಾರಗಲೂ ಸಾಧ್ಯವಿಲ್ಲ. ಶ್ರೀಹರಿಕೋಟಾದಲ್ಲಿ ರಾಕೆಟ್ ಉಡಾಯಿಸುವ ಭಾರತೀಯ ವಿಜ್ಞಾನಿಗೆ ರಾಹುಕಾಲದ ಭೀತಿ ಕಾಡುವಂತೆ! ಅದನ್ನು ಸಮಗ್ರವಾಗಿ ಪರಿಕಲ್ಪಿಸಿ ಪರಿಹಾರಗಳನ್ನು ಸೂಚಿಸಿದವನು 'ಬುದ್ಧ' ಒಬ್ಬನೇ. ಅತಿ ಎತ್ತರಕ್ಕೆ ಬೆಳೆದ ಅವನಿಗೆ ಬೇರೆಯೇ ಆಗಿ ನಿಂತು ನೋಡಲು ಸಾಧ್ಯವಾಯಿತು. ಉಳಿದ ಎಲ್ಲ ಸಾಧಕರಿಗೂ ಅವನ ನೆರಳು ತಾಕಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಅಧ್ಯಾತ್ಮಿಕ ಧಾರೆ ಮತ್ತು ಲೌಕಿಕ ಧಾರೆ ಎಂಬ ವರ್ಗೀಕರಣ ತರ್ಕಕ್ಕೆ ಆಕರ್ಷಣೀಯವಾಗಿದೆ. ಲೇಖಕರು ಅಧ್ಯಾತ್ಮಿಕ ಧಾರೆಯಲ್ಲಿ ಕೆಲವರನ್ನು ಲೌಕಿಕ ಧಾರೆಯಲ್ಲಿ ಕೆಲವರನ್ನು, ಹೆಸರಿಸಿ ಇವರೀರ್ವರನ್ನೂ ಸಮನ್ವಯಗೊಳಿಸಿದವರೆಂದು ಕೆಲ ಹೆಸರುಗಳನ್ನು ಉದಾಹರಿಸಿರುತ್ತಾರೆ. ಇಲ್ಲಿ ಸ್ವಲ್ಪ ಗೊಂದಲವಿದ್ದಂತೆ ಕಾಣುತ್ತದೆ. ಆದರೆ ಬುದ್ಧ ಬಸವರ ಮಾರ್ಗದಲ್ಲಿ ಇವೆರಡೂ ಧಾರೆಗಳು ಒಂದರೊಳಗೊಂದು ಹೆಣೆದುಕೊಂಡಿದ್ದವು ಎಂಬುದನ್ನು ಅಲಕ್ಷಿಸುವಂತಿಲ್ಲ. ಬುದ್ಧ ದರ್ಶನದ ಮೂಲ ಭಿತ್ತಿ ಲೌಕಿಕವೆ. ಅವನ ಅಧ್ಯಾತ್ಮಿಕ ಪಯಣ ಸ್ವರ್ಗ ನರಕಗಳನ್ನು ಹಾದು ಹೋಗುವುದಿಲ್ಲ. ದೇವರ ಸಹಾಯವನ್ನು ಯಾಚಿಸುವುದಿಲ್ಲ. ಮನುಷ್ಯನ ಹುಟ್ಟಿಗೆ ಒಂದು ತಾರ್ಕಿಕ ಕೊನೆಯನ್ನು ಹುಡುಕುವುದಕ್ಕಾಗಿ ಆತ ಸಮಾಜದೊಳಗಿದ್ದುಕೊಂಡೇ, ಮನಸ್ಸನ್ನು ಕುರಿತು ಧ್ಯಾನಿಸುತ್ತಲೇ ಹೆಣಗಾಡಿದ್ದಾನೆ. ತನ್ನ ಕಾಲದಲ್ಲಿ ಪ್ರಚಲಿತವಿದ್ದ ಜಾತಿ ಪದ್ಧತಿಯನ್ನು ಕ್ಷುಲ್ಲಕವೆಂದು ಹೀಯಾಳಿಸಿ ಬಿಸಾಡಿದ್ದಾನೆ.

ಇನ್ನು ಬಸವನ ಅಧ್ಯಾತ್ಮಿಕ ಯಾತ್ರೆ ಶುರುವಾಗುವುದೇ ಮೌಢ್ಯದ, ಅಸಮಾನತೆಯ ವಿರುದ್ಧದ ಹೋರಾಟದಲ್ಲಿ. ಅವನು ಕಂಡುಕೊಂಡ ಇಷ್ಟಲಿಂಗ ಪರಿಕಲ್ಪನೆ ಮಡಕೆ ದೈವ, ಮೊರ ದೈವ, ಗಿಣ್ಣಿಲು ದೈವವೆಂದು ಮೌಢ್ಯದಲ್ಲಿ ಮುಳುಗಿಹೋಗಿದ್ದ ಶೂದ್ರಾತಿಶೂದ್ರರನ್ನು ಒಂದುಗೂಡಿಸಲು ರೂಪಿಸಿದ ಏಕದೇವೋಪಾಸನಾ ತಂತ್ರವಷ್ಟೆ. ಬಾಬಾಸಾಹೇಬ್ ಅಂಬೇಡ್ಕರ್‌ರವರು ಅವರಿಬ್ಬರ ನಿಲುವುಗಳನ್ನು ಸಮರ್ಥಿಸಿಕೊಂಡರಷ್ಟೇ ಅಲ್ಲದೆ ಅವರ ಚಿಂತನೆಗಳನ್ನು ಗಟ್ಟಿಗೊಳಿಸಿದ್ದಾರೆ. ಜಾತಿ ಪದ್ಧತಿ ರೋಗಗ್ರಸ್ತವಾಗಿದ್ದರಿಂದಲೇ ಅದನ್ನು ಪಾಲಿಸುವ 'ಹಿಂದೂ ಮನಸ್ಸು ರೋಗಗ್ರಸ್ತ' ಎಂದು ನಿರ್ಭಿಡೆಯಿಂದ ಹೇಳಿದ್ದಾರೆ.

ಇತ್ತೀಚೆಗೆ ನಿಡುಮಾಮಿಡಿ ವೀರಭದ್ರ ಚೆನ್ನಮಲ್ಲ ಸ್ವಾಮೀಜಿಯವರು ಬುದ್ಧ, ಬಸವ ಮತ್ತು ಅಂಬೇಡ್ಕರರನ್ನು 'ಆಧುನಿಕ ತ್ರಿಮೂರ್ತಿಗಳು' ಎಂಬುದಾಗಿ ವಿಶ್ಲೇಷಿಸಿದ್ದರು. ಈ ಸಾಲಿಗೆ ಬೇರೆಯವರನ್ನು ತರುವುದು ಸ್ವಲ್ಪ ಕಷ್ಟ. ಯಾಕೆಂದರೆ ಈ ಮೂವರೂ ವೇದಗಳನ್ನು, ವೈದಿಕ ಧರ್ಮವನ್ನು ಸಾರಾಸಗಟಾಗಿ ಅಲ್ಲಗಳೆದವರು. 'ವೇದಕ್ಕೆ ಹೊರೆಯ ಕಟ್ಟುವೆ' ಎಂದ ಬಸವಣ್ಣ ಅದಕ್ಕೆ ಪರ್ಯಾಯವಾದ, ಆದರ್ಶವಾದ ಧರ್ಮಮಾರ್ಗವನ್ನು ನೀಡಿದ್ದಾನೆ. ಆದ್ದರಿಂದಲೇ ಇನ್ನೂ ಆರಾಧ್ಯಮೂರ್ತಿಯಾಗಿ ಉಳಿದಿದ್ದಾನೆ. ವೇದ ಧರ್ಮವನ್ನು ನಿರಾಕರಿಸಿದ ಇನ್ನೂ ಅನೇಕ ಸುಧಾರಕರಿದ್ದಾರೆ. ಅವರೆಲ್ಲರೂ ಬುದ್ಧ ಬಸವರ ಮಾರ್ಗಕ್ಕೆ ಒಗ್ಗಿಕೊಂಡಿದ್ದಾರೆ. ಆದ್ದರಿಂದ ಅವರ ಪ್ರಸ್ತಾಪ ಸಂವಹನದ ದೃಷ್ಟಿಯಿಂದ ಇಲ್ಲಿ ಅಗತ್ಯ ಕಾಣುವುದಿಲ್ಲ. ಇವರು ಹೇಳುವಂತೆ ವಿವೇಕಾನಂದರು, ನಾರಾಯಣಗುರುಗಳನ್ನು ಸೇರಿಸುತ್ತಾ ಹೊರಟರೆ ಆ ಯಾದಿಗೆ ಕೊನೆಯೇ ಇರುವುದಿಲ್ಲ. ಇಂಡಿಯಾ ಅಸಂಖ್ಯ ಸುಧಾರಕರನ್ನು, ಸಿಂಪಥೈಸರ್‌ಗಳನ್ನು ಕಂಡಿದೆ. ಅದು ಕುವೆಂಪು ಅವರನ್ನು ದಾಟಿ ಇಂದಿನ ನಿಡುಮಾಮಿಡಿಯವರನ್ನು ಬಿಡಿ; ಬಸವಣ್ಣನನ್ನು, ಭಗವದ್ಗೀತೆಯನ್ನು ಒಂದೇ ಉಸಿರಿನಲ್ಲಿ ಹೇಳುವ ಸಿದ್ದೇಶ್ವರ ಸ್ವಾಮೀಜಿಯವರಿಗೆ ಬಂದು ನಿಲ್ಲುತ್ತದೆ. ಪ್ರಗತಿಪರ ಚಿಂತನೆಯ ಸಂಕೇತಗಳಂತಿರುವ ಈ ತ್ರಿಮೂರ್ತಿಗಳ ಮಧ್ಯೆ ಗಾಂಧಿ ಮಿಸ್ಸಾಗಿರುವುದು ಮಧ್ಯಮ ಜಾತೀ ಬುದ್ಧಿಜೀವಿಗಳನ್ನು ಚಿಂತೆಗೀಡು ಮಾಡಿರುವುದು ನಿಜ. ಗಾಂಧೀಜಿಯ ದ್ವಂದ್ವಗಳು ಅಪಾರ ಮತ್ತು ಢಾಳಾಗಿದ್ದವು. ಅವರು ರಾಜಕೀಯವಾಗಿ ಗೆದ್ದವರು, ರಾಷ್ಟ್ರಪಿತ ಎನ್ನುವ ಮಾತನ್ನು ಒಪ್ಪಿಕೊಂಡೂ ಈ ಅಭಿಪ್ರಾಯವನ್ನು ನೀಡಬೇಕಾಗಿದೆ. ಕೆಲ ದಿನಗಳ ಹಿಂದೆ ದೇವನೂರು ನನಗೆ ಒಂದು ಸಣ್ಣ ಪುಸ್ತಕವನ್ನು ಕೊಟ್ಟರು. ಅದು ಗಾಂಧೀಜಿಯವರ ಬದಲಾದ ಚಿಂತನೆಗಳ ಕುರಿತಾದದ್ದು. ೧೯೨೦ ರಲ್ಲಿ ಹೇಳಿದ್ದನ್ನು ೩೦ ರಲ್ಲಿ ಬದಲಾಯಿಸಿಕೊಳ್ಳುವುದು, ೩೦ ರ ಹೇಳಿಕೆಯನ್ನು ೩೫ ರಲ್ಲಿ ತಿದ್ದುಕೊಂಡಿದ್ದು; ಹೀಗೆ ಅವುಗಳ ದೊಡ್ಡ ಪಟ್ಟಿಯೇ ಇದೆ. ಒಬ್ಬ ತತ್ವಜ್ಞಾನಿಯಾದವನು ಒಮ್ಮೆ ನೀಡಿದ ಅಭಿಪ್ರಾಯವನ್ನು ಸಂಪೂರ್ಣವಾಗಿ ಬದಲಿಸಿಕೊಳ್ಳುವಂತಿರಬಾರದು. ಹಾಗಿದ್ದಾಗ ಅವನು ಪರಿಪೂರ್ಣನೆನಿಸಿಕೊಳ್ಳಲಾರ ಎಂದು ಎಲ್ಲೋ ಓದಿದ ನೆನಪು.

ಇಷ್ಟೆಲ್ಲವನ್ನು ಯಾಕೆ ಹೇಳಬೇಕಾಯಿತೆಂದರೆ ವಿವೇಕಾನಂದರು, ನಾರಾಯಣಗುರುಗಳು ಇವರ ದೃಷ್ಟಿಯಲ್ಲಿ ಇಡೀ ಸಮಾಜವನ್ನು ಮುನ್ನಡೆಸುವ 'ಇಡಿ' ನಾಯಕರು. ಇವರು ಅಂಬೇಡ್ಕರರನ್ನು ಕುರಿತೇ ಒಂದು ವರ್ಗದ ಅಥವಾ ಬೌದ್ಧಿಕ ಪರಿಭಾಷೆಯಲ್ಲಿ 'ಬಿಡಿ' ನಾಯಕರು ಎಂದು ಹೇಳಿದಂತಿದೆ. ಬುದ್ಧನ ನಂತರದ ಹಿಂದೂ ಧರ್ಮವೆನ್ನುವುದು ಬೌದ್ಧೀಯ ಮೌಲ್ಯಗಳ ತಿರುಳನ್ನು ಪಡೆದುಕೊಂಡು ಬುದ್ಧನೆಂಬ ಸಿಪ್ಪೆಯನ್ನು ಹೊರಹಾಕಿತು ಎಂಬ ಕಟು ಸತ್ಯವನ್ನು ಸ್ವತಃ ಅಂಬೇಡ್ಕರರೇ ಹೇಳಿದ್ದಾರೆ. ಅದಕ್ಕೂ ಮುಂಚೆ ಅದು ಯಾವ ಸ್ವರೂಪದಲ್ಲಿದ್ದಿರಬಹುದೆಂಬುದನ್ನು ಊಹಿಸಿಕೊಳ್ಳುವುದೂ ಕಷ್ಟ. ಆದರೂ ಹಿಂದೂ ಧರ್ಮಕ್ಕೆ ವೈದಿಕ ಚೌಕಟ್ಟಿದೆ. ಜಾತಿ ಪದ್ಧತಿಯ ಹೆಸರಿನಲ್ಲಿ ಅಸಮಾನತೆಯನ್ನು ಸುಭದ್ರವಾಗಿ ಕಾಪಾಡಿ

(೩೭ ನೇ ಪುಟಕೆ)

ಸಂಪಾದಕೀಯ



ಅಂತರಂಗ

ಅಂಬೇಡ್ಕರ್ ಅನ್ವೇಷಣೆಯಲ್ಲಿ...

ಇದು 'ಸಂವಾದ' ಹೊರ ತರುತ್ತಿರುವ ನಾಲ್ಕನೇ ಅಂಬೇಡ್ಕರ್ ವಿಶೇಷಾಂಕ. ಎಲ್ಲ ಜನಪರ ವಿಚಾರಧಾರೆಗಳ ಮುಕ್ತ ವೇದಿಕೆಯಾದ 'ಸಂವಾದ' ಪ್ರತಿ ವರ್ಷ ಅಂಬೇಡ್ಕರ್ ವಿಶೇಷಾಂಕ ತರುವ ಅಗತ್ಯವಿದೆಯೇ? ಎಂದು ಕೆಲ ಓದುಗರು ಕೇಳಿದ್ದರೆ, 'ಅಂಬೇಡ್ಕರ್ ವಿಚಾರ ಎಲ್ಲರಿಗೂ ಮುಟ್ಟಿದೆ. ಮತ್ತೆ ಮತ್ತೆ ಅದನ್ನೇ ಯಾಕೆ ಚರ್ಚಿಸುತ್ತೀರಿ?' ಅಂತಲೂ ಕೆಲವರು ಪ್ರಶ್ನಿಸಿದ್ದಾರೆ. 'ಚರ್ಚೆಯಲ್ಲೇ ಎಷ್ಟು ದಿನ ಕಾಲ ಹರಣ ಮಾಡುವುದು. ಈಗೇನಿದ್ದರೂ ಕ್ರಿಯಾತ್ಮವಾಗಿ ತೊಡಗಿಸಿಕೊಳ್ಳುವುದರತ್ತ ಗಮನ ಹರಿಸಿ' ಎಂದು ಮತ್ತೆ ಕೆಲವರು ವಾದಿಸುತ್ತಿದ್ದಾರೆ.

ಈ ಎಲ್ಲಾ ಪ್ರಶ್ನೆ ಮತ್ತು ವಾದಗಳು ಮೇಲ್ನೋಟಕ್ಕೆ ಸರಿ ಎನಿಸುತ್ತವೆ. ಆ ಮೇಲ್ನೋಟದ ಅರಿವಿನಲ್ಲಿ ಪೂರ್ಣಪ್ರಮಾಣದ ಸತ್ಯವಿಲ್ಲ ಎಂದೇ ನನ್ನ ನಂಬಿಕೆ. ಅಂಬೇಡ್ಕರ್ ವಿಚಾರಗಳಿಗಿಂತ ಅವರ ಆರಾಧನೆಗೆ ಹೆಚ್ಚು ಒತ್ತು ಸಿಗುತ್ತಿರುವುದು ನಮ್ಮ ನಡುವಿನ ದುರಂತ. ಈ ಹೊತ್ತಿನ ದಲಿತ ಪ್ರಜ್ಞೆ, ಹೋರಾಟಗಳೆಲ್ಲವೂ, ವ್ಯವಸ್ಥೆಯೊಳಗಿನ ಹೊಂದಾಣಿಕೆಯ ವಿವಿಧ ರೂಪಗಳಂತೆಯೇ ತೋರುತ್ತಿವೆ. ಅಂಬೇಡ್ಕರ್ ಅವರನ್ನು ಅರ್ಥೈಸುವ ಬಗೆಯೂ ಈ ಹೊಂದಾಣಿಕೆಯ ಭಾಗವಾಗಿಯೇ ಕಂಡು ಬರುತ್ತಿದೆ. ದಲಿತ ಚಳವಳಿ ಧಣಿವಾರಿಸಿಕೊಳ್ಳುವ ಸ್ಥಿತಿ ಮುಟ್ಟಿದ್ದರೆ, ರಾಜಕೀಯ, ಸಾಮಾಜಿಕ ಹಾಗೂ ಅಕಡೆಮಿಕ್ ಕ್ಷೇತ್ರಗಳಲ್ಲಿ ಅಂಬೇಡ್ಕರ್ ಅವರ ವಿಕೃತಿಗಳು ರಾರಾಜಿಸತೊಡಗಿವೆ. ಒಂದು ಬಗೆಯ ಹತಾಷೆ ಎಲ್ಲ ಕಡೆ ಚಾಚಿಕೊಂಡಿದೆ.

ನಮ್ಮ ನಡುವೆ ಈಗ ಹಲವು ಅಂಬೇಡ್ಕರ್‌ಗಳಿದ್ದಾರೆ. ಅಂದರೆ ಅಂಬೇಡ್ಕರ್ ಬೇರೆ ಬೇರೆ ರೂಪದಲ್ಲಿ ನಮ್ಮೊಳಗಿದ್ದಾರೆ. ಕೆಲವರಿಗೆ ಅಂಬೇಡ್ಕರ್ ಒಂದು ನಿರ್ದಿಷ್ಟ ಜಾತಿಯ ನಾಯಕನಾಗಿ ಕಾಣಿಸಿದರೆ, ಮತ್ತೆ ಕೆಲವರಿಗೆ ಅವರು ದಲಿತರ ಆಧುನಿಕ ಬದುಕಿನ ಹೊಸ ಆಶಯಗಳ ಪ್ರತೀಕದಂತೆ ಕಾಣಿಸುತ್ತಿದ್ದಾರೆ. ಇನ್ನೊಂದಷ್ಟು ಜನರಿಗೆ ಧಾರ್ಮಿಕ ನಾಯಕನಾಗಿ, ರಾಜಕೀಯ ದ್ರಷ್ಟಾರನಾಗಿ ತೋರುತ್ತಿದ್ದಾರೆ. ಕೆಲವರ ದೃಷ್ಟಿಯಲ್ಲಿ ಅವರು ತೀವ್ರಗಾಮಿ ಕ್ರಾಂತಿಕಾರಿಯಂತೆಯೂ ಕಾಣುತ್ತಿದ್ದಾರೆ.

ವಿಚಿತ್ರವೆಂದರೆ ಬಹಳಷ್ಟು ದಲಿತ ಮುಖಂಡರು, ಅಂಬೇಡ್ಕರ್ ಅವರನ್ನು ತಮ್ಮ ಖಾಸಗಿ ಆಸ್ತಿ ಎಂದೇ ನಂಬಿದ್ದಾರೆ. ಕೆಲವರಿಗೆ ಅಂಬೇಡ್ಕರ್ ಹೆಸರೇ ಬದುಕಿಗೆ ಆಸರೆಯಾಗಿದೆ. ಅಂಬೇಡ್ಕರ್ ಹೆಸರಿನ ಮೂಲಕ ದಂಧೆ ನಡೆಸಬಹುದೆಂದೂ, ತಮ್ಮೆಲ್ಲ ಅಪರಾಧಗಳನ್ನು ಮುಚ್ಚಿಕೊಳ್ಳಬಹುದೆಂದು ಕೆಲವರು ಭಾವಿಸಿದ್ದಾರೆ. ಜಾತಿಯಿಂದ ದಲಿತದಲ್ಲದವರು ಅಂಬೇಡ್ಕರ್ ಕುರಿತು ಏನೇ ಮಾಡಿದರೂ ಅವರ ಉದ್ದೇಶಗಳನ್ನು ಸಂಶಯದಿಂದ ನೋಡುವ ಪ್ರವೃತ್ತಿ ಹೆಚ್ಚಾಗುತ್ತಿದೆ. ನಿರ್ದಿಷ್ಟ ಜಾತಿಯ ಜನರಿಗೆ ಮಾತ್ರ ಅಂಬೇಡ್ಕರ್ ಮೇಲೆ ಅಧಿಕಾರ ಇದೆ ಎಂಬುದನ್ನು ಪ್ರತಿಷ್ಠಾಪಿಸಲು ಅವರು ಹೆಣಗುತ್ತಾರೆ. ಅಂಬೇಡ್ಕರ್‌ಗೆ ಬೇಲಿ ಹಾಕಿ ತಮ್ಮ ವಶದಲ್ಲೇ ಇಟ್ಟುಕೊಳ್ಳಲು ಹವಣಿಸುತ್ತಾರೆ.

ಇದಕ್ಕೆ ವ್ಯತಿರಿಕ್ತವಾಗಿ (ಕೆಲವರನ್ನು ಹೊರತುಪಡಿಸಿ) ದಲಿತೇತರರಿಗೆ ಅಂಬೇಡ್ಕರ್ ಇಂದಿಗೂ ಅಸ್ಪೃಶ್ಯರೇ. ಅವರ ವಿಚಾರಗಳಂತೂ ತಮ್ಮ ಅಸ್ತಿತ್ವಕ್ಕೇ ಕೊಡಲಿ ಪೆಟ್ಟು ಹಾಕುತ್ತವೆ ಎಂದು ಬಲವಾಗಿ ನಂಬಿದ್ದಾರೆ. ಅಂಬೇಡ್ಕರ್ ಬರೆದ ಸಂವಿಧಾನವನ್ನು ಬಳಸಿಯೇ ಅವರು ದಲಿತರನ್ನು ಸುಡುತ್ತಿದ್ದಾರೆ. ಅವಕಾಶಗಳನ್ನು ತಿರಸ್ಕರಿಸುತ್ತಿದ್ದಾರೆ. ಪ್ರಶಸ್ತಿ, ಪ್ರತಿಮೆ, ಪಾರ್ಕುಗಳನ್ನು ಸ್ಥಾಪಿಸಿ ವಂಚಿಸುತ್ತಿದ್ದಾರೆ.

ಇಂಥ ಸ್ಥಿತಿಯಲ್ಲಿ ಅಂಬೇಡ್ಕರ್ ಅವರ ಪುನಾರಾವಲೋಕನ ತುಂಬಾ ಅಗತ್ಯವೆಂದೇ 'ಸಂವಾದ' ಭಾವಿಸುತ್ತದೆ. ಆತ್ಮವಂಚನೆಯೇ ಮೌಲ್ಯವಾಗುತ್ತಿರುವ ಈ ದಿನಗಳಲ್ಲಿ ಅಂಬೇಡ್ಕರ್ ಅವರ ಅನ್ವೇಷಣೆ, ಅಧ್ಯಯನ ಹಿಂದೆಂದಿಗಿಂತಲೂ ಹೆಚ್ಚಾಗಿದೆ ಎಂಬುದು ನಮ್ಮ ನಂಬಿಕೆ. ಕ್ರಾಂತಿಕಾರಿ ಅಂಬೇಡ್ಕರ್ ಮತ್ತು ಸುಧಾರಣವಾದಿ ಅಂಬೇಡ್ಕರ್ ನಡುವಿನ ಅಂತರವನ್ನು ನಾವು ಕಂಡುಕೊಳ್ಳಬೇಕಾಗಿದೆ. ರಾಜ ನೀತಿಜ್ಞ ಅಂಬೇಡ್ಕರ್ ಮತ್ತು ಸಮಾಸ ಶಾಸ್ತ್ರಜ್ಞ ಅಂಬೇಡ್ಕರ್ ನಡುವಿನ ಸ್ಥಿತ್ಯಂತರಗಳನ್ನು ಅರಿತುಕೊಳ್ಳಬೇಕಾಗಿದೆ. ಹಾಗೆಯೇ ಆಧುನಿಕ ಅಂಬೇಡ್ಕರ್ ದಾರ್ಶನಿಕ ಅಂಬೇಡ್ಕರ್ ಆಗಿ ರೂಪಾಂತರಗೊಂಡ ಪ್ರಕ್ರಿಯೆಯನ್ನು ಅರ್ಥೈಸಿಕೊಳ್ಳಬೇಕಾಗಿದೆ.

ಹೋರಾಟ, ರಾಜಕಾರಣ ಮತ್ತು ಆಧ್ಯಾತ್ಮದ ನಡುವಿನ ಸಂಬಂಧಗಳು ರೂಪಿತವಾಗದೆ ಹೋದರೆ ಸಾಮಾಜಿಕ ಬದುಕು ಎಷ್ಟು ಅರಾಜಕವಾಗಬಹುದು ಎನ್ನುವುದು ನಮ್ಮ ಕಣ್ಣಮುಂದಿದೆ. ಬುದ್ಧ, ಜೀಸಸ್, ಪೈಗಂಬರ್, ಬಸವ ಇವರೆಲ್ಲ ತಮ್ಮ ಹೋರಾಟಗಳೊಂದಿಗೆ ಯಾಕೆ ಆಧ್ಯಾತ್ಮವನ್ನು ಬೆಸೆದುಕೊಂಡಿದ್ದರು ಎಂಬುದರ ಬಗ್ಗೆ ಕೂಡ ನಾವು ಆಲೋಚಿಸಬೇಕಾಗಿದೆ. ಸಾಮಾಜಿಕ ಬದುಕಿನ ಪರಿವರ್ತನೆಯ ಹರಿಕಾರರಾದ ಇವರೆಲ್ಲ ತಮ್ಮ ಹೋರಾಟಕ್ಕೆ ಆಧ್ಯಾತ್ಮದ ಚೌಕಟ್ಟನ್ನು ಯಾಕೆ ಹಾಕಿಕೊಂಡಿದ್ದರೆಂಬುದನ್ನು ನಾವು ಗಮನಿಸಬೇಕಾಗಿದೆ. ಸೂಟು-ಬೂಟಿನ ಅಂಬೇಡ್ಕರ್ ಜತೆಗೆ ತಲೆ ಬೋಳಿಸಿಕೊಂಡು ಚೀವರ ತೊಟ್ಟ ಅಂಬೇಡ್ಕರ್ ಅವರನ್ನು ಬೆಸೆಯಬೇಕಾಗಿದೆ.

ಅದಕ್ಕಾಗೇ ಅಂಬೇಡ್ಕರ್ ಕುರಿತಂತೆ ನಿರಂತರ ಚರ್ಚೆ ಅಗತ್ಯವಾಗಿದೆ. ಫ್ಯಾಸಿಸ್ಟ್ ಹಿಂದೂ ಮನಸ್ಸು, ದಲಿತರು ಮತ್ತು ದುರ್ಬಲ ವರ್ಗಗಳ ಮನಸ್ಸನ್ನು ಎಷ್ಟು ಭ್ರಷ್ಟಗೊಳಿಸಿವೆ ಎಂಬುದು ನಮ್ಮ ಕಣ್ಣ ಮುಂದಿದೆ. ಲಾಭ ಕೋರತನಕ್ಕೆ ಇಡೀ ಜಗತ್ತೆ ಮುಖ ಮಾಡಿ ನಿಂತಿರುವಾಗ ದಲಿತರೇಕೆ ಬೇರೆಯಾಗಿ ಆಲೋಚಿಸಬೇಕು ಅನ್ನುವವರೂ ಇದ್ದಾರೆ. ಆದರೆ ಈ ಲಾಭಕೋರರ ಸ್ಪರ್ಧೆಯಲ್ಲಿ ದಲಿತರು ಎಷ್ಟು ದೂರ ಸ್ಪರ್ಧಿಸಬಹುದೆಂಬ ಸತ್ಯ ಅವರಿಗೆ ಗೋಚರಿಸುತ್ತಿಲ್ಲ. ಉರಿಯುವ ದೀಪಕ್ಕೆ ಅರ್ಪಣೆ ಮಾಡಿಕೊಳ್ಳುವ ಪತಂಗದ ಸ್ಥಿತಿ ಇಂದು ದಲಿತರದ್ದಾಗಿದೆ.

ಅಂಬೇಡ್ಕರ್ ಕೇವಲ ವ್ಯಕ್ತಿಯಲ್ಲ, ವಿದ್ವಾಂಸರಲ್ಲ. ಬರೀ ಸಂವಿಧಾನ ಕರ್ತೃವೂ ಅಲ್ಲ. ಅವರು ನಮ್ಮ ಕಾಲಮಾನದ ಅದಮ್ಯ ಚೇತನ. ಹೋರಾಟಗಾರ, ಕ್ರಾಂತಿಕಾರಿ, ರಾಜ ನೀತಿಜ್ಞ, ಸಮಾಜ ಶಾಸ್ತ್ರಜ್ಞ, ಧಾರ್ಮಿಕ ಮುಖಂಡ, ದಾರ್ಶನಿಕ... ಹೀಗೆ ಅಂಬೇಡ್ಕರ್ ಅವರಿಗೆ ಯಾವುದೇ ಹೆಸರಿನಿಂದ ಕರೆದರೂ ಅದು ಅವರಿಗೆ ಹೊಂದುತ್ತದೆ. ಅಷ್ಟು ವಿಶಾಲ ಅವರ ಬದುಕು. ಬುದ್ಧ-ಬಸವರ ನಂತರ ಅಂಬೇಡ್ಕರರಷ್ಟು ನಿಖರವಾಗಿ ನಾಡಿನ ಹೃದಯ ಬಡಿತವನ್ನು ಅರಿತವರು ವಿರಳ. ಆಧುನಿಕ ಭಾರತದ ಸಾಮಾಜಿಕ ಸಂದರ್ಭದಲ್ಲಿ ಗಾಂಧಿ-ಅಂಬೇಡ್ಕರ್ ಮತ್ತು ಲೋಹಿಯಾರ ವಿಚಾರ ಧಾರೆಗಳು ಕೂಡಿ ಬೆಸೆದಿದ್ದರೆ ಹೊಸ ಭಾರತವೇ ಉದಯವಾಗುತ್ತಿತ್ತು!

ಅಂಬೇಡ್ಕರ್ ನಿರಂತರವಾಗಿ ನಮ್ಮ ನಡುವೆ ಉಳಿಯಬೇಕೆಂದರೆ ಅವರ ವಿಚಾರಗಳ ನಿರಂತರ ಅನ್ವೇಷಣೆಯಲ್ಲಿ ತೊಡಗಬೇಕಾಗಿದೆ. ನೈಜ ಅಂಬೇಡ್ಕರ್ ಅವರನ್ನು ಕಂಡುಕೊಳ್ಳುವುದು ಈ ಹೊತ್ತಿನ ಅತ್ಯಂತ ತುರ್ತು ಅಗತ್ಯವಾಗಿದೆ.

○ ಇಂದೂಧರ ಹೊನ್ನಾಪುರ

ಅಂಬೇಡ್ಕರ್ : ಸ್ಫೂರ್ತಿಯಿಂದ ಪೂಜೆಯ ಕಡೆಗೆ

ಮುನ್ನೋಟ

ಅಂಬೇಡ್ಕರ್ ಎಲ್ಲೆಂದರೆ ಅಲ್ಲಿ ಬೇರೆ ಬೇರೆ ರೂಪಗಳಲ್ಲಿ, ವಿಭಿನ್ನ ಸಾಂಕೇತಿಕ ರೂಪಗಳಲ್ಲಿ ಕಾಣಸಿಗುತ್ತಾರೆ. ಅಂಬೇಡ್ಕರ್ ರಸ್ತೆ, ಅಂಬೇಡ್ಕರ್ ಸರ್ಕಲ್, ಅಂಬೇಡ್ಕರ್ ಭವನ, ಅಂಬೇಡ್ಕರ್ ಕಾಲೋನಿ, ಅಂಬೇಡ್ಕರ್ ನಗರ, ಅಂಬೇಡ್ಕರ್ ಯುವಕ ಸಂಘ, ಅಂಬೇಡ್ಕರ್ ಯುವತಿ ಮಂಡಳಿ, ಅಂಬೇಡ್ಕರ್ ವಿಶ್ವವಿದ್ಯಾಲಯ, ಅಂಬೇಡ್ಕರ್ ಪ್ರತಿಮೆಗಳು, ಅಂಬೇಡ್ಕರ್ ಅಧ್ಯಯನ ಪೀಠಗಳು, ಅಂಬೇಡ್ಕರ್ ಸಂಶೋಧನ ಕೇಂದ್ರಗಳು, ಅಂಬೇಡ್ಕರ್ ಫೆಲೋಶಿಪ್‌ಗಳು, ಅಂಬೇಡ್ಕರ್ ಪ್ರಶಸ್ತಿಗಳು, ಅಂಬೇಡ್ಕರ್ ಸಾಹಿತ್ಯ, – ಹೀಗೆ ಈ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಹೀಗೆ ಅಂಬೇಡ್ಕರರನ್ನು ಭೌತಿಕವಾಗಿ ಅಷ್ಟೇ ವ್ಯಾಪಕವಾಗಿ ಸಾಂಕೇತಿಕಗೊಳಸಲಾಗಿದೆ.

○ ಡಾ|| ಬಿ.ಎಂ ಪುಟ್ಟಯ್ಯ

ಏಪ್ರಿಲ್ ೧೪ ಆ ದಿನ . . . . .

ಮತ್ತೊಂದು ಏಪ್ರಿಲ್ ೧೪ ಬರುತ್ತಿದೆ. ಅದು ಬಂದೇ ಬರುತ್ತದೆ. ಯಾಕೆಂದರೆ ಅಂದು ಅಂಬೇಡ್ಕರ್ ಹುಟ್ಟಿದ ದಿನ. ಆ ದಿನ ರಾಜ್ಯ ಹಾಗೂ ಕೇಂದ್ರ ಸರಕಾರಗಳು, ಕೆಲವು ದೊಡ್ಡ, ಸಣ್ಣ ಹಾಗೂ ಅತಿಸಣ್ಣ ಸಂಘ ಸಂಸ್ಥೆಗಳು ಅಂಬೇಡ್ಕರ್ ದಿನಾಚರಣೆಯನ್ನು ಆಚರಿಸುತ್ತವೆ. ಅವುಗಳಲ್ಲಿ ಅಂಬೇಡ್ಕರರನ್ನು ಗೌರವಿಸುವ ಹಾಗೂ ಗುಪ್ತವಾಗಿ ವಿರೋಧಿಸುವ ಎರಡು ಆಸಕ್ತಿಗಳೂ ಇರುತ್ತವೆ. ಅದರಲ್ಲಿ ಬುದ್ಧಿಜೀವಿಗಳು, ನೌಕರರು, ಅಧಿಕಾರಿಗಳು, ವಿವಿಧ ಶೋಷಿತ ಜನರು ಇದಲ್ಲದೆ ಶೋಷಕರೂ ಪಾಲ್ಗೊಳ್ಳುತ್ತಾರೆ. ಮಾರನೆ ದಿನದ ಮಾಧ್ಯಮಗಳಲ್ಲಿ, ಕಾರ್ಯಕ್ರಮದ ಭಾವ ಚಿತ್ರಗಳು, 'ಅಂಬೇಡ್ಕರ್ ಕೇವಲ ದಲಿತ ನಾಯಕರಲ್ಲ; ಅವರು ಈ ದೇಶದ ನಾಯಕರು', 'ಅಂಬೇಡ್ಕರ್ ತತ್ವಗಳನ್ನು ಪಾಲಿಸಲು ಕರೆ' ಮುಂತಾದ ಸುದ್ದಿಗಳು ಪ್ರಕಟವಾಗುತ್ತವೆ.

ದಲಿತ ಸಂಘಟನೆಗಳು ತಾವು ತಮ್ಮ ಸಿದ್ಧಾಂತ ಹಾಗು ಹೋರಾಟದ ಅಡಿಯಲ್ಲಿ ಅಂಬೇಡ್ಕರ್ ಜಯಂತಿಯನ್ನು ಮಾಡಬೇಕಿತ್ತು. ಆದರೆ ಈಗ ಅದನ್ನು ಆಳುವ ವರ್ಗ, ಸರಕಾರಿ ಇಲಾಖೆಗಳು ಹಾಗು ದಲಿತೇತರ ಸಂಘ ಸಂಸ್ಥೆಗಳು ಅನಾಮತ್ತಾಗಿ ಒತ್ತುವರಿ ಮಾಡಿಕೊಂಡು ಆಕ್ರಮಿಸಿಕೊಂಡಿವೆ. ಅವುಗಳು ಇದನ್ನು ರೊಟ್ಟಿಯೆ ಮುರಿದು ತುಪ್ಪಕ್ಕೆ ಬಿದ್ದ ಸಂತೋಷದಲ್ಲಿ ಸ್ವೀಕರಿಸಿವೆ. ಅಂದು ಕೆಲವು ಕಡೆ ಸರಾಯಿ ಪ್ಯಾಕೇಟುಗಳ ಆಸೆ ತೋರಿಸಿ ದುಡಿವ ದಲಿತರನ್ನು ಕೇರಿಗಳಿಂದ ಲಾರಿಗಳಿಗೆ ಹತ್ತಿಸಿಕೊಂಡು, ತಾಲೂಕು ಕೇಂದ್ರಕ್ಕೊ, ಜಿಲ್ಲಾ ಕೇಂದ್ರಕ್ಕೊ ಕರೆತರಲಾಗುತ್ತದೆ. ದಲಿತರ ಉದ್ಧರವನ್ನು ಕುರಿತು, ಅಂಬೇಡ್ಕರರ ಪ್ರಸಿದ್ಧಾ ಜೀವನ ವಿವರಗಳನ್ನು ಕುರಿತು ಭಾರೀ ಭಾಷಣ ಬಿಗಿಯಲಾಗುತ್ತದೆ. ಕೊನೆಗೆ 'ನೀವೆಲ್ಲ ಅಂಬೇಡ್ಕರರಂತೆ ಆಗಿ' ಎಂಬ ಉಚಿತ ಉಪದೇಶವನ್ನು ದಯಪಾಲಿಸಲಾಗುತ್ತದೆ. ಆ ಕಾಯ್ರಕ್ರಮಕ್ಕೆ ಕೆಲವರು ಸರಾಯಿ ಪ್ಯಾಕೆಟಿನ ಆಸೆಗೆ, ಕೆಲವರು ಸ್ಥಳೀಯ ಪುಡಾರಿ ರಾಜಕಾರಿಣಿಗಳ ಮರ್ಜಿಗೆ, ಮತ್ತೆ ಕೆಲವರು ತಮಗೆ ಎಷ್ಟು ಜನ ಹಿಂಬಾಲಕರಿದ್ದಾರೆ ಎಂಬುದನ್ನು ಜಾಹಿರಾತು ಮಾಡುವುದಕ್ಕೆ, ಕೆಲವರು ನಾನೂ ಕೂಡ ದಲಿತರ ಹಿತ ಚಿಂತಕ ಎಂಬುದನ್ನು ತೋರಿಸಿಕೊಳ್ಳುವುದಕ್ಕೆ, ಕೆಲವರು ಬಾಲ್ಯದಲ್ಲಿ ನನಗೂ ಕಷ್ಟಗಳಿದ್ದವು ಆದರೆ ಅವನ್ನೆಲ್ಲ ನಾನೂ ಸಹ ಅಂಬೇಡ್ಕರರಂತೆ ಹೋರಾಡಿ ಗೆದ್ದು ಮೇಲೆ ಬಂದೆ ಎಂಬುದನ್ನು ಹೇಳಿಕೊಂಡು ಆ ಮೂಲಕ ದಲಿತರ ಸಹಾನುಭೂತಿಯನ್ನು ಸೃಷ್ಟಿಸಿಕೊಳ್ಳುವುದಕ್ಕೆ ಬಂದಿರುತ್ತಾರೆ.

ಎಲ್ಲೆಲ್ಲಿ ಅಂಬೇಡ್ಕರ್ ?

ಈಗ ಅಂಬೇಡ್ಕರ್ ಎಲ್ಲೆಂದರೆ ಅಲ್ಲಿ ಬೇರೆ ಬೇರೆ ರೂಪಗಳಲ್ಲಿ, ವಿಭಿನ್ನ ಸಾಂಕೇತಿಕ ರೂಪಗಳಲ್ಲಿ ಕಾಣಸಿಗುತ್ತಾರೆ. ಅಂಬೇಡ್ಕರ್ ರಸ್ತೆ, ಅಂಬೇಡ್ಕರ್ ಸರ್ಕಲ್, ಅಂಬೇಡ್ಕರ್ ಭವನ, ಅಂಬೇಡ್ಕರ್ ಕಾಲೋನಿ, ಅಂಬೇಡ್ಕರ್ ನಗರ, ಅಂಬೇಡ್ಕರ್ ಯುವಕ ಸಂಘ, ಅಂಬೇಡ್ಕರ್ ಯುವತಿ ಮಂಡಳಿ, ಅಂಬೇಡ್ಕರ್ ಹೈಸ್ಕೂಲ್, ಅಂಬೇಡ್ಕರ್ ಕಾಲೇಜು, ಅಂಬೇಡ್ಕರ್ ಹಾಸ್ಟೆಲ್, ಅಂಬೇಡ್ಕರ್ ವಿಶ್ವವಿದ್ಯಾಲಯ, ಅಂಬೇಡ್ಕರ್ ಪ್ರತಿಮೆಗಳು, ಅಂಬೇಡ್ಕರ್ ಅಧ್ಯಯನ ಪೀಠಗಳು, ಅಂಬೇಡ್ಕರ್ ಸಂಶೋಧನ ಕೇಂದ್ರಗಳು, ಅಂಬೇಡ್ಕರ್ ಫೆಲೋಶಿಪ್‌ಗಳು, ಅಂಬೇಡ್ಕರ್ ಪ್ರಶಸ್ತಿಗಳು, ಅಂಬೇಡ್ಕರ್ ಸಾಹಿತ್ಯ, ಅಂಬೇಡ್ಕರ್ ಸ್ಪೆಷಲಿಸ್ಟ್ – ಹೀಗೆ ಈ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಹೀಗೆ ಅಂಬೇಡ್ಕರರನ್ನು ಭೌತಿಕವಾಗಿ ಅಷ್ಟೇ ವ್ಯಾಪಕವಾಗಿ ಸಾಂಕೇತಿಕಗೊಳಿಸಲಾಗಿದೆ. ಇದರಲ್ಲಿ ಒಂದು ಕಡೆ ದಲಿತರ ಸ್ವಾಭಿಮಾನ ಹಾಗು ಅನನ್ಯತೆಯ ಆಯಾಮವಿದೆ. ಮತ್ತೊಂದು ಕಡೆ ಆಳುವ ವರ್ಗದ ಪಿತೂರಿ ಹಾಗು ಕುತಂತ್ರವಿದೆ.

ಒಂದು ಕಡೆ ಅಂಬೇಡ್ಕರ್ ಪ್ರತಿಮೆಗಳನ್ನು ಸ್ಥಾಪಿಸಲಾಗುತ್ತದೆ ಮತ್ತೊಂದು ಕಡೆ ಆ ಪ್ರತಿಮೆಗಳಿಗೆ ಅಪಮಾನ ಮಾಡಲಾಗುತ್ತದೆ. ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಿ ಎಂದು ಹೋರಾಟ ಮಾಡುವವರೂ ದಲಿತರೆ. ಅದಕ್ಕೆ ಅಪಮಾನ ಮಾಡಿದ ಮೇಲೆ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿ ಎಂದು ಕೇಳುವವರೂ ದಲಿತರೇ. ಕಳೆದ ೩೦ ವರುಷಗಳ ಅವಧಿಯಲ್ಲಿ ದಲಿತರು ಈ ವಿಷಯಗಳಿಗಾಗಿ ಮಾಡಿರುವ ಹೋರಾಟ, ಹೂಡಿರುವ ಶ್ರಮ, ಹಾಕಿರುವ ಪ್ರಯತ್ನ ಬಹಳ ದೊಡ್ಡದು. ಈಗಲೂ ಅಂಬೇಡ್ಕರ್ ಅವರನ್ನು ಸಾಂಕೇತಿಕವಾಗಿ ರಕ್ಷಿಸುವ ಅಥವಾ ಕಾಯುವ ಕಾಯಕದಲ್ಲಿ ದಲಿತರು ತೊಡಗಿದ್ದಾರೆ. ಶೋಷಕ ವ್ಯವಸ್ಥೆ ಅಂಬೇಡ್ಕರರನ್ನು ಸಾಂಕೇತಿಕವಾಗಿ ಕಾಯುವ ಕೆಲಸವನ್ನೂ ದಲಿತರಿಗೆ ವಹಿಸಿಕೊಟ್ಟಿದೆ.

ಕರ್ನಾಟದಲ್ಲಿ ಡಿಎಸ್‌ಎಸ್ ಹುಟ್ಟಿದ ಮೇಲೆ ಈ ನಾಡಿನ ಬಹುತೇಕ ಕೇರಿಗಳಲ್ಲಿ ಅಂಬೇಡ್ಕರ್ ಜಯಂತಿ ಮಾಡಲಾಗಿದೆ. ಈಗಲೂ ಮಾಡಲಾಗುತ್ತಿದೆ. ಅಕ್ಷರಸ್ಥರ ಹಾಗು ಕೆಲವು ನೌಕರಸ್ಥ ದಲಿತರ ಮನೆಗಳಲ್ಲಿ ಅಂಬೇಡ್ಕರ್ ಫೋಟೋಗಳಿವೆ. ದಲಿತ ಸಮೂಹಕ್ಕೆ ಅಂಬೇಡ್ಕರ್ ಬಗ್ಗೆ ಒಂದು ಬಗೆಯ ಅಭಿಮಾನ ಮೂಡಿದೆ. ಆ ಮೂಲಕ ಒಂದು ಸ್ವಾಭಿಮಾನ ಕೂಡ ಹುಟ್ಟಿದೆ. ಇದು ದಲಿತರಿಗೆ ಒಂದು ಬಗೆಯ ಸ್ವಾಭಿಮಾನವನ್ನೂ, ಸಂಘಟಿತ ಶಕ್ತಿಯನ್ನೂ, ದಲಿತೇತರ ಶೋಷಕರಿಗೆ ಕ್ರೂರ ಅಸೂಯೆ ಹಾಗು ವಿಕೃತ ಅಸಹನೆಯನ್ನೂ ಉಂಟುಮಾಡಿದೆ. ಕರ್ನಾಟಕದಲ್ಲಿ ಡಿಎಸ್‌ಎಸ್ ಹುಟ್ಟಿದ ಮೇಲೆ ಶೋಷಕ ಹಾಗೂ ಆಳುವ ವರ್ಗದವರಲ್ಲಿ ಈ ಬಗೆಯ ಅಸಹನೆ ಹಾಗು ಅಸೂಯೆ ಹೆಪ್ಪುಗಟ್ಟಿ ಸಂಘಟಿತ ರೂಪ ಪಡೆಯುತ್ತಿದೆ. ಪ್ರತಿಕಾರದ ಸ್ವರೂಪದಲ್ಲಿ ಬೆಳೆಯುತ್ತಿದೆ; ದಲಿತರ ಮೇಲೆ, ದಲಿತರ ಕೇರಿಗಳ ಮೇಲೆ ಭೂಮಾಲಿಕರು ತಮ್ಮ ಪೂರ್ವನಿಯೋಜಿತ ಸಂಚನ್ನು ಪ್ರಯೋಗಿಸಿದ್ದಾರೆ.



ಶೋಷಕ ವರ್ಗದಲ್ಲಿ ಮೂಡಿದ ಈ ವಿಕೃತಿಯು ಎಸ್‌ಎಸ್ ಅನ್ನು ಹೇಗೆ ಬಲಿ ತೆಗೆದುಕೊಂಡಿತು ಬುದು ನಾಡಿನ ಇತಿಹಾಸದಲ್ಲಿ ತುಂಬ ರೋಚಕವಾದ ಧ್ಯಾಯ. ಈ ಆಯಾಮವನ್ನು ನಯವಾಗಿ ಮುಚ್ಚಿಡುವ ಲುವಾಗಿ ಕೆಲವು ದಲಿತ ನಾಯಕರನ್ನು ಕಟಕಟೆಯ ಲೆ ನಿಲ್ಲಿಸಿ ಬೆತ್ತಲು ಮಾಡುವ ವ್ಯರ್ಥ ಪ್ರಯತ್ನಗಳೂ ತೆಯುತ್ತಿವೆ. ಡಿಎಸ್‌ಎಸ್ ಹೋಳಾಗಲು, ಆಮೇಲೆ ಅವು ಳ ಅನೇಕ ಬಣಗಳು ವ್ಯವಸ್ಥೆಯ ಲಾಭ ಪಡೆಯಲು ನಾಡುತ್ತಿರುವ ಕಸರತ್ತುಗಳಲ್ಲಿ ಶೋಷಕರ ಪೂರ್ವಾನಿ ೀಜಿತ ಸಂಚುಗಳೂ ಪರಿಣಾಮಕಾರಿಯಾಗಿ ಕ್ರಿಯಾ ಲವಾಗಿವೆ.

ಬೇಡ್ಕರ್ ಅಪಹರಣ ಮತ್ತು ವೈಭವೀಕರಣ

ದಲಿತ ಚಿಂತಕರು ನಾಯಕರು ಅಂಬೇಡ್ಕರರನ್ನು ಶ್ನಾತೀತವಾಗಿ, ವಿಮರ್ಶಾತೀತವಾಗಿ ಒಂದೇ ಸಮನೆ ಭವೀಕರಿಸುತ್ತಿದ್ದಾರೆ. ಅಂಬೇಡ್ಕರರು ಮಾಡಿದ ಹೋರಾ ವನ್ನು ಸಮಾಜದಲ್ಲಿ ಸಮಗ್ರವಾಗಿ ಜಾರಿಗೆ ತರುವ ಕೆಲಸ ಗ ವಿಶ್ರಾಂತಿ ಪಡೆದಿದೆ. ಅಂಬೇಡ್ಕರರ ಫೋಟೋಗಳು ಹಾಗು ಪುಸ್ತಕಗಳು ಮತ್ತು ಅಂಬೇಡ್ಕರ್ ಜಯಂತಿ ರ್ಯಕ್ರಮದಲ್ಲಿ ಯಾವುದೂ ಮರ್ಜಿಗೆ ಪಾಲ್ಗೊಂಡ ಮ್ಮ ಫೋಟೋಗಳನ್ನು ಶೋಕೇಸಿನಲ್ಲಿ ಭದ್ರವಾಗಿ ಇಡ ಾಗಿದೆ. ಅಂಬೇಡ್ಕರರಿಗೆ ಆಳುವ ವರ್ಗ ದಯಪಾಲಿ ಸುವ ಬಿರುದು ಬಾವಲಿಗಳನ್ನು ದಲಿತ ನಾಯಕರು ಹಾಗು ಚಿಂತಕರು ಪ್ರಶ್ನಾತೀತವಾಗಿ ಕಂಠಪಾಠ ಮಾಡಿ ಕೊಂಡು ವೈಭವೀಕರಿಸುತ್ತಿದ್ದಾರೆ. 'ಭಾರತ ರತ್ನ' 'ಸಂವಿ ಧಾನ ಶಿಲ್ಪಿ', 'ಆಧುನಿಕ ಮನು' 'ಮಹಾನ್ ಮಾನವತಾ ವಾದಿ' ಇವೇ ಮುಂತಾದ ಹತ್ತಾರು ಬಿರುದು ಬಾವಲಿಗಳು ಅಂಬೇಡ್ಕರ್ ಅವರ ಹೆಸರಿನ ಜೊತೆಗೆ ಸಂದಾಯವಾಗಿವೆ. ದಲಿತ ನಾಯಕರು ಹಾಗು ಚಿಂತಕರು ಇವನ್ನು ಬಾಯಿ ತುಂಬ ಹೇಳಿ ಅಂಬೇಡ್ಕರರನ್ನು ವೈಭವೀಕರಣ ಮಾಡಿ ದ್ದಾರೆ. ಮತ್ತೊಂದು ಕಡೆ ಶೋಷಕರು ಅಂಬೇಡ್ಕರರ ಹೋರಾಟದ ದಾರಿಗಳನ್ನು, ಅದರ ದಿಟ್ಟತನಗಳನ್ನು, ಅವರ ವಿಮೋಚನೆಯ ಆಶಯಗಳನ್ನು ಅಪಹರಣ ಮಾಡಿದ್ದಾರೆ.

ಈ ನಾಡಿನಲ್ಲಿ ಒಬ್ಬ ವ್ಯಕ್ತಿಯನ್ನು ಅಥವಾ ಆತನ ಚಿಂತನೆಗಳನ್ನು ಕೊಲ್ಲಬೇಕೆಂದರೆ ಫ್ರೀಯಾಗಿ ವೈಭವೀ ಕರಿಸಿ ಹೊಗಳಿ ಬಿಟ್ಟರೆ ಸಾಕು. ಅದು ಹಲ್ಲು ಕಳಚಿದ ಹಾವಾಗುತ್ತದೆ. ತಮ್ಮ ಪುಂಗಿಗೆ ನೇರವಾಗಿ ಸುಲಭವಾಗಿ ತಲೆದೂಗುತ್ತದೆ. ಅಂಬೇಡ್ಕರರ ವಿಷಯದಲ್ಲಿ ಹಾಗು ಅಂಬೇಡ್ಕರರು ಸಂವಿಧಾನ ಶಿಲ್ಪಿ' ಎಂಬ ವಿಷಯದ ಲ್ಲಿಯೂ ಇದೇ ಪರಿಣಾಮ ಆಗಿದೆ. ಕಳೆದ ೫೮ ವರುಷಗಳ ತಳ ದಲಿತರ ಸಮಗ್ರ ವಿಮೋಚನೆಗೆ ಸರಿ ಯಾದ ದಾರಿಯನ್ನು ಆಳುವ ವರ್ಗವಾಗಲಿ ಅಥವಾ ದಲಿತ ಹೋರಾಟಗಳಾಗಲಿ ಸೃಷ್ಟಿಮಾಡಿಲ್ಲ. ಅದೇ ಹಸಿವು, ಅಪಮಾನಗಳು ದ್ವಿಗುಣಗೊಂಡಿವೆ. ದಲಿತರ ಗುಡಿಸಲು ಸುಡುವುದು, ಬಹಿಷ್ಕಾರ ಹಾಕುವುದು, ಬೆತ್ತಲುಗೊಳಿ ಸುವುದು, ಕೋಳ ತೊಡಿಸುವುದು, ಹೇಲು ತಿನ್ನಿಸುವುದು ನಡೆದೇ ಇದೆ. ಆದರೆ ಸಂವಿಧಾನದ ವಿಷಯಕ್ಕೆ ಬಂದ ಕ್ಷಣ ಮಾತ್ರ ಅದನ್ನು ಅಂಬೇಡ್ಕರರೇ ಬರೆದುದು ಎಂದು ಒತ್ತಿ ಮತ್ತು ಒತ್ತಿ ಹೇಳಲಾಗುತ್ತದೆ. ನಾವೀಗ ಒಂದು ಮುಖ್ಯ ಪ್ರಶ್ನೆಯನ್ನು ಕೇಳಬಹುದು. ಬೆಂಡಿಗೇರಿಯಲ್ಲಿ ಮಲ ತಿನ್ನಿಸಿದವರಿಗೆ ಭಾರತದ ಸಂವಿಧಾನದ ಚೌಕಟ್ಟಿನಲ್ಲಿ ಯಾವ ಶಿಕ್ಷೆಯಾಯಿತು? ಇಲ್ಲ; ಯಾವುದೇ ಶಿಕ್ಷೆ ಆಗ

> **ಕರ್ನಾಟಕದಲ್ಲಿ ಡಿಎಸ್‌ಎಸ್ ಹುಟ್ಟಿದ ಮೇಲೆ ಈ ನಾಡಿನ ಬಹುತೇಕ ಕೇರಿಗ ಳಲ್ಲಿ ಅಂಬೇಡ್ಕರ್ ಜಯಂತಿ ಮಾಡಲಾ ಗಿದೆ. ಈಗಲೂ ಮಾಡಲಾಗುತ್ತಿದೆ. ಅಕ್ಷರ ಸ್ಥರ ಹಾಗು ಕೆಲವು ನೌಕರಸ್ಥ ದಲಿತರ ಮನೆಗಳಲ್ಲಿ ಅಂಬೇಡ್ಕರ್ ಫೋಟೋ ಗಳಿವೆ. ದಲಿತ ಸಮೂಹಕ್ಕೆ ಅಂಬೇ ಡ್ಕರ್ ಬಗ್ಗೆ ಒಂದು ಬಗೆಯ ಅಭಿಮಾನ ಮೂಡಿದೆ, ಆ ಮೂಲಕ ಒಂದು ಸ್ವಾಭಿ ಮಾನ ಕೂಡ ಹುಟ್ಟಿದೆ. ಇದು ದಲಿತರಿಗೆ ಒಂದು ಬಗೆಯ ಸ್ವಾಭಿಮಾನವನ್ನೂ, ಸಂಘಟಿತ ಶಕ್ತಿಯನ್ನೂ, ದಲಿತೇತರ ಶೋಷಕರಿಗೆ ಕ್ರೂರ ಅಸೂಯೆ ಹಾಗು ವಿಕೃತ ಅಸಹನೆಯನ್ನೂ ಉಂಟು ಮಾಡಿದೆ.**

ಲಿಲ್ಲ. ಹಾಗಾದರೆ ಆ ಸಂವಿಧಾನವನ್ನು ಸ್ವತಃ ಅಂಬೇ ಡ್ಕರರೇ ಬರೆದುದು ಎಂಬುದನ್ನು ಎಲ್ಲಿಯವರೆಗೆ ಭ್ರಮಿ ಸುತ್ತ ಕೂರಲು ಸಾಧ್ಯ? ಇಂಡಿಯಾದ ಶೋಷಕರು, ಬಂಡವಾಳಶಾಹಿಗಳು, ಹಾಗು ಭಾರೀ ಭೂಮಾಲಿಕರು ಸಂವಿಧಾನವನ್ನು ಅಂಬೇಡ್ಕರರ ಮೂಲಕ ಬರೆಸಿ ಕೊಂಡರು. ತಮಗೆ ಬೇಕಾದ ರೀತಿಗಳಲ್ಲಿ ಬರೆಸಿ ಕೊಂಡರು. ಆದರೆ ಅದನ್ನು ಸ್ವತಃ ಅಂಬೇಡ್ಕರರೇ ಬರೆ ದುದು ಎಂದು ಆಳುವ ವರ್ಗದವರು ಮೇಲಿಂದ ಮೇಲೆ

> **ಅಂಬೇಡ್ಕರ್ ವಿರಚಿತ ಸಂವಿಧಾನವು ಇವತ್ತು ಯಾರ ಕೈಲಿದೆ? ಯಾರು ಅದನ್ನು ಯಾರ ಹಿತಾಸಕ್ತಿಗೆ ಬಳಸುತ್ತಿದ್ದಾರೆ? ಎಂಬ ಪ್ರಾಥ ಮಿಕ ಪ್ರಶ್ನೆಯನ್ನು ಕೇಳಿ ಕೊಳ್ಳಬೇಕಾಗಿದೆ. ಅಂಬೇಡ್ಕರ್ ವಿರಚಿತ ಸಂವಿಧಾನವನ್ನು ಇವತ್ತು ಸಾಮ್ರಾಜ್ಯಶಾಹಿಗಳಿಗೆ ಗುಲಾಮ ವಾಗಿಸಿದ್ದಾರೆ. ಆ ಸಂವಿಧಾನ ಇವತ್ತು ದಲಿತರ ಬೆವರು ಮತ್ತು ಕಣ್ಣೀರನ್ನು ಪನ್ನೀ ರೆಂದು ಕುಡಿವವರ ತಲೆ ದಿಂಬಾಗಿದೆ. 'ಸಂವಿಧಾನ ಶಿಲ್ಪಿ' ಅಂಬೇಡ್ಕರ್ ಎಂದು ಹೇಳುತ್ತಲೆ ದಲಿತರನ್ನು ನಿತ್ಯ ಸುಟ್ಟುಸುಟ್ಟು ತಿನ್ನುತ್ತಿದ್ದಾರೆ. ದಲಿತರನ್ನು ಮೋಸ ಮಾಡುವುದಕ್ಕೆ, ದಲಿತರನ್ನು ಕ್ರೂರವಾಗಿ ಹಾಗು ನಯವಾಗಿ ಶೋಷಣೆ ಮಾಡುವ ಸಲುವಾಗಿ ಬಂಡವಾಳ ಶಾಹಿಗಳು, ಭಾರೀ ಭೂಮಾಲಿಕರು ಹಾಗು ಸಾಮ್ರಾಜ್ಯಶಾಹಿಗಳು ಸಂವಿಧಾನದ ನೆರವು ಪಡೆದಿದ್ದಾರೆ.**

ಹೇಳಿಹೇಳಿ ಸಂವಿಧಾನದ ಬಗ್ಗೆ ದಲಿತರು ಹಾಗು ದುಡಿವ ವರ್ಗದವರು ಪ್ರಶ್ನೆ ಮಾಡದ ಹಾಗೆ, ತಕರಾರು ತೆಗೆಯದ ಹಾಗೆ ಮಾಡಿದ್ದಾರೆ.

ಅಂಬೇಡ್ಕರ್ ಅವರ ಆಲೋಚನೆಗಳನ್ನು, ಅವರು ಮಾಡಿದ ಜಾತಿ, ಅಸ್ಪೃಶ್ಯತೆ ವಿರೋಧಿ ಹೋರಾಟಗಳನ್ನು ಇಂದಿನ ಪರಿಸ್ಥಿತಿಗೆ ಪರಿಷ್ಕರಿಸಿಕೊಂಡು ದಲಿತ ಹೋರಾ ಟಗಳು ಅವುಗಳನ್ನು ಮುಂದುವರಿಸಬೇಕಿತ್ತು. ಆದರೆ ದುರಂತವೇನಾಗಿದೆ ಎಂದರೆ, ದಲಿತ ನಾಯಕರು ಚಿಂತ ಕರು ಅಂಬೇಡ್ಕರರನ್ನು ಶೋಷಕರ ಪರಿಭಾಷೆಯಲ್ಲಿ ಹೊಗಳುತ್ತ, ವೈಭವೀಕರಿಸುತ್ತ ವಿಶ್ರಾಂತಿ ಪಡೆದಿದ್ದಾರೆ. ಅಂಬೇಡ್ಕರರನ್ನು ಹೊಗಳುವುದಾದರೆ ದಲಿತರ ಆಲೋಚ ನೆಯಲ್ಲಿ, ದಲಿತರ ಪರಿಭಾಷೆಯಲ್ಲಿ ಹೊಗಳಿದರೆ ಕೊನೆ ಪಕ್ಷ ಅದಕ್ಕೊಂದು ಅರ್ಥ ಬರುತ್ತದೆ. ಆದರೆ ಶೋಷಕರ ಪರಿಭಾಷೆಯಲ್ಲಿ ಅಂಬೇಡ್ಕರರನ್ನು 'ಸಂವಿಧಾನ ಶಿಲ್ಪಿ' 'ಭಾರತ ರತ್ನ' ಎಂಬ ಪದಗಳನ್ನು ಬಳಸುವುದು ಅಂಬೇ ಡ್ಕರ್ ಮಾಡಿದ ಹೋರಾಟಗಳಿಗೆ ಗೌರವ ಸಲ್ಲಿಸಿದಂತೆ ಆಗುವುದಿಲ್ಲ. ಶೋಷಕ ವ್ಯವಸ್ಥೆ ದಲಿತರನ್ನು ಬದಲಾಗು ತ್ತಿರುವ ಶೋಷಣ ವಿಧಾನಗಳನ್ನು ಒಪ್ಪಿಕೊಂಡು, ಅವು ಗಳಿಗೆ ಒಗ್ಗಿಕೊಂಡು ಹೋಗುವಂತೆ ಮಾಡುತ್ತಿದೆ. ದಲಿತ ರನ್ನು ಬದಲಾಗುತ್ತಿರುವ ವಿವಿಧ ಶೋಷಣೆಗಳಿಗೆ ಬಲಿ ಕೊಡುವ ಸಲುವಾಗಿ ಹಾಗು ಅದರ ಪ್ರತ್ಯಕ್ಷ ಕ್ರೌರ್ಯವನ್ನು ಮುಚ್ಚಿಡುವ ಸಲುವಾಗಿ ಅಂಬೇಡ್ಕರರಿಗೆ ಬಿರುದುಗಳನ್ನು ದಯಪಾಲಿಸುವ ಕುತಂತ್ರ ಸಾಗಿದೆ.

೯೦ರ ದಶಕವು ಭಾರತವನ್ನು ನೇರವಾಗಿ ಸಾಮ್ರಾ ಜ್ಯಶಾಹಿಯ ಪಾದಗಳಿಗೆ ಒತ್ತೆ ಇಟ್ಟ ಕಾಲ. ಅದು ಪ್ರಧಾನ ವಾಗಿ ಕೃಷಿಕೂಲಿಗಳಾದ ಬಹು ಸಂಖ್ಯೆಯ ದಲಿತರ ಬದುಕನ್ನು ಬೀದಿಪಾಲು ಮಾಡಿತು. ಕೃಷಿ ವಲಯದಲ್ಲಿ ಕೊನೆಯ ಪಕ್ಷ ಕೂಲಿಯೂ ಸಿಗಲಾರ ದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಮತ್ತೊಂದು ಕಡೆ ದಲಿತರಿಗಿದ್ದ ಮೀಸಲಾತಿ ಅವಕಾಶಗಳು ಜಾಗತೀಕರಣ ಹಾಗು ಉದಾ ರೀಕರಣಗಳಿಂದ ಮುಚ್ಚಿಹೋದವು. ಈ ಎರಡು ಪರಿಣಾ ಮಗಳಿಗೆ ನೇರವಾಗಿ ಆಳುವ ವರ್ಗವೇ ಕಾರಣ. ಆದರೆ ಆಳುವ ವರ್ಗ ತನ್ನ ಈ ಜನವಿರೋಧಿ ನೀತಿಯನ್ನು ಮುಚ್ಚಿಟ್ಟುಕೊಳ್ಳುವ ಸಲುವಾಗಿ, ಒಂದು ಕಡೆ ಅಂಬೇಡ್ಕರ ರನ್ನು ವೈಭವೀಕರಿಸಿ ಹೊಗಳಲು ಶುರು ಮಾಡಿತು. ಮತ್ತೊಂದು ಕಡೆ ದಲಿತ ಸಮೂಹದಲ್ಲಿ 'ಹೊಲೆ-ಮಾದಿಗರ' ನಡುವೆ ಮೀಸಲಾತಿಗೆ ಸಂಬಂಧಿಸಿದ ವಿಷ ಬೀಜವನ್ನು ಬಿತ್ತಿತು. ಒಳಮೀಸಲಾತಿಗಾಗಿ ಹೋರಾಟ ಮಾಡುವವರು ಅದನ್ನು ಜಗತ್ತಿನ ಹೊಸ ಸಂಶೋಧನೆ ಎನ್ನುವಂತೆ ಜೊತೆಗೆ ಒಳಮೀಸಲಾತಿ ಜಾರಿಯ ಮೂಲಕ ಮಾತ್ರವೇ ನಮ್ಮೆಲ್ಲರ ವಿಮೋಚನೆ ಸಾಧ್ಯ ಎಂಬಂತೆ ಪರಿಗಣಿಸಿದರು. ಒಳಮೀಸಲಾತಿ ಕೇಳು ವುದು ಸಾಮಾನ್ಯ ಹಕ್ಕು ಕೇಳಲಿ. ಆದರೆ ಯಾವುದರಲ್ಲಿ ಕೇಳಬೇಕು? ಹೇಗೆ ಕೇಳಬೇಕು? ಎಂಬುದು ಮುಖ್ಯ. ಈ ದೇಶದ ಎಲ್ಲ ಬಗೆಯ ಸಂಪತ್ತಿನಲ್ಲಿ ಒಳಮೀಸಲಾತಿಯನ್ನು ಕೇಳಬೇಕಾ ಗಿದೆ. ಈ ದೇಶದ ಆಸ್ತಿಯಲ್ಲಿ ದಲಿತರು ಒಳಮೀಸಲಾತಿ ಯನ್ನು ಕೇಳಬೇಕಾಗಿದೆ. ಅದರ ಜೊತೆಯಲ್ಲೆ ಆಳುವವರ ಅಧಿಕಾರವನ್ನು ಬಲಾತ್ಕಾರದಿಂದ ಬದಲುಮಾಡಬೇಕಿದೆ.

ಅಂಬೇಡ್ಕರ್ ವಿರಚಿತ ಸಂವಿಧಾನವು ಇವತ್ತು ಯಾರ ಕೈಲಿದೆ? ಯಾರು ಅದನ್ನು ಯಾರ ಹಿತಾಸಕ್ತಿಗೆ ಬಳಸುತ್ತಿದ್ದಾರೆ? ಎಂಬ ಪ್ರಾಥಮಿಕ ಪ್ರಶ್ನೆಯನ್ನು ಕೇಳಿ ಕೊಳ್ಳಬೇಕಾಗಿದೆ. ಅಂಬೇಡ್ಕರ್ ವಿರಚಿತ ಸಂವಿಧಾನವನ್ನು

ಇವತ್ತು ಸಾಮ್ರಾಜ್ಯಶಾಹಿಗಳಿಗೆ ಗುಲಾಮವಾಗಿಸಿದ್ದಾರೆ. ಆ ಸಂವಿಧಾನ ಇವತ್ತು ದಲಿತರ ಬೆವರು ಮತ್ತು ಕಣ್ಣೀರನ್ನು ಪನ್ನೀರೆಂದು ಕುಡಿವವರ ತಲೆದಿಂಬಾಗಿದೆ. 'ಸಂವಿಧಾನ ಶಿಲ್ಪಿ' ಅಂಬೇಡ್ಕರ್ ಎಂದು ಹೇಳುತ್ತಲೆ ದಲಿತರನ್ನು ನಿತ್ಯ ಸುಟ್ಟುಸುಟ್ಟು ತಿನ್ನುತ್ತಿದ್ದಾರೆ. ದಲಿತರನ್ನು ಮೋಸ ಮಾಡುವುದಕ್ಕೆ, ದಲಿತರನ್ನು ಕ್ರೂರವಾಗಿ ಹಾಗು ನಯವಾಗಿ ಶೋಷಣೆ ಮಾಡುವ ಸಲುವಾಗಿ ಬಂಡವಾಳಶಾಹಿಗಳು, ಭಾರೀ ಭೂಮಾಲಿಕರು ಹಾಗು ಸಾಮ್ರಾಜ್ಯಶಾಹಿಗಳು ಸಂವಿಧಾನದ ನೆರವು ಪಡೆದಿದ್ದಾರೆ.

ಸಂವಿಧಾನದಲ್ಲಿ ತಾತ್ವಿಕವಾಗಿ ಭಾರತೀಯ ಪ್ರಜೆಗಳಿಗೆ ಅನೇಕ ಹಕ್ಕುಗಳನ್ನು ಕೊಡಲಾಗಿದೆ. ಆದರೆ ಅವೆಲ್ಲ ವಾಸ್ತವದಲ್ಲಿ ಸಾಧ್ಯವಾಗಿದೆಯೇ ಎಂದರೆ .ಆಗಿಲ್ಲ ಎಂಬುದೇ ಕಟುವಾಸ್ತವವಾಗಿದೆ. ಉದಾ: ಸಂವಿಧಾನದಲ್ಲಿ ವಾಕ್ ಸ್ವಾತಂತ್ರ್ಯದ ಹಕ್ಕು ಇದೆ. ಆದರೆ ಕೂಲಿ ಮಾಡುವ ಕೂಲಿ ಕಾರ್ಮಿಕ ನ್ಯಾಯವಾಗಿ ಕೂಲಿ ಕೇಳಿದರೆ ಅವನನ್ನು ಕೊಲೆ ಮಾಡಿರುವ/ಮಾಡುವ ಕ್ರೂರ ವಾಸ್ತವವಿದೆ. ಸಂವಿಧಾನದಲ್ಲಿ ಎಲ್ಲರೂ ಸಮಾನರು ಎಂಬ ಆಶಯವಿದೆ. ಆದರೆ ಸಮಾಜದಲ್ಲಿ ಜಾತಿ ಶ್ರೇಣೀಕರಣ ಹಾಗು ಆರ್ಥಿಕ ಶ್ರೇಣೀಕರಣಗಳು ಹಾಗೆಯೇ ಮುಂದುವರಿದಿವೆ.

ಅಕಡೆಮಿಕ್ ವಲಯದಲ್ಲಿ ಅಂಬೇಡ್ಕರ್

ಅಕಡೆಮಿಕ್ ವಲಯದಲ್ಲಿ ಅಂಬೇಡ್ಕರರನ್ನು ಹಾಗು ಅವರ ಚಿಂತನೆಗಳನ್ನು ಧೂಳು ವರೆಸಿ ಕ್ಲೀನ್ ಮಾಡಿ ಶೋಕೇಸಿನಲ್ಲಿ ಭದ್ರ ಮಾಡುವ ಕೆಲಸ ಮೃದುವಾಗಿ ಮುಂದುವರಿದಿದೆ. ವ್ಯವಸ್ಥೆಯ ಬಗ್ಗೆ ತಮಗೆ ಯಾವ ಅಭಿಪ್ರಾಯವಿದೆಯೊ ಅದನ್ನು ಭದ್ರಪಡಿಸಿ ಮಂಡಿಸುವ ಸಲುವಾಗಿ ಅಂಬೇಡ್ಕರರನ್ನು ಬಳಸಲಾಗುತ್ತಿದೆ. ಭಾರತದಲ್ಲಿ ೯೦ರ ದಶಕದ ನಂತರ ಕೋಮುವಾದವು ವಿಕೃತ ರೂಪವನ್ನು ಪಡೆಯಿತು. ಅನಂತರ 'ವೈದಿಕ ಧರ್ಮ'ದ ವಿರೋಧ, 'ಬ್ರಾಹ್ಮಣ ಧರ್ಮ'ದ ವಿರೋಧ, 'ಹಿಂದೂ ಧರ್ಮ'ದ ವಿರೋಧಗಳು ಒಂದೇ ಸಮನೆ ನಡೆಯಲು ಶುರುವಾದವು. ಅನೇಕರು ತಮ್ಮ ಈ ನಿಲುವು ಮತ್ತು ನಿರೂಪಣೆಗೆ ಅಂಬೇಡ್ಕರ್ ವಿಚಾರಗಳನ್ನು ಅನಾಮತ್ತಾಗಿ ಬಳಸಿಕೊಳ್ಳಲಾಯಿತು.

ಅಕಡೆಮಿಕ್ ವಲಯದಲ್ಲಿ ಅಂಬೇಡ್ಕರ್ ಒಂದು ಬಂಡವಾಳವಾಗಿದ್ದಾರೆ. ಅಂಬೇಡ್ಕರ್ ಹೆಸರಿನಲ್ಲಿ ಅಧ್ಯಯನ ಪೀಠಗಳು, ಶಿಕ್ಷಣ ಸಂಸ್ಥೆಗಳು, ಸಂಶೋಧನ ಸಂಸ್ಥೆಗಳು ಶುರುವಾಗಿವೆ. ಅವುಗಳಿಗೆ ಕೇಂದ್ರ ಹಾಗು ರಾಜ್ಯ ಸರಕಾರಗಳು ಹಣಕಾಸನ್ನು ಮಂಜೂರು ಮಾಡುತ್ತವೆ. ಇವಲ್ಲದೆ ಇನ್ನೂ ಬೇರೆ ಕೆಲವು ಮೂಲಗಳಿಂದಲೂ ಆರ್ಥಿಕ ನೆರವು ಬರುತ್ತದೆ. ಇವನ್ನು ಬಳಸಿಕೊಂಡು ಕೆಲವು ಸಂಸ್ಥೆಗಳು ಮಾತ್ರ ಗುಣಾತ್ಮಕ ಕೆಲಸಗಳನ್ನು ಮಾಡಿವೆ. ಉಳಿದ ಸಂಸ್ಥೆಗಳಲ್ಲಿ ನಾಮಕಾವಸ್ತೆ ಕೆಲಸಗಳು ಮಾತ್ರ ನಡೆಯುತ್ತಿವೆ. ಅಂಬೇಡ್ಕರ್ ಹೆಸರು ಮಾತ್ರ ಬಳಕೆಯಾಗುತ್ತಿದೆ.

ಕಳೆದ ಶತಮಾನದಲ್ಲಿ ಅಂಬೇಡ್ಕರ್ ಇಡೀ ಇಂಡಿಯಾದಲ್ಲಿ ಗಣನೀಯವಾದ ಅಕಡೆಮಿಕ್ ಕೆಲಸಗಳನ್ನು ಮಾಡಿದರು. ಇಂದಿನ ವಿದ್ವಾಂಸರಿಗೆ ಅವುಗಳನ್ನು ಓದಿ ಅರ್ಥ ಮಾಡಿಕೊಂಡು ಜೀರ್ಣಿಸಿಕೊಳ್ಳುವುದೂ ಕೂಡ ಕಷ್ಟ. ಅಂಬೇಡ್ಕರರ ಚಿಂತನೆಗಳಿಗೆ ಸಾಮಾಜಿಕ ಪರಿಣಾಮದ ನೇರ ಸಂಬಂಧವಿದೆ. ಹಾಗಾಗಿ ಅವುಗಳನ್ನು ಮುಚ್ಚಿಡುವ ಸಲುವಾಗಿ, ಅಂಬೇಡ್ಕರರ ಪ್ರಸ್ತಾಪ ಬಂದಾಗಲೆಲ್ಲ ಅವರ ಬದಲಿಗೆ ಲೋಹಿಯಾ ಅವರನ್ನೊ, ಗಾಂಧಿ



ಯನ್ನೊ ಚರ್ಚೆಗೆ ತರುವ ಕೆಲಸವನ್ನು ಕೆಲವು ತಾಂತ್ರಿಕ ಬುದ್ಧಿಜೀವಿಗಳು ಮಾಡುತ್ತಿದ್ದಾರೆ.

ದಲಿತ ವಲಯದಲ್ಲಿ ಅಂಬೇಡ್ಕರ್

ದಲಿತ ಚಿಂತಕರು ಅಂಬೇಡ್ಕರರನ್ನು ಸಮಕಾಲೀನಗೊಳಿಸುವುದು ಹೇಗೆ? ಎಂಬ ರಾಜಕೀಯ ಪ್ರಶ್ನೆಯನ್ನು ಎದುರಿಸುತ್ತಿದ್ದಾರೆ. ಈ ದೇಶಕ್ಕೆ ಜಾಗತೀಕರಣನ್ನು ಒತ್ತಾಯಪೂರ್ವಕವಾಗಿ ಜಾರಿ ಮಾಡಿದ ಮೇಲೆ ಎಲ್ಲಾ ವಲಯಗಳನ್ನೂ ಸೇರಿದಂತೆ ಕೃಷಿ ವಲಯದ ಮೇಲೆ ಭಾರೀ ದುಷ್ಪರಿಣಾಮ ಉಂಟಾಯಿತು. ದಲಿತರೆಂದರೆ ಈ ದೇಶದಲ್ಲಿ ಕೃಷಿ ಕೂಲಿ ಕಾರ್ಮಿಕರು. ಕೃಷಿ ವಲಯದಲ್ಲಿ ಉಂಟಾದ ಬಿಕ್ಕಟ್ಟು ನೇರವಾಗಿ ಕೃಷಿಕೂಲಿ ದಲಿತ ವರ್ಗವನ್ನು ಇಕ್ಕಟ್ಟಿಗೆ ಸಿಲುಕಿಸಿತು. ಅಲ್ಲಿ ಕೊನೆ ಪಕ್ಷ ಕೂಲಿಗಾಗಿ ಪರದಾಡುವ ಪರಿಸ್ಥಿತಿ ಉಂಟಾಯಿತು. ಇದೇ ಪರಿಸ್ಥಿತಿ ಬೇರೆಬೇರೆ ಕ್ಷೇತ್ರಗಳಲ್ಲೂ ಅನುರಣಿಸಿತು. ಒಂದು ಕಡೆ ಜಾಗತೀಕರಣ, ಉದಾರೀಕರಣಗಳು ದಲಿತರನ್ನು ಬಿಡುಗಡೆ ಮಾಡುತ್ತವೆ ಎಂದು ಹೇಳಲಾಗುತ್ತಿದೆ. ಮತ್ತೊಂದು ಕಡೆ ಇದಕ್ಕೆ ವಿರುದ್ಧವಾಗಿ ಅದೇ ಜಾಗತೀಕರಣ ಹಾಗು ಉದಾರೀಕರಣಗಳು ದಲಿತರನ್ನು ನೇರವಾಗಿ ಬಲಿತೆಗೆದು

ಕಳೆದ ಶತಮಾನದಲ್ಲಿ ಅಂಬೇಡ್ಕರ್ ಇಡೀ ಇಂಡಿಯಾದಲ್ಲಿ ಗಣನೀಯವಾದ ಅಕಡೆಮಿಕ್ ಕೆಲಸಗಳನ್ನು ಮಾಡಿದರು. ಇಂದಿನ ವಿದ್ವಾಂಸರಿಗೆ ಅವುಗಳನ್ನು ಓದಿ ಅರ್ಥ ಮಾಡಿಕೊಂಡು ಜೀರ್ಣಿಸಿಕೊಳ್ಳುವುದೂ ಕೂಡ ಕಷ್ಟ. ಅಂಬೇಡ್ಕರರ ಚಿಂತನೆಗಳಿಗೆ ಸಾಮಾಜಿಕ ಪರಿಣಾಮದ ನೇರ ಸಂಬಂಧವಿದೆ. ಹಾಗಾಗಿ ಅವುಗಳನ್ನು ಮುಚ್ಚಿಡುವ ಸಲುವಾಗಿ, ಅಂಬೇಡ್ಕರರ ಪ್ರಸ್ತಾಪ ಬಂದಾಗಲೆಲ್ಲ ಅವರ ಬದಲಿಗೆ ಲೋಹಿಯಾ ಅವರನ್ನೊ, ಗಾಂಧಿಯನ್ನೊ ಚರ್ಚೆಗೆ ತರುವ ಕೆಲಸವನ್ನು ಕೆಲವು ತಾಂತ್ರಿಕ ಬುದ್ಧಿಜೀವಿಗಳು ಮಾಡುತ್ತಿದ್ದಾರೆ.

ಕೊಂಡಿವೆ. ಇಂತಹ ಸಂದರ್ಭದಲ್ಲಿ ಅಂಬೇಡ್ಕರರನ್ ಎಲ್ಲಿ ಪ್ಲೇಸ್ ಮಾಡಬೇಕೆಂಬ ಗೊಂದಲ ದಲಿತ ಚಿಂತ ರಿಗೆ ಎದುರಾಯಿತು. ಅಂತಿಮವಾಗಿ ಅವರು 'ಜಾಗತೀಕ ಣದಿಂದಲೂ ದಲಿತರಿಗೆ ಒಳ್ಳೆಯದಾಗುವುದಾದರೆ ಆಗ ದಲಿತರು ಜಾಗತೀಕರಣದ ಲಾಭ ಪಡೆಯುವುದಾದ ಪಡೆಯಲಿ' ಎಂಬ ಹತಾಶ ಸ್ಥಿತಿಯನ್ನು ತಲುಪಿದರು.

ದಲಿತ ಚಳುವಳಿಯಲ್ಲಿ ಅಂಬೇಡ್ಕರ್

ಈ ದೇಶಕ್ಕೆ ೧೯೪೭ರಲ್ಲಿ ಬಿಳಿಯರಿಂದ ಅಧಿಕಾ ಹಸ್ತಾಂತರ ಆಯಿತು ಎಂಬುದು ಒಂದು ನಂಬಿ ಅದಾಗಿ ೬೦-೬೫ ವರುಷಗಳು ಕಳೆದರೂ ಈ ದೇಶ ದುಡಿವವರ, ಶೋಷಿತರ ಹಾಗು ದಲಿತರ ಬದುಕು ಬ ಲಾಗಲಿಲ್ಲ. ಅಲ್ಲಲ್ಲಿ ಅಕ್ಷರ ಕಲಿತ ದಲಿತ ಸಮೂಹ ತ ಮೇಲಿನ ಅಪಮಾನ ಹಾಗು ಶೋಷಣೆಯನ್ನು ವಿರೋ ಸಲು ತೊಡಗಿದರು. ಆದರೆ ಅಂತಹದೇ ಹೋರಾಟವ ಅಂಬೇಡ್ಕರರು ಮಾಡಿದ್ದರು ಎಂಬುದು ಸ್ವತಃ ದಲಿತ ತಾವು ಹೋರಾಟಕ್ಕೆ ಇಳಿದ ಮೇಲೆ ಗೊತ್ತಾಯಿತು. ಅ ಯವರೆಗೆ ಆಳುವ ವರ್ಗ ಅಂಬೇಡ್ಕರರನ್ನು ಮುಚ್ಚಿಟ್ಟಿತ ದಲಿತರು ತಮ್ಮ ಹೋರಾಟದ ಮೂಲಕ ಅಂಬ ಡ್ಕರರನ್ನು ನಾಡಿಗೆ, ಊರಿಗೆ, ಕೇರಿಗೆ ಹಾಗು ಗುಡಿಸ ಗಳಿಗೆ ಪರಿಚಯಿಸಿದರು. ಇದು ದಲಿತರಲ್ಲಿ ಹೋರಾಟ ಪರಂಪರೆ ಇದೆ ಎಂಬುದನ್ನು ಮೊಟ್ಟಮೊದಲ ಬಾರಿ ತೋರಿಸಿಕೊಟ್ಟಿತು. ದಲಿತ ಹೋರಾಟ ಅಲ್ಲಿಂದ ಸ್ಫೂರ್ತಿ ಪಡೆಯಿತು. ಆ ಮೂಲಕ ದಲಿತರಲ್ಲಿ ಒಂದು ಬಗೆಯ ಜಾಗೃತಿಯನ್ನು ಹಾಗು ಸ್ವಾಭಿಮಾನವನ್ನು ಮೂಡಿಸಿತು ಅದೇ ಕಾಲಕ್ಕೆ ಮತ್ತೊಂದು ಕಡೆ ಶೋಷಕರಿಗೆ ಇದ ನುಂಗಲಾರದ ತುತ್ತಾಯಿತು.

ದಲಿತರು ಅಂಬೇಡ್ಕರರ ವಿಚಾರಗಳಿಂದ ಹಾಗ ಅಂಬೇಡ್ಕರರು ಮಾಡಿದ ಹೋರಾಟಗಳಿಂದ ಸ್ಫೂರ್ತಿ ಪಡೆಯುವುದು ಆಳುವ ವರ್ಗದವರಿಗೆ ಬೇಕಾಗಿರಲಿಲ್ಲ ಹಾಗಾಗಿ ಅಂಬೇಡ್ಕರರ ವಿಚಾರಗಳಿಂದ ದಲಿತರನ ದೂರ ಮಾಡುವ ಕುತಂತ್ರಗಳನ್ನು ಪ್ರಯೋಗಿಸಿದರು. ಪ ಣಾಮವಾಗಿ ಅಂಬೇಡ್ಕರ್ ಪ್ರಶಸ್ತಿ, ಅಂಬೇಡ್ಕರ್ ಅಧ್ಯಯ ಪೀಠ, ಅಂಬೇಡ್ಕರ್ ಸಂಶೋಧನ ಸಂಸ್ಥೆ, ಅಂಬೇಡ್ಕರ ಫೆಲೊಶಿಪ್ ಮುಂತಾದುವು ನಯವಾಗಿ ಜಾರಿ ಬಂದವು. ಕೇರಿಗಳ ವಿಕೃತ ಶೋಷಣೆಯಿಂದ ಹೊ ಬಂದಿರುವ ಹೊಟ್ಟೆ ತುಂಬಿದ ದಲಿತರು ಲಾಬಿಯಿಂ ಅವುಗಳ ಲಾಭ ಪಡೆದು ಸಂಭ್ರಮಿಸತೊಡಗಿದರು. ಆದ ಕೇರಿಗಳಲ್ಲಿ ದಲಿತರ ಶೋಷಣೆಯ ಕ್ರೌರ್ಯ ಹಾಗೆಯೆ ಮುಂದುವರಿಯಿತು.

ದಲಿತ ಹೋರಾಟ ಹಾಗು ದಲಿತ ಚಳುವ ಅಂಬೇಡ್ಕರರಿಂದ ಅತ್ಯಂತ ಮೇಲುಸ್ತರದ ಭಾವನಾತ್ಮ ಸ್ಫೂರ್ತಿಯಷ್ಟನ್ನೆ ಪಡೆಯಿತು. ಆಮೇಲೆ ನೌಕರಸ್ಥ ದ ತರು, ಅಧಿಕಾರಸ್ಥ ದಲಿತರು ಹಾಗು ದಲಿತ ರಾಜಕಾ ಣಿಗಳು ತಮ್ಮ ಶಕ್ತ್ಯಾನುಸಾರ ಅಂಬೇಡ್ಕರ್ ಹೆಸರಿನಲ್ಲಿ ಏನೆಲ್ಲ ಲಾಭ ಪಡೆದರು. ಮನೆಗಳಲ್ಲಿ ಮಾತ್ರ ಸತ್ಯನಾರಾ ಯಣ ವ್ರತ ಮಾಡಿಸಿದರು. ಆ ಕಡೆ ಕೇರಿಗಳಲ್ಲಿ ಹುಳ ಹಿಡಿದ ಮುಗ್ಗಲು ಅಕ್ಕಿ ತರಲು ಹಸಿರು ಕಾರ್ಡಿಗೂ ಪ ದಾಡುವ ಪರಿಸ್ಥಿತಿ ಪಾತಾಳಕ್ಕೆ ಹೋಯಿತು. ಅಲ್ಲಿ ಅಂಬೇ ಡ್ಕರ್ ಹೆಸರಿನ ಪ್ರಶಸ್ತಿ, ಪೀಠ, ಸಂವಿಧಾನ ಯಾವುದೂ ಕೇರಿಯವರ ನೆರವಿಗೆ ಬರಲಿಲ್ಲ. ಹಾಗಿದ್ದರೆ ಈವರೆಗೆ ಅಂಬೇಡ್ಕರರಿಂದ ಲಾಭ ಪಡೆದವರು ಯಾರು ಎಂಬು ದನ್ನು ಮನವರಿಕೆ ಮಾಡಿಕೊಳ್ಳಬೇಕಾಗಿದೆ.

ದಲಿತರೆಂದರೆ ಕೇವಲ ದಲಿತ ಸಾಹಿತಿಗಳಲ್ಲ, ದಲಿತ ನೌಕರರಲ್ಲ, ದಲಿತ ಅಧಿಕಾರಿಗಳಲ್ಲ, ದಲಿತ ರಾಜಕಾರಿಣಿಗಳಲ್ಲ. ದಲಿತರೆಂದರೆ ಹಸಿವು ಮತ್ತು ಅಪಮಾನ ಎಂಬುದಕ್ಕೆ ಮತ್ತೊಂದು ಹೆಸರು. ಇದನ್ನು ಮುಚ್ಚಿಟ್ಟು ದಲಿತರನ್ನು ವ್ಯಾಖ್ಯಾನಿಸಲು ಬರುವುದಿಲ್ಲ; ವ್ಯಾಖ್ಯಾನಿಸಲೂ ಬಾರದು. ದಲಿತರನ್ನು ಸರಕಾರಿ ಭಾಷೆಯಲ್ಲಿ ಗ್ರಹಿಸುವುದನ್ನು ಮೊದಲು ಬಿಡಬೇಕು.

ಅಂಬೇಡ್ಕರ್ ದಲಿತರಿಗೆ ಸ್ಫೂರ್ತಿ. ಅಂಬೇಡ್ಕರ್ ದಲಿತ ನಾಯಕರಿಗೆ, ದಲಿತ ರಾಜಕಾರಿಣಿಗಳಿಗೆ ಶಕ್ತಿ. ಅಂಬೇಡ್ಕರ್ ಶೋಷಕರಿಗೆ ಹಾಗು ಆಳುವ ವರ್ಗಕ್ಕೆ ಅಸ್ತ್ರ. ದಲಿತರು ಒಂದು ಕಡೆ ಅಂಬೇಡ್ಕರರನ್ನು ಶಕ್ತಿಯನ್ನಾಗಿ ಪರಿಗಣಿಸಲು ಪ್ರಯತ್ನಿಸುತ್ತಿದ್ದಾರೆ. ಅದೇ ಕಾಲಕ್ಕೆ ಶೋಷಕರು ಅಂಬೇಡ್ಕರರನ್ನು ಅಸ್ತ್ರವನ್ನಾಗಿ ಮಾರ್ಪಡಿಸಿ ಬಿಟ್ಟಿದ್ದಾರೆ. ಆ ಅಸ್ತ್ರದಿಂದ ಒಂದು ಕಡೆ ದಲಿತರನ್ನೂ ಮತ್ತೊಂದು ಕಡೆ ಅಂಬೇಡ್ಕರರನ್ನೂ ದಾರಿ ತಪ್ಪಿಸಿದ್ದಾರೆ. ಅಂಬೇಡ್ಕರರಿಗೆ ಕೇವಲ ಪದಗಳ (Words) ಮೂಲಕ ಹಾಗು ಪದವಿಗಳ ಮೂಲಕ ಗೌರವಿಸಿ ಹೊಗಳಿ ಹೊನ್ನ ಶೂಲಕ್ಕೇರಿಸಿದ್ದಾರೆ. ದಲಿತ ಚಿಂತಕರು, ದಲಿತ ನಾಯಕರೂ ಅದನ್ನು ಅನಾಮತ್ತಾಗಿ ಅನುಸರಿಸಿದ್ದಾರೆ; ಹಿಂಬಾಲಿಸಿದ್ದಾರೆ.

ದಲಿತರ ವಾಸ್ತವ ಪರಿಸ್ಥಿತಿ ಮತ್ತು ಅಂಬೇಡ್ಕರ್

ವರ್ಷದ ೩೬೫ ದಿನ ಅಂಬೇಡ್ಕರ್ ಹೆಸರಿನಿಂದ ಲಾಭ ಪಡೆವವರಿಗೆ, ದಲಿತ ನಾಯಕರಿಗೆ ಅಂಬೇಡ್ಕರ್ ಅಪರಿಚಿತರು. ಏಪ್ರಿಲ್ ೧೪ ಮತ್ತು ಡಿಸೆಂಬರ್ ೬ ಈ ಎರಡು ದಿನ ಮಾತ್ರ ಅಂಬೇಡ್ಕರ್ ಪೂರ್ತಿ ಪರಿಚಿತರು. ದಲಿತ ಹೋರಾಟದ ಆರಂಭದ ದಿನಗಳಲ್ಲಿ ನಾಡಿನಾದ್ಯಂತ ದಲಿತ ಅಧ್ಯಯನ ಶಿಬಿರಗಳನ್ನು ನಡೆಸಲಾಗುತ್ತಿತ್ತು. ಆ ಶಿಬಿರಗಳು ದಲಿತ ವಿದ್ಯಾರ್ಥಿಗಳಿಗೆ ಅವರು ಔಪಚಾರಿಕವಾಗಿ ಓದುತ್ತಿದ್ದ ತರಗತಿಗಳು ನೀಡದ ನಿಜವಾದ ಸಾಮಾಜಿಕ ತಿಳುವಳಿಕೆಯನ್ನು ನೀಡುತ್ತಿದ್ದವು. ಆದರೆ ಇಂದು ಅಂತಹ ಶಿಬಿರಗಳು ಕಡಿಮೆಯಾಗಿವೆ. ಪರಿಣಾಮವಾಗಿ ದಲಿತ ಹೋರಾಟಗಳೂ ಕೂಡ ಅಂಬೇಡ್ಕರ್ ಬಗ್ಗೆ ಅಧ್ಯಯನ ಹಾಗು ತರಬೇತಿ ಪಡೆಯುತ್ತಿಲ್ಲ. ಅಂಬೇಡ್ಕರರ ಕೆಲವು ಜೀವನ ವಿವರಗಳು ಹಾಗು ಅಂಬೇಡ್ಕರರ ಕೆಲವು ಸೂಕ್ತಿಗಳು ಕಂಠಪಾಠವಾಗಿವೆ. ಅವುಗಳಲ್ಲೇ ಏಪ್ರಿಲ್ ೧೪ ಹಾಗು ಡಿಸೆಂಬರ್ ೬ ಈ ಎರಡು ದಿನವನ್ನು ತಳ್ಳುತ್ತಾರೆ.

ಮೀಸಲಾತಿಯಿಂದ ಅಧಿಕಾರಕ್ಕೆ ಹೋದವರು (ದಲಿತ ನೌಕರರು ಮತ್ತು ದಲಿತ ರಾಜಕಾರಣಿಗಳು) ತಮ್ಮ ಮಕ್ಕಳಿಗೆ ಇಂದು ಐಟಿ ಬಿಟಿ ಶಿಕ್ಷಣ ಕೊಡಿಸುತ್ತಿದ್ದಾರೆ. ಅದು ಸರಿಯೊ ತಪ್ಪೊ ಅದು ಬೇರೆ ಪ್ರಶ್ನೆ. ಅವರನ್ನು ಕೇಳಿದರೆ ನಮ್ಮ ಮಕ್ಕಳು ಕೂಲಿ ಮಾಡಬೇಕಾ ಅಥವಾ ಅಮೆರಿಕಾದಲ್ಲಿ ಇಂಜಿನಿಯರ್ ಆಗಬೇಕಾ? ಎಂಬ ಕಮರ್ಷಿಯಲ್ ಉತ್ತರವನ್ನು ಹೇಳಿಯಾರು. ಹೀಗೆ ಹೇಳುವ ಮೂಲಕ ಮೇಲು ಮಧ್ಯಮ ವರ್ಗದ ದಲಿತರು ಕಮರ್ಷಿಯಲ್ ಆಗಿದ್ದಾರೆ. ಅವರಿಗಾಗಲಿ, ಅವರ ಮಕ್ಕಳಿಗಾಗಲಿ ಅಂಬೇಡ್ಕರ್ ಸಂಪೂರ್ಣ ಅಪರಿಚಿತ. ಐಟಿ ಬಿಟಿಗಳು ಮಾತ್ರ ಪರಿಚಿತ. ಕೊನೆ ಪಕ್ಷ ಆರ್ಥಿ ಕವಾಗಿ ಬಡತನದಿಂದ ಬಂದಿರುವ ದಲಿತ ವಿದ್ಯಾರ್ಥಿಗಳು ಸಮಾಜ ವಿಜ್ಞಾನ ವಿಭಾಗಗಳಲ್ಲಿ ಓದುತ್ತಾರೆ. ಕೊನೆ ಪಕ್ಷ ಅವರಿಗಷ್ಟೆ ಅಂಬೇಡ್ಕರ್ ಸ್ವಲ್ಪ ಪರಿಚಯ ಅಷ್ಟೆ.

ಒಂದು ಕಾಲಕ್ಕೆ ದಲಿತ ಹೋರಾಟ ಅಂಬೇಡ್ಕರರಿಂದ ಸ್ಫೂರ್ತಿ ಪಡೆದಿತ್ತು. ಇಂದು ಅನೇಕ ದಲಿತ ಹೋರಾಟಗಳಿಗೆ ಪರಿಪಕ್ವ ಸಿದ್ಧಾಂತ ಸಿದ್ಧಿಸಿಲ್ಲ. ಅವರೆಲ್ಲ ಆಳುವ ವರ್ಗದ ಪರಿಭಾಷೆಯಲ್ಲಿ ಅಂಬೇಡ್ಕರ್ ಬಗ್ಗೆ ಮಾತಾಡುತ್ತಿದ್ದಾರೆ. ಶೋಷಕರ ಪ್ರಜ್ಞೆ ದಲಿತರ ಪ್ರಜ್ಞೆಯನ್ನು ಆಕ್ರಮಿಸಿಕೊಂಡಿದೆ. ಆಳುವ ವರ್ಗವು ಅಂಬೇಡ್ಕರರನ್ನು ವಿಕೃತ ನಾಟಕದ ಮೂಲಕ ಪೂಜೆ ಮಾಡುತ್ತಿದ್ದಾರೆ. ಕಾಯಿ ಒಡೆಯುತ್ತಿದ್ದಾರೆ. ಆರತಿ ಬೆಳಗುತ್ತಿದ್ದಾರೆ. ಮಂಗಳಾರತಿಯನ್ನೂ ಮಾಡುತ್ತಿದ್ದಾರೆ. ಕೆಲವು ದಲಿತರು ಅಲ್ಲಿ ಒಳ ಮೀಸಲಾತಿ ಕೇಳುತ್ತಿದ್ದಾರೆ.

ಸಾಮ್ರಾಜ್ಯಶಾಹಿಯ ಜಾಗತೀಕರಣದಿಂದ ದಲಿತರ ಬದುಕು ಏನಾಗಿದೆ ಎಂಬುದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ದಲಿತರೆಂದರೆ ಕೇವಲ ದಲಿತ ಸಾಹಿತಿಗಳಲ್ಲ, ದಲಿತ ನೌಕರರಲ್ಲ, ದಲಿತ ಅಧಿಕಾರಿಗಳಲ್ಲ, ದಲಿತ ರಾಜಕಾರಿಣಿಗಳಲ್ಲ. ದಲಿತರೆಂದರೆ ಹಸಿವು ಮತ್ತು ಅಪಮಾನ ಎಂಬುದಕ್ಕೆ ಮತ್ತೊಂದು ಹೆಸರು. ಹಸಿವು ಮತ್ತು ಅಪಮಾನಗಳ ಸಾಮಾಜಿಕ ವಾಸ್ತವದ ಮತ್ತೊಂದು ಹೆಸರು ದಲಿತರು. ಇದನ್ನು ಮುಚ್ಚಿಟ್ಟು ದಲಿತರನ್ನು ವ್ಯಾಖ್ಯಾನಿಸಲು ಬರುವುದಿಲ್ಲ; ವ್ಯಾಖ್ಯಾನಿಸಲೂ ಬಾರದು. ದಲಿತರನ್ನು ಸರಕಾರಿ ಭಾಷೆಯಲ್ಲಿ ಗ್ರಹಿಸುವುದನ್ನು ಮೊದಲು ಬಿಡಬೇಕು. ಹಸಿವು ಮತ್ತು ಅಪಮಾನ ಎಂಬುದಕ್ಕೆ ಸರಕಾರಿ ನಿಘಂಟಿನಲ್ಲಿ ಅರ್ಥಗಳಿಲ್ಲ. ಅಷ್ಟು ಮಾತ್ರವಲ್ಲ; ಶೋಷಣೆ ಎಂಬುದಕ್ಕೂ ಸರಕಾರಿ ನಿಘಂಟಿನಲ್ಲಿ ವಿವರಣೆ ಇಲ್ಲ.

ಹಸಿವು ಮತ್ತು ಅಪಮಾನಗಳ ಬೇಗುದಿಯ ದಲಿತರು ಇಂದು ಹಳ್ಳಿಗಳ ಭೂಮಾಲಿಕರ ಜಮೀನುಗಳಲ್ಲಿ ಬೆವರಿಳಿಸಿ ದುಡಿಯುತ್ತಿದ್ದಾರೆ. ಅವರಿಗೆ ಸರಿಯಾಗಿ ಸಂಬಳ ಕೊಡುತ್ತಿಲ್ಲ. ಬೆಂಗಳೂರಿನ ಗಲ್ಲಿಗಲ್ಲಿಗಳಲ್ಲಿ ವಿವಿಧ ಕಾಮಗಾರಿ ಕೆಲಸಗಳಲ್ಲಿ ಉತ್ತರ ಕರ್ನಾಟಕ ಭಾಗದಿಂದ ವಲಸೆ ಬಂದಿರುವ ಸಾವಿರಾರು ದಲಿತರು ಬೆವರು ಕಣ್ಣೀರಿನಲ್ಲಿ ಬದುಕು ದೂಡುತ್ತಿದ್ದಾರೆ. ಇನ್ನು ದಲಿತ ವಿದ್ಯಾರ್ಥಿಯುವ ಜನರ ಪಾಡು, ದಲಿತ ಹೆಣ್ಣು ಮಕ್ಕಳ ಪಾಡು ಮತ್ತೊಂದು ದುರಂತ ಲೋಕ. ಇತ್ತೀಚಿನ ದಿನಗಳಲ್ಲಿ ದಲಿತ ಹೋರಾಟಕ್ಕೆ ದಲಿತರ ವಾಸ್ತವ ಪರಿಸ್ಥಿತಿಯನ್ನು ಒಟ್ಟಾಗಿ ಗ್ರಹಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿಯೇ ಕಳೆದ ಹತ್ತಾರು ವರುಷಗಳಿಂದ ಇಡೀ ದಲಿತ ಸಮೂಹಕ್ಕೆ ಸಂಬಂಧಿಸಿದ ಯಾವ ಹಕ್ಕೊತ್ತಾಯವನ್ನೂ, ಯಾವ ಕಾರ್ಯಕ್ರಮವನ್ನೂ ದಲಿತ ಹೋರಾಟ ಕೈಗೆತ್ತಿಕೊಳ್ಳಲಾಗಿಲ್ಲ. ಎಲ್ಲಾ ದಲಿತರ ವಾಸ್ತವ ಪರಿಸ್ಥಿತಿಯನ್ನು ಅರಿಯಲು ಅಂಬೇಡ್ಕರ್ ಆಲೋಚನೆಯ ಮೂಲಕ ಪ್ರವೇಶ ಮಾಡುವುದಾದರೆ ಅಂಬೇಡ್ಕರರು ಈ ದೇಶದ ಗ್ರಾಮೀಣ ಪರಿಸ್ಥಿಗಳ ಬಗ್ಗೆ, ಅಲ್ಲಿನ ದುಡಿಮೆಯ ಸಂಬಂಧಗಳ ಬಗ್ಗೆ ಮಾಡಿರುವ ಅಧ್ಯಯನಗಳನ್ನು, ಬರೆದಿರುವ ಬರಹಗಳನ್ನು ಮೊದಲು ಓದಬೇಕಾಗಿದೆ. ಆ ನಿಟ್ಟಿನಲ್ಲಿ ಈಗ ಬದಲಾಗಿರುವ ದಲಿತರ ವಾಸ್ತವ ಪರಿಸ್ಥಿತಿಗಳನ್ನೂ, ಅವರ ಸಮಸ್ಯೆಗಳನ್ನೂ ಅಧ್ಯಯನ ಮಾಡಿ, ಸಮಕಾಲೀನ ಪರಿಸ್ಥಿತಿಯಲ್ಲಿ ದಲಿತರ ವಿಮೋಚನೆಗೆ ಹೊಸ ದಾರಿಗಳನ್ನು ತುಳಿಯಬೇಕಿದೆ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅವರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಅದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಗೌರವ

ಮಹಾನ್ ಪ್ರಜಾಪ್ರಭುತ್ವವಾದಿ

೧೮೯೧ ರ ಏಪ್ರಿಲ್ ೧೪ ರಂದು ಮಿಲಿಟರಿ ಶಾಲೆಯ ಮುಖ್ಯೋಪಧ್ಯಾಯರಾದ ಸುಬೇದಾರ್ ರಾಮ್‌ಜಿ ಮಲ್ಲೋಜಿ ಸತ್ಪಾಲ್ ಮತ್ತು ಶ್ರೀಮತಿ ಭೀಮಾಬಾಯಿ ಅವರ ಹದಿನಾಲ್ಕನೆಯ ಮಗುವಾಗಿ ಡಾ॥ ಭೀಮ್‌ರಾವ್ ರಾಮ್‌ಜಿ ಅಂಬೇಡ್ಕರ್ ಅವರು ಮಧ್ಯಪ್ರದೇಶದ ಮ್ಹಾವು ಎಂಬಲ್ಲಿ ಜನಿಸಿದರು. ೨೦೦೬ರ ಏಪ್ರಿಲ್ ೧೪ಕ್ಕೆ ಅಂಬೇಡ್ಕರ್ ಅವರ ೧೧೫–೧೧೬ರ ಜನ್ಮೋತ್ಸವ.

ಡಾ॥ ಅಂಬೇಡ್ಕರ್ ಅವರ ಜೀವನ ಸಾಧನೆ ಅನನ್ಯ. ಅನುರೂಪ ಹಾಗೂ ಅನುಕರಣೀಯ ಆ ವಿವರಗಳನ್ನು ಅವರ ಆಪ್ತ ಕಾರ್ಯದರ್ಶಿಗಳಾಗಿದ್ದ ಶ್ರೀ ಧನಂಜಯ ಕೀರ್ ಅವರು ಬರೆದಿರುವ ಅವರ ಜೀವನ ಚರಿತ್ರೆ Dr. B.R.Ambedkar-life and Mission ಗ್ರಂಥದಲ್ಲಿ ಕಂಡುಕೊಂಡು ಜೀವನದಲ್ಲಿ ಉತ್ತಮ ಆದರ್ಶಗಳನ್ನು ಅಳವಡಿಕೊಳ್ಳಬಹುದು. ಅವರ ಕುಟುಂಬವು ಜಾತ್ಯತೀತ ಕಬೀರ್ ಪಂಥಕ್ಕೆ ಸೇರಿದ್ದರೂ ಸಂಪ್ರದಾಯವಾದಿ ಸಮಾಜದಲ್ಲಿ ಅಸ್ಪೃಶ್ಯ ಮಹಾರ್ ಜಾತಿಯವರಾಗಿದ್ದರು ಡಾ॥ ಅಂಬೇಡ್ಕರ್ ಅವರು ಅಗಾಧ ವಿದ್ಯಾಪಾರಂಗತ ಖಣಿ. ಅವರ ಪದವಿಗಳು ಅಪಾರ. ಮುಂಬಾಯಿ ಎಲ್ಫಿನ್ ಸ್ಟೋನ್ ಕಾಲೇಜಿನ ಪದವೀಧರ. ಕೊಲಂಬಿಯ ವಿಶ್ವವಿದ್ಯಾಲಯದ ಅರ್ಥಶಾಸ್ತ್ರದಲ್ಲಿ ಎಂ.ಎ. ಅದೇ ವಿಶ್ವವಿದ್ಯಾನಿಲಯದ ಪಿ.ಎಚ್.ಡಿ. ಪದವಿ; ಭಾರತ ಪ್ರಾಂತ್ಯಗಳ ಆರ್ಥಿಕ ವಿಕಸನ ವಿಷಯಕ್ಕೆ ಬ್ರಿಟಿಷ್ ಇಂಡಿಯಾದ ಬ್ರಿಟನ್ ಆರ್ಥಿಕತೆಯ ಪ್ರಾಂತೀಯ ವಿಕೇಂದ್ರೀಕರಣ ಲೇಖನಕ್ಕೆ ಲಂಡನ್ ವಿಶ್ವವಿದ್ಯಾಲಯದ ಎಮ್ಮೆಸ್ಸಿ, ಪದವಿ. ರೂಪಾಯಿಯ ಸಮಸ್ಯೆ ಕೃತಿಗೆ ಲಂಡನ್ ವಿಶ್ವವಿದ್ಯಾಲಯದ ಡಾಕ್ಟರ್ ಆಫ್ ಸೈನ್ಸ್ ಪದವಿ. ಲಂಡನ್ನಿನ ಬಾರ್–ಅಟ್–ಲಾ ಉತ್ಕೃಷ್ಟ ಕಾನೂನು ಪದವಿ. ಜರ್ಮನಿಯ ಬಾನ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದವರು. ಅವರ ಸರ್ವತೋಮುಖ ಸಮಾಜ ಮುಖಿ ಪ್ರತಿಭೆಗಳೆಲ್ಲ ಅಪಾರವಾದ ಶಿಸ್ತುಬದ್ಧ ಜ್ಞಾನಾರ್ಜನೆಯ ತಳಹದಿಯಲ್ಲಿ ರೂಪುಗೊಂಡವುಗಳು. ಯೂರೋಪ್ ಮತ್ತು ಅಮೆರಿಕಾದ ವಿಶ್ವವಿದ್ಯಾಲಯಗಳನ್ನು ಅಲ್ಲಿನ ಜನ ಜೀವನವನ್ನು ನೋಡಿ ಅವುಗಳ ಆಳ ಹರವುಗಳನ್ನು ಅರಿತುಕೊಂಡ ಅಂಬೇಡ್ಕರ್ ಅವರಿಗೆ ತಮ್ಮ ತಾಯ್ನಾಡಿನ ಸಮಾಜದ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಬದಲಾವಣೆ ತರಮಾಡುವ ಬಗ್ಗೆ ಎಲ್ಲಿಲ್ಲದ ಕಾತರ. ಉತ್ಕಟೇಚ್ಛೆ. ಅದಕ್ಕಾಗಿ ಅವರು ಅವಿರತ ಶ್ರಮಿಸಿದರು. ಅರಿತುಕೊಳ್ಳಲು ಅಸಮರ್ಥರಾದ ಸಂಪ್ರದಾಯವಾದಿ ನೋಡುಗರಿಗೆ ಅವರೊಬ್ಬ ಅಸ್ಪೃಶ್ಯರ ಮುಂದಾಳಾಗಿ ಮಾತ್ರ ಕಾಣಿಸುತ್ತಾರೆ. ಆದರೆ ಅವರೊಬ್ಬ ಮಹಾ ಮಾನವತಾವಾದಿ. ಅಸದೃಶ ರಾಷ್ಟ್ರ ಪ್ರೇಮಿ. ಜೀವನದ ಒಪ್ಪ ಓರಣಗಳಷ್ಟೇ ಅಲ್ಲ ನಿಸ್ಪೃಹ ತೆರೆದ ಹೃದಯದ ಆಶಾವಾದಿ. ಎಲ್ಲ ಶೋಷಿತರ ಸಂರಕ್ಷಣೆಯ ಹರಿಕಾರ. ಕಾರ್ಮಿಕರ, ಮಹಿಳೆಯರ ಕೃಷಿಕೂಲಿಗಳ, ಗುಡ್ಡಗಾಡು ಜನರ, ಹಿಂದುಳಿದವರ, ಅಲ್ಪಸಂಖ್ಯಾತರ, ಅಲೆಮಾರಿಗಳ, ಅಸ್ಪೃಶ್ಯರ, ದಾಸ್ಯಗಳ ವಿರೋಧವಿದ್ದ ಅವರು ಅನನ್ಯ ಪ್ರಗತಿಗಾಮಿಯಾಗಿದ್ದರು. ನಿಜವಾಗಿಯೂ ಅವರ ಧ್ಯೇಯ ಧೋರಣೆಗಳಿಗೆ ವಿರೋಧ ಸಾಧ್ಯವೆ ಇಲ್ಲ. ಶೋಷಣೆಯ ಶತ್ರು, ಮಾನವೀಯತೆಯ ಮಿತ್ರ, ಮಿಸಲಾತಿ ವಿರೋಧ ೫೫ ವರ್ಷಗಳ ಸ್ವಾತಂತ್ರ್ಯದ ನಂತರವೂ 'ಬ್ಯಾಕ್‌ಲಾಗ್' ಬಡಿದಾಟದಲ್ಲಿ ನಿರತವಾಗಿದೆ.

ಅಸ್ಪೃಶ್ಯತೆಯ ಬವಣೆಗಳನ್ನೆಲ್ಲ ಅನುಭವಿಸಿ ಸಮಾನತೆಯ ಸೌಂದರ್ಯವನ್ನು ಸವಿದಿದ್ದ ಅಂಬೇಡ್ಕರ್ ಅವರು ಒಮ್ಮೆ ಮಹಾತ್ಮಾ ಗಾಂಧೀ ಅವರಲ್ಲಿ ನಡೆಸಿದ ವಾಗ್ವಾದ ಒಂದರಲ್ಲಿ 'ನನ್ನ ಜನರಿಗೊಂದು ಮಾತೃಭೂಮಿ ಇಲ್ಲ' ಎಂದು ಹೇಳಿ ದಂಗುಬಡಿಸಿದ್ದರು. ಗಾಂಧಿಯವರು 'ಇದೇ ನಿಮ್ಮ ಜನ್ಮ ಭೂಮಿ' ಎಂದು ಮನವರಿಕೆ ಮಾಡಿಕೊಡಲು ಇನ್ನಿಲ್ಲದಂತೆ ಹೆಣಗಿದ್ದರು. ಗಾಂಧಿ ಅವರ ಅಂಬೇಡ್ಕರ್ ಅವರ ವಾದಗಳು ಭಾರತೀಯ ಸಾಮಾಜಿಕ ಪರಿಸ್ಥಿ ಅನಕ್ಷರತೆ, ದಾರಿದ್ರ್ಯ ಹಾಗೂ ದಾಸ್ಯದ ಪರಿಚಯ ಚೆನ್ನಾಗಿಯೆ ಇತ್ತು. ಹಾಗೆಯೇ ಮೂರು ದುಂಡು ಮೇಜಿನ ಪರಿಷತ್ತುಗಳ ಅಂಬೇಡ್ಕರ್ ಅವರ ನೈಜ ಕಾಳಜಿಗಳನ್ನು ವಿದ್ವತ್ತನ್ನು ಪ್ರತ್ಯಕ್ಷ ಕಂ ಕೊಂಡಿದ್ದರು. ಅಸ್ಪೃಶ್ಯತೆ ಮತ್ತು ದಾಸ್ಯ ಭಾವಗಳ ಉಚ್ಚಾಟ ಹಾಗೂ ಸಮಾನತೆ ಮತ್ತು ಭ್ರಾತೃಭಾವಗಳ ನಿಜವಾದ ಅಳವ ಯಂತಹ ವಿಷಯಗಳಲ್ಲಿ ಇಬ್ಬರಿಗೂ ಅಂತರಾಳದ ಸಮ ಸಮವಾ ಉತ್ಕಟ ಇಚ್ಛೆ ಒಂದೇ ಆಗಿತ್ತು. ವ್ಯತ್ಯಾಸವೆಂದರೆ ದಾಸ್ಯ ತೊಡೆ ಹಾಕಿದ ಮೇಲೆ ಸ್ವಾತಂತ್ರ್ಯಕ್ಕೆ ಬಡಿದಾಡಬಹುದು ಎಂಬುದು ಅಂ ಡ್ಕರ್ ವಾದವಾದರೆ, ಸ್ವಾತಂತ್ರ್ಯ ಪಡೆದು ಬಿಟ್ಟರೆ ನಮ್ಮ ಸಮಸ್ಯೆ ನ್ನೆಲ್ಲಾ ನಾವು ಬಗೆಹರಿಸಿಕೊಳ್ಳಬಹುದು ಎಂಬ ಆಶಾವಾದ ದಿ ವ್ಯಕ್ತಿತ್ವದ ಗಾಂಧಿ ಅವರ ಸ್ಪಷ್ಟ ಸತ್ಯನಿಷ್ಟ ಅಭಿಪ್ರಾಯ. ಸ್ವಾತಂ ಪಡೆದು ಐವತ್ತು ವರ್ಷ ದಾಟಿದ ಇಂದು ದಾಸ್ಯ, ಜಾತೀಯ ನೋಡಿದಾಗ ಡಾ॥ ಅಂಬೇಡ್ಕರ್ ಅವರ ಅಭಿಪ್ರಾಯ ಎಷ್ಟೊಂ ಸತ್ಯ ಎಂಬುದು ನಿಚ್ಚಳವಾಗುತ್ತದೆ. ದೇಶವು ಸ್ವಾತಂತ್ರ್ಯವನ್ನು ಇ ಇಡಿಯಾಗಿ ಒಪ್ಪಿಕೊಂಡು ಬಳಸಿಕೊಳ್ಳುತ್ತಿದ್ದರೂ, ಸಮಾನತೆ ಪ್ರ ಯನ್ನು ಅರಗಿಸಿಕೊಳ್ಳಲೇ ಇಲ್ಲ. ಭ್ರಾತೃಭಾವವನ್ನು ತಿರಸ್ಕೃತ ದೃ ಯಿಂದಲೇ ಕಾಣುತ್ತಿದ್ದೇವೆ. ಈ ಪರಿಸ್ಥಿತಿಯಲ್ಲಿ ಗಾಂಧಿ–ಅಂಬೇಡ್ಕ ಅವರ ದೃಷ್ಟಿಕೋನಗಳನ್ನು ಸರಿ–ತಪ್ಪು ಎಂದು ಹೇಳುವ ಸಂದರ್ಭ ಒದಗಿ ಬಂದೀತೇ? ಸಾಮಾಜಿಕ ಪರಿವರ್ತನೆ ಎಷ್ಟೊಂದು ದೂ ಉಳಿದಿದೆ?

ಅಂದು ಡಾ॥ ಅಂಬೇಡ್ಕರ್ ಅವರಿಗೆ ಉಂಟಾದ ಉಭ ಸಂಕಟಗಳ ಪರಿಸರ ಹೇಗಿತ್ತೆಂದರೆ ಒಂದು ಕಡೆ ಒಡೆದು ಆಳ ಕುಟಿಲ ನೀತಿಯ ಬ್ರಿಟಿಷರು, ಸ್ವರಾಜ್ಯಕ್ಕೆ ಗಂಟು ಬಿದ್ದಿದ್ದ ಏಕ ರಾಷ್ಟ್ರೀಯ ಪಕ್ಷ ಕಾಂಗ್ರೆಸ್. ಇನ್ನೊಂದು ಕಡೆ ತಮ್ಮ ಜನ ಕಳೆ ಕೊಂಡಿದ್ದ ಮಾನವೀಯ ಹಕ್ಕುಗಳನ್ನು ಗಳಿಸುವ ಗುರಿ ಅ

ಅಸ್ಪೃಶ್ಯತೆಯ ಬವಣೆಗಳನ್ನೆಲ್ಲ ಅನುಭವಿಸಿ ಸಮಾನತೆಯ ಸೌಂದರ್ಯವನ್ನು ಸವಿದಿದ್ದ ಅಂಬೇಡ್ಕರ್ ಅವರು ಒಮ್ಮೆ ಮಹಾತ್ಮಾ ಗಾಂಧೀ ಅವರಲ್ಲಿ ನಡೆಸಿದ ವಾಗ್ವಾದ ಒಂದರಲ್ಲಿ 'ನನ್ನ ಜನರಿಗೊಂದು ಮಾತೃಭೂಮಿ ಇಲ್ಲ' ಎಂದು ಹೇಳಿ ದಂಗುಬಡಿಸಿದ್ದರು. ಗಾಂಧಿಯವರು 'ಇದೇ ನಿಮ್ಮ ಜನ್ಮ ಭೂಮಿ' ಎಂದು ಮನವರಿಕೆ ಮಾಡಿಕೊಡಲು ಇನ್ನಿಲ್ಲದಂತೆ ಹೆಣಗಿದ್ದರು. ಗಾಂಧಿ ಅವರಿಗೆ ಅಂಬೇಡ್ಕರ್ ಅವರ ವಾದಗಳು ಭಾರತೀಯ ಸಾಮಾಜಿಕ ಪರಿಸ್ಥಿತಿ, ಅನಕ್ಷರತೆ, ದಾರಿದ್ರ್ಯ ಹಾಗೂ ದಾಸ್ಯದ ಪರಿಚಯ ಚೆನ್ನಾಗಿಯೇ ಇತ್ತು. ಹಾಗೆಯೇ ಅಂಬೇಡ್ಕರ್ ಅವರ ನೈಜ ಕಾಳಜಿಗಳನ್ನು ವಿದ್ವತ್ತನ್ನು ಪ್ರತ್ಯಕ್ಷ ಕಂಡುಕೊಂಡಿದ್ದರು.

○ಸಿ.ಎಚ್. ಜಾಕೋಬ್ ಲೋಬೊ

ರುಗಣ್ಣಿಂದ ದುರುಗುಟ್ಟುತ್ತಿರುವ ಪರಿ ಎದುರ್ಗಡೆ. ತಮ್ಮವರನ್ನು ಶತಶತಮಾನಗಳಿಂದ ಸಾಂಸ್ಕೃತಿಕ, ಆರ್ಥಿಕ ಸ್ವಾತಂತ್ರ್ಯದಿಂದ ಹೊರತು ಪಡಿಸಿ, ದಮನಕ್ಕೊಳಗು ಮಾಡಿದ ಮನುವಾದಿ ಸವರ್ಣೀಯರ ಕುಹಕತೆ ಹಿಂದುಡೆ. ಎಲ್ಲೂ ಇಲ್ಲದ ಭಯಂಕರ ಸಾಮಾಜಿಕ ಪರಿಸ್ಥಿತಿ, ಎಂಥವರನ್ನು ದಿಗಿಲುಗೊಳಿಸುವ ಪರಸರಣ. ಬ್ರಿಟಿಷರು ಉಂಟು ಮಾಡಿದ ಪರಿಸ್ಥಿತಿ ಏನಲ್ಲ! ಧ್ಯೇಯೋದ್ದೇಶಗಳು ಎಷ್ಟೇ ಉದಾತ್ತವೂ ನ್ಯಾಯ ಬದ್ಧವೂ ಆಗಿದ್ದರೂ ಹೋರಾಟ ಮಾಡುವ ಪರಿಸರಣವಂತೂ ಅಲ್ಲವೇ ಅಲ್ಲ. ಇಂತಹ ಸಮಯದಲ್ಲಿ ಡಾ॥ ಅಂಬೇಡ್ಕರ್ ಅವರು ಎದುರಿಸಿದ ಎಡರು ತೊಡರುಗಳು, ಸಂದಿಗ್ಧಗಳು, ಕಷ್ಟಕಾರ್ಪಣ್ಯಗಳು ತಂತ್ರ ಕುತಂತ್ರಗಳು, ಅರ್ಥವಿಲ್ಲದ ಮುಗುಳ್ನಗೆಗಳ ಹಿಂದಣ ಕುಹಕಗಳು, ಆರ್ಥಿಕ ಸಂಕಷ್ಟಗಳು, ಕೌಟುಂಬಿಕ ಇಕ್ಕಟ್ಟುಗಳು, ಆರೋಗ್ಯಹಾನಿ ಒಂದೆರಡಲ್ಲ ಈ ಮುಳ್ಳಿನ ಹಾದಿಯಲ್ಲಿ ಸಿಕ್ಕು ಬಿಡಿಸಿಕೊಂಡು, ಸೆಡ್ಡು ಹೊಡೆದು ಪ್ರತಿಪಟ್ಟಿಗೆ ತಕ್ಕ ತೋಡುಹಾಕಿ ಗೆದ್ದು ಗುರಿ ಮುಟ್ಟಿದ ವೀರ, ಧೀರ ಸಮಾಜೋದ್ಧಾರಕ ಡಾ॥ ಅಂಬೇಡ್ಕರ್. ದಿಕ್ಕು ಗೆಟ್ಟಿದ್ದ ಸಮಾಜವನ್ನು ನವ ಚೇತನಕ್ಕೊಳಗಾಗಿಸಲು ಆದರ್ಶವಾದಿ ಭಾರತೀಯರಿಗೆ ಮಾರ್ಗ ದರ್ಶನಾಗಿ ಅತ್ಯಂತ ಉತ್ಕೃಷ್ಟವಾದ ಅಂಶಗಳನ್ನೊಳಗೊಂಡ ಭಾರತ ಸಂವಿಧಾನವನ್ನು ರಚಿಸಿದರು, ಹಲವು ರಾಷ್ಟ್ರಗಳ ಸಂವಿಧಾನಗಳಲ್ಲಿ ಒಳಗೊಂಡ ಸಮರ್ಪಕ ಅಂಶಗಳನ್ನು ಭಾರತದ ಪರಿಸರಕ್ಕೆ ಸರಿಹೊಂದುವಂತೆ ಸೇರಿಸಿಕೊಂಡು ನಿರ್ಮಾಣವಾದ ಸಂವಿಧಾನ. ಉಳಿದಿರುವುದೊಂದೇ ಭಾಗ-ಕೃತಿಯಲ್ಲಿ ಕಾರ್ಯಸಾಧನೆ, ಉಲ್ಲೇಖಿಸಿರುವ ವಿಧಿ ವಿಧಾನದಲ್ಲಿ ಸಮಾಜ ಪುನರ್ನಿರ್ಮಾಣಕ್ಕೆ ತೊಡುಗುವಿಕೆ,

ಕರಡು ಸಂವಿಧಾನ ರಚನಾ ಸಮಿತಿಯಲ್ಲಿ ಸಮಿತಿಯ ಅಧ್ಯಕ್ಷ ಡಾ॥ ಅಂಬೇಡ್ಕರ್ ಜೊತೆಗೆ ಶ್ರೀ ಎನ್. ಮಾಧವರಾವ್, ಶ್ರೀ. ಸೈಯದ್ ಸಾದುಲ್ಲಾ, ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಸರ್.ಬಿ.ಎನ್. ರಾವ್ ಶ್ರೀ ಎಸ್. ಎಸ್. ಮುಖರ್ಜಿ ಮತ್ತು ಶ್ರೀ ಜುಗಲ್ ಕಿಶೋರ್ ಖನ್ನಾ ಅವರುಗಳು ನೇಮಿತರಾಗಿದ್ದರು. ೧೯೪೭ರ ಆಗಸ್ಟ್ ೨೯ ರಂದು ನೇಮಿತವಾದ ಈ ಸಮಿತಿಯ ಅಧ್ಯಕ್ಷರು ೧೯೪೮ ರ ಫೆಬ್ರವರಿಯಲ್ಲಿ ಕರಡು ಪ್ರತಿಯನ್ನು ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರಿಗೆ ಒಪ್ಪಿಸಿದರು. ನೇಮಕಗೊಂಡ ಸಮಿತಿ ಸದಸ್ಯರಲ್ಲಿ ಒಬ್ಬರು ರಾಜಿನಾಮೆ ಕೊಟ್ಟಿದ್ದರು. ಒಬ್ಬರು ಮರಣ ಹೊಂದಿದ್ದರು. ಒಬ್ಬರು ಅಮೆರಿಕಾಕ್ಕೆ ಹೋಗಿದ್ದರು. ಇನ್ನೊಬ್ಬರು ತಮ್ಮ ಪ್ರಾಂತ್ಯದ ರಾಜಕೀಯದಲ್ಲಿ ತಲ್ಲೀನರಾಗಿದ್ದರು. ಉಳಿದವರು ದೆಹಲಿಯಿಂದ ದೂರವಿದ್ದು ಅನಾರೋಗ್ಯದಿಂದಾಗಿ ಈ ಕೆಲಸದಲ್ಲಿ ಭಾಗಿಯಾಗದೆ ಉಳಿದಿದ್ದರು. ಹೀಗಾಗಿ ಕರಡು ಸಂವಿಧಾನ ರಚನಾ ಕಾರ್ಯ ಸಂಪೂರ್ಣ ಡಾ॥ ಅಂಬೇಡ್ಕರ್ ಅವರ ಮೇಲೆ ಬಿದ್ದಿತು. ಈಗಲೂ ಹಲವಾರು ಸಮಿತಿಗಳ ಅಧ್ಯಕ್ಷರುಗಳೇ ವಹಿಸಿದ ಕೆಲಸಗಳನ್ನು ಹೇಗೋ ನಿಭಾಯಿಸುತ್ತಾರೆ. ಇದೊಂದು ಜಾಯಮಾನವೇ ಆಗಿದೆ. ಹೇಗೂ ಕಷ್ಟಪಟ್ಟು ಮುಗಿಸಿದ ಅಮೋಘವಾದ ಕೆಲಸಕ್ಕಾಗಿ ಡಾ॥ ಅಂಬೇಡ್ಕರ್ ಅವರು 'ಭಾರತ ಸಂವಿಧಾನ ನಿರ್ಮಾತೃ' ಎಂಬ ಕರೆಗೆ ಭಾಜನರಾದರು.

ಇಲ್ಲೊಂದು ಮಾತು ಗಾಂಧಿ-ಅಂಬೇಡ್ಕರ್ ಸಾಮರಸ್ಯ ಸಾದೃಶ್ಯಕ್ಕೆ ಒಂದು ಅಷ್ಟು ಪ್ರಚಲಿತದಲ್ಲಿಲ್ಲದ ಕಥೆ. ಒಂದು ಸಂಜೆ ಗಾಂಧೀಜಿಯವರನ್ನು ಕಾಣ ಬಂದಿದ್ದ ನೆಹರು ಮತ್ತು ಸರೋಜಿನಿ ನಾಯುಡು ಅವರುಗಳು ಖಿನ್ನರಾಗಿದ್ದು ಕಂಡು ಬಂತು. ಕಾರಣ, ಅವರು ಸಂವಿಧಾನ ರಚನಾ ಸಮಿತಿಗೆ ಬೇಕಾದ ಸಂವಿಧಾನ ತಜ್ಞನನ್ನು ಆರಿಸುವಲ್ಲಿ ಸೋತು ಹೋಗಿದಂತೆ ತಿಳಿಯಿತು. ಹಲವು ದೇಶಗಳ ಸಂವಿಧಾನಗಳನ್ನು ರಚಿಸಿದ್ದ ಸರ್ ಐವರ್ ಜೆನ್ನಿಂಗ್ಸ್ ಎಂಬ ವಿದೇಶೀಯ ಸಂವಿಧಾನ ತಜ್ಞರ ಹೆಸರು ಸೂಚಿಸಿ ಅವರನ್ನು ಕರೆಸುವ ಆಲೋಚನೆ ಅವರದಾಗಿತ್ತು. ಗಾಂಧೀಜಿ ಅವರು ಆ ಸ್ಥಾನಕ್ಕೆ ಡಾ॥ ಅಂಬೇಡ್ಕರ್ ಅವರ ಹೆಸರನ್ನು ಸೂಚಿಸಿ ಆ ವಿಷಯ ಮುಗಿಸಿದ್ದರು. ಏನೇ ಭಿನ್ನಾಭಿಪ್ರಾಯಗಳಿದ್ದರೂ ಗಾಂಧೀಜಿ ಅವರಿಗೆ ಡಾ॥ ಅಂಬೇಡ್ಕರ್ ಅವರ ದೇಶ ಪ್ರೇಮದಲ್ಲೂ, ದಕ್ಷತೆಯಲ್ಲೂ, ಪ್ರಾಮಾಣಿಕತೆಯಲ್ಲೂ, ಅಸದೃಶ ಜ್ಞಾನಾರ್ಜನೆಯಲ್ಲೂ ಸಂಪೂರ್ಣ ನಂಬಿಕೆ ಇತ್ತು. ಆ ನಂಬಿಕೆಯನ್ನು ತಮ್ಮ ಅಮೋಘ ಕಾರ್ಯ ಪ್ರವೃತ್ತತೆಯಿಂದ ಮಾಡಿಕೊಟ್ಟ ಪ್ರಗತಿಪರ ಕರಡು ಸಂವಿಧಾನದ ಮೂಲಕ ಡಾ॥ ಅಂಬೇಡ್ಕರ್ ಅವರು ದೃಢ ಪಡಿಸಿಕೊಟ್ಟರು.

ಭಾರತ ಸಂವಿಧಾನ ಭಾರತದ ಸಾಂಸ್ಕೃತಿಕ ಪುನರುಜ್ಜೀವನದ ದ್ಯೋತಕ ಆಧುನಿಕ ಭಾರತಕ್ಕೆ ಡಾ॥ ಅಂಬೇಡ್ಕರ್ ಅವರು ಈ ಸಂಪದ್ಭರಿತ ಕೊಡುಗೆಯನ್ನು ನೀಡಿ ೧೯೫೬ ರ ಡಿಸೆಂಬರ್ ೬ ರಂದು ಕಾಲವಶರಾದರು. ಜೀವನದುದ್ದಕ್ಕೂ ಅವರು ಭಾರತದಲ್ಲಿ ಪ್ರಜಾಪ್ರಭುತ್ವದ ಆದರ್ಶದ ತಳಹದಿಯಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ಆಚರಣೆಯುಳ್ಳ ಸಮಾಜ ಸ್ಥಾಪನೆಗಾಗಿ ಸತತ ಹೋರಾಡಿದರು. ಡಾ॥ ಅಂಬೇಡ್ಕರ್ ಅವರು ಅಧಿಕಾಂಶ ಜನರನ್ನು ಸಾಕ್ಷಾತ್ ಗುಲಾಮಗಿರಿಯಲ್ಲಿ ನಿರ್ವೀರ್ಯರನ್ನಾಗಿಸಿ ಸಂಕಟಕ್ಕೊಳ ಪಡಿಸುವ ಸಾಮಾಜಿಕ ಮತ್ತು ಆರ್ಥಿಕ ಕ್ರಮಗಳನ್ನು ಬದಲಾಯಿಸುವ ಮೂಲಕ ಜನರ ಜೀವನಗಳಿಂದ ದುಃಖವನ್ನು ಮೂಲೋತ್ಪಾಟನ ಮಾಡಲು ಪ್ರಯತ್ನಿಸಿದರು.

ಡಾ॥ ಅಂಬೇಡ್ಕರ್ ಅವರು ಸದಾ ಕಾಲಕ್ಕೂ ಎಲ್ಲ ದೇಶಗಳಿಗೂ ಅನ್ವಯವಾಗುವಂತಹ ಒಂದು ಎಚ್ಚರಿಕೆಯನ್ನು ಕೊಟ್ಟಿರುತ್ತಾರೆ. ಅದೆಂದರೆ 'ಸಂವಿಧಾನ ಒಂದು ಎಷ್ಟೇ ಉತ್ತಮವಾದುದಾದರೂ ಅದನ್ನು ಕಾರ್ಯಗತಗೊಳಿಸುವವರು ಕೆಟ್ಟ ಜನರಾಗಿದ್ದರೆ ಅದರ ಪರಿಣಾಮ ಕೆಟ್ಟದ್ದೇ ಆಗುವುದೆಂದೂ ಹಾಗೂ ಸಂವಿಧಾನವೊಂದು ಎಷ್ಟೇ ಕೆಟ್ಟದ್ದಾಗಿದ್ದರೂ ಅದರ ಕಾರ್ಯಾಚರಣೆಗೊಳಿಸುವ ಜನ ಒಳ್ಳೆಯವರಾಗಿದ್ದರೆ ಅದರ ಪರಿಣಾಮ ಒಳ್ಳೆಯದೇ ಆಗುವುದೆಂದು ಹೇಳಲು ಯಾವ ಪ್ರವಾದಿಯೂ ಬೇಕಾಗಿಲ್ಲ" ಎಂದಿರುವರು. ನಾವಿಂದು ಇರುವ ಸಾಮಾಜಿಕ-ರಾಜಕೀಯ-ಆರ್ಥಿಕ ಪರಿಸ್ಥಿತಿಯಲ್ಲಿ ಅಂತಃಕರಣ ಪೂರ್ವಕವಾಗಿ ಪರ್ಯಾ ಲೋಚಿಸಬೇಕಾದ ವಿಷಯ.

ಇದಕ್ಕೊಂದು ಪೂರಕ ವ್ಯಾಖ್ಯಾನವನ್ನು ಕೊಡಬಹುದು ಯುರೋಪ್ ಕ್ರಾಂತಿಗೆ ಕಾರಣಕರ್ತರಾದವರಲ್ಲಿ ಒಬ್ಬನಾದ ರೂಸೊ ಅವರ ಅಭಿಪ್ರಾಯ. ಅವರ ಪ್ರಸಿದ್ಧ ಆತ್ಮಚರಿತ್ರೆ 'ಕನ್ಫೆಷನ್ಸ್'ನಲ್ಲಿ ಒಂದು ಕಡೆ ಹೀಗೆಂದಿದ್ದಾರೆ. "ವಿದ್ಯಾವಂತರು ಎಲ್ಲೆಲ್ಲೂ ಕಾಣಿಸಿಕೊಳ್ಳತೊಡಗಿದಾಗ ಪ್ರಾಮಾಣಿ'ಕರೇ ಕಾಣಿಸುತ್ತಿಲ್ಲ ಎಂದು ತತ್ವಜ್ಞಾನಿಗಳು ಹೇಳಿಕೊಳ್ಳುತ್ತಿದ್ದಾರೆ. ಶಿಕ್ಷಣ ಮನುಷ್ಯನನ್ನು ಒಳ್ಳೆಯವನನ್ನಾಗಿ ಮಾಡುತ್ತಿಲ್ಲ. ಅವನನ್ನು ಚತುರನನ್ನಾಗಿ ಮಾಡುತ್ತಿದೆ. ಅದೂ ಕೇಡು ಎಸಗುವುದಕ್ಕಾಗಿ" ಎಂದಿದ್ದಾರೆ ಗಮನಿಸಿ. (೧ನೇ ಶತಮಾನದ ಪೂರ್ವಿಕ ವ್ಯಾಖ್ಯಾನವಿದು).

ಭಾರತ ಸಂವಿಧಾನ ಭಾರತದ ಸಾಂಸ್ಕೃತಿಕ ಪುನರುಜ್ಜೀವನದ ದ್ಯೋತಕ ಆಧುನಿಕ ಭಾರತಕ್ಕೆ ಡಾ॥ ಅಂಬೇಡ್ಕರ್ ಅವರು ಈ ಸಂಪದ್ಭರಿತ ಕೊಡುಗೆಯನ್ನು ನೀಡಿ ೧೯೫೬ ರ ಡಿಸೆಂಬರ್ ೬ ರಂದು ಕಾಲವಶರಾದರು. ಜೀವನದುದ್ದಕ್ಕೂ ಅವರು ಭಾರತದಲ್ಲಿ ಪ್ರಜಾಪ್ರಭುತ್ವದ ಆದರ್ಶದ ತಳಹದಿಯಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ಆಚರಣೆಯುಳ್ಳ ಸಮಾಜ ಸ್ಥಾಪನೆಗಾಗಿ ಸತತ ಹೋರಾಡಿದರು. ಡಾ॥ ಅಂಬೇಡ್ಕರ್ ಅವರು ಅಧಿಕಾಂಶ ಜನರನ್ನು ಸಾಕ್ಷಾತ್ ಗುಲಾಮಗಿರಿಯಲ್ಲಿ ನಿರ್ವೀರ್ಯರನ್ನಾಗಿಸಿ ಸಂಕಟಕ್ಕೊಳಪಡಿಸುವ ಸಾಮಾಜಿಕ ಮತ್ತು ಆರ್ಥಿಕ ಕ್ರಮಗಳನ್ನು ಬದಲಾಯಿಸುವ ಮೂಲಕ ಅಂತಹ ಜನರ ಜೀವನಗಳಿಂದ ದುಃಖವನ್ನು ಮೂಲೋತ್ಪಾಟನ ಮಾಡಲು ಪ್ರಯತ್ನಿಸಿದರು. ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳನ್ನು ವಿವೇಚನೆಯಿಂದ ಅನುಸರಿಸಿ ಅದರ ಪ್ರತಿಫಲವನ್ನು ಪ್ರತಿಯೊಬ್ಬರಿಗೂ ದೊರಕುವಂತೆ ಮಾಡಿದಾಗ ಮನುಷ್ಯನ ದುಃಖಕ್ಕೆ ಕಾರಣವಾದ ಅಭಾವಗಳಿಂದಲೂ, ಭೀತಿಯಿಂದಲೂ ಸಾಮಾನ್ಯ ಜನರನ್ನು ಬಿಡುಗಡೆ ಮಾಡಬಹುದು ಎಂದು ಅವರು ಮನಸಾರೆ ನಂಬಿ ಕಾರ್ಯಪ್ರವೃತ್ತರಾಗಿದ್ದರು.

ಅಂತರಾಳಾದಿಂದ ಫಲ ಪ್ರಮಾ ಣವಾದಿಯಾದ ಡಾ॥ ಅಂಬೇಡ್ಕರ್ ಅವರು ಆರ್ಥಿಕ ಮತ್ತು ಸಾಮಾಜಿಕ ನ್ಯಾಯವಿಲ್ಲದ ರಾಜಕೀಯ ಸ್ವಾತಂತ್ರ್ಯ ನಿರರ್ಥಕ. ರಾಷ್ಟ್ರೀಯತೆಗೆ ಅವಶ್ಯಕವಾದ ಸಾಮಾಜಿಕ ಐಕ್ಯಮತ್ಯವನ್ನೂ ರಾಷ್ಟ್ರಿಯ ಸಮಗ್ರತೆಯನ್ನು ಸಿದ್ಧಿಸಿ ಕೊಳ್ಳಲು ಚತುರ್ವರ್ಣದ ಅಡಿಪಾಯದ ಮೇಲೆ ನಮ್ಮ ಸಮಾಜದಲ್ಲಿರುವ ಉತ್ಕ್ರಮಣ ಶ್ರೇಣೀಕೃತ ರಚನೆಯ ಜಾತಿಯತೆಯ ನಿರ್ಮೂಲನೆ ಪ್ರಥಮ ಹೆಜ್ಜೆ. ಜಾತಿವಿನಾಶ ಹಾಗೂ ಅಂತಸ್ತುಗಳ ಮೇಲೆ ಇರುವ ಸೌಕರ್ಯಗಳ ಅಮಾನತು-ಅವಶ್ಯ. ರಾಷ್ಟ್ರದ ಒಗ್ಗಟ್ಟು ಅನಿವಾರ್ಯ ಅಗತ್ಯ. ಅದಕ್ಕಾಗಿ ವ್ಯಕ್ತಿಗತ ಗೌರವ ಮತ್ತು ಸ್ವಾತಂತ್ರ್ಯಕ್ಕಾಗಿ ಅವರು ಅಹರ್ನಿಶಿ ಹೋರಾಡಿದರು. ಭಾರತೀಯರನು ಸಿಲುಕಿಕೊಂಡಿರುವುದು ಚಾತುರ್ವರ್ಣ್ಯ ವ್ಯವಸ್ಥೆಯಲ್ಲಿ. ಅಸ್ಪೃಶ್ಯತೆ ಈ ವ್ಯವಸ್ಥೆಯ ಭಾಗ. ಈ ವ್ಯವಸ್ಥೆಯನ್ನು ಪೂರ್ಣ ಬದಲಿಸಿ ಮಾನವೀಯತೆ ಎಡೆಗೆ ಈ ಸಮಾಜ ವನ್ನು ತೆರೆದುಕೊಳ್ಳುವಂತೆ ಮಾಡುವ ಕ್ರಿಯಾಶೀಲ ಸಂವಿಧಾನ ಕೊಟ್ಟ ಮಹಾನುಭಾವ ಡಾ॥ ಅಂಬೇಡ್ಕರ್. ಗಾಂಧೀಜಿ ಅವರ ಕಣ್ಣಿಣಿ ಅಂತೆಯೆ ವ್ಯಕ್ತಿಗತ ಗೌರವ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ತೋರಿಸಿ ಕೊಡುವಲ್ಲಿ ಕೃತಕೃತ್ಯರಾದ ಡಾ॥ ಅಂಬೇಡ್ಕರ್ ದೇಶದ ಸರ್ವ ಜನಾಂಗಗಳ ಮಹಾನ್ ಧೀಮಂತ ಕಾಲ ಪುರುಷ. ಇದನ್ನರಿಯದ ಭಾರತೀಯ, ಕಣ್ಣಿದ್ದೂ ಕುರುಡನಾಗಿರುವನೆಂದು ಹೇಳಬಹುದು. ಜಾತೀಯತೆಯ ಪೊರೆಕಾರಣವಿರಬಹುದು. □

ನೈಜ ಅಂಬೇಡ್ಕರರ ಅನ್ವೇಷಣೆಯಲ್ಲಿ...

ಅನ್ವೇಷಣೆ

ನೆಹರೂ ಕ್ಯಾಬಿನೆಟ್‌ನಲ್ಲಿ ಕಾನೂನು ಮಂತ್ರಿಯಾದ ಅಂಬೇಡ್ಕರ್‌ಗೂ ಅಥವಾ ಆನಂತರದ ವರುಷಗಳಲ್ಲಿ ಬೌದ್ಧ ಧರ್ಮದ ಜೊತೆಗೆ ಸಂಪೂರ್ಣವಾಗಿ ಗುರುತಿಸಿಕೊಂಡು ಒಂದು ರೀತಿಯಲ್ಲಿ ಸಂಪೂರ್ಣವಾಗಿ ತನ್ನನ್ನು ತಾನೇ ಸ್ಪಿರಿಚುಯಲ್ ಆಗಿಸಿಕೊಂಡ ಅಂಬೇಡ್ಕರ್‌ಗೂ ಸಾಕಷ್ಟು ವ್ಯತ್ಯಾಸಗಳಿವೆ.... ನಮ್ಮನ್ನು ಲೂಟಿ ಹೊಡೆಯುತ್ತಿರುವ ದರೋಡೆಕೋರರ ಬಳಿ ಸಣ್ಣಪುಟ್ಟ ಉಪಕಾರಕ್ಕಾಗಿ ಭಿಕ್ಷೆ ಬೇಡದೆ ಇಡೀ ಪ್ರಪಂಚವನ್ನೇ ತಮ್ಮ ದೆಂದು ಹಕ್ಕಿನಿಂದ ಪ್ರತಿಪಾದಿಸುವಂತೆ ಜನತೆಯನ್ನು ಸ್ಫೂರ್ತಿಗೊಳಿಸುವ ರೀತಿಯಲ್ಲಿ ಕ್ರಾಂತಿಕಾರಿ ಅಂಬೇಡ್ಕರ್ ಅವರನ್ನು ಜಾನಪದ ಅಂಬೇಡ್ಕರ್‌ರ ಜಾಗದಲ್ಲಿ ಪ್ರತಿಷ್ಠಾಪಿಸಬೇಕಿದೆ.

ಡಾ|| ಆನಂದ್ ತೇಲ್‌ತುಂಬ್ಡೆ

ಅನು: ಶಿವಸುಂದರ್

ಅಂಬೇಡ್ಕರ್ ನಂತರ ದಲಿತ ಚಳವಳಿ ಅಂಬೇಡ್ಕರರ ಸುತ್ತ ಕಟ್ಟಿಕೊಂಡಿರುವ ಪ್ರತಿಮೆಗಳು ಅಂಬೇಡ್ಕರರನ್ನು ಸಂವಿಧಾನದ ಕತೃವೆಂದೂ, ಪ್ರಸ್ತುತ ವ್ಯವಸ್ಥೆಗೆ ಕಾರಣೀಭೂತರೆಂದೂ, ಒಬ್ಬ ಬೋಧಿಸತ್ವನೆಂದೂ, ಒಬ್ಬ ಸಂವಿಧಾನವಾದಿಯೆಂದೂ, ಒಬ್ಬ ಅವಧೂತನೆಂದೂ, ಒಬ್ಬ ರಕ್ಷಕನೆಂದೂ, ಒಬ್ಬ ಉದಾರವಾದಿ ಪ್ರಜಾತಂತ್ರವಾದಿಯೆಂದೂ, ಒಬ್ಬ ದಲಿತರ ನಾಯಕನೆಂದೂ, ಒಬ್ಬ ಕಡು ಕಮ್ಯುನಿಸ್ಟ್ ವಿರೋಧಿಯೆಂದೂ, ಸುಧಾರಣಾವಾದದಲ್ಲಿ ನಂಬಿಕೆಯಿಟ್ಟಿದ್ದ ಮತ್ತು ಕ್ರಾಂತಿಗಳ ವಿರೋಧಿಯೆಂದೂ ಬಣ್ಣಿಸುತ್ತವೆ. ಈ ಬಗೆಯಲ್ಲಿ ಅಂಬೇಡ್ಕರರ ಬಗ್ಗೆ ಇರುವ ಒಂದು ಪೆಟಿ-ಬೂರ್ಜ್ವಾ ಚಿತ್ರಣವೇ ಇಂದು ದಲಿತ ಚಳವಳಿಯನ್ನು ಆವರಿಸಿಕೊಂಡಿವೆ. ಈ ಬಗೆಯ ಬಣ್ಣನೆಗಳು ಅಂಬೇಡ್ಕರರೊಳಗಿದ್ದ ಯಾವುದೇ ಬಗೆಯ ಶೋಷಣೆ, ಅನ್ಯಾಯ, ಕಪಟಗಳಿಲ್ಲದ ಮಾನವ ಸಮಾಜದ ಕನಸುಗಾರನನ್ನು ಕಟ್ಟಿಕೊಡಲು ವಿಫಲವಾಗುತ್ತವೆ.

ದಲಿತ ಚಳವಳಿಯ ಬಹಳಷ್ಟು ಅಧ್ಯಯನಗಳು ಅಂಬೇಡ್ಕರ್‌ರನ್ನು ಒಬ್ಬ ಉದಾರವಾದಿ ಪ್ರಜಾತಂತ್ರವಾದಿಯೆಂದು ಚಿತ್ರಿಸುವ ಚೌಕಟ್ಟಿನಿಂದಲೇ ಪ್ರಭಾವಿತವಾಗಿವೆ. ಆದರೆ ಅದು ನಿಜವಾದ ಅಂಬೇಡ್ಕರ್‌ರನ್ನು ಪ್ರತಿನಿಧಿಸುತ್ತದೆಯೇ? ಅದು ಅಂಬೇಡ್ಕರ್ ಚಳವಳಿಯ ನಿಜವಾದ ಅಂತಃಸತ್ವವನ್ನು ಹಿಡಿದಿಡುತ್ತದೆಯೇ? ಎಲ್ಲಕ್ಕಿಂತ ಹೆಚ್ಚಾಗಿ ದಲಿತರ ವಿಮೋಚನಾ ಚಳವಳಿಯಲ್ಲಿ ನಾವು ಅಸ್ತ್ರದಂತೆ ಬಳಸಬೇಕೆಂದಿರುವುದು ಅಂಬೇಡ್ಕರ್‌ರ ಈ ಪ್ರತಿಮೆಯನ್ನೇ?

ಒಂದು ಸಾಮಾಜಿಕ ಸಮುದಾಯವಾಗಿ ದಲಿತರು ಈಗಲೂ ಅತ್ಯಂತ ಬಡವರ್ಗದವರು. ಅವರಲ್ಲಿ ಕೆಲವೇ ಕೆಲವರು ಮೀಸಲಾತಿ ಮತ್ತು ರಾಜಕೀಯ ಅವಕಾಶಗಳಂತಹ ಪ್ರಭುತ್ವ ನೀತಿಗಳಿಂದಾಗಿ ಬಡತನದ ಬಲೆಯಿಂದ ಮುಕ್ತರಾಗಿ ಹೇಳಿಕೊಳ್ಳಬಹುದಾದಷ್ಟು ಸಂಪನ್ನರಾಗಿದ್ದಾರೆ. ಆದರೆ ಸಾಮಾಜಿಕ ಸ್ಥರದಲ್ಲಿ ಆರ್ಥಿಕ ಸ್ಥಾನ ಮಾನಗಳೇನೇ ಇದ್ದರೂ ಎಲ್ಲಾ ದಲಿತರು ಇನ್ನೂ ದಮನಕ್ಕೆ ಒಳಗಾ ಗಿಯೇ ಇದ್ದಾರೆ. ಈ ಸಮಾಜದಲ್ಲಿ ದಮನವು ಇನ್ನೂ ಗ್ರಾಮೀಣ ಪ್ರದೇಶದಲ್ಲಿ ಜೀವಂತವಾಗಿರುವ ಅತಿ ಕ್ರೂರ ಅಸ್ಪೃಶ್ಯತೆಯಂತ ಆಚರಣೆಗಳಿಂದ ಹಿಡಿದು ನಗರ ಜೀವನದ ಆಧುನಿಕ ಕ್ಷೇತ್ರಗಳಲ್ಲೂ ಕಂಡು ಬರುವ ಸೂಕ್ಷ್ಮ ಭೇದಭಾವಗಳವರೆಗೆ ಹರಡಿಕೊಂಡಿದೆ. ಕಳೆದ ಐದು ದಶಕಗಳ ಅಂಕಿಅಂಶಗಳು ತೋರಿಸಿಕೊಡುವಂತೆ ದಲಿತರ ಸ್ಥಿತಿಗತಿ ಎಲ್ಲಾ ಕ್ಷೇತ್ರಗಳಲ್ಲೂ ಮೊದಲಿಗಿಂತ ಸುಧಾರಿಸಿದ್ದರೂ ದಲಿತರಿಗೂ ಹಾಗೂ ದಲಿತೇತರರಿಗೂ ನಡುವೆ ಇರುವ ಅಂತರ ಅದೇ ರೀತಿ ಇದೆ ಅಥವಾ ಇನ್ನಷ್ಟು ಹೆಚ್ಚಾಗಿದೆ. ದಲಿತರಲ್ಲಿ ಈಗಲೂ ಶೇ.೭೫ರಷ್ಟು ಇನ್ನೂ ಭೂಮಿಗೇ ಅಂಟಿಕೊಂಡಿದ್ದಾರೆ. ಇವರಲ್ಲಿ ಶೇ.೨೫ರಷ್ಟು ಸಣ್ಣ ಹಾಗೂ ಅತಿ ಸಣ್ಣ ರೈತಾಪಿಯಾಗಿದ್ದರೆ ಉಳಿದ ಶೇ.೫೦ ರಷ್ಟು ಭೂಹೀನ ಕೂಲಿಗಳೇ. ಒಟ್ಟಾರೆ ರೈತಕೂಲಿಗಳಲ್ಲಿ ದಲಿತರ ಪ್ರಮಾಣ ಹೆಚ್ಚುತ್ತಲೇ ಸಾಗಿದೆ. ನಗರ ಪ್ರದೇಶದಲ್ಲೂ ಅವರು ಹೆಚ್ಚಾಗಿ ಅಸಂಘಟಿತ ವಲಯಗಳಲ್ಲೇ ಕೆಲಸ ಮಾಡುತ್ತಾರೆ. ಅಲ್ಲಿನ ಕೆಲಸದ ವಾತಾವರಣವಂತೂ ಹಳ್ಳಿಗಾಡಿನ ಊಳಿಗಮಾನ್ಯ ಪರಿಸ್ಥಿತಿಯನ್ನೇ ನೆನಪಿಸುವಂತಿರುತ್ತದೆ. ಒಟ್ಟರೆ ದಲಿತರ ಜನಸಂಖ್ಯೆ ೧೩.೮ ಕೋಟಿಯಾಗಿದ್ದರೆ ಅದರಲ್ಲಿ ಕಸಗುಡಿಸುವ ಕೆಲಸ ವನ್ನೂ ಒಳಗೊಂಡಂತೆ ಸೇವಾ ಕ್ಷೇತ್ರಗಳಲ್ಲಿ ಮೀಸಲಾತಿಯಿಂದ ದೊರೆಯುವ ಉದ್ಯೋಗದ

ಸಂಖ್ಯೆ ೧೩ ಲಕ್ಷಗಳನ್ನು ದಾಟುವುದಿಲ್ಲ. ಇದು ಒಂದು ಪರ್ಸೆಂಟ್‌ನಷ್ಟು ಆಗುವುದಿಲ್ಲ. ಈ ಅಂಕಿಅಂಶಗಳು ಸಹ ಸರಿಯಾದ ಚಿತ್ರಣವನ್ನೇನೂ ನೀಡುವುದಿಲ್ಲ. ಏಕೆಂದರೆ ಈ ೧೩ ಲಕ್ಷ ದಷ್ಟು ಉದ್ಯೋಗಗಳಲ್ಲಿ ಹಲವಾರು ಸಾರ್ವಜನಿಕ ಉದ್ಯ ಮಗಳಲ್ಲಿರುವ ಗುಮಾಸ್ತ ರೀತಿಯ ಉದ್ಯೋಗಗಳನ್ನೂ ಸೇರಿಸಿ ಎ ಮತ್ತು ಬಿ ವರ್ಗದ ಉದ್ಯೋಗಗಳು ಕೇವಲ ೭೨೧೨. ಆದರೆ ಚಪರಾಸಿ ಉದ್ಯೋಗಗಳ ಸಂಖ್ಯೆ ೧೩೧೮೪೧!

ವಿಶ್ವದಲ್ಲಿ ಹೊಸ ರಾಜಕೀಯ ಆರ್ಥಿಕ ವ್ಯವಸ್ಥೆ ಜಗತ್ತನ್ನೇ ಆವರಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ದಲಿತರ ವಿಮೋಚನಾ ಹೋರಾಟಗಳ ವ್ಯಾಕರಣ ದಲಿತರಿಗೆ ಈವರೆಗೆ ಪರಿಚಿತವಾಗಿರುವ ಭಾಷೆಗಿಂತ ಸಂಪೂರ್ಣ ಭಿನ್ನವಾಗಿರುತ್ತದೆ. ಈ ಘಾತುಕ ಶಕ್ತಿಗಳ ಆಕ್ರಮಣವನ್ನು ವಿಶ್ವದ ಎಲ್ಲಾ ದಮನಿತರು ಅರ್ಥ ಮಾಡಿಕೊಳ್ಳುತ್ತಿರುವ ಹೊತ್ತಿನಲ್ಲಿ ದಲಿತರು ತಮ್ಮನ್ನು ಅದರ ಭಾಗವಾಗಿ ಕಂಡುಕೊಳ್ಳದೇ ಹೋಗುವುದು ಮೂರ್ಖತನವಾಗುತ್ತದೆ. ಒಂದು ಸಾಮಾಜಿಕ ಘಟಕವಾಗಿ ದಲಿತರ ಬದುಕನ್ನು ದೇಶದ ಆರ್ಥಿಕತೆಯ ಸಂಘಟಿತ ಕ್ಷೇತ್ರಕ್ಕೆ ಸೇರಿಕೊಂಡು ಮಾಯವಾದ ಅಲ್ಪಸಂಖ್ಯಾತ ದಲಿತ ಸಮುದಾಯ ಪ್ರತಿನಿಧಿಸುವುದಿಲ್ಲ. ಬದಲಿಗೆ ಈಗಲೂ ಹಳ್ಳಿಯಲ್ಲೇ ಉಳಿದುಕೊಂಡಿರುವ ಮತ್ತು ನಗರದ ಅಸಂಘಟಿತ ಕ್ಷೇತ್ರಗಳಲ್ಲಿ ನಲುಗುತ್ತಿರುವ ದಲಿತರ ಬದುಕು ಅದರ ನಿಜವಾದ ಪ್ರತಿನಿಧಿ. ವಾಸ್ತವವಾಗಿ ತಮ್ಮ ವಿಮೋಚನೆಗಾಗಿ ಸಮರವನ್ನು ನಡೆಸುತ್ತಿರುವ ಈ ಸಮುದಾಯಕ್ಕೆ ಅಸ್ತ್ರಗಳ ಅಗತ್ಯವಿದೆ.

ಈ ಸಮರವನ್ನು ಏಕಕಾಲದಲ್ಲಿ ಎರಡು ಅಂಕಣಗಳಲ್ಲಿ ನಡೆಸುವ ಅಗತ್ಯವಿದೆ-ಜಾತಿ ಮತ್ತು ವರ್ಗ. ಆದರೆ ಈ ಎರಡು

ಂಶಗಳನ್ನು ಅತ್ಯಂತ ಸಂಕುಚಿತವಾಗಿ ಹಾಗೂ ವಿಭಾಗೀ ಿಸಿ ಅರ್ಥೈಸಿಕೊಂಡಿರುವುದರಿಂದ ಒಂದನ್ನು ಹೊರತು ಡಿಸಿ ಮತ್ತೊಂದನ್ನು ನೋಡುವ ಪ್ರವೃತ್ತಿ ಬೆಳೆದಿದೆ. ದರೆ ಇಂದಿಗೂ ದಲಿತರ ಸಮಸ್ಯೆಗ ಳನ್ನು ಅರ್ಥ ಾಡಿಕೊಳ್ಳಲು ಇತರ ಯಾವುದಕ್ಕಿಂತಲೂ ಅಂಬೇಡ್ಕರ್ ುತ್ತಮವಾದ ಚೌಕಟ್ಟನ್ನು ಒದಗಿಸಿಕೊಡುವು ದರಿಂದ ಾಗೂ ಅಂಬೇಡ್ಕರ್ ಈಗಲೂ ದಲಿತರ ಹೃದ ಯಗಳಲ್ಲಿ ಚಲವಾದ ಸ್ಥಾನವನ್ನು ಪಡೆದಿರುವುದರಿಂದ ಅಂಬೇಡ್ಕ ್ರ ಶಸ್ತ್ರಾಗಾರದಲ್ಲಿರುವ ಶಸ್ತ್ರಾಸ್ತ್ರಗಳಿಗೆ ಹಿಡಿದಿರುವ ಕ್ಕನ್ನು ತೊಳೆದು ಹರಿತಗೊಳಿಸುವ ಅಗತ್ಯವಿದೆ. ಬದ ಾದ ಸಂದರ್ಭದಲ್ಲಿ ಅದರ ಪರಿಣಾಮಕಾರಿಯಾದ ಳಕೆಗಾಗಿ ಅಗತ್ಯವಿರುವ ಪರಾಮರ್ಶೆಯನ್ನು ಮಾಡುವ ಾಗೂ ಮತ್ತಷ್ಟು ಪುಷ್ಟಿಗೊಳಿಸುವ ಅಗತ್ಯವಿರುತ್ತದೆ. ುದ್ಧನ ರೀತಿ ಅಂಬೇಡ್ಕರ್ ಸಹ ತಮ್ಮ ಕೈಯಲ್ಲೇ ಪುನ ್ನಿರ್ವಚನಕ್ಕೆ ಒಳಪಡುವ ಅಗತ್ಯವಿದೆ. ನಮ್ಮನ್ನು ಲೂಟಿ ೊಡೆಯುತ್ತಿರುವ ದರೋಡೆಕೋರರ ಬಳಿ ಸಣ್ಣಪುಟ್ಟ ುಪಕಾರಕ್ಕಾಗಿ ಭಿಕ್ಷೆ ಬೇಡದೆ ಇಡೀ ಪ್ರಪಂಚವನ್ನೇ ತಮ್ಮ ೆಂದು ಹಕ್ಕಿನಿಂದ ಪ್ರತಿಪಾದಿಸುವಂತೆ ಜನತೆಯನ್ನು ್ಫೂರ್ತಿಗೊಳಿಸುವ ರೀತಿಯಲ್ಲಿ ಕ್ರಾಂತಿಕಾರಿ ಅಂಬೇಡ್ಕರ್ ನ್ನು ಜಾನಪದ ಅಂಬೇಡ್ಕರ್‌ರ ಜಾಗದಲ್ಲಿ ಪ್ರತಿಷ್ಠಾಪಿಸ ೇಕಿದೆ. ಎದುರಿಗಿರುವ ಸತ್ಯವನ್ನು ಕಾಣಬಲ್ಲ ಶಕ್ತಿ ಇರುವ ್ರತಿಯೊಬ್ಬರು ಈ ಕರ್ತವ್ಯವನ್ನು ಈಡೇರಿಸಲು ಕೊಡುಗೆ ಳನ್ನು ನೀಡಬೇಕಿದೆ. ಏಕೆಂದರೆ ಅಂಬೇಡ್ಕರ್‌ರನ್ನು ಈ ೀತಿಯಲ್ಲಿ ಪುನರ್‌ನಿರ್ವಚನ ಮಾಡಿಕೊಳ್ಳದಿದ್ದರೆ ಅಂಬೇ ್ಕರ್ ದೇವಶಿಲೆಯಾಗಬಹುದೇ ವಿನಃ ವಿಮೋಚನೆ ಮಾಡುವಲ್ಲಿ ವಿಫಲರಾಗುತ್ತಾರೆ. ಪಟ್ಟಭದ್ರ ಹಿತಾಸಕ್ತಿಗಳು ಅವರನ್ನು ಅತಿ ಎತ್ತರದ ಪೀಠದಲ್ಲಿ ಕುಳ್ಳಿರಿಸಬಹುದು. ಆದರೆ ಅಂಬೇಡ್ಕರ್ ಎಲ್ಲಿ ಅತ್ಯಂತ ಅಗತ್ಯವಿದೆಯೋ ಅಲ್ಲಿಗೆ ಮುಟ್ಟಲಾಗದೆ ಇತಿಹಾಸದ ವಿಪರ್ಯಾಸಗಳಲ್ಲಿ ಒಂದಾಗಿಬಿಡಬಹುದು.

ಅಂಬೇಡ್ಕರ್‌ರ ಪುನರ್ನಿರ್ವಚನ:

ವಿದ್ವಾಂಸರು ಅಂಬೇಡ್ಕರ್‌ರ ಚಿಂತನೆಯನ್ನು ಬೇರೆ ಬೇರೆ ರೀತಿಯಲ್ಲಿ ಮುಂದಿಟ್ಟಿದ್ದಾರೆ. ಕೆಲವರು ಅವುಗಳನ್ನು ಸುಪರಿಚಿತ ಅಕೆಡೆಮಿಕ್ ಶಾಖೆಗಳಾದ ಸಾಮಾಜಿಕ, ರಾಜ ಕೀಯ, ಧಾರ್ಮಿಕ ಎಂಬಿತ್ಯಾದಿಗಳಾಗಿ ವಿಂಗಡಿಸಿದ್ದಾರೆ. ಇನ್ನೊಂದು ವಿಧಾನವನ್ನು ಜೀವನ ಕಥನ ವಿಧಾನವೆಂದು ಕೇಳಿಬಿಡಬಹುದು. ಮೊದಲನೆ ವಿಧಾನದಲ್ಲಿರುವ ಸಮಸ್ಯೆ ಯೆಂದರೆ ಅದು ಅಂಬೇಡ್ಕರ್‌ರ ಚಿಂತನೆಯನ್ನು ಅಕೆಡೆ ಮಿಕ್ ಶಿಸ್ತುಗಳಲ್ಲಿ ಕೃತಕವಾಗಿ ವಿಭಾಗೀಕರಿಸಿಬಿಡುತ್ತದೆ. ಎರಡನೆಯ ಪದ್ಧತಿ ಕಥನ ಮಾದರಿಯಲ್ಲಿ ವೈಭವೀ ಕರಣದ ನೆಲೆಯಲ್ಲಿ ನಡೆಯುತ್ತಾ ಯಾವುದೇ ವಿಮರ್ಶೆ-ವಿಶ್ಲೇಷಣೆ ನಡೆಸುವುದಿಲ್ಲ. ಹೀಗಾಗಿ ಅವೆರೆಡೂ ವಿಧಾನ ಗಳೂ ಒಂದು ಸಮಗ್ರ ಚಿಂತನಾ ವಿಧಾನದ ಪ್ರಮುಖ ಅಂಶಗಳಾದ ಲೋಕದೃಷ್ಟಿ ಮತ್ತು ಭವಿಷ್ಯದ ಕಾಣ್ಕೆಗಳನ್ನು ಒಡಿದಿಡುವಲ್ಲಿ ವಿಫಲವಾಗುತ್ತವೆ.

ಅಂಬೇಡ್ಕರ್: ಬದ್ಧತೆ ಮತ್ತು ತೊಡಕುಗಳು:

ಬಾಬಾಸಾಹೇಬ್ ಅಂಬೇಡ್ಕರ್‌ರವರ ವಿಷಯದಲ್ಲಿ ಅವರೊಂದು ಪ್ರತಿಮೆಯಾಗಿಬಿಡುವುದು ಅನಿವಾರ್ಯವೇ ಆಗಿತ್ತು. ಅವರ ಉನ್ನತ ಸ್ಥಾನ-ಮಾನ, ತನ್ನ ಜನರ ಬಗ್ಗೆ ಅವರಿಗೆ ಇದ್ದ ಬದ್ಧತೆ, ಅವರಿದ್ದ ಚಾರಿತ್ರಿಕ ಸನ್ನಿವೇಶ, ಜನತೆಯ ಅನಕ್ಷರತೆ ಹಾಗೂ ಕಡಿಮೆ ಮಟ್ಟದ ರಾಜ ಕೀಯ ತಿಳುವಳಿಕೆ, ಮತ್ತು ಒಳಗಿನ ಹಾಗೂ ಹೊರಗಿನ ಜನರ ಪಟ್ಟಭದ್ರ ಹಿತಾಸಕ್ತಿಗಳಂತ ಸಂಗತಿಗಳೇ ಇದಕ್ಕೆ ಕಾರಣ. ಸಮಸ್ಯೆ ಇರುವುದು ಪ್ರತಿಮೀಕರಣದಲ್ಲಲ್ಲ. ಬದಲಿಗೆ ಅದರ ಬಹು ಪುನುರುತ್ಪಾದನೆಯಲ್ಲಿ. ಆದರೆ ಇಲ್ಲಿಯೂ ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬಹುದು. ಅಂಬೇಡ್ಕರ್‌ರನ್ನು ಕೇವಲ ಒಂದು ಪ್ರತಿಮೆಯಾಗಿ ಗ್ರಹಿಸ ಬಹುದೇ? ಅಂಬೇಡ್ಕರ್‌ರ ಶತಮಾಮೋತ್ಸವ ಸಂದರ್ಭ ದಲ್ಲಿ ಪ್ರೊ॥ ಉಪೇಂದ್ರ ಭಕ್ಷಿಯವರು ತಮ್ಮ ಒಂದು ಲೇಖ ನದಲ್ಲಿ ಪ್ರಶ್ನಿಸಿದಂತೆ ಹಲವು ಅಂಬೇಡ್ಕರ್‌ಗಳಿರುವುದರಿಂದ ನಾವು ಯಾವ ಅಂಬೇಡ್ಕರ್ ಅವರನ್ನು ಸ್ಮರಿಸುತಿದ್ದೇವೆ? ಪ್ರೊ. ಭಕ್ಷಿಯವರು ಹಾಗೆ ಕೇಳಿದಾಗ ಅವರ ಮನಸ್ಸಿನಲ್ಲಿ ಹಲವು ರೀತಿಯಲ್ಲಿ ವಿಂಗಡಿಸಬಹುದಾದ ಅಂಬೇಡ್ಕರ್‌ರ ವರ ವ್ಯಕ್ತಿತ್ವವಿತ್ತು. ಅವುಗಳಲ್ಲಿ ಕೆಲವನ್ನು ಕಾಲಾನುಕ್ರಮ ವಾಗಿ ವಿಂಗಡಿಸಲುಬಹುದು. ಉದಾಹರಣೆಗೆ ೧೯೪೨ ಕ್ಕೆ ಮುಂಚಿನ ಅಪ್ರತಿಮ ವಿದ್ವತ್ತು ಹೊಂದಿದ್ದ ತನ್ನ ಜನರ ವಿಮೋಚನೆಗಾಗಿ ಒಳಗೂ ಹೊರಗೂ ಹೋರಾಡುತ್ತಿದ್ದ ಅಸ್ಪೃಶ್ಯ ಯುವ ಅಂಬೇಡ್ಕರ್‌ಗೂ, ವೈಸ್‌ರಾಯರ ಆಡ ಳಿತ ಸಮಿತಿಯ ಸದಸ್ಯರಾಗಿದ್ದ ಅಥವಾ ಆ ನಂತರ ನೆಹರೂ ಕ್ಯಾಬಿನೆಟ್‌ನಲ್ಲಿ ಕಾನೂನು ಮಂತ್ರಿಯಾದ ಅಂಬೇಡ್ಕರ್‌ಗೂ ಅಥವಾ ಅದಕ್ಕೂ ಮುಂಚೆ ಸಂವಿಧಾ ನದ ಕರಡು ರಚನಾ ಸಮಿತಿಯ ಅಧ್ಯಕ್ಷನಾಗಿದ್ದ ಅಥವಾ ಆ ನಂತರದ ವರುಷಗಳಲ್ಲಿ ಬೌದ್ಧ ಧರ್ಮದ ಜೊತೆಗೆ ಸಂಪೂರ್ಣವಾಗಿ ಗುರುತಿಸಿಕೊಂಡು ಒಂದು ರೀತಿಯಲ್ಲಿ ಸಂಪೂರ್ಣವಾಗಿ ತನ್ನನ್ನು ತಾನೆ ಸ್ಪಿರಿಚುಯಲ್ ಆಗಿಸಿ ಕೊಂಡ ಅಂಬೇಡ್ಕರ್‌ಗೂ ಸಾಕಷ್ಟು ವ್ಯತ್ಯಾಸಗಳಿವೆ.

ಆದರೆ ಅದು ಏನೇ ಇದ್ದರೂ ಈ ಪರಾಮರ್ಶೆ ಯಲ್ಲಿ ಎದ್ದು ಕಾಣುವ ಸಂಗತಿಯೆನೆಂದರೆ ಅವರ ದೃಷ್ಟಿ ಕೋನದಲ್ಲಿ ಹಾಗೂ ಅವರ ಪಾತ್ರದಲ್ಲಿ ಬಂದ ಬದಲಾವ ಣೆಗಳೆಲ್ಲವೂ ದಮನಿತ ಜನತೆಯ ಅದರಲ್ಲೂ ನಿರ್ದಿಷ್ಟ ವಾಗಿ ದಲಿತರ ವಿಮೋಚನೆಯ ಬಗ್ಗೆ ಅವರಿಗಿದ್ದ ಅಚಲ ಬದ್ಧತೆಯಿಂದಲೇ ಚಾಲನೆಗೊಂಡಿದ್ದವೆಂಬುದು ನಿರ್ವಿ ವಾದ. ತಾವು ಹೋರಾಡುತ್ತಿದ್ದ ಸಮಸ್ಯೆಯ ನಿವಾರಣೆ ಯನ್ನು ಸಾಧಿಸಲು ಅಗತ್ಯವಿದ್ದ ಸೂಕ್ತ ಉಪಕರಣಗಳು ಅವರ ಬಳಿ ಇಲ್ಲದೇ ಇದ್ದಿರಬಹುದು. ಸಮಾಜಶಾಸ್ತ್ರದ ವಿದ್ವತ್ ಲೋಕದಲ್ಲಿ ಬಳಸುವ ಉಪಕರಣಗಳನ್ನು ಬಳಸಿಕೊಂಡೇ ಅವರು ಇತಿಹಾಸವನ್ನು ಪರಿಶೀಲಿಸಿದರು. ವಿಪರ್ಯಾಸವೆಂದರೆ ಯಾವ ಉಪಕರಣಗಳು ಆಳುವವ ರ್ಗಗಳ ಸೇವೆಗೆಂದೇ ರೂಪುಗೊಂಡಿವೆಯೋ ಅವೇ ಉಪಕರಣಗಳನ್ನು ಬಳಸಿಕೊಂಡು ಅಂಬೇಡ್ಕರ್‌ರವರು ವ್ಯವಸ್ಥೆಯನ್ನು ನಾಶ ಮಾಡಲು ಯತ್ನಿಸಿದರು. ಅವರಿಗಿದ್ದ ಶೈಕ್ಷಣಿಕ ಹಿನ್ನಲೆ ಅವರನ್ನು ಮಾನವ ಇತಿಹಾಸವು ಒಂದು ಅಂತರ್ಗತವಾಗಿ ತರ್ಕ ಬದ್ಧವಾಗಿರುವ ಸರಣಿಯೆಂದು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುವಂತಿರಲಿಲ್ಲ. ಅವರು ಇತಿಹಾಸವನ್ನು ಮಾನವ ನಿರ್ಮಿತ ಘಟನಾವಳಿ ಗಳ ಸರಪಳಿಯೆಂದೂ ಅರ್ಥ ಮಾಡಿಕೊಂಡರು. ಅದಕ್ಕೆ

ಡಾ॥ ಆನಂದ್ ತೇಲ್‌ತುಂಬ್ಡೆ ವೃತ್ತಿಯಿಂದ ಕೇಂದ್ರ ಸರ್ಕಾರದ ನವರತ್ನ ಉದ್ಯಮವೊಂದರಲ್ಲಿ ಅತ್ಯುನ್ನತ ಹುದ್ದೆಯಲ್ಲಿದ್ದರೂ ರಾಷ್ಟ್ರಿಯ ಹಾಗೂ ಅಂತರರಾಷ್ಟ್ರಿಯ ದಲಿತ ವಿಮೋಚನಾ ಚಳವಳಿಯಲ್ಲಿ ಮಹತ್ವದ ಚಿಂತಕನೆಂದೇ ಹೆಸರು ಮಾಡಿರುವರು. ಅಂಬೇಡ್ಕರ್ ಶತಮಾನೋತ್ಸವ ಸಂದರ್ಭದಲ್ಲಿ ಅಂಬೇಡ್ಕರ್ ಪ್ರಶಸ್ತಿಗೂ, ಮಾನವ ಹಕ್ಕುಗಳ ಪ್ರಶಸ್ತಿಗೂ ಪಾತ್ರರಾದವರು. ಅವರ ಎಲ್ಲಾ ಬರಹಗಳ ಮೂಲ ಧಾತು ದಲಿತ ಚಳವಳಿಯಲ್ಲಿ ಮಾಯವಾಗಿರುವ ರ್‍ಯಾಡಿಕಲ್ ಆಯಾ ಮದ ಅನ್ವೇಷಣೆ ಹಾಗೂ ಅಂಬೇಡ್ಕರ್‌ರ ವ್ಯಕ್ತಿತ್ವದ ರ್‍ಯಾಡಿಕಲ್ ವ್ಯಾಖ್ಯಾನಕ್ಕೆ ಮುಡಿಪಾಗಿಡ ಲಾಗಿದೆಯೆಂದು ಖ್ಯಾತ ವಿಮರ್ಶಕರೆಲ್ಲಾ ಅಭಿಪ್ರಾಯ ಪಡುತ್ತಾರೆ. ಈ ನಿಟ್ಟಿನಲ್ಲಿ ಈಗಾಗಲೇ ಅವರು ಹಲವು ಪುಸ್ತಕಗಳನ್ನು ಹಾಗೂ ಲೇಖನಗಳನ್ನೂ ಪ್ರಕಟಿಸಿದ್ದು ಅವೆಲ್ಲವೂ ಭಾರತದ ಹಲವಾರು ಭಾಷೆಗಳಿಗೆ ಅನುವಾದಗೊಂಡಿವೆ. ಅಂಬೇಡ್ಕರ್‌ರನ್ನು ಹಿಂದುವೀಕರಿಸುವ ಸಂಘಪರಿವಾರದ ಪ್ರಯತ್ನಗಳನ್ನು ವಿಫಲಗೊಳಿಸಲು ಅಂಬೇಡ್ಕರ್‌ರವರ ಮೂಲ ಬರಹಗಳನ್ನು ಆಧರಿಸಿ ಅವರು ಬರೆದ ವಿದ್ವತ್ ಪೂರ್ಣ ಪ್ರತ್ಯುತ್ತರವನ್ನು ಅಂಬೇಡ್ಕರ್ ಹಾಗೂ ಮುಸ್ಲಿಮರು ಎಂಬ ಹೆಸರಿನಲ್ಲಿ ಜಾತಿ ವಿನಾಶ ವೇದಿಕೆಯವರು ಕನ್ನಡೀಕರಿಸಿ ಪ್ರಕಟಿಸಿದ್ದಾರೆ. ಇತ್ತೀಚೆಗೆ ಹಿಂದುತ್ವ ಹಾಗೂ ದಲಿತರು ಎಂಬ ಅಂಶದ ಕುರಿತು ಅವರ ಸಂಪಾದನೆಯಲ್ಲಿ ಹೊರ ಬಂದ ತಾತ್ವಿಕವಾದ ಮತ್ತು ವಿವಿಧ ರಾಜ್ಯ ಗಳಲ್ಲಿ ಈ ಪ್ರಕ್ರಿಯೆ ತೆಗೆದುಕೊಳ್ಳುತ್ತಿರುವ ಸ್ವರೂಪದ ಕುರಿತಾದ ಪುಸ್ತಕ ಅತ್ಯಗತ್ಯವಾಗಿದ್ದ ಹಾಗೂ ಅಪರೂಪದ ಕೃತಿಯೆಂದು ಹೆಸರು ಮಾಡಿದೆ. ಅಲ್ಲದೆ ಅವರು ಇತ್ತೀಚೆಗೆ ಬರೆದಿರುವ ಭಾರತದ ಕಮ್ಯುನಿಸ್ಟ್ ಚಳವಳಿ ಜಾತಿಯನ್ನು ಪರಿಭಾವಿಸಿರುವ ಬಗ್ಗೆ ಹರಿತ ಹಾಗೂ ಕಟು ವಿಶ್ಲೇಷಣೆಯುಳ್ಳ ಹಾಗೂ ಹೇಗೆ ಸಾಮ್ರಾಜ್ಯಶಾಹಿ ವಿರೊಧವೆಂಬುದು ಜಾತಿ ವಿನಾಶದಿಂದ ಹೊರತುಪಡಿಸಿ ಇರಲು ಸಾಧ್ಯವಿಲ್ಲವೆಂಬ ವಿದ್ವತ್ ಪೂರ್ಣ ಕೃತಿ ಈಗ ಹಾಲಿ ಎಲ್ಲೆಡೆ ತೀವ್ರ ಚರ್ಚೆಗೆ ಒಳಪಡುತ್ತಿದೆ.

ಬಾಬಾಸಾಹೇಬ್ ಅಂಬೇಡ್ಕರ್‌ರವರ ವಿಷ ಯದಲ್ಲಿ ಅವರೊಂದು ಪ್ರತಿಮೆಯಾಗಿ ಬಿಡುವುದು ಅನಿವಾರ್ಯವೇ ಆಗಿತ್ತು. ಅವರ ಉನ್ನತ ಸ್ಥಾನ-ಮಾನ, ತನ್ನ ಜನರ ಬಗ್ಗೆ ಅವರಿಗೆ ಇದ್ದ ಬದ್ಧತೆ, ಅವರಿದ್ದ ಚಾರಿತ್ರಿಕ ಸನ್ನಿವೇಶ, ಜನತೆಯ ಅನಕ್ಷರತೆ ಹಾಗೂ ಕಡಿಮೆ ಮಟ್ಟದ ರಾಜಕೀಯ ತಿಳುವಳಿಕೆ, ಮತ್ತು ಒಳಗಿನ ಹಾಗೂ ಹೊರಗಿನ ಜನರ ಪಟ್ಟಭದ್ರ ಹಿತಾಸಕ್ತಿಗಳಂತ ಸಂಗತಿಗಳೇ ಇದಕ್ಕೆ ಕಾರಣ. ಸಮಸ್ಯೆ ಇರುವುದು ಪ್ರತಿ ಮೀಕರಣದಲ್ಲಲ್ಲ. ಬದಲಿಗೆ ಅದರ ಬಹು ಪುನುರುತ್ಪಾದನೆಯಲ್ಲಿ.

ಒಂದು ತರ್ಕವನ್ನು ಅವರು ಆರೋಪಿಸಿದರೂ ಅದರ ಮೂಲವನ್ನು ಹೊರಗಡೆಯೆ ಹುಡುಕಿದರು.

ಗತಿತರ್ಕ ರಹಿತವಾದ ಪರಿಹಾರ: ಪ್ರಭುತ್ವ ಮತ್ತು ಧರ್ಮ:

ಒಂದು ರೀತಿಯಲ್ಲಿ ನೋಡಿದರೆ ಬಾಬಾಸಾಹೇಬ್ ಅಂಬೇಡ್ಕರ್‌ರವರು ಬುದ್ಧ ಧಮ್ಮದ ಮೂಲ ಸೂತ್ರಗಳಲ್ಲಿರುವ ಕ್ಷಣಿಕವಾದ ಅಥವಾ ಅನಿತ್ಯವಾದವನ್ನು ಇಡಿಯಾಗಿ ಅರಗಿಸಿಕೊಂಡಿದ್ದರೆಂದು ಕಾಣುತ್ತದೆ. ಹೀಗಾಗಿಯೇ ಅವರು ತಮ್ಮ ಚಿಂತನಾಧಾರೆಯಲ್ಲಿ ಹಾಗೂ ಅಭಿಪ್ರಾಯಗಳಲ್ಲಿ ಏಕಸೂತ್ರತೆಯನ್ನು ಉಳಿಸಿಕೊಳ್ಳಲೂ ನಿರಾಕರಿಸಿದ್ದಂತೆ ತೋರುತ್ತದೆ. ಈ ಸಿದ್ಧಾಂತವು ಪ್ರತಿಯೊಂದು ಪ್ರತಿಕ್ಷಣವೂ ಬದಲಾಗುತ್ತಿರುತ್ತದೆ ಹಾಗೂ ವಸ್ತುಗಳೂ ಹಾಗೂ ಸಂಗತಿಗಳೂ ನಿರಂತರವಾಗಿ ಉದ್ಭವಗೊಳ್ಳುತ್ತಿರುತ್ತವೆ ಎಂದು ಪ್ರತಿಪಾದಿಸುತ್ತದೆ. ಹೀಗಾಗಿ ಈ ನಿರಂತರ ಚಲನಶೀಲ ಭೌತಿಕ ಪ್ರಪಂಚಕ್ಕೆ ಸಂವಾದಿಯಾಗಿ ಬೌದ್ಧಿಕ ಪ್ರಕ್ರಿಯೆಗಳು ಚಲನಶೀಲವಾಗಿಯೇ ಇರಬೇಕೆಂದು ಪ್ರತಿಪಾದಿಸುತ್ತದೆ. ಹೀಗಾಗಿ ಬದಲಾದ ಪರಿಸ್ಥಿತಿಗೆ ತಕ್ಕಂತೆ ತಮ್ಮ ಆಲೋಚನೆಗಳನ್ನು ಹಾಗೂ ತಮ್ಮ ಸಮರ ತಂತ್ರಗಳನ್ನು ಬದಲಿಸಿಕೊಳ್ಳಲು ಅವರೆಂದು ಹಿಂದೆ-ಮುಂದೆ ನೋಡುತ್ತಿರಲಿಲ್ಲ.

ಮತ್ತೊಂದು ರೀತಿಯಲ್ಲಿ ನೋಡಿದಲ್ಲಿ ಈ ಬದಲಾವಣೆಗಳನ್ನು ನಿಯಂತ್ರಣ, ನಡೆಸುವ ಕೇಂದ್ರಬಿಂದುವಿನ ಜೊತೆ ವ್ಯಕ್ತಿಗೆ ಇರುವ ಸಂಬಂದಗಳಂತೆಯೂ ಅರ್ಥ ಮಾಡಿಕೊಳ್ಳಬಹುದು. ಸಾಮಾನ್ಯವಾಗಿ ಆಚರಣೆ ಹಾಗೂ ಚಿಂತನೆಗಳಲ್ಲಿ ನಿರಂತರತೆಯೆಂಬುದು ತನ್ನ ಸುತ್ತಮುತ್ತಲಿನ ಪರಿಸರವನ್ನು ನಿಯಂತ್ರಿಸುವ ಕೇಂದ್ರಬಿಂದುವಿನಿಂದ ಆ ವ್ಯಕ್ತಿ ಎಷ್ಟು ದೂರವಿದ್ದಾನೆ ಎಂಬುದರ ಜೊತೆ ವಿಲೋಮ ಸಂಬಂಧವನ್ನೇ ಹೊಂದಿರುತ್ತದೆ. ಅಂದರೆ ಆ ಸುತ್ತಮುತ್ತಲಿನ ಪರಿಸರವನ್ನು ನಿಯಂತ್ರಿಸುವ ನಿಯಂತ್ರಣ ಬಿಂದುವಿಗೆ ಆ ವ್ಯಕ್ತಿ ಹತ್ತಿರವಿದ್ದರೆ ಆಚರಣೆ ಹಾಗೂ ಚಿಂತನೆಯಲ್ಲಿ ನಿರಂತರತೆ ಜಾಸ್ತಿ. ಇಲ್ಲದಿದ್ದಲ್ಲಿ ಕಡಿಮೆ. ತನ್ನ ಸುತ್ತಮುತ್ತಲಿನ ಪರಿಸರದ ಮೇಲೆ ಅಂಬೇಡ್ಕರ್‌ಗೆ ಹೆಚ್ಚೂ ಕಡಿಮೆ ಯಾವುದೇ ನಿಯಂತ್ರಣವಿರಲಿಲ್ಲ. ಅವರು ಲಭ್ಯ ಪರಿಸರದಲ್ಲಿ ಸತತವಾಗಿ ತಮಗಾಗಿ ಒಂದು ಅವಕಾಶವನ್ನು ನಿರ್ಮಿಸಿಕೊಳ್ಳಬೇಕಿತ್ತು ಮತ್ತು ಸಂದರ್ಭವನ್ನು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಬಳಸಿಕೊಳ್ಳಲು ಸದಾ ತಂತ್ರಗಳನ್ನು ಹೆಣೆಯುತ್ತಲೆ ಇರಬೇಕಿತ್ತು. (ಇಂತಹ ಸಂದರ್ಭಗಳ ಗತಿಯನ್ನು ವಿವಿಧ ವಿರೋಧಿ ಬಣಗಳಲ್ಲಿದ್ದ ಶಕ್ತಿಗಳೆ ಪ್ರಭಾವಿಸುತ್ತಿದ್ದರು.) ಅಂಬೇಡ್ಕರ್ ರೂಪಿಸಿದ್ದ ಹೋರಾಟಗಳ ಚೌಕಟ್ಟು ಈ ಗತಿತರ್ಕಕ್ಕೆ ಸದಾ ಸ್ಪಂದಿಸಬೇಕಿತ್ತು. ಅಂಬೇಡ್ಕರ್ ಚಿಂತನೆಯ ಪ್ರಧಾನವಾದ ಅಂಶವೇನೆಂದರೆ ಚಲನಶೀಲ ತರ್ಕ.

ಅದನ್ನೇ ಅವರು ನಿರಂತರವಾಗಿ ಬದಲಾಗುತ್ತಿದ್ದ ಸಂದರ್ಭಗಳನ್ನು ಗ್ರಹಿಸಲೂ ಹಾಗೂ ಅದನ್ನು ದಮನಿತ ಜನತೆಯ ಪರವಾಗಿ ಬಳಸಿಕೊಳ್ಳಲು ಸೂಕ್ತವಾದ ತಂತ್ರವನ್ನು ರೂಪಿಸಲು ಬಳಸುತ್ತಿದರು. ಹೀಗಾಗಿ ಅಂಬೇಡ್ಕರ್-ಅವರನ್ನು ಒಂದು ಸ್ಥಿರ, ನಿಶ್ಚಲ ಪರಿಭಾಷೆಯಲ್ಲಿ ಹಿಡಿದಿಡಲಾಗುವುದಿಲ್ಲ. ಅಂಬೇಡ್ಕರ್ ಎಂದು ನಾವು ಹಿಡಿದಿಡುವ ಪ್ರತಿಮೆಯು ಅದರ ಅಂತಃ ಸತ್ವವಾದ ಈ ಚಲನಶೀಲತೆಯನ್ನು ಪ್ರತಿಫಲಿಸಬೇಕಾಗುತ್ತದೆ. ಆದರೆ ಇದು ಸಾಧ್ಯವಾಗುವ ವಿಷಯವಲ್ಲ. ಅದರ ಬದಲಿಗೆ ಅವರ ಎಲ್ಲಾ ಕೃತಿಗಳಲ್ಲಿ ಅಂತರ್ಗತವಾಗಿರುವ ದರ್ಶನಗಳನ್ನು ಅರ್ಥೈಸಿಕೊಂಡು ಮತ್ತು ಅವರ ಇಡೀ ಜೀವನದ ತಾತ್ಪರ್ಯವನ್ನು ಗ್ರಹಿಸಿಕೊಂಡು ಒಂದು ಸೂಕ್ತ ಪ್ರತಿಮೆಯನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಅಂಬೇಡ್ಕರ್‌ರ ಈ ಪ್ರತಿಮೆಯು ನಮಗೆ ಚಿರಪರಿಚಿತವಾಗಿರುವ ಅಂಬೇಡ್ಕರ್‌ರವರ ಪ್ರತಿಮೆಯಾಗಿಲ್ಲದಿದ್ದರೂ ಅದು ಮಾತ್ರವೇ ದಲಿತ ಚಳವಳಿಯ ನಿಜವಾದ ದಿಕ್ಕು ತೋರಿಸುವ ಪಂಜಾಗಿರುತ್ತದೆ.

ಬೌದ್ಧ ದಮ್ಮದಲ್ಲಿರುವ ಅನಿತ್ಯವಾದವು ಗತಿತಾರ್ಕಿಕತೆಗೇ ಸಂಬಂಧಿಸಿದ್ದು. ಅದು ಬುದ್ಧನನ್ನು ವಿಶ್ವದ ಮೊದಲ ಗತಿತಾರ್ಕಿಕ ತತ್ವಜ್ಞಾನಿಯನ್ನಾಗಿ ಮಾಡುತ್ತ

ಬಾಬಾಸಾಹೇಬ್ ಅಂಬೇಡ್ಕರ್‌ರವರು ಬುದ್ಧ ಧಮ್ಮದ ಮೂಲ ಸೂತ್ರಗಳಲ್ಲಿರುವ ಕ್ಷಣಿಕವಾದ ಅಥವಾ ಅನಿತ್ಯವಾದವನ್ನು ಇಡಿಯಾಗಿ ಅರಗಿಸಿಕೊಂಡಿದ್ದರೆಂದು ಕಾಣುತ್ತದೆ. ಹೀಗಾಗಿಯೇ ಅವರು ತಮ್ಮ ಚಿಂತನಾಧಾರೆಯಲ್ಲಿ ಹಾಗೂ ಅಭಿಪ್ರಾಯಗಳಲ್ಲಿ ಏಕಸೂತ್ರತೆಯನ್ನು ಉಳಿಸಿಕೊಳ್ಳಲೂ ನಿರಾಕರಿಸಿದ್ದಂತೆ ತೋರುತ್ತದೆ. ಈ ಸಿದ್ಧಾಂತವು ಪ್ರತಿಯೊಂದು ಪ್ರತಿಕ್ಷಣವೂ ಬದಲಾಗುತ್ತಿರುತ್ತದೆ ಹಾಗೂ ವಸ್ತುಗಳೂ ಹಾಗೂ ಸಂಗತಿಗಳೂ ನಿರಂತರವಾಗಿ ಉದ್ಭವಗೊಳ್ಳುತ್ತಿರುತ್ತವೆ ಎಂದು ಪ್ರತಿಪಾದಿಸುತ್ತದೆ. ಹೀಗಾಗಿ ಈ ನಿರಂತರ ಚಲನಶೀಲ ಭೌತಿಕ ಪ್ರಪಂಚಕ್ಕೆ ಸಂವಾದಿಯಾಗಿ ಬೌದ್ಧಿಕ ಪ್ರಕ್ರಿಯೆಗಳು ಚಲನಶೀಲವಾಗಿಯೇ ಇರಬೇಕೆಂದು ಪ್ರತಿಪಾದಿಸುತ್ತದೆ. ಹೀಗಾಗಿ ಬದಲಾದ ಪರಿಸ್ಥಿತಿಗೆ ತಕ್ಕಂತೆ ತಮ್ಮ ಆಲೋಚನೆಗಳನ್ನು ಬದಲಿಸಿಕೊಳ್ಳಲು ಅವರೆಂದು ಹಿಂದೆ-ಮುಂದೆ ನೋಡುತ್ತಿರಲಿಲ್ಲ.

ಇದರಲ್ಲಿ ಉದ್ಭವವಾಗುವ ದ್ವಂದ್ವಗಳನ್ನು ಗತಿತಾರ್ಕಿ
ಪದ್ಧತಿಯಿಂದಲೇ ಬಗೆಹರಿಸಿಕೊಳ್ಳಲು ಸಾಧ್ಯ. ಇಲ್ಲಿಯ
ಅಂಬೇಡ್ಕರ್‌ರ ವಿಧಾನವು ಒಂದು ಗತಿತಾರ್ಕಿಕ ವಿಧ
ನವೇ ಎಂಬ ಪ್ರಶ್ನೆ ಹಾಕಿಕೊಳ್ಳಬಹುದು. ಅವರು ವ
ವಿನ ಸತತ ಉಗಮವನ್ನು ವಿಶ್ವದ ಅಂತಃಸೂತ್ರವೆಂದ
ಪರಿಭಾವಿಸಿದರೂ ಹಾಗೆ ಉದ್ಭವವಾದ ನಂತರದಲ್ಲಿ ಅ
ರಲ್ಲಿ ರೂಪುಗೊಳ್ಳುವ ಸುಸ್ಥಿರ ವ್ಯವಸ್ಥೆಯ ಸ್ಥಿತಿಗೆ ಕಾ
ಣವೇ ನೆಂಬುದರ ಪ್ರಶ್ನೆ ಬಂದಾಗ ದ್ವಂದ್ವಕ್ಕೊಳಗಾ
ತ್ತಾರೆ. ಆದರೆ ಈ ಪ್ರಶ್ನೆಯನ್ನು ಆ ರೀತಿಯಲ್ಲಿ ಉಗ
ಗೊಂಡ ವ್ಯವಸ್ಥೆಗಳಲ್ಲಿ ಆಂತರಿಕವಾಗಿಯೇ ಸ್ವ-ನಿಯಂ
ಣವಿರುತ್ತ ದೆಂಬ ಪರಿಕಲ್ಪನೆಯ ಮೂಲಕ ಗತಿತಾರ್ಕಿ
ವಾಗಿ ಪರಿಹರಿಸಿಕೊಳ್ಳಬಹುದು. ಆದರೆ ಸುವ್ಯವ
(ಆರ್ಡರ್) ಬಗ್ಗೆ ಇರುವ ಸಾಂಪ್ರದಾಯಿಕ ಪರಿಕಲ್ಪನೆಗಳ
ಸಾರಾಂಶದಲ್ಲಿ ಗತಿತಾರ್ಕಿಕವಲ್ಲದ ಪರಿಕಲ್ಪನೆಗಳು, ವ್ಯವ
ಯೊಳಗಡೆಯೇ ಇರುವ ಸ್ವ ನಿಯಂತ್ರಣದ ಮೂಲವನ
ವ್ಯವಸ್ಥೆಯ ಹೊರಗಡೆಯೇ ಹುಡುಕುತ್ತದೆ.

ಇತಿಹಾಸದ ಅತಿಕ್ರೂರ ಅಂಶಗಳನ್ನು ಸ್ವತಃ ಅನು
ವಿಸಿದ್ದ ಹಾಗೂ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಸತ
ವಾಗಿ ಶೋಷಿಸುವುದನ್ನು ಅನುಭವಿಸಿದ್ದ ಅಂಬೇಡ್ಕರ್
ವರು ಸಮಾಜದಲ್ಲಿ ಅಗತ್ಯವಿರುವ ಸುಸ್ಥಿತಿಯನ್ನು ಕಾಪಾ
ಕೊಂಡು ಬರಲು ಮನುಷ್ಯನ ಒಳಗಿನಿಂದ ಹಾಗ
ಹೊರಗಿನಿಂದ ಎರಡೂ ಕಡೆಯಿಂದಲೂ ನಿಯಂತ್ರಿಸು
ಅಗತ್ಯವಿದೆಯೆಂದು ಭಾವಿಸುತ್ತಿದ್ದರೆಂದು ಕಾಣುತ್ತದ
ಅವರ ಪ್ರಕಾರ ಆಂತರಿಕ ನಿಯಂತ್ರಣವು ಧರ್ಮ
ನೀಡುವ ನೀತಿ ಸಂಹಿತೆಯಿಂದ ದತ್ತವಾದರೆ ಹೊರಗಿ
ನಿಯಂತ್ರಣವನ್ನು ಪ್ರಭುತ್ವದ ಮೂಲಕ ಸಾಧಿಸಬೇಕು. ಈ
ನೀತಿ ಸಂಹಿತೆಯನ್ನು ಎಲ್ಲ ವ್ಯಕ್ತಿಗಳು ಅಂತರಂಗೀಕರಿ
ಕೊಂಡಾಗ, ಉದಾರವಾದಿ ಪರಂಪರೆಯ ಪ್ರಕಾರ ಸಮ
ಜವೆಂಬುದು ವ್ಯಕ್ತಿಗಳ ಸಮೂಹವೇ ಆಗಿರುವುದರಿಂದ
ಸಮಾಜವೂ ಅಂತರಂಗೀಕರಿಸಿಕೊಂಡಂತಾಗಿ ಸಮಾಜ
ಆಂತರಿಕ ನಿಯಂತ್ರಣವನ್ನು ಹೊಂದುತ್ತದೆ ಎಂದ
ನಿರೀಕ್ಷಿಸಲಾಗುತ್ತದೆ.

ಆದರೆ ಕೆಲವು ವ್ಯಕ್ತಿಗಳ ಅಥವಾ ಒಂದು ಗುಂಪಿ
ಮೃಗೀಯ ಸ್ವಭಾವಗಳು ತಾವು ಆಚರಿಸುತ್ತಿರುವ ವಿಭಿನ
ಸಂಹಿತೆಯ ಕಾರಣದಿಂದಾಗಿಯೋ ಅಥವಾ ಬೇ
ಯಾವುದೇ ಕಾರಣಗಳಿಂದಾಗಿ ಈ ಆಂತರಿಕ ನಿಯಂತ್ರ
ವನ್ನು ಮೀರಿದಾಗ ಪ್ರಭುತ್ವವು ಮಧ್ಯಪ್ರವೇಶಿಸಿ ಸುವ್ಯವ
ಯನ್ನು ಕಾಪಾಡಬೇಕು. ಜನ ಸಮುದಾಯದ ಅಭಿ
ಪ್ಸೆಯು ಸಂವಿಧಾನದ ಮೂಲಕ ಪ್ರಭುತ್ವದಲ್ಲಿ ನೆಲೆಗೊಂ
ರುತ್ತದೆಂದು ಭಾವಿಸಲಾಗುತ್ತದೆ. ಆದ್ದರಿಂದಲೆ ಧರ್ಮ
ಜನತೆಯ ಅಫೀಮೆಂಬ ಹಾಗೂ ಪ್ರಭುತ್ವವು ಉದು
ಹೋಗುತ್ತದೆಂಬ ಮಾರ್ಕ್ಸ್‌ರ ಹೇಳಿಕೆಯನ್ನು ಒಪ್ಪಿಕೊಳ್ಳಲ
ಅಂಬೇಡ್ಕರ್‌ರಿಗೆ ಸಮಸ್ಯೆಯಾಗುತ್ತಿತ್ತು. ಆದರೆ ಸುವ್ಯವ
ಎಂಬುದು ಆಯಾ ವ್ಯವಸ್ಥೆಯಲ್ಲೇ ಆಂತರಿಕವಾಗಿರು
ದೆಂದು ಅಂಬೇಡ್ಕರ್ ಖಂಡಿತಾ ಭಾವಿಸಿರಲಿಲ್ಲ. ಆದ
ಎಪ್ಪತ್ತರ ದಶಕದಲ್ಲಿ ಸಿಬರ್ನೆಟಿಕ್ಸ್ ತಂತ್ರಜ್ಞಾನದ ಆವಿಷ್ಕಾ
ವಾದ ನಂತರ ಸಂಕೀರ್ಣ 'ವ್ಯವಸ್ಥೆಗಳು, ಅವುಗಳ
ಮಾನವ ಸಮಾಜವೂ ಖಂಡಿತವಾಗಿ ಒಂದು, ತಮ್ಮದ
ಆದ ಆಂತರಿಕ ಸ್ವ-ನಿಯಂತ್ರಣದ ಹಾಗೂ ಸ್ವ-ಸಂ
ಟನೆಯ ವ್ಯವಸ್ಥೆ ಹೊಂದಿರುತ್ತದೆಂದು ಸಾಬೀತಾಯಿತು.

ಉದಾರವಾದ ಮತ್ತು ಸುಧಾರಣಾವಾದ:

ಅಂಬೇಡ್ಕರ್‌ರ ಬೆಳವಣಿಗೆ ಹಾಗೂ ತರಬೇತಿಗಳೆರಡೂ ಪಾಶ್ಚಿಮಾತ್ಯ ಉದಾರವಾದದ ಪ್ರಭಾವಕ್ಕೆ ಒಳಗಾಗಿದ್ದವು. ಅವರೇ ಹೇಳಿಕೊಂಡಂತೆ ಪಾಶ್ಚಿಮಾತ್ಯ ಸಮಾಜದ ಮುಕ್ತ ಹಾಗೂ ಉದಾರವಾದಿ ಮೌಲ್ಯಗಳು ಅವರಿಗೆ ಸಂತಸಾಶ್ಚರ್ಯವನ್ನು ಉಂಟು ಮಾಡಿದ್ದವು. ಅವರು ಜಾತಿಗಳ ಬಗ್ಗೆ ಬರೆದ ಮೊದಲ ಪ್ರಬಂಧವು ಸ್ವಲ್ಪ ಮಟ್ಟಿಗೆ ಮಾರ್ಕ್ಸ್‌ವಾದಿ ವಿಶ್ಲೇಷಣಾ ಧೋರಣೆಯನ್ನು ಹೊಂದಿದ್ದವು. ಅವರ ಅಕೆಡೆಮಿಕ್ ಅಧ್ಯಯನದ ಒಂದು ವಿಷಯವೂ ಮಾರ್ಕ್ಸ್‌ವಾದಿ ಸಮಜವಾದಕ್ಕೇ ಸಂಬಂಧ ಪಟ್ಟಿದ್ದಾಗಿತ್ತಲ್ಲದೇ ಅವರ ಗೈಡ್ ಆಗಿದ್ದ ಪ್ರೊ॥ ಸೆಲಿಗ್ ಮ್ಯಾನ್ ಇತಿಹಾಸದ ಅರ್ಥಶಾಸ್ತ್ರೀಯ ವ್ಯಾಖ್ಯಾನದಲ್ಲಿ ನಿಪುಣರಾಗಿದ್ದರು. ಅದೇನೇ ಇದ್ದರೂ ಅವರ ನಂತರದ ಕೃತಿಗಳು ಸ್ಪಷ್ಟಪಡಿಸುವಂತೆ ಅಂಬೇಡ್ಕರ್‌ರವರು ಮಾರ್ಕ್ಸ್‌ವಾದಕ್ಕಿಂತ ಹೆಚ್ಚಾಗಿ ಉದಾರವಾದಿ ಸಂಪ್ರದಾಯಕ್ಕೆ ಹೆಚ್ಚು ಹತ್ತಿರವಾಗಿದ್ದರೆಂಬುದನ್ನು ತಿಳಿಸುತ್ತದೆ. ಅದೇನೇ ಇರಲಿ ಅವರೆಂದೂ ಪ್ರಜ್ಞಾಪೂರ್ವಕವಾಗಿ ಉದಾರವಾದದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲಿಲ್ಲ. ಆ ಸಿದ್ಧಾಂತದ ಒಳ ಅಪಾಯಗಳನ್ನು ಅರಿತಿದ್ದ ಅವರು ತಾವು ಉದಾರವಾದಿ ಸುಧಾರಣಾವಾದಿಯಲ್ಲವೆಂದು ಘೋಷಿಸಿಕೊಳ್ಳುವ ಅಗತ್ಯ ಉಂಟಾಯಿತಲ್ಲದೆ ಮಾರ್ಕ್ಸ್‌ವಾದದ ನಿರೂಪಣೆಗಳ ಬಗ್ಗೆ ಎಷ್ಟೇ ಗುಮಾನಿಗಳಿದ್ದರೂ ಅದರ ಬಗ್ಗೆ ತಮಗಿದ್ದ ಆಕರ್ಷಣೆಯನ್ನು ಮುಚ್ಚಿಟ್ಟುಕೊಳ್ಳಲಿಲ್ಲ.

ಅವರ ಚಿಂತನೆಯಲ್ಲಿದ್ದ ದೌರ್ಬಲ್ಯಗಳು ಭೌತಿಕ ವಾಸ್ತವಗಳ ಜೊತೆ ಸಂಬಂಧ ಕಡಿದುಕೊಂಡ ಧರ್ಮದ ನೈತಿಕ ಶಕ್ತಿಯ ಪರಿಕಲ್ಪನೆಯಿಂದ ಉಗಮವಾಗುತ್ತದೆ. ಆದ್ದರಿಂದಲೇ ಅವರು ಯಾವುದೇ ರಕ್ತಪಾತವಿಲ್ಲದೇ ಸಮಾನತೆ, ಭ್ರಾತೃತ್ವ ಮತ್ತು ಸ್ವಾತಂತ್ರ್ಯದ ತಳಹದಿಯುಳ್ಳ ಸಮಾಜವನ್ನು ಸ್ಥಾಪಿಸಲು ಸಾಧ್ಯ ಎಂದು ಭರವಸೆ ಇಟ್ಟಿದ್ದರು. ಈ ತತ್ವಗಳನ್ನು ಆಧರಿಸಿಯೇ ಅವರು ಸಂವಿಧಾನಾತ್ಮಕ ಪ್ರಭುತ್ವದ ಪರಿಕಲ್ಪನೆಯನ್ನು ಕಟ್ಟಿಕೊಂಡಿದ್ದರು. ಈ ಬಗೆಯ ಸ್ವಕಲ್ಪಿತ ಆಶಯಗಳಿಂದಾಗಿಯೇ ಅವರು, ಆಳುವ ವರ್ಗಗಳು ಎಷ್ಟೇ ನಾಟಕವಾಡಿದರೂ ಒಂದು ಬಹು ಕೇಂದ್ರಗಳುಳ್ಳ, ಅಸಮಾನತೆಯುಳ್ಳ ಸಮಾಜದ ಮೇಲೆ ಉದಾರವಾದಿ ಪ್ರಭುತ್ವದ ಪ್ರಭಾವವು ಅಂತಹ ಬಹು ಕೇಂದ್ರಗಳನ್ನು ಹಾಗೂ ಅಸಮಾನತೆಯನ್ನು ಉಳಿಸಿಕೊಂಡು ಹೋಗಲೇ ಸಹಕರಿಸುತ್ತದೆಂಬುದನ್ನು ಕಡೆಗಣಿಸಿದರು. ಈ ಬಗೆಯ ಉದಾರವಾದವು ಹೆಚ್ಚೆಂದರೆ ಜಾತಿವಾದದ ಕೋಮುವಾದದ ರಾಜಕಾರಣವನ್ನೂ, ದಲಿತರ ನಡುವೆ ಒಡಕುಗಳನ್ನೂ, ರಾಜಕೀಯ ಚದುರಂಗದಾಟದಲ್ಲಿ ಅವರ ಬಳಕೆಯನ್ನೂ, ಅವರ ನಿಜವಾದ ಸಮಸ್ಯೆಗಳ ಬದಿಗೊತ್ತುವಿಕೆಯನ್ನೂ, ಹೆಚ್ಚಿಸಿ ಕೆಲವೇ ಶ್ರೀಮಂತರ ಹಿತಾಸಕ್ತಿಯನ್ನು ರಕ್ಷಿಸುವಲ್ಲಿ ಪರ್ಯಾವಸನಗೊಳ್ಳುತ್ತದೆ.

ಬೂರ್ಜ್ವಾಗಳ ರಾಜಕೀಯ ಅಧಿಕಾರದ ಅಭಿವ್ಯಕ್ತಿಯಾಗಿರುವ ಉದಾರವಾದಿ ಪ್ರಜಾತಂತ್ರವು ಬಡಬಗ್ಗರ ಹಿತಕಾಯುತ್ತದೆಂದು ನಿರೀಕ್ಷಿಸುವುದೇ ಒಂದು ವೈರುಧ್ಯಾತ್ಮಕ ಸಮಸ್ಯೆ. ಅದು ಒಂದಷ್ಟು ರಿಯಾಯಿತಿಗಳನ್ನು ದುರ್ಬಲವರ್ಗಗಳಿಗೆ ಕೊಡುತ್ತಿರುವಂತೆ ಕಂಡರೂ ಅದರ ನಿಜವಾದ ಉದ್ದೇಶ ಅಸ್ತಿತ್ವದಲ್ಲಿರುವ ಆಳುವ ವರ್ಗಗಳ ಆಳ್ವಿಕೆಯನ್ನು ಉಳಿಸಿಕೊಂಡು ಬರುವುದೇ ಆಗಿರುತ್ತದೆ. ಕೊಳೆತ ಹಿಂದೂ ಜಾತಿ ಪದ್ಧತಿಗಿಂತ ಉದಾರವಾದಿ ಪ್ರಜಾತಂತ್ರವು ಉತ್ತಮವೆಂದು ಅನಿಸಿದರೂ ಅದು

ಅಂಬೇಡ್ಕರ್‌ರ ಬೆಳವಣಿಗೆ ಹಾಗೂ ತರಬೇತಿಗಳೆರಡೂ ಪಾಶ್ಚಿಮಾತ್ಯ ಉದಾರವಾದದ ಪ್ರಭಾವಕ್ಕೆ ಒಳಗಾಗಿದ್ದವು. ಅವರೇ ಹೇಳಿಕೊಂಡಂತೆ ಪಾಶ್ಚಿಮಾತ್ಯ ಸಮಾಜದ ಮುಕ್ತ ಹಾಗೂ ಉದಾರವಾದಿ ಮೌಲ್ಯಗಳು ಅವರಿಗೆ ಸಂತಸಾಶ್ಚರ್ಯವನ್ನು ಉಂಟುಮಾಡಿದ್ದವು. ಅವರು ಜಾತಿಗಳ ಬಗ್ಗೆ ಬರೆದ ಮೊದಲ ಪ್ರಬಂಧವು ಸ್ವಲ್ಪಮಟ್ಟಿಗೆ ಮಾರ್ಕ್ಸ್‌ವಾದಿ ವಿಶ್ಲೇಷಣಾ ಧೋರಣೆಯನ್ನು ಹೊಂದಿದ್ದವು. ಅವರ ಅಕೆಡೆಮಿಕ್ ಅಧ್ಯಯನದ ಒಂದು ವಿಷಯವೂ ಮಾರ್ಕ್ಸ್‌ವಾದಿ ಸಮಜವಾದಕ್ಕೇ ಸಂಬಂಧ ಪಟ್ಟಿದ್ದಾಗಿತ್ತಲ್ಲದೇ ಅವರ ಗೈಡ್ ಆಗಿದ್ದ ಪ್ರೊ॥ ಸೆಲಿಗ್ ಮ್ಯಾನ್ ಇತಿಹಾಸದ ಅರ್ಥಶಾಸ್ತ್ರೀಯ ವ್ಯಾಖ್ಯಾನದಲ್ಲಿ ನಿಪುಣರಾಗಿದ್ದರು

ದಲಿತರ ಪರವಾಗಿ ಯಾವುದೇ ನೈಜ ಬದಲಾವಣೆಯನ್ನು ತರುವಲ್ಲಿ ಅಸಮರ್ಥವಾಗಿರುತ್ತದೆ. ಅದು ಶೋಷಕ ವ್ಯವಸ್ಥೆಯಲ್ಲಿರುವ ಬಿಕ್ಕಟ್ಟನ್ನು ಮೃದುಗೊಳಿಸುತ್ತದಲ್ಲದೆ ಅದಕ್ಕೆ ಬಲಿಯಾಗಿರುವವರಲ್ಲಿ ಕ್ರಾಂತಿಕಾರಿ ಜಾಗೃತಿಯನ್ನು ಕೊಂದುಹಾಕುತ್ತದೆ.

ಪುನರ್‌ನಿರ್ವಚನದ ಯೋಜನೆ:

ಬಾಬಾಸಾಹೇಬ್ ಅಂಬೇಡ್ಕರ್‌ರವರು ತಮ್ಮ ಕೃತಿಯಲ್ಲಿ ಬಳಸಿದ ಹಲವಾರು ನಿರ್ಮಿತಿಗಳಿಗೆ ತನ್ನದೇ ಆದ ನಿರ್ದಿಷ್ಟ ಅರ್ಥಗಳಿವೆ. ಮೊದಲನೆಯದಾಗಿ ಅವು ತೋರಿಕೆಗೆ ಕಾಣುವರೀತಿಯಲ್ಲಿ ಸ್ವಸಂಪೂರ್ಣವಾದ ವ್ಯಾಖ್ಯೆಗಳಲ್ಲ. ಅವು ಅವರ ಆಲೋಚನಾ ಕ್ರಮದ ಉಪ ಉತ್ಪನ್ನಗಳಾಗಿದ್ದು ಅದರ ಮೂಲಸೆಲೆಯನ್ನು ಅವರ ಮೂಲಭೂತ ಲಕ್ಷ್ಯವಾಗಿದ್ದ ಜಾತಿ ನಿರ್ಮೂಲನೆ ಮತ್ತು ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಯನ್ನು ಆಧರಿಸಿದ ಸಮಾಜ ನಿರ್ಮಾಣದಲ್ಲಿ ಹುಡುಕಬಹುದು. ಅವರ ಹೃದಯಕ್ಕೆ ಅತಿ ಸಮೀಪವಾಗಿದ್ದ ಈ ಮೂರು ತತ್ವಗಳೂ ಸಹಾ ಫ್ರೆಂಚ್ ಕ್ರಾಂತಿಯಲ್ಲಿ ಮೂಡಿಬಂದ ಅರ್ಥಗಳಿಗಿಂತ ಭಿನ್ನವಾದ ಅರ್ಥಗಳನ್ನೇ ಹೊರಡಿಸುತ್ತದೆ. ತಾವು ಇದನ್ನು ಬುದ್ಧನಿಂದ ಪಡೆದೆನೆಂದು ಅವರು ಹೇಳುತ್ತಾರೆ. ಬುದ್ಧ ಏನು ಹೇಳಿದ್ದರೆಂಬುದನ್ನೂ ಸಹಾ ಅಂಬೇಡ್ಕರ್‌ರ ವ್ಯಾಖ್ಯಾನದ ಮೂಲಕ ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ಅದು ಈಗಾಗಲೇ ಬೌದ್ಧ ನಿಲಯಗಳು ಸುಪರಿಚಿತಗೊಳಿಸಿರುವ ವ್ಯಾಖ್ಯಾನಕ್ಕಿಂತ ಭಿನ್ನವೇ ಇರಬಹುದು. ಏಕೆಂದರೆ ಅವರ ಬುದ್ಧ ಮತ್ತು ಅವರ ಧಮ್ಮಗಳು ಪ್ರಾರಂಭದಲ್ಲಿ ಹಲವಾರು ಬೌದ್ಧರಿಂದ ಆ ಬಗೆಯ ನಿರಾಕರಣೆಗೆ ಗುರಿಯಾಗಿತ್ತು.

ಬಾಬಾಸಾಹೇಬ್ ಅಂಬೇಡ್ಕರ್‌ರವರು ತಮ್ಮ ಕೃತಿಯಲ್ಲಿ ಬಳಸಿದ ಹಲವಾರು ನಿರ್ಮಿತಿಗಳಿಗೆ ತನ್ನದೇ ಆದ ನಿರ್ದಿಷ್ಟ ಅರ್ಥಗಳಿವೆ. ಮೊದಲನೆಯದಾಗಿ ಅವು ತೋರಿಕೆಗೆ ಕಾಣುವ ರೀತಿಯಲ್ಲಿ ಸ್ವಸಂಪೂರ್ಣವಾದ ವ್ಯಾಖ್ಯೆಗಳಲ್ಲ. ಅವು ಅವರ ಆಲೋಚನಾ ಕ್ರಮದ ಉಪ ಉತ್ಪನ್ನಗಳಾಗಿದ್ದು ಅದರ ಮೂಲಸೆಲೆಯನ್ನು ಅವರ ಮೂಲಭೂತ ಲಕ್ಷ್ಯವಾಗಿದ್ದ ಜಾತಿ ನಿರ್ಮೂಲನೆ ಮತ್ತು ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಯನ್ನು ಆಧರಿಸಿದ ಸಮಾಜ ನಿರ್ಮಾಣದಲ್ಲಿ ಹುಡುಕಬಹುದು. ಅವರ ಹೃದಯಕ್ಕೆ ಅತಿ ಸಮೀಪವಾಗಿದ್ದ ಈ ಮೂರು ತತ್ವಗಳೂ ಸಹಾ ಫ್ರೆಂಚ್ ಕ್ರಾಂತಿಯಲ್ಲಿ ಮೂಡಿಬಂದ ಅರ್ಥಗಳಿಗಿಂತ ಭಿನ್ನವಾದ ಅರ್ಥಗಳನ್ನೇ ಹೊರಡಿಸುತ್ತದೆ.

ಆದ್ದರಿಂದ ಅಂಬೇಡ್ಕರ್‌ರನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅವರು ಬಳಸುವ ಪರಿಕಲ್ಪನೆಗಳ ಮತ್ತು ನಿರ್ಮಿತಿಗಳ ನಿರ್ದಿಷ್ಟ ಅರ್ಥವೇನೆಂದು ಗ್ರಹಿಸಲು ವಿಶೇಷ ಪರಿಶೀಲನೆ ಮಾಡಬೇಕಾಗುತ್ತದೆ. ಅದರ ಕೊರತೆಯೇ ಈಗಾಗಲೇ ಹಲವು ಜನರಲ್ಲಿ ಸಾಕಷ್ಟು ತಪ್ಪು ಗ್ರಹಿಕೆಗಳನ್ನು ಹುಟ್ಟುಹಾಕಿದೆ. ಅವರು ನಿಜವಾಗಿ ಹೇಳಿದ್ದೇನು ಅಥವಾ ಉದ್ದೇಶಿಸಿದ್ದೇನು ಎಂದು ಅರ್ಥ ಮಾಡಿಕೊಳ್ಳುವುದು ಒಂದು ವಿಷಯವಾದರೆ ಅದನ್ನೇ ಅವರ ಮೂಲಭೂತ ಲಕ್ಷ್ಯ ಹಾಗೂ ದರ್ಶನಗಳಿಗೆ ಸಂವಾದಿಯಾಗುವಂತೆ ವಿಸ್ತರಿಸಿ ಭವಿಷ್ಯದ ಚಳವಳಿಗೂ ಅನುಕೂಲವಾಗುವಂತೆ ವ್ಯಾಖ್ಯಾನಿಸುವುದು ಬೇರೆಯದೇ ಆದ ವಿಷಯ. ಮಾರ್ಕ್ಸ್ ತತ್ವಶಾಸ್ತ್ರದ ಬಗ್ಗೆ ಹೇಳಿದಂತೆ ಅಂಬೇಡ್ಕರ್‌ರನ್ನು ಹೇಗಿದ್ದರೋ ಹಾಗೆ ಅರ್ಥ ಮಾಡಿಕೊಳ್ಳುವ ಸಮಸ್ಯೆಯಲ್ಲ– ಬದಲಿಗೆ ಅವರು ತಮ್ಮ ಜೀವಮಾನವಿಡಿ ತಮ್ಮನ್ನು ಮುಡುಪಾಗಿಟ್ಟ ಹೋರಾಟಗಳಲ್ಲಿ ಒಂದು ಅಸ್ತ್ರವಾಗಿ ಹೇಗೆ ಬಳಸಿಕೊಳ್ಳಬಹುದೆಂದು ಚಿಂತಿಸುವುದೇ ಪ್ರಧಾನವಾದ ವಿಷಯ. ಇಲ್ಲಿ ಪ್ರಸ್ತಾಪಿತವಾದ ಪುನರ್ನಿರ್ವಚನದ ವಿಷಯವೂ ಪ್ರಾಯಶಃ ಸಾರಾಂಶದಲ್ಲಿ ಇವೆರಡನ್ನೂ ಉದ್ದೇಶಿಸಿರಬೇಕಾಗುತ್ತದೆ.

ಅಂಬೇಡ್ಕರ್ ಬಳಸಿದ ಸಂಶೋಧನಾ ವಿಧಾನವು ಮೂಲಭೂತವಾಗಿ ವೈಚಾರಿಕವಾಗಿದ್ದು ಅದರ ಹಿಂದಿನ ಉದ್ದೇಶವೂ ನಿಸ್ಸಂದೇಹವಾಗಿ ಕ್ರಾಂತಿಕಾರಿಯಾದದ್ದೇ ಆಗಿದೆ. ಒಂದು ನಿರ್ದಿಷ್ಟ ಯೋಜನೆಯಲ್ಲಿ ಅಥವಾ ಒಂದು ನಿರ್ದಿಷ್ಟ ಸಂಶೋಧನಾ ಪ್ರಕ್ರಿಯೆಯನ್ನು ಅಳವಡಿಸುವಲ್ಲಿ ಲೋಪಗಳಿರಬಹುದು. ಅದಕ್ಕೆ ಸಂದರ್ಭದ ಸಂಕೀರ್ಣತೆ ಮತ್ತು ಅಂಬೇಡ್ಕರ್‌ರ ಪರಿಸ್ಥಿತಿ ಕಾರಣವಾಗಿರಬಹುದು. ಅದೇನೇ ಇದ್ದರೂ ಅಂತಿಮ ಪರಿಣಾಮವು ಸಂಶೋಧನೆಗೆ ಬಳಸಿದ ಪರ್ಯಾಯಗಳನ್ನೇ ಆಧರಿಸಿರುತ್ತದೆ. ಇದರ ಅರ್ಥವೇನೆಂದರೇ ನಿರ್ದಿಷ್ಟವಾದ ಯಾವುದೇ ವಿಧಾನ, ಚಿಂತನೆ ಅಥವಾ ಆಚರಣೆಗಳು ಐತಿಹಾಸಿಕವಾಗಿ ವಾಸ್ತವ ಸಂಗತಿಗಳೇ ಆಗಿದ್ದರೂ ಅಂಬೇಡ್ಕರ್‌ರ ಸೈದ್ಧಾಂತಿಕ ಅಂಶಗಳನ್ನು ಗ್ರಹಿಸಿಕೊಳ್ಳಬೇಕೆಂದರೆ ಅವುಗಳನ್ನು ತೋರಿಕೆಗೆ ಕಾಣುವಷ್ಟು ರೀತಿಯಲ್ಲಿ ಪರಿಗಣಿಸಲು ಬರುವುದಿಲ್ಲ. ಉದಾಹರಣೆಗೆ ಮೇಲೆ ಹೇಳಲ್ಪಟ್ಟ ಯಾವುದೇ ಅಂಶಗಳನ್ನು ಅದರ ಅಕೆಡೆಮಿಕ್ ತೀವ್ರತೆಯೊಂದಿಗೆ ಅವರು ಅದನ್ನು ಬಳಸುವುದಿಲ್ಲ. ಅದಕ್ಕೆ ಬಹಳಷ್ಟು ಬಾರಿ ಉದ್ದೇಶಿಸಿ ಮಾತಾಡುತ್ತಿದ್ದುದು ಅಕೆಡೆ

ಮಿಕ್ ಅಲ್ಲದ ಜನಗಳನ್ನು ಎಂಬುದು ಒಂದು ಕಾರಣವಾದರೆ ಬಹಳಷ್ಟು ಬಾರಿ ಅವರು ತಾವು ಬಳಸುತ್ತಿದ ಪದಗಳಿಗೆ ತಮ್ಮದೇ ಆದ ಅರ್ಥಗಳನ್ನು ಕೊಡುತ್ತಿದ್ದರು. ಬದಲಾದ ಸಂದರ್ಭಗಳಲ್ಲಿ ಮತ್ತು ಬದಲಾದ ಮಾಹಿತಿಗಳ ಸಂದರ್ಭಗಳಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ಹಿಂಜರಿಕೆಯಿಲ್ಲದೇ ಬದಲಾಯಿಸಿಕೊಳ್ಳುತ್ತಿದ್ದರು.

ಒಂದು ಊಹಾತ್ಮಕ ಉದಾಹರಣೆ ಕೊಡುವುದಾದರೆ ಅಂಬೇಡ್ಕರ್‌ರವರು ಈಗ ಇದ್ದಿದ್ದರೆ ತಮ್ಮ ಕೆಲವು ನಂಬಿಕೆಗಳ ಹಾಗೂ ಅಭಿಪ್ರಾಯಗಳ ಅನಪೇಕ್ಷಿತ ಪರಿಣಾಮಗಳ ಬಗ್ಗೆ ಮಾಹಿತಿ ಪಡೆದು ಅಥವಾ ಅನುಭವಿಸಿ ಅವುಗಳನ್ನು ಖಂಡಿತಾ ಬದಲಿಸಿಕೊಳ್ಳುತ್ತಿದ್ದರು. ಇಲ್ಲದಿದ್ದರೆ ತಾವೇ ಕಷ್ಟಪಟ್ಟು ಬರೆದು ಸಮರ್ಥಿಸಿಕೊಳ್ಳುತ್ತಿದ್ದ ಸಂವಿಧಾನವನ್ನು ತನ್ನನ್ನು ಕೇವಲ ಉಪಕರಣವಾಗಿ ಮಾತ್ರ ಬಳಸಿಕೊಳ್ಳಲಾಗಿದೆ ಎಂದು ಧಿಕ್ಕರಿಸಿ ಹೊರನಡೆಯುತ್ತಿದ್ದರೆ? ಅವರು ಮಾಡಿದ ಹಲವು ವಿಷಯಗಳಲ್ಲಿ ಹಲವು ಮಿತಿಗಳಿದ್ದವು. ಆದರೆ ಅವು ತಪ್ಪೆಂದು ಮನವರಿಕೆಯಾದಾಗ ಅದನ್ನು ಬದಲಾಯಿಸಿಕೊಳ್ಳಲು ಅವರೆಂದು ಹಿಂಜರಿದಿರಲಿಲ್ಲ. ಇಲ್ಲಿ ಪ್ರಸ್ತಾಪಿಸಲಾಗುತ್ತಿರುವ ಪುನರ್ ನಿರ್ವಚನವನ್ನು ಅವರೇ ತಮ್ಮ ಬಗ್ಗೆ ಹಲವು ಬಾರಿ ಮಾಡಿಕೊಂಡಿದ್ದರು. ಮತ್ತು ಅವರು ಜೀವಂತವಾಗಿದ್ದರೆ ಅದನ್ನೇ ಮುಂದುವರೆಸುತ್ತಿದ್ದರು. ಅವರ ಅಸಂಪೂರ್ಣವಾದ ವಿಮೋಚನಾ ಯೋಜನೆಯನ್ನು ಪೂರೈಸಲು ಇದು ಅವಿಭಾಜ್ಯ ಅಂಗ.

ಇದನ್ನು ಪೂರೈಸಲು ಅನುಸರಿಸಬೇಕಾದ ವೈಜ್ಞಾನಿಕ ಮಾರ್ಗವು ಅಂಬೇಡ್ಕರ್‌ರ ಜೀವನವನ್ನು ಅದರ ಸಾಂದರ್ಭಿಕ ಚೌಕಟ್ಟಿನಲ್ಲಿಟ್ಟು ವಿಶ್ಲೇಷಣಾತ್ಮಕ ಅಧ್ಯಯನ ಕೈಗೊಳ್ಳುತ್ತಲೇ ಅದರ ಅಂತರ್ಗತ ಸಾರಾಂಶವನ್ನು ಹಿಡಿದಿಡುವ ಕಡೆ ಕೇಂದ್ರೀಕರಿಸುತ್ತಾ ಅವರ ಜೀವನ ದರ್ಶನದ ಮತ್ತು ಸೈದ್ಧಾಂತಿಕ ಮೂಸೆಯನ್ನು ಪರಿಕಲ್ಪಿಸಿಕೊಳ್ಳುವುದನ್ನು ಒಳಗೊಂಡಿರುತ್ತದೆ. ಅದು ಅದರ ಮೂಲಭೂತ ಉದ್ದೇಶವಾದ ದಲಿತರ ವಿಮೋಚನಾ ಚಳವಳಿಯನ್ನು ತೇಜಗೊಳಿಸುವ ಮತ್ತು ಆ ಮೂಲಕ ಇಡಿ ಭಾರತ ಸಮಾಜವನ್ನು ಪ್ರಜಾತಾಂತ್ರೀಕರಿಸುವ ಆಶಯವನ್ನು ಪ್ರತಿಫಲಿಸುವಂತಿರಬೇಕು. ಈ ಪ್ರಕ್ರಿಯೆಯು ಪೂರ್ವಾಗ್ರಹಗಳಿಂದ ಮುಕ್ತವಿಲ್ಲದೇ ಇರಬಹುದು. ಆದರೆ ಆ ಪೂರ್ವಗ್ರಹಗಳು ಈವರೆಗೆ ಇತಿಹಾಸದ ದುರ್ಬಳಕೆ ಮಾಡಿಕೊಳ್ಳುತ್ತಲೇ ಬಂದ ಶೋಷಕ ವರ್ಗಗಳಿಗಾಗಿಯಲ್ಲದೇ ಬದಲಾವಣೆಯನ್ನು ಹಂಬಲಿಸುತ್ತಿರುವ ನಿರ್ಗತಿಕರ ಪರವಾಗಿದ್ದರೆ ತೊಂದರೆಯೇನಿಲ್ಲ. ಅದು ಅವರ ದೃಷ್ಟಿಕೋನದಿಂದ ಮುಕ್ತವಾಗಿಲ್ಲದೇ ಇರಬಹುದು. ಬದಲಿಗೆ ದಲಿತರ ಮುಂದಿನ ವಿಮೋಚನಾ ಹೋರಾಟಗಳಿಗೆ ಅಂಬೇಡ್ಕರ್‌ರನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳಬೇಕೆಂಬ ಆಶಯದಲ್ಲೇ ಅದು ಅಡಕವಾಗಿದೆ.

(ಇದು ೧೯೯೭ರ ಮಾರ್ಚ್ ೨೭-೨೮ರಂದು ಪುಣೆ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗವು ಆಯೋಜಿಸಿದ್ದ 'ಅಂಬೇಡ್ಕರ್ ನಂತರದ ದಲಿತ ಚಳವಳಿಗಳು' ಎಂಬ ವಿಚಾರ ಸಂಕಿರಣದಲ್ಲಿ ಡಾ॥ ಆನಂದ್ ತೇಲ್‌ತುಂಬ್ಡೆಯವರು ಮಂಡಿಸಿದ 'ಅಂಬೇಡ್ಕರ್ ನಂತರದ ದಲಿತ ಚಳವಳಿಯಲ್ಲಿ ಮತ್ತು ಚಳವಳಿಗಾಗಿ ಅಂಬೇಡ್ಕರ್' ಎಂಬ ಮಹಾನ್ ಪ್ರಬಂಧದ ಆಯ್ದ ಭಾಗವಷ್ಟೇ. ಇದರ ಸಂಪೂರ್ಣ ಪಠ್ಯ ಕನ್ನಡಕ್ಕೆ ಬಂದು ಕರ್ನಾಟಕದ ದಲಿತ ಹಾಗೂ ಇತರ ಪ್ರಜಾತಾಂತ್ರಿಕ ಚಳವಳಿಗಳ ಮಧ್ಯೆ ಚರ್ಚೆ ಗೊಳಪಡಬೇಕು ಎಂಬುದು ಅನುವಾದಕನ ಅಭಿಪ್ರಾಯ.) □

ಕಾವ್ಯ

ಸೊಳ್ಳು ಸೊಲ್ಲಾಯಿತು

ಎನ್ನ ಕಾಯ ಕರಗಿ,
ಅವ್ವಾ!
ನಿನ್ನ ಕರಸ್ಥಲದಲ್ಲಿ ಮೃತ್ತಿಕೆಯಾಗಿತ್ತು.
ಎನ್ನ ಮನ ಪ್ರಾಣಗಳು ರೂಪು ಪಡೆಯಲು
ನಿನ್ನ ಬೆರಳ ತುದಿಯಲ್ಲಿ ಚೈತನ್ಯವಾಗಿತ್ತು.
ಅವ್ವಾ,
ಅದ ನೀ ಮುಟ್ಟಿ ಮಾತಾಡಿಸು
ನೀ ಅದ ತಟ್ಟಿ ಮಾತಾಡಿಸು
ಎದುರಿಸಿ ಮಾತಾಡಿಸು, ಬೆದರಿಸಿ ಮಾತಾಡಿಸು
ಶಕ್ತಿಯ ಎದಿರು ನುಡಿಯಲು ಶಕ್ತನೇ ನಾನು,
ಆದರೂ, ಅವ್ವನ ಎದೆ ತುಂಬಿ ಬಂದಿತ್ತು
ರೂಪಿಸಲು ನುಡಿಸಿದಳು, ನುಡಿದಳು.

ಎಲ್ಲಿದ್ದೆ ಜೀವವೇ. ಎಲ್ಲಿಂದ ಬಂದೆ ಜೀವವೇ
ಹೇಗಿದ್ದೆ ಜೀವವೇ, ಹೇಗಾದೆ ಜೀವವೇ
ಏನಾಗಬೇಕೆಂದಿರುವೆ ಜೀವವೇ,
ಏನಾಗಲಿರುವೆ ಜೀವವೇ.....

ಜೀವಕ್ಕೆ ಪ್ರಾಣಬಂದಿತ್ತು,
ಜೀವ ಚೈತನ್ಯವಾಗಿತ್ತು,
ಅವ್ವಾ....,
ನೀ ಅದ ಮುಟ್ಟಿ ಮಾತಾಡಿಸಿದೆ
ನೀ ತಟ್ಟಿ ಮಾತಾಡಿಸಿದೆ
ಅದ ಮೆಚ್ಚಿ ಮಾತಾಡಿಸಿದೆ
ನೀ ಅದ ಒಪ್ಪಿ ಮಾತಾಡಿಸಿದೆ
ಮುದ್ದಿಸಿ ಮಾತಾಡಿಸಿದ
ಲಲ್ಲೆಗೆರೆದು ಮಾತಾಡಿಸಿದೆ

ಮಾತು ಮಾತಿಗೆ ನಿರಾಕಾರ ಆಕಾರವಾಗಿತ್ತು,
ಏನಾಗಿತ್ತು, ಅದು? ಹೇಗಾಗಿತ್ತು ಅದು?
ಅದು ವಿಸ್ಮಯ!

ನೀನರಿಯೆ ಅದ ನಾನರಿಯೆ ಅದ
ನಿನ್ನೊಳಗೆ ನಾನಾಗಿ, ನನ್ನೊಳಗೆ ನೀನಾಗಿ
ನಾಲ್ಕೂ ಏಕವಾಗಿ, ಒಂದು ಇದಿರಾಗಿ
ಎರಡೂ ಸೇರಿ ತೆರೆದೊಡಲು ಚೂಪಾಗಿ
ನಡುವೆ ಲಿಂಗ ಕುರುಹಾಗಿ ಸೊಳ್ಳಗಿತ್ತು.

ನಿಜ! ಅದು ಸೊಳ್ಳಾಗಿತ್ತು.
ನಿನ್ನ ತಾಯ್ತನ ಎಣ್ಣೆಯಾಗಿ
ಹೊಕ್ಕುಳ ಬಳ್ಳಿ ಬತ್ತಿಯಾಗಿ

ನೊಂದವರ ನೋವಿಗೆ ಮಿಡಿಯುವ
ನಿನ್ನ ಒಡಲುರಿ ಬೆಳಕಾಗಿ
ಹಣತೆಯಾಯ್ತು,
ನಾನೂ ಹಣತೆಯಾದೆ.
ಲೋಕದ ಮಳೆಗಾಳಿಗೆ ಜಗ್ಗದ
ಕತ್ತಲಿಗೆ ಕರಗದ ಬೆಳಕಾದೆ
ನಿನ್ನಾಸೆಯ ನಿಜವಾದೆ.

○ ಬಿ. ಮಹೇಶ್ ಹರವೆ

ಮಹಿಳಾ ಸಬಲೀಕರಣ: ಅಂಬೇಡ್ಕರ್ ದೃಷ್ಟಿಕೋನ

ಪುಸ್ತಕ ಅವಲೋಕನ

ಹಿರಿಯ ಐ.ಎ.ಎಸ್ ಅಧಿಕಾರಿ ಬಾಬುರಾವ್ ಮುಡಬಿ ಅವರು ಮೈಸೂರು ವಿಶ್ವವಿದ್ಯಾಲಯ ಪಿ.ಎಚ್.ಡಿ ಪದವಿಗಾಗಿ ಸಿದ್ಧಪಡಿಸಿದ ಸಂಶೋಧನಾ ಪ್ರಬಂಧವಿದು. ಮಹಿಳೆಯರ ಸಬಲೀಕರಣಕ್ಕಾಗಿ ಅಂಬೇಡ್ಕರ್ ಮಾಡಿದ ಪ್ರಯತ್ನಗಳ ವ್ಯಾಪಕ ಹುಡುಕಾಟ ಈ ಕೃತಿಯಲ್ಲಿದೆ. ಮಹಿಳಾ ಸಂಬಂಧ ಸಮಸ್ಯೆಗಳಗಾಗಿ ಅಂಬೇಡ್ಕರ್ ವ್ಯಕ್ತಪಡಿಸಿದ ಖಚಿತ ಅಭಿಪ್ರಾಯ, ವೈಚಾರಿಕ ದೃಷ್ಟಿಕೋನ ಹಾಗೂ ಅದಕ್ಕಾಗಿ ಅವರು ಹಾಕಿಕೊಳ್ಳಲು ಉದ್ದೇಶಿಸಿದ್ದ ಕಾರ್ಯ ಕ್ರಮಗಳನ್ನು ಕುರಿತು ವ್ಯಾಪಕವಾಗಿ ಇಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಅಂಬೇಡ್ಕರ್ ಅವರ ವೈವಿಧ್ಯಮಯ ವ್ಯಕ್ತಿತ್ವ ತಿಳಿದುಕೊಳ್ಳಲು ಈ ಕೃತಿ ಸಹಕಾರಿ.

○ ಮಹೇಶ್ ತಿಪ್ಪಶೆಟ್ಟಿ

ಡಾ॥ ಬಾಬಾಸಾಹೇಬ ಅಂಬೇಡ್ಕರ್‌ರವರು ಈ ದೇಶಕ್ಕೆ ಹಾಗೂ ಸಾಮಾನ್ಯರಿಗೆ ಗೊತ್ತಿರುವುದು ಎರಡು ಕಾರಣಕ್ಕಾಗಿ. ದಲಿತ ನಾಯಕ ಹಾಗೂ ಸಂವಿಧಾನದ ರೂವಾರಿ ಎಂದು ಮಾತ್ರ, ವೈದಿಕ ಧರ್ಮದ ಅನಾಹುತಗಳನ್ನು ಹೆಕ್ಕಿ ತೆಗೆಯುವಾಗ ಇತ್ತೀಚೆಗೆ ಕೆಲವರು ಅಂಬೇಡ್ಕರ್ ಅವರು 'ಬೌದ್ಧ' ಧರ್ಮ ಸ್ವೀಕರಿಸಿದ್ದನ್ನೇ ಬಂಡವಾಳ ಮಾಡಿಕೊಂಡಿದ್ದಾರೆ. ಚೆನ್ನಬಸವಣ್ಣ ವಚನ ಸಾಹಿತ್ಯದ ಮುಕ್ತ ಚಿಂತನೆಯ ಹೊಳೆಗೆ 'ತತ್ವ'ದ ಅಣೆಕಟ್ಟು ಕಟ್ಟಿದಂತೆ, ಇಂದು ನವ ಬೌದ್ಧರು ಇತ್ತೀಚೆಗೆ ಬುದ್ಧನ ಸರಳ ಹಾಗೂ ಸಹಜ ಚಿಂತನೆಗಳಿಗೆ ಅಂಬೇಡ್ಕರ್ ಹೆಸರಿನಲ್ಲಿ ಬ್ರಾಹ್ಮಣೀಕರಣದ ಬಣ್ಣ ಕೊಡತೊಡಗಿದ್ದಾರೆ. ಇವೆಲ್ಲವನ್ನು ದಾಟಿ ದಲಿತರಲ್ಲಿ ಅಂಬೇಡ್ಕರ್ ವಾದ, ಜಗಜೀವನರಾಮ್ ವಾದ ಹುಟ್ಟುಹಾಕಿ ಒಳಮೀಸಲಾತಿ ಕನಸನ್ನು ಕೊಟ್ಟು ಬಲಿತ ಜಾತಿಗಳು ದಲಿತರನ್ನು ಕುಣಿಯಲು ಹಚ್ಚಿ ಮೀಸೆಯಲ್ಲಿ ಮುಗುಳು ನಗುತ್ತಿದ್ದಾರೆ. ಡಿಎಸ್‌ಎಸ್ ಸಂಘಟನೆ ಇತ್ತೀಚೆಗೆ ಹಪ್ತಾ ಎತ್ತುವ ಸ್ವರೂಪ ಪಡೆದ ಮೇಲೆ, ದಲಿತ ಬಂಡಾಯ ಸಂಘಟನೆಗಳು ವಿಭಿನ್ನ ಮಾರ್ಗ ತುಳಿದ ಮೇಲೆ, ಬಿಎಸ್‌ಪಿ ಅತಂತ್ರ ರಾಜಕೀಯ ತಂತ್ರ ಬಳಸಿದ ಮೇಲೆ, ಪರಿಶಿಷ್ಟರ ಪಟ್ಟಿ ರಾಜಕೀಯ ಕಾರಣಕ್ಕಾಗಿ ಹಿಗ್ಗಿದ ಮೇಲೆ ಈ ದೇಶದಲ್ಲಿ ದಲಿತ ಚಿಂತನೆ ದಿಕ್ಕು ತಪ್ಪಿದೆ. ಇಂತಹ ಸಂದರ್ಭದಲ್ಲಿ ದಲಿತ ಚಿಂತನೆಗಳು ಮೂಲೆ ಗುಂಪಾಗುತ್ತಿವೆ. "ಮಹಿಳಾ ಸಬಲೀಕರಣ, ಅಂಬೇಡ್ಕರ್ ದೃಷ್ಟಿಕೋನ" ಎಂಬ ಡಾ॥ ಬಾಬುರಾವ್ ಮುಡಬಿಯವರ ಪುಸ್ತಕ ಅಂಬೇಡ್ಕರ್ ಚಿಂತನೆಗೆ ಆಯಾಮ ಒದಗಿಸಿದೆ.

ಮಹಿಳೆ ಶೋಷಣೆಗೆ ಒಳಗಾಗಿದ್ದಾಳೆಂಬ ವಿಸ್ಮೃತಿ ಬೆಳೆಯಲಾರದ ರೀತಿಯಲ್ಲಿ 'ಮನು' ನಿರ್ಮಿತ ಸಂವಿಧಾನ ಭಾರತದಲ್ಲಿ ಕಾರ್ಯನಿರ್ವಹಿಸುತ್ತಿದೆ. 'ಪಂಚ ಕನ್ನೆಯರ' ಆದರ್ಶ, ದೇವತೆಗಳೆಂದು ಮಹಿಳೆಯರನ್ನು ನಂಬಿಸಿದ ತಂತ್ರ, ಬದುಕಿನ ಎಲ್ಲ ಹಂತಗಳಲ್ಲಿ ಅವಳು ರಕ್ಷಣೆಯಲ್ಲಿ ಇರಬೇಕೆಂಬ ನಂಬಿಕೆ, ಪರೋಕ್ಷವಾಗಿ 'ನಾರಿ ನರಕಕ್ಕೆ ದಾರಿ' ಎಂಬ ಅಂಶದ ಚಲಾವಣೆ, ಸ್ವತಂತ್ರಕ್ಕೆ ಅವಳು ಅರ್ಹಳಲ್ಲ ಎಂಬ ನಂಬಿಕೆಯಿಂದ ದೂರ ಇಡಲಾಯಿತು. ಈ ಅಂಶಗಳನ್ನು ಡಾ॥ ಮುಡಬಿಯವರು ಪುಸ್ತಕದ ಮೊದಲ ಅಧ್ಯಾಯದ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಸ್ತ್ರೀವಾದಿಗಳ ಪ್ರಕಾರ ಈ ಅಂಶಗಳು ಭಾರತದ ಮುಗ್ಧ ಮಹಿಳೆಗೆ ಅರ್ಥವಾಗಲೇ ಇಲ್ಲ. ಆದ್ದರಿಂದಲೇ ಅಂಬೇಡ್ಕರ್ ಹಾಗೂ ಜಗಜೀವನರಾಮ್ ಪತ್ನಿಯರು ಬದುಕಿನ ಕೊನೆಯ ಹಂತದಲ್ಲಿ ದೇವರ ದರ್ಶನಕ್ಕೆ "ಯಜಮಾನ"ರ ಅಪ್ಪಣೆಗಾಗಿ ಕಾಯಬೇಕಾಯ್ತು.

ಮಹಿಳಾ ಸಬಲೀಕರಣ: ಅಂಬೇಡ್ಕರ್ ದೃಷ್ಟಿಕೋನ
ಲೇ: ಡಾ॥ ಬಾಬುರಾವ್ ಮುಡಬಿ
ಬೆಲೆ: ರೂ.೧೪೦/-
ಪ್ರಕಾಶಕರು: ಲಕ್ಷ್ಮಿ ಪ್ರಕಾಶನ, ಸಂಜಯ ನಗರ, ಬೆಂಗಳೂರು-೯೪

ಆರ್ಯರ ಆಗಮನದ ಪೂರ್ವದಲ್ಲಿ ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಾನ ಉನ್ನತ ಮಟ್ಟದಲ್ಲಿ ಇತ್ತು ಹಾಗೂ ಆಗ ಮಾತೃಪ್ರಧಾನ ಸಮಾಜ ಅಸ್ತಿತ್ವದಲ್ಲಿ ಇತ್ತು ಎಂಬ ಅಂಶಗಳನ್ನು ಲೇಖಕರು ಚಾರಿತ್ರಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಉದಾಹರಣೆಗಾಗಿ 'ಸಾಮನ' ಎಂಬ ಉತ್ಸವ, 'ಅಮಜ' ಎಂಬ ಅವಿವಾಹಿತ ಮಗಳ ಪರಿಕಲ್ಪನೆ ಮುಂತಾದವುಗಳು ಆ ಕಾಲ ಘಟ್ಟದಲ್ಲಿ ಹೆಚ್ಚು ಸ್ವತಂತ್ರವನ್ನು ಮಹಿಳೆಗೆ ನೀಡಿದ್ದವು. ಆರ್ಯರ ಆಗಮನದಿಂದಲೇ ಭಾರತದಲ್ಲಿ ಜಾತಿ ಸೃಷ್ಟಿಯಾಯಿತು ಎಂಬ ಸಿದ್ಧಾಂತಕ್ಕೆ ಲೇಖಕರು ಬಲಿಯಾದಂತಿದೆ. ಉಸರುವಳ್ಳಿಯಂತೆ ಬಣ್ಣ ಬದಲಾಯಿಸುವ ಜಾತಿ ಭಾರತದಲ್ಲಿ ಏಕೆ ಹೇಗೆ ಹುಟ್ಟಿಕೊಂಡಿತು ಎಂಬ ಬಗ್ಗೆ ಖಚಿತ ಸಿದ್ಧಾಂತಗಳಿಲ್ಲ. ಅಂಬೇಡ್ಕರ್ ಅಭಿಪ್ರಾಯ ಪಡುವಂತೆ ಜಾತಿ ಭಾರತದಲ್ಲಿ ಕೇವಲ ಜನಾಂಗೀಯ ವಿಷಯ ಅಲ್ಲ. ಅದು ಸಾಮಾಜಿಕ ವಿದ್ಯಮಾನವಾಗಿದೆ. ಮುಚ್ಚಿದ ಸಮೂಹವಾದ ಜಾತಿ, ಒಳಬಾಂಧವ್ಯ ವಿವಾಹಗಳನ್ನು ಮಾತ್ರ ಪೋಷಿಸಿದೆ. ಇಂದಿಗೂ ಭಾರತದಲ್ಲಿ ಜಾತಿ ಬೇರೆ ಬೇರೆ ಕಾರಣಕ್ಕಾಗಿ ಬೇಕಾಗಿದೆ. ಜಾತಿಯ ವಿಶ್ಲೇಷಣೆಗೆ ಭಿನ್ನ ಸಿದ್ಧಾಂತಗಳ ಅಗತ್ಯ ಇದೆ. ಲೇಖಕರು ಜಾತಿಯ ಉಗಮವನ್ನು ಕೇವಲ ಫರೆಯವರ ಜನಾಂಗೀಯ ಸಿದ್ಧಾಂತಕ್ಕೆ ಅರ್ಪಿಸುವುದು ಅನಗತ್ಯ ಎನಿಸುತ್ತದೆ. ಜಾತಿ ಈ ದೇಶದಲ್ಲಿ ಇತ್ತೀಚೆಗೆ ರಾಜಕೀಕರಣ ಹೊಂದಿದೆ. ಜಾತಿಯ ವಿಷಯದಲ್ಲಿ ಭಾರತೀಯರ 'ಅಂತರಂಗ' 'ಬಹಿರಂಗ' ಭಿನ್ನವಾಗಿವೆ. ಜಾತಿಯ ತಾಯಿಬೇರು ಒಳಬಾಂಧವ್ಯ ವಿವಾಹ. ಆದ್ದರಿಂದ ಬಸವಣ್ಣ, ರಾಜಾರಾಮ್ ಮೋಹನರಾಯ್ ಮುಂತಾದವರು ಈ ತತ್ತಿ ಒಡೆಯಲು ಯತ್ನಿಸಿದರು.

ಭಾರತದಲ್ಲಿ ಬ್ರಾಹ್ಮಣ್ಯದ ಪ್ರಭಾವವಿದ್ದ ಕಾಲದಲ್ಲಿ 'ಜ್ಞಾನ'ಕ್ಕೆ ಬೇಲಿ ಹಾಕಲಾಗಿತ್ತು. ಮಹಿಳೆ ಹಾಗೂ ದಲಿತರಿಗೆ ಅಲ್ಲಿ ಪ್ರವೇಶ ಇರಲಿಲ್ಲ. ಅಡಿಗೆ ಮನೆಗೆ ಬಂಧಿತಳಾದ ಮಹಿಳೆಗೆ ಪುರುಷ ಸಂತಾನ ಪಡೆಯಲು 'ನಿಯೋಗ' ಬಳಸಬಹುದಾಗಿತ್ತು. ಪ್ರಸ್ತಾವನೆಯಲ್ಲಿ ಈ ಅಂಶಗಳು ಸಮಯೋಚಿತ ನಿರೂಪಣೆಗೊಂಡಿವೆ. (ಪು.೪-೬). ಬೌದ್ಧ ಧರ್ಮ ಭಾರತದಲ್ಲಿ ನಾಶವಾಗುವುದಕ್ಕೆ ಬ್ರಾಹ್ಮಣರೆ ಕಾರಣ ಎಂಬ ಆಪಾದನೆ ಇದೆ. ಆದರೆ ಬೌದ್ಧ ಧರ್ಮದ ಬಿಕ್ಕುಗಳು ವಿಷಯ ಲೋಲುಪತೆ, ಮಾಟ-ಮಂತ್ರ-ತಂತ್ರಗಳಿಗೆ ಹೇಗೆ ಬಲಿಯಾದರು ಎಂಬುದನ್ನು ಲೇಖಕರು ವಿವರಿಸಿದ್ದಾರೆ. ಆದ್ದರಿಂದಲೇ ತವರಿನಲ್ಲಿ ಇದರ ಬೇರುಗಳು ಸಡಿಲಗೊಂಡ ವಿಶ್ಲೇಷಣೆ (ಪುಟ-೭) ಇದೆ. ಅಲ್ಲದೆ ಬೌದ್ಧ ಧರ್ಮ ಸಾಮಾಜಿಕ-ಬದುಕಿನೊಂದಿಗೆ ವಿಮುಖವಾದಾಗ, ವೈದಿಕ ಧರ್ಮ ಹೇಗೆ ತನ್ನ ಶಕ್ತಿಯನ್ನು ಬಲಪಡಿಸಿಕೊಂಡಿತು ಎಂಬುದನ್ನು ಚರಿತ್ರೆಯ ಹಿನ್ನೆಲೆಯಲ್ಲಿ ಕಾಣಬಹುದು. ಸ್ಮೃತಿಗಳು, ಮನು ಸಂಹಿತೆ ಮುಂತಾದವುಗಳು ಮಹಿಳೆಗೆ ಹೇಗೆ 'ಬಳೆ' ತೊಡಿಸಿದವು ಎಂಬ ಅಂಶ ಭಾರತದ ಇತಿಹಾಸದ ಮರುಚಿಂತನೆಗೆ ಅವಕಾಶ ಒದಗಿಸುತ್ತದೆ. ಖಾಸಗಿ ಆಸ್ತಿಯ ಒಡೆತನದ ಕಲ್ಪನೆ ರೂಪುಗೊಂಡಾಗ

ಮಹಿಳೆಯ ಮೇಲೆ 'ಸತಿ' ಪದ್ಧತಿಯನ್ನು ಹೇರಿ ಅವಳನ್ನು ನಿರಾಯುಧಳನ್ನಾಗಿ ಮಾಡಲಾಯಿತು ಎಂಬುದನ್ನು ಉದಾಹರಣೆ ಸಮೇತ ವಿವರಿಸಿದ್ದಾರೆ. (ಪುಟ. ೮). ಮಹಿಳೆಗೆ ಗೃಹದೇವತೆ ಎಂಬ ಪೊಳ್ಳು ಪ್ರತಿಷ್ಠೆಯನ್ನು ಅಂಟಿಸಲಾಯ್ತು. ಭಕ್ತಿಪಂಥ ಉದಯವಾದಾಗ ಅವಳಿಗೆ ಸ್ವಲ್ಪ ಉಸಿರಾಡುವ ಅವಕಾಶ ದೊರೆಯಿತು. ಜೊತೆಗೆ ಮರಾಠ ಸಾಹಿತ್ಯದ ಪ್ರಭಾವ ಕೂಡ ಮಹಿಳೆಯರ ಬದುಕಿನ ಮೇಲೆ ಉಂಟಾಯಿತು. ಒಟ್ಟಿಗೆ ಮಹಿಳೆಯರ ಬದುಕಿನಲ್ಲಿ ಸಾಮಾಜಿಕ ಬದಲಾವಣೆ ತರುವಲ್ಲಿ ವಚನ ಸಾಹಿತ್ಯ ಹಾಗೂ ಮರಾಠಿ ಸಾಹಿತ್ಯ ವಿಶಿಷ್ಟ ಪ್ರಭಾವ ಬೀರಿವೆ ಎಂದು ಲೇಖಕರು ಪ್ರತಿಪಾದಿಸಿದ್ದಾರೆ. (ಪುಟ.೧೬-೧೭). ಹಂತ ಹಂತವಾಗಿ ಮಹಿಳೆಯ ಬದುಕಿನಲ್ಲಿ ಉಂಟಾದ ಬದಲಾವಣೆಗಳ ವಿವರಣೆಯಲ್ಲಿ ವಸ್ತುನಿಷ್ಠತೆ ಇದೆ. ಇಪ್ಪತ್ತೊಂದನೇ ಶತಮಾನದಲ್ಲಿ ಮಹಿಳೆ ಮಾಧ್ಯಮಗಳಲ್ಲಿ ಹೇಗೆ ಗ್ರಾಹಕ ಸಂಸ್ಕೃತಿಗೆ ಬಲಿಯಾಗಿದ್ದಾಳೆಂಬುದನ್ನು ಪರಿಶೀಲಿಸಬಹುದಾಗಿತ್ತು. ಏಕೆಂದರೆ ಯಾಂತ್ರಿಕರಣ ಹೆಚ್ಚಿದಂತೆ ಶ್ರಮಿಕರು 'ಶ್ರಮ'ದಿಂದ ಬಿಡುಗಡೆಗೊಳ್ಳುತ್ತಾರೆ.

ವಿಶ್ವವಿದ್ಯಾಲಯಕ್ಕೆ ಡಾಕ್ಟರೇಟ್ ಪದವಿಗಾಗಿ ಅರ್ಪಿಸಿದ ಸಂಪ್ರಬಂಧ ಇದಾಗಿದೆ. ಈ ಪ್ರಬಂಧದ ವಿಶೇಷತೆ ಎಂದರೆ ಇಲ್ಲಿ ದೇಶಿ, ಶಿಷ್ಟ, ನ್ಯಾಯಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ ಮುಂತಾದ ಶಾಸ್ತ್ರಗಳನ್ನು ಆಕರವಾಗಿ ಬಳಸಲಾಗಿದೆ. ಹೀಗಾಗಿ ಎರವಲು ಪಡೆದ ಗೊಡ್ಡು ಸಿದ್ಧಾಂತಗಳಿಂದ ಈ ಪುಸ್ತಕ ಮುಕ್ತವಾಗಿದೆ ಹಾಗೂ ಸರಳವಾಗಿ ಓದಿಸಿಕೊಂಡು ಹೋಗುತ್ತದೆ.

ಅಂಬೇಡ್ಕರ್ ಅವರ ಜನನ, ಬಾಲ್ಯ, ಬಡತನ, ಶಿಕ್ಷಣ ಪಡೆಯುವಾಗಿನ ಯಾತನೆ ಮುಂತಾದವುಗಳೆಲ್ಲ ಎರಡನೆಯ ಅಧ್ಯಾಯದಲ್ಲಿ ವಿವರಣೆ ಪಡೆದಿವೆ. ಇವೆಲ್ಲಕ್ಕಿಂತ ಮಿಗಿಲಾಗಿ ಅವರು ಆರ್ಥಿಕ, ಸಾಮಾಜಿಕ, ಕಾನೂನು ರಾಜಕೀಯ ಹಾಗೂ ತತ್ವಶಾಸ್ತ್ರಗಳ ಚಿಂತಕರಾಗಿದ್ದರು. ಸದಾ ಸೂಟು-ಬೂಟುಗಳಲ್ಲಿ ಕಂಡ ಅವರನ್ನು ಶ್ರೀಮಂತ ಕುಟುಂಬದಿಂದ ಬಂದ ವ್ಯಕ್ತಿ ಎಂಬ ಗ್ರಹಿಕೆ ಯಾರಿಗಾದರೂ ಉಂಟಾಗಬಹುದು. ಆದರೆ ಹದಿಮೂರು ಮಕ್ಕಳನ್ನು ಪಡೆದ ಅವರ ತಂದೆ ಸೇನೆಯಲ್ಲಿ ಸಣ್ಣ ನೌಕರನಾಗಿದ್ದ. ಮೇಲ್ಜಾತಿಯಿಂದ ಬಂದ ಗಾಂಧೀಜಿ ಸರಳ ಉಡಿಗೆ ತೊಟ್ಟರೆ, ತಳಜಾತಿಯಿಂದ ಬಂದ ಅಂಬೇಡ್ಕರ್ ವೈಭವದ ಉಡಿಗೆ ತೊಟ್ಟರು. ಮೇಲ್ಜಾತಿಯಿಂದ ಬಂದ ಬೇಂದ್ರೆ 'ದೇಶಿ' ಭಾಷೆ ಬಳಸಿದರೆ, ಕುವೆಂಪು ಸಂಸ್ಕೃತ-ಬೂಯಿಷ್ಠ ಭಾಷೆ ಬಳಸಿದರು. ಮಾನವನ ಬದುಕಿನ ಈ ಅನುಕರಣೆಗಳಿಗೆ ಹೊಸ ಅರ್ಥ ಹೇಳಬಹುದು? ಬ್ರಾಹ್ಮಣೀಕರಣ ಹಾಗೂ ಶೂದ್ರೀಕರಣ ಪ್ರಕ್ರಿಯೆಗಳು ಭಾರತದಲ್ಲಿ ನಿರಂತರವಾಗಿ ಜರುಗುತ್ತಲೇ ಬಂದಿವೆ. ಸುಪ್ರೀಂ ಕೋರ್ಟ್ ಇತ್ತೀಚೆಗೆ ಪರಿಶಿಷ್ಟರನ್ನು ವಿವಾಹವಾದ ಮಾತ್ರಕ್ಕೆ ಮೀಸಲಾತಿ ಸೌಲಭ್ಯ ನೀಡಲು ಬರುವುದಿಲ್ಲ ಎಂಬ ತೀರ್ಪು ಸಾಮಾಜಿಕ ಚಲನೆಯ ಸಿದ್ಧಾಂತಕ್ಕೆ ಹೊಸ ಸುಳಿವು ನೀಡಿದೆ.

'ಬಂಜೆ ಬೇನೆಯನರಿಯಳು' ಎಂಬಂತೆ ಅಸ್ಪೃಶ್ಯತೆಯ ನೋವು ಅನುಭವಿಸಿದವರಿಗೆ ಮಾತ್ರಗೊತ್ತು. ಹಿಂದುತ್ವದ ನಾಲ್ಕು ವರ್ಣಗಳಲ್ಲಿ ಶೂದ್ರರು ಹಾಗೂ ಮಹಿಳೆಯರು ಪ್ರಮುಖ ಉತ್ಪಾದನೆಯ ಘಟಕ. ಆದರೆ ಹಿಂದುತ್ವದ ಸಾಮಾಜಿಕ ನಿರ್ಬಂಧನೆಗಳಿಂದ ಅವರು ಎಂದೂ ಒಂದು ಸಮುದಾಯವಾಗಿ ಕಾರ್ಯ ನಿರ್ವಹಿಸದಂತೆ ತಂತ್ರ ಮಾಡಲಾಗಿದೆ. ಭಾರತೀಯ ಸಮಾಜದಲ್ಲಿ

ಅಂಬೇಡ್ಕರ್ ಅವರ ಜನನ, ಬಾಲು, ಬಡತನ, ಶಿಕ್ಷಣ ಪಡೆಯುವಾಗಿನ ಯಾತನೆ ಮುಂತಾದವುಗಳೆಲ್ಲ ಎರಡನೆಯ ಅಧ್ಯಾಯದಲ್ಲಿ ವಿವರಣೆ ಪಡೆದಿವೆ. ಇವೆಲ್ಲಕ್ಕಿಂತ ಮಿಗಿಲಾಗಿ ಅವರು ಆರ್ಥಿಕ, ಸಾಮಾಜಿಕ, ಕಾನೂನು ರಾಜಕೀಯ ಹಾಗೂ ತತ್ವಶಾಸ್ತ್ರಗಳ ಚಿಂತಕರಾಗಿದ್ದರು. ಸದಾ ಸೂಟು-ಬೂಟುಗಳಲ್ಲಿ ಕಂಡ ಅವರನ್ನು ಶ್ರೀಮಂತ ಕುಟುಂಬದಿಂದ ಬಂದ ವ್ಯಕ್ತಿ ಎಂಬ ಗ್ರಹಿಕೆ ಯಾರಿಗಾದರೂ ಉಂಟಾಗಬಹುದು. ಆದರೆ ಹದಿಮೂರು ಮಕ್ಕಳನ್ನು ಪಡೆದ ಅವರ ತಂದೆ ಸೇನೆಯಲ್ಲಿ ಸಣ್ಣ ನೌಕರನಾಗಿದ್ದ. ಮೇಲ್ಜಾತಿಯಿಂದ ಬಂದ ಗಾಂಧೀಜಿ ಸರಳ ಉಡಿಗೆ ತೊಟ್ಟರೆ, ತಳಜಾತಿಯಿಂದ ಬಂದ ಅಂಬೇಡ್ಕರ್ ವೈಭವದ ಉಡಿಗೆ ತೊಟ್ಟರು.

ಜನನದಿಂದಲೇ ಜಾತಿ-ಅಂಟಿಕೊಳ್ಳುವುದರಿಂದ ಇಲ್ಲಿ "ಶ್ರಮವನ್ನು ವಿಭಜಿಸದೇ ಶ್ರಮಿಕರನ್ನು ವಿಭಜಿಸಲಾಗಿದೆ" (ಪುಟ.೪೬) ಇದರಿಂದ ಈ ದೇಶದಲ್ಲಿ ಒಬ್ಬ ವ್ಯಕ್ತಿಯ ಪ್ರತಿಭೆಯನ್ನು ಜಾತಿಯ ನೆಲೆದಾಟಿ ನೋಡುವುದಾಗಲಿಲ್ಲ. ಸಹಭೋಜನದಿಂದ ಜಾತಿಯ ನಿರ್ಮೂಲನೆ ಸಾಧ್ಯವಿಲ್ಲ ಎಂದು ಅಂಬೇಡ್ಕರ್ ಬಲವಾಗಿ ನಂಬಿದ್ದರು (ಪುಟ. ೪೬_ ಆರ್ಥಿಕ, ರಾಜಕೀಯ ಅಂತಸ್ತು ಹೊಂದಿದ ಪರಿಶಿಷ್ಟರೊಂದಿಗೆ ಮೇಲ್ಜಾತಿಯವರು ಊಟ ಮಾಡಬಹುದು. ಇದು ತಾತ್ಕಾಲಿಕ ಅವಕಾಶವಾದಿ ತಂತ್ರ. ಆದ್ದರಿಂದ ಅಂತರ್ಜಾತಿ ವಿವಾಹಗಳು ಜರುಗಬೇಕೆಂಬುದು ಅಂಬೇಡ್ಕರ್ ವಿಚಾರವಾಗಿತ್ತು. ಈ ನೆಲೆಯಲ್ಲಿ ಅಂಬೇಡ್ಕರ್

ಮಹಾತ್ಮಾ ಗಾಂಧೀಜಿ ಹಾಗೂ ಇತರ ಹೋರಾಟಗಾರರು ಮಹಿಳೆಯನ್ನು ಸ್ವಾತಂತ್ರ ಚಳುವಳಿಗೆ ಧುಮುಕಲು ಪ್ರೇರಣೆ ನೀಡಿದರು. 'ಬಳೆ' ತೊಟ್ಟ ಮಹಿಳೆ ಸ್ವಾತಂತ್ರದ 'ಕಂಕಣ' ಹೇಗೆ ಕಟ್ಟಿಕೊಂಡಳೆಂಬುದನ್ನು ಹಲವು ಉದಾಹರಣೆಗಳ ಮೂಲಕ ಲೇಖಕರು ವಿವರಿಸಿದ್ದಾರೆ. ಗಾಂಧೀಜಿಯವರು ಸ್ವಾತಂತ್ರ ಚಳುವಳಿ ಪ್ರಾರಂಭಿಸುವ ಪೂರ್ವದಲ್ಲಿಯೇ ೧೮೮೧ ರಲ್ಲಿ ರವೀಂದ್ರನಾಥ ಟ್ಯಾಗೋರ ಅವರ ಸಹೋದರಿ ಚಳುವಳಿಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದಳು. (ಪುಟ. ೭೩). ತೊತ್ತಾಗಿ ಇರಬೇಕಾದ ಮಹಿಳೆ ಸಾರ್ವಜನಿಕ ರಂಗದಲ್ಲಿ ಪ್ರವೇಶ ಮಾಡಿದ್ದನ್ನು ಕಾಣಬಹುದು. "ಸಾಮಾಜಿಕ ಪ್ರಭುತ್ವ" ಭಾರತದಲ್ಲಿ ಇರಬೇಕೆಂಬುದು ಅಂಬೇಡ್ಕರ್ ಅವರ ಕನಸಾಗಿತ್ತು.

ಅವರು ಶ್ರೇಷ್ಠ ಸಾಮಾಜಿಕ ಚಿಂತಕರಾಗಿದ್ದಾರೆ. ಆದ್ದರಿಂದಲೇ ಜಾತಿಯ ಬಿಲ ರೂಪಿಸಿದ ಹಿಂದುತ್ವವನ್ನು ಅನುಸರಿಸುವುದಕ್ಕಿಂತ ಕೈ ಬಿಡುವುದೇ ಲೇಸು ಎಂದು ಅವರು ತಮ್ಮ ಬದುಕಿನ ಕೊನೆ ಕೊನೆಗೆ ಮತಾಂತರದ ನಿರ್ಣಯಕ್ಕೆ ಬಂದರು. ಕಾರ್ಲ್‌ಮಾರ್ಕ್ಸ್‌ರವರ ಸಮತಾವಾದಕ್ಕೆ ಸಮಾಜವಾದ ಮೇಲು ಎಂದು ನಂಬಿದ್ದರು ಹಾಗೂ ಹಿಂದುತ್ವದಿಂದ ಮುಕ್ತಿ ಪಡೆಯಲು 'ಮತಾಂತರ' ಒಂದೇ ದಾರಿ ಎಂಬ ನಿರ್ಣಯಕ್ಕೆ ಬಂದರು. ಇಲ್ಲಿ 'ಮಹದ' ನಗರದ ಘಟನೆ ಅಂಬೇಡ್ಕರ್‌ರವರ ಮೇಲೆ ವಿಶೇಷ ಪರಿಣಾಮ ಬೀರಿದವು. ಪು ೪೦-೪೮ ರಲ್ಲಿ ಈ ಅಂಶಗಳು ವಸ್ತುನಿಷ್ಠ ವಿವರಣೆ ಪಡೆದಿವೆ.

'ಭಾರತದ ರೂಪಾಯಿಯ ಸಮಸ್ಯೆ', 'ಬ್ರಿಟಿಷ್ ಪ್ರಾಂತೀಯ ಆರ್ಥಿಕ-ವಿಕಾಸ' ಹಾಗೂ ಮಹಾರಾಷ್ಟ್ರದಲ್ಲಿ ಜಾರಿಯಲ್ಲಿದ್ದ 'ಮಹರ್ ವತನ್' ಮುಂತಾದವುಗಳೆಲ್ಲ ೭೫ ವರ್ಷದ ಹಳೆಯ ಚಿಂತನೆಗಳಾಗಿವೆ. ಆದರೆ ಅವರು ಭಾರತದ ನಿರುದ್ಯೋಗದ ಬಗ್ಗೆ ಎತ್ತಿದ ಅಂಶಗಳು ಇಂದಿಗೂ ಪ್ರಸ್ತುತವಿದೆ. ಆದ್ದರಿಂದ ಎರಡನೇ ಅಧ್ಯಾಯದಲ್ಲಿ ಅಂಬೇಡ್ಕರ್ ಅವರ ವಿಚಾರ ಧಾರೆಯ ಮರುಚಿಂತನೆ ಅಗತ್ಯ ಎಂದು ಲೇಖಕರು ಪ್ರತಿಪಾದಿಸಿದ್ದಾರೆ.

ಭಾರತೀಯ ಮಹಿಳೆಯ ಏಳು ಬೀಳುಗಳ ನಿರೂಪಣೆ ಮೂರನೆಯ ಅಧ್ಯಾಯದಲ್ಲಿದೆ. ಅವಳಿಗೆ ಒದಗಿಸಿದ ರಕ್ಷಣಾತ್ಮಕ ಹಾಗೂ ಪೋಷಣಾತ್ಮಕ ಅಂಶಗಳ ವಿವರಣೆ ಇಲ್ಲಿ ಕಾಣಬಹುದು. ಆದರೂ ಹಲವು ಶತಮಾನಗಳಿಂದ ಮಹಿಳಾ ಶೋಷಣೆ ಭಿನ್ನ ರೂಪದಲ್ಲಿ ಇಂದಿಗೂ ಜರುಗುತ್ತಲೆ ಇದೆ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಕ್ರೈಸ್ತ ಸಂಘಟನೆಗಳ ಪಾತ್ರ ಅಪೂರ್ವವಾದುದ್ದು. ಭಾರತದಲ್ಲಿ ಹತ್ತೊಂಬತ್ತನೇ ಶತಮಾನದಿಂದ ಮಹಿಳಾ ಶಿಕ್ಷಣದ ಬಗ್ಗೆ ಚಿಂತನೆ ಪ್ರಾರಂಭವಾಯಿತು. ಹಿಂದೂ ನಂಬಿಕೆಯಲ್ಲಿ ಗಂಡು ಶಿಶುವಿನ ಜನನಕ್ಕೆ ಪ್ರಾಧ್ಯಾನತೆ ಇದೆ. ಅಂತಹ ಪ್ರಾರ್ಥನೆಗಳೂ ಇವೆ. ಈ ಅಧ್ಯಾಯದಲ್ಲಿ ಅಂತಹ ಆಚರಣೆಗಳ ಉದಾಹರಣೆ ಕೊಡಬಹುದಿತ್ತು.

ಮಹಾತ್ಮಾ ಗಾಂಧೀಜಿ ಹಾಗೂ ಇತರ ಹೋರಾಟಗಾರರು ಮಹಿಳೆಯನ್ನು ಸ್ವಾತಂತ್ರ್ಯ ಚಳುವಳಿಗೆ ಧುಮುಕಲು ಪ್ರೇರಣೆ ನೀಡಿದರು. 'ಬಳೆ' ತೊಟ್ಟ ಮಹಿಳೆ ಸ್ವಾತಂತ್ರ್ಯದ 'ಕಂಕಣ' ಹೇಗೆ ಕಟ್ಟಿಕೊಂಡಾಳೆಂಬುದನ್ನು ಹಲವು ಉದಾಹರಣೆಗಳ ಮೂಲಕ ಲೇಖಕರು ವಿವರಿಸಿದ್ದಾರೆ. ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿ ಪ್ರಾರಂಭಿಸುವ ಪೂರ್ವದಲ್ಲಿಯೇ ೧೮೮೧ ರಲ್ಲಿ ರವೀಂದ್ರನಾಥ ಟ್ಯಾಗೋರ ಅವರ ಸಹೋದರಿ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಳು. (ಪುಟ. ೭೩). ತೊತ್ತಾಗಿ ಇರಬೇಕಾದ ಮಹಿಳೆ ಸಾರ್ವಜನಿಕ ರಂಗದಲ್ಲಿ ಪ್ರವೇಶ ಮಾಡಿದ್ದನ್ನು ಕಾಣಬಹುದು. ಭಾರತದ ವಿವಿಧ ಪ್ರದೇಶಗಳಲ್ಲಿ ಮಹಿಳೆ ಸಾರ್ವಜನಿಕ ಜೀವನದಲ್ಲಿ ಪ್ರವೇಶ ಮಾಡಿದ್ದನ್ನು (ಪುಟ.೭೪-೮೧) ನಿರೂಪಿಸಲಾಗಿದೆ. "ಸಾಮಾಜಿಕ ಪ್ರಭುತ್ವ" ಭಾರತದಲ್ಲಿ ಇರಬೇಕೆಂಬುದು ಅಂಬೇಡ್ಕರ್ ಅವರ ಕನಸಾಗಿತ್ತು. ಭಾರತದಲ್ಲಿ ಧರ್ಮ, ಮತ, ಜಾತಿ, ಕರ್ಮ ಮುಂತಾದವುಗಳಿಗೆ ಸಾಂದರ್ಭಿಕ ಅರ್ಥ ಹೇಳಲಾಗುತ್ತದೆ. ಇಲ್ಲಿ ಪ್ರಶ್ನೆ ಮಾಡಬಾರದ ಕೆಲವು ಸಂಗತಿಗಳನ್ನು ಪುರೋಹಿತಶಾಹಿ ಹುಟ್ಟು ಹಾಕಿದೆ. ಆದ್ದರಿಂದ ಇಲ್ಲಿ ಹಿಂದೂ ಧರ್ಮದ ವ್ಯಾಖ್ಯಾನ ಕಠಿಣವಾಗಿದೆ. ಕರ್ಮಸಿದ್ಧಾಂತ, ಆತ್ಮದ ಅಮರತ್ವ ಹಾಗೂ ಮನಜನ್ಮದಲ್ಲಿ ನಂಬಿಕೆ ಇಟ್ಟವರನ್ನು ಹಿಂದುಗಳೆಂದು ಕರೆಯಬಹುದು. ಅಲ್ಲದೆ

...ಂದುತ್ವ ಸಿದ್ಧಾಂತ ಹೊಂದಿದೆ. ದಲಿತ ಮಹಿಳೆಯ ಮೇಲೆ ದೇವದಾಸಿ ಪದ್ಧತಿಯನ್ನು ಧರ್ಮದ ಹೆಸರಿನಲ್ಲಿ ಹೇರಲಾಗಿದೆ. ಬಹುಶಃ ಬಡತನ ಹಾಗೂ ನಿರಕ್ಷರತೆ ಇದಕ್ಕೆ ಮುಖ್ಯ ಕಾರಣ. ಆದ್ದರಿಂದ ಶಿಕ್ಷಣ, ಸಂಘಟನೆ ಹಾಗೂ ಹೋರಾಟ ಇವು ದಲಿತರ ಆಯುಧಗಳಾಗಬೇಕೆಂದು ಲೇಖಕರು ಇಲ್ಲಿ ಉದಾಹರಣೆ ಸಮೇತ ವಿವರಿಸಿದ್ದಾರೆ.

ನಾಲ್ಕನೇ ಅಧ್ಯಾಯದಲ್ಲಿ ಮಹಿಳಾ ವಿಮೋಚನೆಯ ಹಂತಗಳನ್ನು ಗುರುತಿಸಲಾಗಿದೆ. "ಮೂಕ-ಹಕ್ಕಿ"ಯಂತೆ ಅವಳು ಬದುಕನ್ನು ಸ್ವೀಕರಿಸಿದ ರೀತಿಯನ್ನು ಇಲ್ಲಿ ವರ್ಣಿಸಿದ್ದಾರೆ. ಪಿ. ಥಾಮಸ್, ಎ.ಎಸ್ ಅಲ್ಟೇಕರ್ ಮುಂತಾದವರ ಬರವಣಿಗೆಗಳನ್ನು ಇಲ್ಲಿ ಅವಲಂಬಿಸಲಾಗಿದೆ. ಭಾರತದ ಸಾಮಾಜಿಕ-ಸಂಘಟನೆ ರೂಪಗೊಂಡ ಹಂತಗಳನ್ನು ಇತಿಹಾಸ ಹಾಗೂ ಸಮಾಜಶಾಸ್ತ್ರಗಳ ಹಿನ್ನೆಲೆಯಲ್ಲಿ ವಿವರಿಸುವ ಯತ್ನ ಲೇಖಕರು ಮಾಡಿದ್ದಾರೆ. "ಇಂದಿನ ಸಮಾಜಶಾಸ್ತ್ರ ನಾಳಿನ ಇತಿಹಾಸವಾಗುತ್ತದೆ" ಎಂಬ ನಂಬಿಕೆಯೊಂದು ಇದೆ. ಆದರೆ ಭಾರತದ ಇತಿಹಾಸ ಏಕಮಾರ್ಗೀಯವಾಗಿದೆ. ಇಂದಿಗೂ ಈ ದೇಶ ಬಹುಸಂಸ್ಕೃತಿಯನ್ನು ಹೊಂದಿದೆ ಎಂದು ಹಿಂಜರಿಕೆಯಿಂದ ಒಪ್ಪುವ ...ಜ್ಞರಿದ್ದಾರೆ.

ಮಾನವನ ಅಲೆಮಾರಿ ಬದುಕು, ಕೃಷಿ ಸಂಸ್ಕೃತಿಯ ವಿಕಾಸ, ಯಂತ್ರಿಕರಣದ ಪ್ರಭಾವ ಮುಂತಾದ ಹಂತಗಳ ಬೆಳವಣಿಗೆಯನ್ನು ಸಮಾಜಶಾಸ್ತ್ರೀಯವಾಗಿ ಗುರುತಿಸಲಾಗಿದೆ. ಮನುಸಂಹಿತೆ ಕೊನೆಗೂ ಇಲ್ಲಿ ಮೇಲುಗೈ ಪಡೆದದ್ದನ್ನು ವಿವರಿಸಲಾಗಿದೆ. ಮುಕ್ತವಾಗಿದ್ದ ಸಮಾಜ ಮುಚ್ಚಿದ ಸಮೂಹವಾಗಿ ರೂಪಗೊಂಡಿತು. ಜಾತಿ ಸೃಷ್ಟಿಯಾಯಿತು. ಪುರೋಹಿತಶಾಹಿಯ ಪ್ರಾಬಲ್ಯ ಹೆಚ್ಚಿತು. ಇವೆಲ್ಲ ಅಂಶಗಳನ್ನು ವಸ್ತುನಿಷ್ಠವಾಗಿ (ಪುಟ. ೧೦೧-೧೦೫) ದಾಖಲಿಸಲಾಗಿದೆ. "ಪುರೋಹಿತಶಾಹಿಯ ವ್ಯವಸ್ಥೆಯನ್ನು ಪ್ರಶ್ನಿಸುವಲ್ಲಿ ಬೌದ್ಧ ಧರ್ಮ ಮಾತ್ರ ಸಫಲವಾಯಿತೇ ವಿನಃ ಆಚರಣೆಯಲ್ಲಿದ್ದ ಕೊಳಕು ಪದ್ಧತಿಯನ್ನು ತೊಲಗಿಸುವಲ್ಲಿ ವಿಫಲವಾಯಿತು". (ಪುಟ ೧೦೨) ಎಂದು ಲೇಖಕರು ಶರಾ ಬರೆದಿದ್ದಾರೆ. ಆದರೆ ಒಂದು ಕಾಲಕ್ಕೆ ತನ್ನ ಚಿಂತನೆಯ ಮೂಲಕವೇ 'ಪ್ರಭುತ್ವ'ದ ಆಶ್ರಯ ಪಡೆದ ಈ ಧರ್ಮ ಭಾರತದಲ್ಲಿ ವ್ಯಾಪಕವಾಗಿ ಹರಡಿರುವುದನ್ನು ಐತಿಹಾಸಿಕವಾಗಿ ಕಾಣಬಹುದು. ಈ ಹಿನ್ನೆಲೆಯಲ್ಲಿಯೇ ಅಂಬೇಡ್ಕರ್ ಒಂದು ರಾಜಕೀಯ ಪಕ್ಷ ಸ್ಥಾಪಿಸಿದ ಯತ್ನ, ದಲಿತರಿಗಾಗಿ ದ್ವಿಪೌರತ್ವ ಕೇಳಿದ ಉದಾಹರಣೆಗಳ ಮೂಲಕ ಪ್ರಭುತ್ವ ಹಾಗೂ ಸಾಮಾಜಿಕ ಬದಲಾವಣೆಗೆ ಇರುವ ಸಂಬಂಧ ಗುರುತಿಸಬಹುದಾಗಿತ್ತು. ಅಲ್ಲದೆ "ಮನು ಸಂಹಿತೆ" ಹಿಂದೂ ಧರ್ಮದಲ್ಲಿ ಪ್ರಾಬಲ್ಯ ಪಡೆಯಿತು ಎಂದು ಹೇಳುವಾಗ ಭಾರತದಲ್ಲಿ ಮನು ಎಂಬ ಚಿಂತಕನ ಬಗ್ಗೆ ಇರುವ ಸಂಶಯಗಳನ್ನು ದಾಖಲಿಸಬಹುದಾಗಿತ್ತು. ಏಕೆಂದರೆ ಮನುವಿನ (ಕೃತ್ರಿಮ) ಹೆಸರಿನಲ್ಲಿ ಪುರೋಹಿತಶಾಹಿ ಮನಸ್ಸುಗಳು ಕಾಲಕಾಲಕ್ಕೆ ಬ್ರಾಹ್ಮಣೇತರರ ಮೇಲೆ ಜೀವ ವಿರೋಧಿ ನಿಯಮ ಹೇರಿದರು ಎಂಬ ವಾದವೂ ಇದೆ. ಭಾರತದ ಮಹಿಳೆಯರ ಸ್ಥಿತಿ ಚಿಂತಾಜನಕವಾಗಿತ್ತು ಎಂದು ಹೇಳುವಾಗ ಎಲ್ಲ ಮಹಿಳೆಯರನ್ನು ಇಲ್ಲಿ ಏಕರೂಪದಲ್ಲಿ ಗುರುತಿಸುವಂತಿಲ್ಲ. ...ಲ, ನೈತಿಕತೆ, ಪಾತಿವ್ರತ್ಯಗಳ ಹೆಸರಿನಲ್ಲಿ 'ಸತಿ' ಪದ್ಧತಿಯನ್ನು ಮೇಲ್ಜಾತಿ ಮಹಿಳೆಯರ ಮೇಲೆ ಹೇರಲಾಗಿದೆ. ...ಸ್ತಿಯ ಒಡೆತನ ಪಡೆಯುವ ಪುರುಷನ ಸ್ವಾರ್ಥ ಇಲ್ಲಿ

ಮಹಿಳಾ ಸಬಲೀಕರಣ ಇಂದು ಹೆಚ್ಚು ಚಲಾವಣೆಯಲ್ಲಿರುವ ಶಬ್ದ. ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಇಂತಹ ಅನೇಕ ಯೋಜನೆಗಳು ಕಾರ್ಯ ನಿರ್ವಹಿಸುತ್ತಿವೆ. ಇಂತಹ ಯೋಜನೆಗಳ ನಿರೂಪಣೆಗೆ ಡಾ॥ ಬಾಬಾಸಾಹೇಬ ಅಂಬೇಡ್ಕರ್‌ರವರು ಪೂರ್ವಸಿದ್ಧತೆಯ ಬುನಾದಿ ಹಾಕಿದ್ದರು. ಮಹಿಳೆಯ ಸಬಲೀಕರಣಕ್ಕೆ ಬೇಕಾಗುವ ಕಾನೂನಿನ ಪೋಷಣೆಯನ್ನು ಅಂಬೇಡ್ಕರ್ ಒದಗಿಸಿದ್ದರು. ಈ ಎಲ್ಲ ಅಂಶಗಳನ್ನು ಕೊನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಬಹುಸಂಸ್ಕೃತಿ ಹೊಂದಿದ ಎಲ್ಲ ಭಾರತೀಯ ಮಹಿಳೆಯರನ್ನು ಒಂದೇ ಕಾನೂನಿನ ಅಡಿಯಲ್ಲಿ ತರುವುದು ಸುಲಭ ಮಾತಾಗಿರಲಿಲ್ಲ. ಮಿತಾಕ್ಷರ ಹಾಗೂ ದಾಯಬಾಗ್ ಕಾನೂನು ಆಸ್ತಿ ವಿಭಜನೆಯ ಮೇಲೆ ಹೇಗೆ ಪರಿಣಾಮ ಬೀರಿವೆ ಎಂಬುದು ನ್ಯಾಯಲಯದ ಮೊರೆ ಹೋದವರಿಗೆ ಅರ್ಥವಾಗುತ್ತದೆ.

ಅಡಗಿದೆ ಎಂಬ ಒಳಪದರಿನ ಅಂಶಗಳನ್ನು ಇಲ್ಲಿ ದಾಖಲಿಸಬಹುದಾಗಿತ್ತು. ತಳಜಾತಿ, ವಿಧವಾ ಮಹಿಳೆ, ಉಡಿಕೆ-ಕೂಡಿಕೆಯ ಮೂಲಕ ದಾಂಪತ್ಯ ಬದುಕಿಗೆ ಮರು ಪ್ರವೇಶ ಮಾಡುವ ಅವಕಾಶ ಪಡೆದಿದ್ದಳು. ಏಕೆಂದರೆ ಎಂದೂ ಆಸ್ತಿ ಹೊಂದಲಾರದ ತಳಜಾತಿ ಮಹಿಳೆ ತನ್ನ ಬಡತನ ಮಾತ್ರ ಹಂಚಿಕೊಳ್ಳಬಹುದಿತ್ತು. 'ತೆರವು' (ವಧು ದಕ್ಷಣೆ) ಮಹಿಳೆಯ ಶ್ರಮಶಕ್ತಿಯ ಹಿನ್ನೆಲೆಯಲ್ಲಿಯೇ ರೂಪಗೊಂಡಿತ್ತು. ಗುಲಾಮರನ್ನು ಕೊಂಡಂತೆ ಮಹಿಳೆಯರನ್ನು ಕೊಂಡುಕೊಂಡಂತೆ, ಅಲ್ಲದೇ ಇಂದಿನ ವರದಕ್ಷಿಣೆ ವೈದಿಕರ ಕೊಡುಗೆ ಎಂಬುದನ್ನು ಸಾಂದರ್ಭಿಕವಾಗಿ ಈ ಅಧ್ಯಾಯದಲ್ಲಿ ಚರ್ಚಿಸಬಹುದಿತ್ತು. ಹಿಂದುತ್ವಕ್ಕೆ ಹೆಬ್ಬಾವಿನ ಗುಣ ಇದೆ. ಅವಿಭಕ್ತ ಕುಟುಂಬದಲ್ಲಿ ಮಹಿಳೆ ಹೆಚ್ಚು ಶೋಷಣೆಗೆ ಒಳಪಡುತ್ತಾಳೆ. ಇದು ಕೃಷಿ ಪ್ರಧಾನ ಸಮಾಜದ ಲಕ್ಷಣವೂ ಕೂಡಾ ಆಗಿದೆ. ಅಂಬೇಡ್ಕರ್ ಕೇವಲ ದಲಿತ ನಾಯಕನಾಗಿದ್ದರೆ ಮೇಲ್ಜಾತಿಯ ಮಹಿಳೆಯ ಬಗ್ಗೆ ಆಲೋಚಿಸುವ ಅಗತ್ಯ ಇರಲಿಲ್ಲ. ಈ ಎಲ್ಲ ಅಂಶಗಳನ್ನು ಲೇಖಕರು (ಪುಟ.೧೧೦-೧೧೨) ವೈಜ್ಞಾನಿಕವಾಗಿ ವಿವರಿಸಿದ್ದಾರೆ. ಬ್ರಹ್ಮಸಮಾಜ, ಆರ್ಯ ಸಮಾಜ, ಪ್ರಾರ್ಥನಾ ಸಮಾಜ ಭಾರತದ ಮಹಿಳೆಯನ್ನು ಬಂಧಮುಕ್ತ ಮಾಡಲು ಹೇಗೆ ಯತ್ನಿಸಿದವು. ಶೂದ್ರ ಮಹಿಳೆಗೆ ಇವು ಹೆಚ್ಚು ಸಂಬಂಧಿಸಿದ ಅಂಶಗಳಾಗಿರಲಿಲ್ಲ. ಆದರೂ ಅಂಬೇಡ್ಕರ್‌ರವರು ಸಮಗ್ರ ಭಾರತದ ಮಹಿಳೆಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಹಿಳಾ ವಿಮೋಚನೆಗೆ ಹೇಗೆ ಯತ್ನಿಸಿದ್ದಾರೆಂಬುದನ್ನು ಲೇಖಕರು ಇಲ್ಲಿ ವೈಚಾರಿಕ ನಿರೂಪಣೆ ನೀಡಿದ್ದಾರೆ.

ಮಹಿಳಾ ಸಬಲೀಕರಣ ಇಂದು ಹೆಚ್ಚು ಚಲಾವಣೆಯಲ್ಲಿರುವ ಶಬ್ದ. ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಇಂತಹ ಅನೇಕ ಯೋಜನೆಗಳು ಕಾರ್ಯ ನಿರ್ವಹಿಸುತ್ತಿವೆ. ಇಂತಹ ಯೋಜನೆಗಳ ನಿರೂಪಣೆಗೆ ಡಾ॥ ಬಾಬಾಸಾಹೇಬ ಅಂಬೇಡ್ಕರ್‌ರವರು ಪೂರ್ವ ಸಿದ್ಧತೆಯ ಬುನಾದಿ ಹಾಕಿದ್ದರು. ಮಹಿಳೆಯ ಸಬಲೀಕರಣಕ್ಕೆ ಬೇಕಾಗುವ ಕಾನೂನಿನ ಪೋಷಣೆಯನ್ನು ಅಂಬೇಡ್ಕರ್ ಒದಗಿಸಿದ್ದರು. ಈ ಎಲ್ಲ ಅಂಶಗಳನ್ನು ಕೊನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಬಹುಸಂಸ್ಕೃತಿ ಹೊಂದಿದ ಎಲ್ಲ ಭಾರತೀಯ ಮಹಿಳೆಯರನ್ನು ಒಂದೇ ಕಾನೂನಿನ ಅಡಿಯಲ್ಲಿ ತರುವುದು ಸುಲಭ ಮಾತಾಗಿರಲಿಲ್ಲ. ಮಿತಾಕ್ಷರ ಹಾಗೂ ದಾಯಬಾಗ್ ಕಾನೂನು ಆಸ್ತಿ ವಿಭಜನೆಯ ಮೇಲೆ ಹೇಗೆ ಪರಿಣಾಮ ಬೀರಿವೆ ಎಂಬುದು ನ್ಯಾಯಾಲಯದ ಮೊರೆ ಹೋದವರಿಗೆ ಅರ್ಥವಾಗುತ್ತದೆ. ವಿಧವೆ ಯಾದ ಮಹಿಳೆ ಧರ್ಮದ ಹೆಸರಿನಲ್ಲಿ ಸತಿ ಹೋಗು ವುದು, ಹೆಣ್ಣು ಆಸ್ತಿ ಒಡೆತನದಿಂದ ವಂಚಿತವಾಗುವುದು, ವಿಧವೆ ಅಪಶಕುನದ ಕಿರೀಟ ಹೊತ್ತು ನರಕಯಾತನೆ ಅನುಭವಿಸುವುದು, ಮೇಲು ವರ್ಗದ ಮಹಿಳೆಯರಲ್ಲಿ ಸಾಮಾನ್ಯ. ಈ ಎಲ್ಲ ಆತಂಕಗಳಿಂದ ಮುಕ್ತವಾಗಲು ವಿವಾಹ ವಿಚ್ಛೇದನೆಗೆ ಅವಕಾಶ ಮುಂತಾದವುಗಳನ್ನು ಮಹಿಳೆಗೆ ನೀಡಲಾಗಿತ್ತು. ಕಿತ್ತೂರು ಚೆನ್ನಮ್ಮ ಜಾನ್ಸಿರಾಣಿ ಲಕ್ಷ್ಮಿಬಾಯಿ ಮುಂತಾದವರ ಹೋರಾಟ ಆಸ್ತಿಗೆ ಸಂಬಂಧಿಸಿದಂತೆ ಜರುಗಿವೆ. ಈ ಪುಸ್ತಕದಲ್ಲಿ ಶಾ ಬಾನು ಪ್ರಕರಣವನ್ನು ಸಾಂದರ್ಭಿಕವಾಗಿ ಲೇಖಕರು ವಿವರಿಸಿ ದ್ದಾರೆ. ಆದರೆ ಇಂದಿಗೂ ಬಹುತೇಕ ಪರಿಶಿಷ್ಟರು ಹಾಗೂ ಮುಸ್ಲಿಂರು ಒಂದು ರಾಜಕೀಯ ಪಕ್ಷಕ್ಕೆ ಹೇಗೆ 'ಮತ ಬ್ಯಾಂಕ್' ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದನ್ನು ಚರ್ಚಿಸಬಹುದಾಗಿತ್ತು. ಆದರೆ ಲೇಖಕರ ಸರ್ಕಾರಿ ಸೇವೆ ಇಂತಹ ಅಂಶಗಳನ್ನು ಚರ್ಚಿಸಲು ಅಡ್ಡಿ ಉಂಟುಮಾಡಿರಬಹುದು.

ಈ ಪುಸ್ತಕದ ವಿಶೇಷತೆಯನ್ನು ಎರಡು ಅಂಶಗಳಲ್ಲಿ ಗುರುತಿಸಬಹುದು. ಬಸವಣ್ಣ, ಪುರಂದರದಾಸ, ಕನಕದಾಸ, ಹೇಮರೆಡ್ಡಿ ಮಲ್ಲಮ್ಮ, ಸಂಗೊಳ್ಳಿ ರಾಯಣ್ಣ, ಕಿತ್ತೂರು ಚೆನ್ನಮ್ಮ, ಭಗೀರಥ, ಅಂಬೇಡ್ಕರ್ ಮುಂತಾದವರು ತಮ್ಮ ಕ್ರಿಯೆಗಳ ಮೂಲಕ ಸಾರ್ವತ್ರಿಕವಾಗಿ ಬೇಕಾದವರು. ಇತ್ತೀಚೆಗೆ ಜಾತಿ ವಲಯಕ್ಕೆ ಈ ಮಹಾಪುರುಷರನ್ನು ಕಟ್ಟಿ ಹಾಕಲಾಗುತ್ತಿದೆ. ಡಾ॥ ಬಾಬುರಾವ್ ಮುಡಬಿಯವರು ಈ ಪುಸ್ತಕದ ಮೂಲಕ ಅಂಬೇಡ್ಕರ್ ಅವರನ್ನು ಮುಕ್ತ ಮಾಡಲು ಯತ್ನಿಸಿದ್ದಾರೆ. ಅಂಬೇಡ್ಕರ್, ಅವರ ಚಿಂತನೆ ಸಂವಿಧಾನ ರಚನೆಯ ಕಾಲಕ್ಕೆ ಮಾತ್ರ ಪ್ರಸ್ತುತವಾಗಿದ್ದವು. ಈಗ ಅವೆಲ್ಲ ಅನಗತ್ಯ ಎಂಬ ಕಲ್ಪನೆ ಬರಬಹುದು. ಆದರೆ ಭಾರತದ ಮಹಿಳೆಯರ ಸಮಸ್ಯೆಗಳು ಇಂದಿಗೂ ಜೀವಂತವಾಗಿವೆ.

ಈ ಪುಸ್ತಕಕ್ಕೆ ಅರ್ಥಪೂರ್ಣವಾದ ಮುನ್ನುಡಿ ಹಾಗೂ ಬೆನ್ನುಡಿಗಳಿವೆ. ಮುನ್ನುಡಿ ಬರೆದವರು ಸಾಹಿತ್ಯದ ವಿದ್ಯಾರ್ಥಿಯಾಗಿದ್ದರೂ ಮಹಿಳಾ ಸಮಸ್ಯೆಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಅಗತ್ಯಕ್ಕಿಂತ ಮುನ್ನುಡಿ ಹೆಚ್ಚಾಗಿದೆ ಎಂದರೂ ಈ ಪುಸ್ತಕದ ಮೌಲ್ಯ ಹೆಚ್ಚಿಸಿದೆ. ಈ ಪುಸ್ತಕದಲ್ಲಿ ಹಲವು ಉಪ ಅಧ್ಯಾಯಗಳಿವೆ. ಪರಿವಿಡಿಯಲ್ಲಿ ಅವುಗಳನ್ನು ದಾಖಲಿಸಿದ್ದರೆ ಓದುಗನಿಗೆ ಅನುಕೂಲವಾಗುತ್ತಿತ್ತು. ಅರ್ಥಪೂರ್ಣ ಮುಖಪುಟವಿದೆ. ಆದರೆ ಮುದ್ರಣ ದಲ್ಲಿ ಏಕರೂಪತೆ ಇಲ್ಲ. ಒಂದುನೂರಾ ಹತ್ತು ಪರಾಮ ರ್ಶನ ಗ್ರಂಥಗಳ ಪಟ್ಟಿ ಪುಸ್ತಕಕ್ಕೆ ಭಾರ ಎನ್ನಿಸುತ್ತದೆ. ಈ ಎಲ್ಲ ಸಾಮಾನ್ಯ ಅಂಶಗಳನ್ನು ದಾಟಿ ಕುಗ್ಗುತ್ತಲಿರುವ ವಿಚಾರ ಸಾಹಿತ್ಯಕ್ಕೆ ಈ ಪುಸ್ತಕ ವಿಶಿಷ್ಟ ಕೊಡುಗೆ ಆಗಿದೆ. □

ದಲಿತ ಪ್ರಜ್ಞೆ ಮತ್ತು ಕುಲ ಮೀಮಾಂಸೆ: ಕೆಲವು ಪ್ರಶ್ನೆಗಳು

ಜಿಜ್ಞಾಸೆ

ದಲಿತ ಅನ್ನೋ ಪರಿಕಲ್ಪನೆ 'ತೃತೀಯ ಪುರುಷ'ನಾಗಿರುತ್ತಲೇ 'ಸೆಕ್ಯುಲರ್-ಮಾಡ್ರನ್' ಎನ್ನೋ ಗ್ಯಾನವನ್ನು ನಿರಂತರವಾಗಿ ಸೆಣಸುತ್ತಲೇ ಬಂದಿದೆ. 'ಮೀಮಾಂಸೆ'ಯ ಪರಿಕಲ್ಪನೆಯನ್ನು ಕುರಿತದ್ದು. ದಲಿತ ಪ್ರಜ್ಞೆ ಎನ್ನೋದು ಆಧುನಿಕತೆಯನ್ನು ಸೈದ್ಧಾಂತೀಕರಿಸುವ ಪ್ರಕ್ರಿಯೆಯಲ್ಲಿ 'ಪ್ರತಿರೋಧ'ದ ಮೀಮಾಂಸೆಯಾಗಿ ನಿಲ್ಲುತ್ತದೆ. ಅಂದರೆ ಅದು ಕೇವಲ ರಾಜಕೀಯ ಭಿನ್ನತೆಯಾಗಿ ತಂತ್ರೋಪಾಯಗಳನಷ್ಟೇ ಬಿಂಬಿಸುತ್ತದೆ. ಅದು ವಿಶ್ವಾಸಾತ್ಮಕ ನೆಲೆಯಲ್ಲಿ ವಸಾಹತುಶಾಹಿ ಪ್ರತಿಭಟನೆ ಮತ್ತು ಸ್ವತಂತ್ರ ಭಾರತದಲ್ಲಿ ಪ್ರತಿಪಾದಿತವಾಗಿರುವ ಆಧುನಿಕತೆಯ ಮಿಥ್ಯಗಳಗೂ ಸವಾಲಾಗಿ ನಿಲ್ಲುತ್ತದೆ.

○ ಡೊಮಿನಿಕ್. ಡಿ

"ಒಂದು ಒಪ್ಪಿತ ಗ್ರಹೀತವನ್ನು ಎದುರಿಸಿ ನಿಲ್ಲಬೇಕಾದರೆ ಅದೊಂದು ಸಾಹಸವೇ ಸರಿ. ಯಾವುದನ್ನು ಮೌನವಾಗಿಸಲಾಗಿದೆಯೋ ಮತ್ತು ಮರೆಮಾಚಲಾಗಿದೆಯೋ ಅವನ್ನು ಗುರುತಿಸುವುದೆಂದರೆ ರೂಢಿಗತ ಅರ್ಥಗಳನ್ನು ಬದಲಾಯಿಸುವುದೇ ಆಗುತ್ತದೆ. ಹೀಗೆ ಮಾಡುವುದರ ಮೂಲಕವೇ ನೈತಿಕ ಹಾಗೂ ರಾಜಕೀಯ ಮೀಮಾಂಸೆಯ ಸಾಧ್ಯತೆಗಳನ್ನು ಅರಿಯಲು ಸಾಧ್ಯವಾಗುತ್ತದೆ." ಹೀಗೆಂದು ಹೇಳಿದವರು ಮೈಖಲ್ ಜೆ ಸಫೀರೋ ಎಂಬ ವಿದ್ವಾಂಸ.

ಹೀಗಿರುವಲ್ಲಿ ಈ ಲೇಖನವನ್ನು ಚರ್ಚಿಸುವ ಮುನ್ನವೇ ಕೆಲವು ಗ್ರಹೀತಗಳನ್ನು ಇಲ್ಲಿ ಗಮನಿಸುವುದು ಮುಖ್ಯ. ಮೊದಲನೆಯದನ್ನು ಪ್ರಶ್ನೆಗಳ ರೂಪದಲ್ಲಿ ಗಮನಿಸೋಣ. **"ದಲಿತ ಪ್ರಜ್ಞೆ ಮತ್ತು ಕುಲ ಮೀಮಾಂಸೆ"** ಎಂಬುದು ಇದೆಯೇ? ಅದಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಾಕಷ್ಟು ಸಾಹಿತ್ಯ ಇದ್ದು, ಅದು ಖಚಿತವಾಗಿ ದಲಿತ ಪ್ರಜ್ಞೆ ಮತ್ತು ಕುಲ ಮೀಮಾಂಸೆಯನ್ನು ನಿರೂಪಿಸುತ್ತದೆಯೇ? ಈ ಪ್ರಶ್ನೆಗಳಿಗೆ ನಿರ್ದಿಷ್ಟವಾಗಿ ಉತ್ತರ ಕೊಡುವುದು ಕಷ್ಟವಾಗುತ್ತದೆ. ಏಕೆಂದರೆ ನಮ್ಮೆದುರಿಗೆ ಇರುವ ಬರಹಗಳೆಂದರೆ ಕೇವಲ ಸಾಹಿತ್ಯ ಮತ್ತು ಸಾಮಾಜಿಕ ಸಮಸ್ಯೆಗಳ ವಿವರಗಳಿಗೆ ಮತ್ತು ವಿಶ್ಲೇಷಣೆಗಳಿಗೆ ಮಾತ್ರ ಸೀಮಿತವಾದುದು. ಆದರೂ ಈ ಪ್ರಬಂಧದ ಗ್ರಹೀತವೆಂದರೆ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಚರ್ಚೆಗಳಂತೂ ನಡೆದಿವೆ ಎಂಬುದನ್ನು ಗಮನಿಸಬೇಕಾಗುತ್ತದೆ. ಇಂಥ ಚರ್ಚೆಗಳಲ್ಲಿ ಅಡಗಿರುವ ಕುಲ ಮೀಮಾಂಸೆಯ ಅಂಶಗಳನ್ನು ಹೆಕ್ಕಿ ಅದರ ಮೂಲಕ ದಲಿತ ಪ್ರಜ್ಞೆಯನ್ನು ಭಿನ್ನವಾಗಿ ನಿರೂಪಿಸಲು ಸಾಧ್ಯವಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಅಂದರೆ ದಲಿತ ಬರಹಗಳಲ್ಲಿ ಕುಲ ಮೀಮಾಂಸೆಯು ಮೌನವಾಗಿ ಅಡಗಿತ್ತು. ಅದು ಪಬ್ಲಿಕ್ ವಲಯದಲ್ಲಿ ಅಷ್ಟಾಗಿ ಚರ್ಚೆಗೆ ಬಾರದಿರಲು ಕಾರಣ ದಲಿತ ಪ್ರಜ್ಞೆಯ ಸೆಕ್ಯುಲರ್ ನೆಲೆಗಳೇ ಆಗಿತ್ತು. ಆದ್ದರಿಂದ ಈ ಸೆಕ್ಯುಲರ್‌ನೊಳಗೆ ದಲಿತ ಅನ್ನೋದು ಸಮಸ್ಯಾತ್ಮಕವೇನೂ ಆಗಿರದೆ ಕುಲ ಮೀಮಾಂಸೆಯನ್ನು ಮೌನಿಯಾಗಿಸಿತ್ತು. ಇದಕ್ಕೆ ಭಾಗಶಃ ಕಾರಣ ಭಾರತೀಯ ಸಮಾಜದಲ್ಲಿ ಜಾತಿಯನ್ನು ಕುಲಮೀಮಾಂಸೆಯಾಗಿ ನೋಡದೆ ಕೇವಲ ಸಂಸ್ಕೃತ ಪರಂಪರೆಯ ವರ್ಣ ವ್ಯವಸ್ಥೆ ಮಾತ್ರ ಎಂದು ನೋಡಿದ್ದು ಹೌದು.

ಎರಡನೆಯದಾಗಿ, ಬಹುವಾಗಿ ಚರ್ಚೆಗೊಂಡಿರುವ "ದಲಿತ" ಅನ್ನೋ ಪರಿಕಲ್ಪನೆಯನ್ನು ಕುರಿತದ್ದು. ಪ್ರಸ್ತುತ ಸಂದರ್ಭದಲ್ಲಿ ಈ ಪರಿಕಲ್ಪನೆಯನ್ನು ಆಧುನಿಕತೆ, ವಿಜ್ಞಾನ ಮತ್ತು ತರ್ಕಕ್ಕೆ ಸಂಬಂಧಿಸಿದಂತೆ ಬಯ್ನರಿ/ವಿರೋಧ ಎಂಬಂತೆ ಪ್ರಯೋಗಿಸಿದಲ್ಲಿ, ಅದನ್ನು ನಿರ್ದಿಷ್ಟವಾಗಿ ವಿವರಿಸಲು ಸಾಧ್ಯವಾಗುವುದಿಲ್ಲವೇನೋ. ಹಾಗೆ ಮಾಡುವಾಗ ಆಧುನಿಕ ಭಾರತದ ಎರಡು ದೊಡ್ಡ ಸಂಗತಿಗಳಾದ **'ಸೆಕ್ಯುಲರಿಸಂ'** ಮತ್ತು **'ರಾಷ್ಟ್ರ'**ವನ್ನು ಗಮನಿಸಬೇಕಾಗುತ್ತದೆ. ಏಕೆಂದರೆ ಆಧುನಿಕತೆಯ ರಾಜಕೀಯ ಆಯಾಮಗಳು ರಾಷ್ಟ್ರೀಯ ಚಳುವಳಿಯಲ್ಲಿ ಬಂದಾಗ ದಲಿತ ರಾಜಕಾರಣ ಮೇಲಿನ ಆ ಎರಡು ಸಂಗತಿಗಳಿಗೆ ಪ್ರತಿರೋಧವನ್ನು ವ್ಯಕ್ತಪಡಿಸುತ್ತಲೇ ಅದನ್ನು ಸ್ವೀಕರಿಸುವ ದ್ವಂದ್ವದಲ್ಲಿ ನಿಲ್ಲುತ್ತದೆ. ಆದ್ದರಿಂದ ದಲಿತ ಅನ್ನೋ ಪರಿಕಲ್ಪನೆ **'ತೃತೀಯ ಪುರುಷ'**ನಾಗಿರುತ್ತಲೇ **'ಸೆಕ್ಯುಲರ್-ಮಾಡ್ರನ್'** ಎನ್ನೋ ಗ್ಯಾನವನ್ನು ನಿರಂತರವಾಗಿ ಸೆಣಸುತ್ತಲೇ ಬಂದಿದೆ. ಈ ಸೆಣಸಾ... ಆಧುನಿಕ ಎನ್ನುವ ಸಾರ್ವತ್ರಿಕ ಮೀಮಾಂಸಾ ಪರಿಕಲ್ಪನೆಗಳಿಗೆ ... ರೋಧ ಮತ್ತು ಸ್ವೀಕಾರವನ್ನು ಏಕಕಾಲದಲ್ಲೇ ವ್ಯಕ್ತಪಡಿಸುತ್ತಿರುತ್ತದೆ...

ಮೂರನೆಯದಾಗಿ, 'ಮೀಮಾಂಸೆ'ಯ ಪರಿಕಲ್ಪನೆಯನ್ನು ಕು...ತದ್ದು. ದಲಿತ ಪ್ರಜ್ಞೆ ಎನ್ನೋದು ಆಧುನಿಕತೆಯನ್ನು ಸೈದ್ಧಾಂತಿ...ರಿಸುವ ಪ್ರಕ್ರಿಯೆಯಲ್ಲಿ 'ಪ್ರತಿರೋಧ'ದ ಮೀಮಾಂಸೆಯಾಗಿ ನಿ...ತ್ತದೆ. ಅಂದರೆ ಅದು ಕೇವಲ ರಾಜಕೀಯ ಭಿನ್ನತೆಯಾಗಿ ತಂತ್ರೋ...ಪಾಯಗಳನಷ್ಟೇ ಬಿಂಬಿಸುತ್ತದೆ ಎಂದೇನೂ ಅಲ್ಲ. ಬದಲು ಅ... ವಿಶ್ವಾಸಾತ್ಮಕ ನೆಲೆಯಲ್ಲಿ ವಸಾಹತುಶಾಹಿ ಪ್ರತಿಭಟನೆ ಮತ್ತು ಸ್ವತಂ... ಭಾರತದಲ್ಲಿ ಪ್ರತಿಪಾದಿತವಾಗಿರುವ ಆಧುನಿಕತೆಯ ಮಿಥ್ಯಗಳಿ... ಸವಾಲಾಗಿ ನಿಲ್ಲುತ್ತದೆ. ಅಂದರೆ ದಲಿತ ಚರಿತ್ರೆಗಳು, ಭೂ... ಬಗೆಗಿನ ದಲಿತ ವ್ಯಾಖ್ಯಾನಗಳು ಮಹಿಳಾ ಬರವಣಿಗೆಯಂತೆ ಒಂ... ಮೂಲಭೂತ ಪ್ರಶ್ನೆಯನ್ನು ಎತ್ತುತ್ತವೆ – ಅದು ಅರಿಯುವ ಕ್ರಿ...ಯಲ್ಲಿ **ಕರ್ತೃ** ಮತ್ತು **ಜ್ಞಾತೃ** (subject-object)ಗಳ ಸಂಬಂ...ದಲ್ಲಿ ಕರ್ತೃವಿನ ಅರಿವನ್ನು ಕುರಿತದ್ದು. ಅಂದರೆ ಈ subje... objectಗೆ ಸಂಬಂಧಿಸಿದಂತೆ ಕರ್ತೃ ತನ್ನ ವಸ್ತುನಿಷ್ಠ ಚರಿತ್ರೆಯ... ಅಭಿವ್ಯಕ್ತಿಗೊಳಿಸುವಾಗ ಅದರ ಹೊರಗೆ ನಿಂತು ತನ್ನ ಬಗೆ... ಜ್ಞಾನವನ್ನು ಪಡೆಯುವ ಕ್ರಿಯೆಯನ್ನು ಕುರಿತದ್ದು. ಈ ಮೀಮಾಂ... ಕ್ರಿಯೆಯು **ಜಾತಿ ಶೋಷಣೆ** ಮತ್ತು ದಲಿತತ್ವ ಕುರಿತಂತೆ ಅ... ನೈಜ ಅನುಭವವನ್ನು ಮೀಮಾಂಸೆಯ ಕೇಂದ್ರಕ್ಕೆ ತರುತ್ತದೆ.



ಮೂಲಕವೇ ಜ್ಞಾನ ಪಡೆಯುವಾಗ subject-object ನಡು... ಇರುವ ದ್ವೈತವನ್ನು ಇಲ್ಲವಾಗಿಸು ತ್ತದೆ. ಅಂದರೆ ... ವಿಜ್ಞಾನಿಯಂತೆ ಇಲ್ಲಿ ನಿರ್ಲಿಪ್ತನಾಗಿ ಶೋಷಣೆಯ ಅನುಭವವ... ಅನುಭವಿಸಲಾಗದು. ಇಲ್ಲಿ 'ಅನುಭವ' ಎಂದಾಕ್ಷಣ ಎಚ್ಚರಿಕೆ ಅಗ... ಏಕೆಂದರೆ ಪ್ರತ್ಯಕ್ಷ ಅನುಭವವೇ ಜ್ಞಾನ ಅನ್ನುವಾಗ...

ಮೀಮಾಂಸೆಯು ಅನುಭವವನ್ನು ವ್ಯಕ್ತಿಗತ ನೆಲೆಗೆ ಭಟ್ಟಿ ಇಳಿಸಿಬಿಡುತ್ತದೆ. ಇದರಾಚೆಗೆ ಬಹಬೇಕಾದರೆ ಬೌದ್ಧ ಮೀಮಾಂಸೆಯ ಜ್ಞಾನ ಪ್ರಕ್ರಿಯೆಯನ್ನು ಗಮನಿಸಬೇಕಾಗುತ್ತದೆ. ಅಲ್ಲಿ ಅನುಭವ ಎನ್ನುವುದು ಆರು ಇಂದ್ರಿಯಗಳ ಒಟ್ಟು ಮೊತ್ತವಾಗಿರುತ್ತದೆ.

ಈ ಮೇಲಿನ ಗ್ರಹೀತಗಳ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನವನ್ನು ಪರಿಕಲ್ಪಿಸುವುದರತ್ತ ಸಾಗಬಹುದಾಗಿದೆ. ಇಲ್ಲಿ ಒಂದು ಸಂಗತಿಯನ್ನು ನೆನಪಿನಲ್ಲಿಡಬೇಕಾಗುತ್ತದೆ. ಯಾವುದೇ ಸಾಮಾಜಿಕ ಶಿಸ್ತಾಗಲೀ ಅದು ನಿರ್ಲಿಪ್ತ ವಿವೇಚನೆಯೇನೂ ಆಗಿರುವುದಿಲ್ಲ. ಅದು ಶಕ್ತಿಯುತವಾಗಿ ಸಾಮಾಜಿಕ ನಿಯಂತ್ರಣದ ಭಾಗವಾಗಿ ರಾಜ್ಯಾಂಗವಾಗಲೀ ಅಥವಾ ಇತರೆ ಯಾವುದೇ ಸಾಂಸ್ಥಿಕ ರೂಪದಲ್ಲಿ ಅದು ಅಂತಿಮವಾಗಿ ಯಜಮಾನಿ ಗುಂಪುಗಳ ಹಿತಾಸಕ್ತಿಗಳನ್ನು ರಕ್ಷಿಸುತ್ತಿರುತ್ತದೆ. ಅಲ್ಲದೆ ಅದಕ್ಕೆ ಸಂಬಂಧಿಸಿದಂತೆ ಕುಲೀನ ಜನರ ಬಗ್ಗೆ ಸಂಶೋಧನೆಯನ್ನು ಕೈಗೊಂಡರೆ ಅವರ ಸಮಯ, ಅವರ ಖಾಸಗಿತನಗಳ ಬಗ್ಗೆ ತೀವ್ರವಾಗಿ ತಡಪಡಿಸುತ್ತಾ, ಯಾವುದೇ ರೀತಿಯ ಪ್ರವೇಶ ನೀಡಲು ಬಯಸುವುದಿಲ್ಲ. ಆದ್ದರಿಂದ ಇಲ್ಲಿ ದಲಿತ ಪ್ರಜ್ಞೆಯ ಮೀಮಾಂಸೆಯನ್ನು ಕುರಿತು ಚರ್ಚಿಸುವಾಗ ನಾವು ಸತ್ಯದ ಆಳಗುಟ್ಟುಗಳ (regimes of truth) ಬಗ್ಗೆ ನಿಗಾ ಇಡಬೇಕಾಗುತ್ತದೆ. ಈ ಸತ್ಯಗಳು ನಿರ್ದಿಷ್ಟ ಸಾಮಾಜಿಕ ನಡಾವಳಿ ಮತ್ತು ರೂಢಿಗಳನ್ನು ಮಾನ್ಯ ಮಾಡುತ್ತಿರುತ್ತವೆ ಎಂಬುದನ್ನು ಗಮನಿಸಬೇಕಾಗುತ್ತದೆ.

ದಲಿತ ಸಿದ್ಧಾಂತಿಯಾಗಿರುವ ಗೋಪಾಲ್ ಗುರು ಮೇಲಿನ ಪರಿಕಲ್ಪನೆಗಳ ಹಿಂದಿರುವ ಶಕ್ತಿ ಕೇಂದ್ರಗಳನ್ನು ಗುರುತಿಸುತ್ತಾ ಅವುಗಳ ರಾಜಕೀಯ ಚಲನೆಯನ್ನು ಚರ್ಚಿಸುತ್ತಾರೆ. "ಅವುಗಳು ಸವಾಲುಗಳ ಮಾರ್ಗದಲ್ಲಿ ಸಾಗಿ, ಆ ಸವಾಲುಗಳನ್ನು ನೀಗಿಕೊಳ್ಳುತ್ತಾ, ದ್ವಂದ್ವಗಳನ್ನು ಮತ್ತು ಬದಲಾವಣೆಗಳನ್ನು ಬಗೆಹರಿಸಿಕೊಳ್ಳುತ್ತಿರುತ್ತವೆ. ಆದ್ದರಿಂದಲೇ ಈ ಪರಿಕಲ್ಪನೆಗಳು ಹಾಗೂ ಅವುಗಳ ಹೆಸರುಗಳು, ಕಾಲ ಮತ್ತು ಸಂದರ್ಭಗಳಿಗನುಗುಣವಾಗಿ, ಹಾಗೂ ಅವುಗಳ ನಿರೂಪಣೆ ಮತ್ತು ಬಳಕೆದಾರರನ್ನು ಅನುಸರಿಸಿ, ತಮ್ಮ ಮೂಲ ಅರ್ಥಗಳನ್ನು ಬದಲಾಯಿಸಿಕೊಳ್ಳುತ್ತಾ ತಮ್ಮ ಅಧಿಕಾರವನ್ನು ಗಳಿಸಿಕೊಳ್ಳುತ್ತಿರುತ್ತವೆ. ಈ ಕಾರಣದಿಂದಲೇ ಅವುಗಳು ಜನರ ಪ್ರಜ್ಞೆಯನ್ನು ಪ್ರಚೋದಿಸುತ್ತಿರುತ್ತವೆ... ಅಲ್ಲದೆ, ಅವು ಗುರಿಯಿಲ್ಲದ ನಿರ್ಲಿಪ್ತ ಪರಿಕಲ್ಪನೆಗಳಾಗಿರದೆ, ಪ್ರಜ್ಞಾಪೂರ್ವಕ ರಚನೆಗಳಾಗಿ ಸಕಾರಾತ್ಮಕ ಇಲ್ಲವೆ ನಕಾರಾತ್ಮಕ ಪರಿಣಾಮಗಳನ್ನು ಹೊಂದಿರುತ್ತವೆ."

ಈ ಮೇಲಿನ ಮೀಮಾಂಸೆ ಗ್ರಹೀತಗಳ ಮೂಲಕ ಇಲ್ಲಿಯ ತನಕ ದಲಿತ ಪ್ರಜ್ಞೆಯನ್ನು ಹೇಗೆ ಸೈದ್ಧಾಂತೀಕರಿಸಲಾಗಿದೆ ಎಂಬುದನ್ನು ಸಂಕ್ಷಿಪ್ತವಾಗಿ ಗಮನಿಸುವುದು ಸೂಕ್ತ:

೧. ಹಿಂದೂ ರಾಷ್ಟ್ರೀಯ ವ್ಯಾಖ್ಯಾನದಲ್ಲಿ ವಿವರಿಸುವಿಕೆ. 'ಹರಿಜನ' ಎಂಬ ಪರಿಕಲ್ಪನೆಯನ್ನು ನಾವಿಲ್ಲಿ ಹೆಸರಿಸಬಹುದು

೨. ಸಬಾಲ್ಟ್ರನ್ ಮಾದರಿಯ ಸೈದ್ಧಾಂತೀಕರಿಸುವಿಕೆ. ಇಲ್ಲಿ ಉಪಜಾತಿಗಳು, ಕೆಳಜಾತಿಗಳು ಎಂದು ವರ್ಗೀಕೃತಗೊಂಡಿರುವಂಥದ್ದು

೩. ಕೋಮುವಾದಿ ವರಸೆಯ ಪ್ರತಿನಿಧೀಕರಣಗಳು: ಹಿಂದೂ, ಮುಸ್ಲಿಂ ಇತ್ಯಾದಿಗಳು

ಕಾಂಚ ಐಲಯ್ಯನವರ ಪ್ರಕಾರ ಹಿಂದೂ ರಾಷ್ಟ್ರೀಯ ಸಂಕಥನದಲ್ಲಿ ತಿಲಕ್, ಗಾಂಧಿ, ಮೋಹನ್ ರಾಯ್, ನೆಹರು, ಗೋವಲ್ಕರ್, ಮತ್ತು ಎಸ್‌ಪಿ ಮುಖರ್ಜಿಯವರು ಬರುತ್ತಾರೆ. ಈ ಚಿಂತಕರ ಪ್ರಕಾರ ದಲಿತ ಪ್ರಜ್ಞೆ ಎನ್ನುವುದು ವೇದಾಂತ ಪರಂಪರೆ ಅಥವಾ ಸಂಸ್ಕೃತ ಪರಂಪರೆಯ ಭಾಗವಾಗಿಯೇ ಇರುವಂಥದ್ದು. ಈ ಹಿನ್ನಲೆಯಲ್ಲಿ ಗಾಂಧಿಯ 'ಹರಿಜನ' ಎಂಬ ಪರಿಕಲ್ಪನೆಯು ಜನಪ್ರಿಯವಾಗಿರುವುದು. ಈ ಪರಿಕಲ್ಪನೆ ದೈವ ಸಂಬಂಧ ಮತ್ತು ಆಧ್ಯಾತ್ಮಿಕ ಗೌರವವನ್ನು ತಂದುಕೊಡುತ್ತದೆಯಾದರೂ ಅದಕ್ಕೊಂದು ಸೈದ್ಧಾಂತಿಕ ನಿರ್ವಚನಾ ಸಾಮರ್ಥ್ಯವಿಲ್ಲದೆ ಸೊರಗುತ್ತದೆ. ಆದ್ದರಿಂದಲೇ ಐಲಯ್ಯನವರು ಅದನ್ನು ಹೀಗೆ ವಿವರಿಸುತ್ತಾರೆ, "ಈ ಗಾಂಧಿಯನ್ ಹರಿಜನ ಎನ್ನೋ ಪರಿಕಲ್ಪನಾತ್ಮಕ ಪ್ರಕ್ರಿಯೆಯಲ್ಲಿ ರಾಜ್ಯಾಂಗದ ಸಾಂಸ್ಥಿಕ ನೆಲೆಗಳು ಅಡಗಿದ್ದು, ನೆಹರೂವಿನ ಮೂಲಕ ದಲಿತ ಸಮುದಾಯಗಳನ್ನು ಬ್ರಾಹ್ಮಣೀಕರಣಗೊಳಿಸುವತ್ತ ಕೇಂದ್ರಗಳಾದವು.

೪. ಎಡಪಂಥೀಯ ವಿವರಣೆಗಳು – ಶೋಷಿತ ವರ್ಗಗಳೆಂದು ಸಾಮಾನ್ಯೀಕರಿಸುವಿಕೆ

೫. ದಲಿತ ಬಹುಜನ ಚಳುವಳಿಯ ಮೂಲಕ ವಿವರಣೆಗೊಂಡಿರುವಂಥದ್ದು

೬. ಲಿಬರಲ್ ಪಾರ್ಲಿಮೆಂಟ್ ವ್ಯವಸ್ಥೆಯಲ್ಲಿ ಸಕಾರಾತ್ಮಕ ಕ್ರಿಯೆಗಾಗಿ ವರ್ಗೀಕೃತಗೊಂಡಿರುವಂಥದ್ದು – ಎಸ್‌ಸಿ/ಎಸ್‌ಟಿ, ಒಬಿಸಿ ಇತ್ಯಾದಿ

ಈ ಮೇಲಿನ ಪ್ರತಿನಿಧೀಕರಿಸುವಿಕೆಯನ್ನು ವಿಶ್ಲೇಷಣೆಗಾಗಿ ಮಾತ್ರ ಮಾಡಿಕೊಳ್ಳಲಾಗಿದೆ. ಏಕೆಂದರೆ ಇವುಗಳ ಮಧ್ಯೆ ಅಂತರ್ ಸಂಬಂಧವನ್ನು ಮತ್ತು ಅವುಗಳು ಒಡ್ಡುವ ಸವಾಲುಗಳನ್ನು ಮರೆಯಲಾಗುವುದಿಲ್ಲ.

ಕಾಂಚ ಐಲಯ್ಯನವರ ಪ್ರಕಾರ ಹಿಂದೂ ರಾಷ್ಟ್ರೀಯ ಸಂಕಥನದಲ್ಲಿ ತಿಲಕ್, ಗಾಂಧಿ, ಮೋಹನ್ ರಾಯ್, ನೆಹರು, ಗೋವಲ್ಕರ್, ಮತ್ತು ಎಸ್‌ಪಿ ಮುಖರ್ಜಿಯವರು ಬರುತ್ತಾರೆ. ಈ ಚಿಂತಕರ ಪ್ರಕಾರ ದಲಿತ ಪ್ರಜ್ಞೆ ಎನ್ನುವುದು ವೇದಾಂತ ಪರಂಪರೆ ಅಥವಾ ಸಂಸ್ಕೃತ ಪರಂಪರೆಯ ಭಾಗವಾಗಿಯೇ ಇರುವಂಥದ್ದು. ಈ ಹಿನ್ನಲೆಯಲ್ಲಿ ಗಾಂಧಿಯ 'ಹರಿಜನ' ಎಂಬ ಪರಿಕಲ್ಪನೆಯು ಜನಪ್ರಿಯವಾಗಿರುವುದು. ಈ ಪರಿಕಲ್ಪನೆ ದೈವ ಸಂಬಂಧ ಮತ್ತು ಆಧ್ಯಾತ್ಮಿಕ ಗೌರವವನ್ನು ತಂದುಕೊಡುತ್ತದೆಯಾದರೂ ಅದಕ್ಕೊಂದು ಸೈದ್ಧಾಂತಿಕ ನಿರ್ವಚನಾ ಸಾಮರ್ಥ್ಯವಿಲ್ಲದೆ ಸೊರಗುತ್ತದೆ. ಆದ್ದರಿಂದಲೇ ಐಲಯ್ಯನವರು ಅದನ್ನು ಹೀಗೆ ವಿವರಿಸುತ್ತಾರೆ, "ಈ ಗಾಂಧಿಯನ್ ಹರಿಜನ ಎನ್ನೋ ಪರಿಕಲ್ಪನಾತ್ಮಕ ಪ್ರಕ್ರಿಯೆಯಲ್ಲಿ ರಾಜ್ಯಾಂಗದ ಸಾಂಸ್ಥಿಕ ನೆಲೆಗಳು ಅಡಗಿದ್ದು, ನೆಹರೂವಿನ ಮೂಲಕ ದಲಿತ ಸಮುದಾಯಗಳನ್ನು ಬ್ರಾಹ್ಮಣೀಕರಣಗೊಳಿಸುವತ್ತ ಸಾಗಿ, ಲಿಬರಲ್ ರಾಜ್ಯಾಂಗವನ್ನು ಮೇಲ್ಜಾತಿಗಳ ಖಾಸಗಿ ಆಸ್ತಿಯನ್ನಾಗಿ ಪರಿವರ್ತಿಸಿದವು. ಹೀಗೆ ಅಂತಿಮವಾಗಿ, ನೇಮಕಾತಿ ಮಂಡಲಿಗಳು, ಶಿಕ್ಷಣ ಕೇಂದ್ರಗಳು, ನ್ಯಾಯಾಂಗ ವ್ಯವಸ್ಥೆ, ಮಿಲಿಟರಿ ಮತ್ತು ಪೋಲೀಸ್ ವ್ಯವಸ್ಥೆಗಳೆಲ್ಲಾ ಬ್ರಾಹ್ಮಣ ಕೇಂದ್ರಗಳಾದವು. ರಾಜ್ಯಾಂಗವು ಸೆಕ್ಯುಲರ್ ಎಂದು ತೋರಲು ಕೆಲವು ಸಣ್ಣ ಸಂಸ್ಥೆಗಳನ್ನು ಕುಲೀನ ಮುಸ್ಲಿಂ ವ್ಯಕ್ತಿಗಳಿಗೆ ಬಿಟ್ಟುಕೊಟ್ಟರಷ್ಟೆ. ಹೀಗೆ ಅವರು ಬ್ರಾಹ್ಮಣಿಕಲ್ ಯಾಜಮಾನ್ಯವನ್ನು ಒಪ್ಪಿಕೊಳ್ಳುವಂತೆ ಮಾಡಲಾಯಿತು." ಈ ವಿಶ್ಲೇಷಣೆಯನ್ನು ಮತ್ತು ಮುಂದುವರೆಸುವುದಾದರೆ ಅವರ ಮಾತುಗಳಲ್ಲೇ, "ನೆಹರೂರವರ ರಾಜ್ಯಾಂಗವು ಸೆಕ್ಯುಲರ್ ಎಂದು ಪ್ರಚಾರಗಿಟ್ಟಿಸಿತ್ತಾದರೂ ತಮ್ಮ ದೈನಂದಿನ ಆಚರಣೆಗಳಲ್ಲಿ ಬ್ರಾಹ್ಮಣ್ಯವನ್ನು ದಕ್ಷತೆಯನ್ನಾಗಿ ಕಛೇರಿಗಳಲ್ಲಿ ನಿರೂಪಿಸಲಾಯಿತು ಹಾಗೂ ಇದನ್ನೇ ಭಾರತದ ವಿಮೋಚನಾ ಮಾರ್ಗವನ್ನಾಗಿಯೂ ತೋರಲಾಯಿತು" (ಐಲಯ್ಯ, ೧೯೯೮ : ೨೭೩).

ಐಲಯ್ಯನವರ ಈ ವಿಶ್ಲೇಷಣೆಯು ಭಾರತೀಯ ಆಧುನಿಕತೆಯಲ್ಲಿ ಎರಡು ಮುಖ್ಯಧಾರೆಗಳನ್ನು ಗುರುತಿಸುತ್ತದೆ: ಒಂದು, ಆಧುನಿಕತೆ ಎನ್ನುವುದು ಹಿಂದೂ ರಾಷ್ಟ್ರೀಯ ವಿಚಾರಧಾರೆಯಾದುದು. ಇದೇ ಅಧಿಕೃತ ಆಧುನಿಕತೆಯಾಗಿ ಹೊರಹೊಮ್ಮುತ್ತದೆ. ಎರಡು, ಮೂಲ ನಿವಾಸಿಗಳ ದೇಸೀ ಆಧುನಿಕತೆ. ಇದು ಯಾವತ್ತೂ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿರುವಂಥದ್ದು. ನಾನಿದನ್ನು ಆಧುನಿಕತೆಯ ಪ್ರತಿರೋಧಕ ಶಕ್ತಿಯಾಗಿ ಗ್ರಹಿಸುತ್ತೇನೆ. ಏಕೆಂದರೆ ತನ್ನ ಅನನ್ಯತೆಯನ್ನು ಕಾಯ್ದುಕೊಳ್ಳುವಂಥದ್ದಾಗಿದೆ. ಇದನ್ನೆ ಅನಂತರದಲ್ಲಿ ಕುಲ ಮೀಮಾಂಸೆ ಎಂದು ನಿರೂಪಿಸಲಿದ್ದೇನೆ.

ಸಬಾಲ್ಟ್ರನ್ ಚಿಂತನೆ ಮತ್ತು ಎಡಪಂಥೀಯ ಚಿಂತನೆಗಳಲ್ಲಿ ದಲಿತ ಸಮುದಾಯಗಳ ಆರ್ಥಿಕ ವಿಶ್ಲೇಷಣೆಗಳು ಕಂಡುಬರುತ್ತವೆಯಾದರೂ, ಆ ವಿಶ್ಲೇಷಣೆಗಳು ಆ ಸಮುದಾಯಗಳ ಸಾಂಸ್ಕೃತಿಕ ಸ್ವರೂಪ ಮತ್ತು ಜಾತಿ ಶೋಷಣೆಯನ್ನು ಅರಿಯುವಲ್ಲಿ ವಿಫಲವಾಗುತ್ತವೆ. ಇದಕ್ಕೆ ಮುಖ್ಯ ಕಾರಣ ಸಬಾಲ್ಟ್ರನ್ ಮತ್ತು ಎಡಪಂಥೀಯ ಎನ್ನು ವುದೂ ಸಹ ಜಾತಿ ವ್ಯವಸ್ಥೆಯ ಭಾಗವಾಗಿಯೇ ಇರುವುದಾಗಿದೆ. ಹಾಗೆಯೇ ಕೋಮುವಾದಿ ವರಸೆಯೂ ಸಹ ನಕಾರಾತ್ಮಕವಾಗಿ ಧಾರ್ಮಿಕ ಮೂಲಭೂತ ಧೋರಣೆಗಳನ್ನು ತನ್ನ ಹಿಂಬಾಲಕರಲ್ಲಿ ಪ್ರಚೋದಿಸುತ್ತದೆಯಷ್ಟೆ. ಹೀಗೆ ಅವು ದಲಿತ ಸಮುದಾಯಗಳ ನೈಜ ಪರಿಸ್ಥಿತಿ/ಸಂದರ್ಭಗಳನ್ನು ಮೌನಿಯಾಗಿಸಿದವು.

ಹೀಗಿರುವಲ್ಲಿ ದಲಿತಪ್ರಜ್ಞೆಯಲ್ಲಿ ತೀವ್ರವಾದ ಆಧುನಿಕ ಚಾಲನೆ ಕಾಣುವುದೇ ಮಹಾತ್ಮ ಫೂಲೆಯ ಮೂಲಕ. ಇದು ಮುಂದೆ ಅಂಬೇಡ್ಕರವರಲ್ಲಿ ಪೂರ್ಣ ಪ್ರಮಾಣದಲ್ಲಿ ಅಭಿವ್ಯಕ್ತಿಯನ್ನು ಪಡೆಯುತ್ತದೆ. ಅಂಬೇಡ್ಕರವರ ಪ್ರಕಾರ, "ದಲಿತತ್ವ ಎನ್ನುವುದು ಬದುಕಿನ ಸಾಂದರ್ಭಿಕ ಪರಿಸ್ಥಿತಿಗಳನ್ನು ಹೊಂದಿರುತ್ತದೆ. ಅದು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಶೋಷಣೆ, ದಬ್ಬಾಳಿಕೆ ಹಾಗೂ ಪ್ರತ್ಯೇಕಿಸುವ ಯಜಮಾನಿ ಮೇಲ್ಜಾತಿಯ ಬ್ರಾಹ್ಮಣಿಕಲ್ ಲಕ್ಷಣಗಳನ್ನು ಹೊಂದಿದೆ." (ಬಹಿಷ್ಕೃತ ಭಾರತ್). ಹೀಗೆ ಅವರು ದಲಿತ ಪ್ರಜ್ಞೆಯನ್ನು ನಿರೂಪಿಸುತ್ತಾರಾದರೂ ಆ ಪರಿಕಲ್ಪನೆಯು ಸಂದರ್ಭಕ್ಕನುಗುಣವಾಗಿ ಬದಲಾಗುತ್ತಿರುತ್ತದೆ. ತದನಂತರದಲ್ಲಿ ಲಿಬರಲ್ ಪಾರ್ಲಿಮೆಂಟರಿ ವ್ಯವಸ್ಥೆಯ ಮಿತಿಗಳನ್ನು ಕಾಣು



ತ್ತಲೇ ಅವರು ಬೌದ್ಧ ಪರಂಪರೆಯ ಮೇಲೆ ದಲಿತ ಪ್ರಜ್ಞೆಯನ್ನು ನಿರೂಪಿಸುತ್ತಾರೆ. ಇದು ನಿಜವಾಗಿ ಶ್ರೇಷ್ಠವಾದ ವಿಮೋಚನಾ ತಂತ್ರವನ್ನು ಒಳಗೊಂಡಿದೆಯಾದರೂ, ಇಂದು ಅದು ಆಧುನಿಕ ಭಾರತದ ವಿದ್ಯಮಾನವಾಗಿ ಇನ್ನೂ ಆಗಿಲ್ಲ.

ಅನಂತರದಲ್ಲಿ ಅಂಬೇಡ್ಕರ್‌ರವರನ್ನು ಅನುಸರಿಸಿ ಭಾರತಾದ್ಯಂತ ವಿಭಿನ್ನ ದಲಿತ ಚಳುವಳಿಗಳು ತಮ್ಮ ಅಸ್ತಿತ್ವವನ್ನು ಪ್ರತಿಪಾದಿಸಲಾರಂಭಿಸಿದವು. ಈ ಚಳುವಳಿಗಳು ಜ್ಞಾನ ಮತ್ತು ಸಂಸ್ಕೃತಿಯನ್ನು ದಲಿತೀಕರಿಸುವಲ್ಲಿ ತೀವ್ರವಾದ ಪರಿಣಾಮವನ್ನುಂಟು ಮಾಡಿದವು. ಆದರೆ ಈ ಪ್ರಯತ್ನಗಳೆಲ್ಲಾ "ಅನುಭವಾತ್ಮಕ ಮೀಮಾಂಸೆ"ಗಳಾಗಿಯಷ್ಟೆ ಉಳಿದು ಬಿಟ್ಟವು. ಹೊರನೋಟಕ್ಕೆ ಇವುಗಳು ವಂಚಿತ ಸಮುದಾಯಗಳನ್ನು ಸಶಕ್ತರನ್ನಾಗಿ ಮಾಡುವಂತೆ ತೋರಿದರೂ ವಾಸ್ತವದಲ್ಲಿ ಆ ಸಮುದಾಯಗಳ ಪ್ರಾಥಮಿಕ ಅನುಭವಗಳನ್ನು ಗಟ್ಟಿಗೊಳಿಸದೆ ಹೋದವಲ್ಲದೆ, ಕೇವಲ ಶೋಷಣೆಯ ಅನುಭವವನ್ನಷ್ಟೆ ತೀವ್ರಗೊಳಿಸಿದವು. ಅಲ್ಲದೆ ಬದಲಾವಣೆಯ ಹೊಣೆ ಈ ಸಮುದಾಯಗಳದ್ದೇ ಎಂದು ಸಹ ಬಿಂಬಿತವಾಯಿತು.

ಹಾಗೆಯೇ ಡಾ॥ ಅಂಬೇಡ್ಕರ್‌ರವರಿಂದಾಗಿ ಲಿಬರಲ್ ಪಾರ್ಲಿಮೆಂಟ್ ವ್ಯವಸ್ಥೆ ಸಕಾರಾತ್ಮಕ ಕ್ರಿಯೆಯನ್ನು ಸ್ಪಷ್ಟವಾಗಿ ಅಭಿವ್ಯಕ್ತಗೊಳಿಸಿತು. ಇದರಿಂದಾಗಿ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಎಸ್‌ಸಿ/ಎಸ್‌ಟಿ ಮತ್ತು ಒಬಿಸಿ ವರ್ಗೀಕರಣಗಳು ಕಾಣಿಸಿಕೊಂಡವು. ಇವು ನಿಜವಾದ ಐಡೆಂಟಿಟಿಗಳಲ್ಲದಿದ್ದರೂ ಪಬ್ಲಿಕ್‌ನ ಅವಮಾನವನ್ನು ಆ ಸಮುದಾಗಳ ಮೇಲೆ ಹೊರಿಸಲಾಯಿತು. ಈಗಾಗಲೇ ಇದ್ದ ಜಾತಿ ತಾರತಮ್ಯವನ್ನು ಅವು ಮತ್ತಷ್ಟು ಗಾಢಗೊಳಿಸುತ್ತವೆ.

ಹೊಸ ವಿಶ್ಲೇಷಣೆ:

ಈ ಚಾರಿತ್ರಿಕ ಬದಲಾವಣೆಗಳನ್ನು ಗಮನಿಸಿದ ಮೇಲೆ ನಾವೀಗ **'ದಲಿತ'** ಎಂಬ ಪರಿಕಲ್ಪನೆಯನ್ನು ವಿಶ್ಲೇಷಣೆಗೆ ತೆಗೆದುಕೊಳ್ಳಬಹುದು. ಡಾ॥ ಗೋಪಾಲ್ ಗುರು ಪ್ರಕಾರ **ದಲಿತ** ಅನ್ನೋದು ಅಲೌಕಿಕವಾದ (ಮೆಟಾಫಿಸಿಕಲ್) ನಿರೂಪಣೆಯೇನೂ ಅಲ್ಲ. ಅದರ ಮೀಮಾಂಸೆ ಮತ್ತು ರಾಜಕೀಯ ಶಕ್ತಿ ಭೌತಿಕವಾದ ಸಾಮಾಜಿಕ ಅನುಭವದಿಂದ ಕೂಡಿದ್ದಾಗಿದೆ. ಈ ಸಾಮಾಜಿಕ ನಿರೂಪಣೆಯಿಂದಾಗಿ ದಲಿತತ್ವ ನೈಜ ಚಲನಶೀಲತೆಯನ್ನು ಪಡೆದುಕೊಳ್ಳುತ್ತದೆ. ಬುದ್ಧ, ಫೂಲೆ, ಅಂಬೇಡ್ಕರ್, ಪೆರಿಯಾರ್ ಮತ್ತು ಮಾರ್ಕ್ಸ್ ವಿಚಾರಗಳಿಂದ ಪ್ರೇರಣೆಗೊಂಡು ಅದು ದೈವ ಕೇಂದ್ರವನ್ನು ತಿರಸ್ಕರಿಸಿ, ಮಾನವ ಕೇಂದ್ರವನ್ನು ಕ್ರಿಯಾ ಕ್ಷೇತ್ರವನ್ನಾಗಿಸುತ್ತದೆ. ಈ ಕಾರಣದಿಂದಾಗಿ ಭಾರತಾದ್ಯಂತ ಅನೇಕರು ಅದನ್ನು ರಾಜಕೀಯ ತಂತ್ರವನ್ನಾಗಿ ಬಳಸಿದರು. ಹೀಗಿದ್ದರೂ ಅದು ಇನ್ನು ದಲಿತ ಪ್ರಜ್ಞೆಯ ಕೇಂದ್ರ ಭಾಗವಾಗಿ ಅಖಿಲ ಭಾರತ ಮಟ್ಟದಲ್ಲಿ ಕಾಣಿಸಿಕೊಂಡಿಲ್ಲ. ಅಲ್ಲದೆ ಮಧ್ಯಮ ವರ್ಗದ ದಲಿತರು ಮತ್ತು ಶ್ರೀಮಂತರು ಅದನ್ನು ಬಳಸಲು ಇಚ್ಛಿಸುವುದಿಲ್ಲ. ವಾಸ್ತವದಲ್ಲಿ ಭಾರತೀಯ ಸಮಾಜದಲ್ಲಿ ಬದುಕುತ್ತಿರುವ ದಲಿತ ಸಮುದಾಯಗಳಲ್ಲೇ ಅದು ಕೇವಲ ರಾಜಕೀಯ ಡಿಸ್ಕೋರ್ಸ್ ಆಗಿ ಕೆಲವು ಗುಂಪುಗಳಿಗೆ ಮತ್ತು ಮಾಧ್ಯಮಗಳಿಗೆ ಸೀಮಿತವಾಗಿದೆ.

ಆದ್ದರಿಂದಲೇ ಮಹಾರಾಷ್ಟ್ರ, ಕರ್ನಾಟಕ, ಆಂಧ್ರಾ ಮತ್ತು ತಮಿಳ್ನಾಡುಗಳಲ್ಲಿ ದಲಿತ ಅನ್ನೋದು ಜನಪ್ರಿಯವಾಗಿದೆ. ಆದರೆ ಭಾರತದ ಇತರ ರಾಜ್ಯಗಳಲ್ಲಿ ಅಲ್ಲ.

ಹಾಗಾದರೆ ಪ್ರಸ್ತುತ ಸಂದರ್ಭದಲ್ಲಿ ದಲಿತ ಅನ್ನೋ ಪರಿಕಲ್ಪನೆಯು ಒಂದು ಘನೀಕೃತ ಚಾರಿತ್ರಿಕ ವಾಸ್ತವವನ್ನಷ್ಟೇ ಪ್ರತಿನಿಧಿಸುತ್ತದೋ ಅಥವಾ ಶ್ರೇಣೀಕೃತ ಸಮಾಜದಲ್ಲಿ ಅದು ಬಹುರೂಪಿ ಸಮುದಾಯಗಳನ್ನು, ಆ ಸಮುದಾಯಗಳೊಳಗಿನ ಚಲನಶೀಲ ಸಂಬಂಧಗಳನ್ನು ಪ್ರತಿನಿಧಿಸುತ್ತದೋ? ಈ ಪ್ರಶ್ನೆಗೆ ಉತ್ತರ ಪ್ರಶ್ನೆಯಲ್ಲೇ ಇದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಏಕೆಂದರೆ ಯಾವುದೇ ಪರಿಕಲ್ಪನೆ ಈ ಹಿಂದೆ ಹೇಳಿದಂತೆ ಸಾಂದರ್ಭಿಕ ನೆಲೆಯಲ್ಲಿ ತಮ್ಮ ಪಾತ್ರಗಳನ್ನು ನಿಭಾಯಿಸುತ್ತಿರುತ್ತದೆ. ಅಂದರೆ ಪರಿಕಲ್ಪನೆಗಳು ತಮ್ಮ ವೈಯಕ್ತಿಕ ಕ್ರಿಯೆಗಳನ್ನು ಸ್ವಯತ್ತ ಹಕ್ಕಾಗಿ ಪರಿವರ್ತಿಸುತ್ತವಲ್ಲದೆ, ಸಾಮಾಜಿಕ ಗುಂಪುಗಳನ್ನು ಮತ್ತು ಸಮುದಾಯಗಳನ್ನು ನೀಟಾದ ಕೃತಕ ಚೌಕಟ್ಟುಗಳಲ್ಲಿ ಬಂಧಿಸುತ್ತವೆ. ಈ ಸಂದರ್ಭದಲ್ಲಿ ಸಮುದಾಯಗಳ **ಪ್ರಾಥಮಿಕ ನಿರೂಪಣೆಗಳು** ಅಚಾರಿತ್ರಿಕವಾಗಿ ಮತ್ತೊಂದನ್ನು ಸ್ವೀಕರಿಸುವಾಗ ಅಸ್ಪಷ್ಟತೆಗೆ ಒಳಗಾಗುತ್ತವೆ. ಹಾಗಾಗಿ ಒಳಮೀಸಲಾತಿಯಂಥ ಪ್ರಶ್ನೆ ಎದುರಾದಾಗ ನ್ಯಾಯದ ಪರಿಕಲ್ಪನೆ ಮುಸುಕಾಗಿಬಿಡುತ್ತದೆ. ಇಲ್ಲಿ ಎದುರಿಸಬೇಕಾದ ಬಲಾಢ್ಯ ಗುಂಪುಗಳ ರಾಜಕೀಯ ಶಕ್ತಿ ಮತ್ತಷ್ಟು ಗಟ್ಟಿಗೊಳ್ಳಲಾರಂಭಿಸಿ, ಮತ್ತೊಮ್ಮೆ ವಂಚಿತ ಸಮುದಾಯಗಳನ್ನು ಶಕ್ತಿಹೀನತೆ ಆವರಿಸಿದಂತೆ ಮಾಡಲಾಗುತ್ತದೆ. ಅಲ್ಲದೆ ಪ್ರತಿರೋಧದ ನೆಲೆಗಳು ಸಂಸ್ಕೃತ ಪರಂಪರೆಯ ಜಾತಿ ವ್ಯವಸ್ಥೆಯನ್ನು ಮತ್ತಷ್ಟು ವೈಭವೀಕರಿಸಿದಂತಾಗಿ, ಸಮಾಜವನ್ನು ಅದು ಸಂಘಟಿಸುವ ರೂವಾರಿಯಾಗಿಯೇ ಉಳಿದುಬಿಡುತ್ತದೆ.

ಈ ವಿಶ್ಲೇಷಣೆ ಸಾಧ್ಯವಾದುದು ಹೇಗೆ?

೮೦ರ ದಶಕದಲ್ಲಿ ಮೊದಲಬಾರಿಗೆ **ಸೆಕ್ಯುಲರ್ ರಾಷ್ಟ್ರೀಯ** ವಿಚಾರಧಾರೆಯಲ್ಲಿ ಬಿರುಕುಗಳು ಕಾಣಲಾರಂಭಿಸುತ್ತವೆ. ಭಾರತೀಯ ಎನ್ನೋ ಏಕರೂಪಿ ಸತ್ಯಛಿದ್ರಗೊಂಡು ಅನೇಕ ಸಮುದಾಯಗಳು ತಮ್ಮ ಸ್ವಾಯತ್ತತೆಯ ಪ್ರಶ್ನೆಗಳನ್ನು ಎತ್ತಲಾರಂಭಿಸಿ, ರಾಜ್ಯಾಂಗ ವ್ಯವಸ್ಥೆ ಸವಾಲಾಗುತ್ತವೆ. ಅಲ್ಲದೆ ಇತರ ಅನೇಕ ಅನನ್ಯತೆಗಳು ತಮ್ಮ ಧ್ವನಿಯನ್ನು ಪ್ರಬಲವಾಗಿ ಮಂಡಿಸತೊಡಗುತ್ತವೆ. ಕ್ಷುದ್ರ-ಛಿದ್ರಗೊಂಡ ಐಡೆಂಟಿಟಿಗಳು ತಮ್ಮ ಅವಕಾಶಗಳನ್ನು ಪಬ್ಲಿಕ್‌ನಲ್ಲಿ ಪಡೆಯತೊಡಗಿದವು. ಈ ಚಲನೆಗಳನ್ನು ನಾವು ನಾಲ್ಕು ಧಾರೆಗಳಲ್ಲಿ ಗುರುತಿಸಬಹುದು:

೧. ಆಧುನಿಕ ಅಖಂಡ ಭಾರತದಲ್ಲಿ ಉಪ-ರಾಷ್ಟ್ರೀಯ ಎಂದು ಹೆಣಗುತ್ತಿದ್ದ ಸಮುಧಾಯಗಳು ತಮ್ಮ ಸ್ವಾಯತ್ತತೆಗಾಗಿ ಚಳುವಳಿಗಳನ್ನು ನಡೆಸತೊಡಗಿರುವುದು.

೨. ಲಿಂಗೀಯ ಸಮಾನತೆಗಾಗಿ ಆರಂಭವಾದ ಹೋರಾಟಗಳು

೩. ಬೃಹತ್ ಯೋಜನೆಗಳಿಂದ ನೆಲೆಕಳೆದುಕೊಂಡ ಸಮುದಾಯಗಳು ಪರಿಸರ ಪ್ರಶ್ನೆಗಳನ್ನು ತಮ್ಮ ಬದುಕಿನ ಕೇಂದ್ರವನ್ನಾಗಿ ಮಾಡಿಕೊಂಡು ಚಳುವಳಿ ಹೂಡತೊಡಗಿದ್ದು.

೪. ಹಲವಾರು ರಾಜ್ಯಗಳಲ್ಲಿ ಜಾತಿ ತಾರತಮ್ಯವನ್ನು ಕುರಿತಂತೆ ಆರಂಭವಾದ ಚಳುವಳಿಗಳು. ನಿದರ್ಶನವೆಂಬಂತೆ ಬಿಹಾರದಲ್ಲಿ ಕಾರ್ಪೂರಿ ಠಾಕೂರ್ ಸರ್ಕಾರ ಹಿಂದುಳಿದ ಜಾತಿಗಳಿಗೆ ಮೀಸಲಾತಿಯನ್ನು ನೀಡಿದಾಗ ಉಂಟಾದ ಪ್ರತಿಭಟನೆಗಳು ಇಲ್ಲಿ ಗುರುತಿಸಬಹುದು. ಹಾಗೆಯೇ ಗುಜರಾತಿನಲ್ಲಿ ಮಂಡಲ್ ಮೀಸಲಾತಿಯ ವಿರುದ್ಧ ಎದ್ದ ಪ್ರತಿಭಟನೆಗಳು ದಲಿತರನ್ನು ಗುರಿಯಾಗಿಸಿದ್ದು-ಇವೆಲ್ಲಾ ಮಂಡಲ್ ಜಾರಿಯಾದ ನಂತರದ ಬೆಳವಣಿಗೆಗಳೆಂದೇ ಹೇಳಬೇಕು.

ಇದರ ನೇರ ಪರಿಣಾಮವೆಂದರೆ ಚಾರಿತ್ರಿಕವಾಗಿ ಕಟ್ಟಿಕೊಟ್ಟ ರಾಷ್ಟ್ರೀಯ ಚಳುವಳಿಯ ಏಕರೂಪಿತನವನ್ನು ನೇರವಾಗಿ ಪ್ರಶ್ನಿಸಿದ್ದು ಹಾಗೂ ಅದುಮಿಟ್ಟ ಸಮುದಾಯಗಳ ಸ್ವಾಯತ್ತ ಪ್ರಶ್ನೆಗಳು ಮುಂಚೂಣಿಗೆ ಬರಲಾರಂಭಿಸಿದ್ದು. ಹೀಗೆ ವೈವಿಧ್ಯಮಯ ಚಳುವಳಿಗಳು ಕಟ್ಟಿಕೊಟ್ಟ ಏಕರೂಪಿ ಸತ್ಯಗಳನ್ನು ಸಂದೇಹದಿಂದ ನೋಡಿದವಲ್ಲದೆ ತಮ್ಮ ಅದುಮಿಟ್ಟ ಸಾಂಸ್ಕೃತಿಕ ನಿರೂಪಣೆಗಳನ್ನು ನೇರವಾಗಿ ಪುನಃ ಸಂಘಟಿಸಿಕೊಳ್ಳಲಾರಂಭಿಸಿದವು. ಹಾಗಾಗಿ ಲಿಬರಲ್ ವ್ಯಕ್ತಿ ಸ್ವಾತಂತ್ರ್ಯದ ನಿರೂಪಣೆಗಳು ಕುಸಿದು ಸಾಮುದಾಯಿಕ ಧ್ಯೇಯೋದ್ದೇಶಗಳು ಭಿನ್ನ ಭಿನ್ನ ರೀತಿಗಳಲ್ಲಿ ತಮ್ಮ ಅವಕಾಶಗಳನ್ನು ಬೇಡ ತೊಡಗಿದವು. ಇವುಗಳನ್ನೇ ನಾನು ಈ ಹಿಂದೆ ಮೌನಿಯಾದ ಕ್ಷುದ್ರ/ಸಣ್ಣ ವ್ಯಕ್ತಿತ್ವಗಳು ಎಂದು ಕರೆದ್ದ. ಇವು ಮೈಗೊಡವಿಕೊಂಡು ಎದ್ದು ನಿಂತವು. ಇದರಿಂದಾಗಿ ಆಧುನಿಕತೆಯ ವಿಶ್ವವ್ಯಾಪಿ ನಿರೂಪಣೆಯ ಹುಸಿತನಗಳು ಬೆತ್ತಲೆಗೊಂಡು, ಬಹುರೂಪಿ ವ್ಯಾಖ್ಯಾನಗಳು ಮಾನ್ಯತೆಯನ್ನು ಪಡೆಯತೊಡಗಿದವು. ಇಲ್ಲಿ ವಿಶ್ವ ಮಾನವ ಕಲ್ಪನೆಯು ಸ್ಥಳೀಯಗೊಂಡು ಸ್ಥಳೀಯವಾದ ಭಾಷೆ, ಸಂಸ್ಕೃತಿ, ಜೀವನಕ್ರಮಗಳು ರಮ್ಯ ಕನಸುಗಳಾದವು.

ಹಾಗೆಯೇ ಜಾಗತೀಕವಾಗಿ, ಕ್ರೋಢೀಕೃತವಾದ ಬಂಡವಾಳ ಮತ್ತು ಶ್ರಮಜೀವಿಗಳ ಕೌಶಲ್ಯಗಳು ಮುಕ್ತವಾಗಿ ಚಲನೆಗೊಳಗಾದವು. ಈ ಪ್ರಕ್ರಿಯೆ ಹಿಂದಿನ ಜ್ಞಾನ ಮೀಮಾಂಸೆಯ ತಳಹದಿಯನ್ನು ಮತ್ತು ಸೀಮಾರೇಖೆಗಳನ್ನು ಮರು ನಿರೂಪಿಸಿದವು. ಮಾಹಿತಿ ತಂತ್ರಜ್ಞಾನ ಜ್ಞಾನವನ್ನು ಸಿದ್ಧಮಾದರಿಯ ಮಾರುಕಟ್ಟೆಯ ವಸ್ತುವನ್ನಾಗಿಸಿತು. ಕಾಲ ಮತ್ತು ಸ್ಥಳಗಳ ನಿರೂಪಣೆಗಳು ಕುಬ್ಜ ಸಂಗತಿಗಳಾಗಿ, ವೇಗ ಬದುಕಿನ ಕ್ರಮವಾಯಿತು. ಈ ಪ್ರಕ್ರಿಯೆಯನ್ನು ಆಧುನಿಕೋತ್ತರ ಜಗತ್ತಿನ ತಲ್ಲಣಗಳೆಂದೇ ಅನೇಕರು ಕರೆದರು. ಈ ತಲ್ಲಣಗಳು/ಸಂದಿಗ್ಧತೆಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ:

೧. ಏಕೀಕರಣ ಮತ್ತು ಛಿದ್ರೀಕರಣ:

ಮೊದಲ ಸಂದಿಗ್ಧತೆಯೆಂದರೆ ಒಂದುಗೂಡಿಸುವಿಕೆ ಅಥವಾ ಏಕೀಕರಿಸುವಿಕೆ ಮತ್ತು ವಿಘಟನೆ ಅಥವಾ ಪ್ರತ್ಯೇಕಿಸುವಿಕೆ. ಆಧುನಿಕತೆ ವಿಘಟಿಸುತ್ತಿರುವಾಗಲೇ ಅದು ಒಂದುಗೂಡಿಸುತ್ತದೆಯೂ ಹೌದು. ವ್ಯಕ್ತಿಯಿಂದ ಮೊದಲುಗೊಂಡು ಇಡೀ ವಿಶ್ವವನ್ನು ವ್ಯಾಪಿಸಿ ಸಮಗ್ರತೆ ಮತ್ತು ಐಕ್ಯತೆಯನ್ನು ಪ್ರಚೋದಿಸುತ್ತದೆ. ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಒಂದುಗೂಡುವಿಕೆಯು ಸ್ವ ನ ಕಲ್ಪನೆಯನ್ನು ಒಂದು ಕಥಾನಕದ ಮಾದರಿಯಲ್ಲಿ ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ಸಂಭವಿಸುತ್ತಿರುವ ಆಧುನಿಕ ಬದಲಾವಣೆಗಳೊಳಗೆ ಕಟ್ಟುತ್ತಿರುತ್ತದೆ. ಆಧುನಿಕಪೂರ್ವವೆನ್ನುವ ಕಾಲದಲ್ಲೂ ಇಂತಹ ಕ್ರಿಯೆಗಳಿದ್ದರು ಸಹ ಅಲ್ಲಿ ಆತಂಕವೇನೂ ಇರಲಿಲ್ಲ. ಅಲ್ಲಿ ಒಂದು ಪರಿಚಯಾತ್ಮಕ ಜಗತ್ತು ಯಾವತ್ತೂ ವೈಯಕ್ತಿಕ ಸಂಬಂಧಗಳನ್ನು ಬೆಂಬಲಿಸುತ್ತಿತ್ತು. ಆಧುನಿಕತೆ ಎಂದಾಕ್ಷಣ ಅದು ಮುರಿದು ಬಿದ್ದ ಸ್ಥಿತಿಯಾಗಿ ಕಂಡರೂ, ಅದು ಪರಂಪರೆಯನ್ನು ಮುರಿದು ಕಟ್ಟುತ್ತಾ, ಆ ಪರಂಪರೆಗಳು, ವ್ಯಕ್ತಿಗಳು ಹಾಗೂ ಸಮುದಾಯಗಳು ಬಹು ಸಾಧ್ಯತೆಗಳತ್ತ ತೆರೆದುಕೊಳ್ಳುವಂತೆ ಮಾಡುತ್ತದೆ. ಹೀಗೆ ಇಡೀ ವಿಶ್ವ ವ್ಯಕ್ತಿಗೆ ತೆರೆದುಕೊಳ್ಳುತ್ತದೆ. ಅಂತೆಯೇ, ವ್ಯಕ್ತಿ ಜಗತ್ತಿಗೆ ತೆರೆದುಕೊಳ್ಳುತ್ತಾನೆ/ಳೆ. ಈ ಪ್ರಕ್ರಿಯೆ ಅನೇಕ ಮಾಧ್ಯಮಗಳಲ್ಲೂ ನಡೆಯುತ್ತಿರುತ್ತದೆ.

ಅನೇಕ ಸಲ ಈ ಸ್ಥಿತಿ ಎಲ್ಲೋ ಹೊರಗೆ ಇದೆ ಎಂಬಂತೆ ಭಾವಿಸುತ್ತಾ, ಸಾಮಾಜಿಕ ವ್ಯವಸ್ಥೆಗಳು ವ್ಯಕ್ತಿಯಿಂದ ಹೊರಗೆ ಇದೆ ಎಂಬಂತೆ ಪರಿಭಾವಿಸಲಾಗುತ್ತದೆ. ಅಂತಹ ಸಂದರ್ಭಗಳು ಪ್ರತ್ಯೇಕೀಕರಣಕ್ಕೊಳಗಾಗುತ್ತ ಏಕೀಕರಣವನ್ನು ತೀವ್ರವಾಗಿ ಆಶಿಸುತ್ತಿರುತ್ತವೆ. ಇಂಥ ಪ್ರಕ್ರಿಯೆಯಲ್ಲಿ ದೂರದ ಕ್ರಿಯೆಗಳು ಹತ್ತಿರವಾಗಿ, ಮೂಗಿನ ಕೆಳಗೆ ನಡೆಯುವಂಥ ಕ್ರಿಯೆಗಳು ಅಪರಿಚಿತವಾಗುತ್ತಿರುತ್ತವೆ. ಹಾಗಾಗಿ ಅಮೆರಿಕಾದ ಅಧ್ಯಕ್ಷ ತುಂಬಾ ಹತ್ತಿರದವನಾಗಿ, ತನ್ನ ನೆರೆಯಲ್ಲಿರುವವ ದೂರದವನಾಗಿರುತ್ತಾನೆ/ಳೆ. ಇಂತಹ ವ್ಯಕ್ತಿತ್ವವು ತೀವ್ರವಾದ ಒಂಟಿತನ ಮತ್ತು ಆತಂಕಗಳಿಗೆ ಒಳಗಾಗಿ ಬದುಕಿನಲ್ಲಿ ಅತಂತ್ರ ಸ್ಥಿತಿಗೆ ಸಿಲುಕುತ್ತದೆ.

ಹಾಗೆಯೇ ವೈವಿಧ್ಯಮಯ ಸಂದರ್ಭಗಳು ಮತ್ತು ಸನ್ನಿವೇಶಗಳು ಸಂವಹನವನ್ನು ತೀರಾ ಬಿಡಿಬಿಡಿಯಾಗಿ ನಿರೂಪಿಸಲು ಹೆಣಗುತ್ತಿರುತ್ತವೆ. ಅನೇಕ ಆಧುನಿಕತೆಗಳು ಅನೇಕ ಬಗೆಯಾಗಿ ವ್ಯಕ್ತಿಗಳನ್ನು ಪ್ರೇರೇಪಿಸಿ ಭಿನ್ನವಾದ ವಾತಾವರಣವನ್ನು ಸೃಷ್ಟಿಸುತ್ತಿರುತ್ತವೆ. ಒಬ್ಬ ವ್ಯಕ್ತಿ ಒಂದು ಸನ್ನಿವೇಶದಿಂದ ಮತ್ತೊಂದು ಸನ್ನಿವೇಶಕ್ಕೆ ಹೋದಾಗ ತನ್ನನ್ನು ತಾನೇ ಭಿನ್ನವಾಗಿ ಪ್ರತಿನಿಧಿಸಲಾರಂಭಿಸುತ್ತಾನೆ/ಳೆ.

ಒಬ್ಬ ವ್ಯಕ್ತಿ ಒಂದು ಸನ್ನಿವೇಶದಿಂದ ಮತ್ತೊಂದು ಸನ್ನಿವೇಶಕ್ಕೆ ಹೋದಾಗ ತನ್ನನ್ನು ತಾನೇ ಭಿನ್ನವಾಗಿ ಪ್ರತಿನಿಧಿಸಲಾರಂಭಿಸುತ್ತಾನೆ/ಳೆ. ಹಾಗಾಗಿ ಒಮ್ಮೆಗೆ ಬಹುರೂಪಿ ಆಯಾಮಗಳನ್ನು ತಾನೇ ಜೀವಿಸುತ್ತಿರುತ್ತಾನೆ/ಳೆ. ಸಾಂದರ್ಭಿಕ ಭಿನ್ನತೆಗಳು ಈ ವಿಘಟಿಸುತ್ತಿರುವಿಕೆಯನ್ನು ತೀವ್ರಗೊಳಿಸುತ್ತ ಬಹುರೂಪಿ ನೆಲೆಗಳಲ್ಲಿ ಅವು ನಿರಸನಗೊಳ್ಳುತ್ತಿರುತ್ತವೆ. ಆದ್ದರಿಂದ ಇಂತಹ ಆಧುನಿಕತೆಗಳಲ್ಲಿ ನಿರಂತರವಾಗಿ ದ್ವಿದಳನ ಕ್ರಿಯೆಯು ವ್ಯಕ್ತಿ ಮತ್ತು ಸಮುದಾಯಗಳಲ್ಲಿ ತೀವ್ರವಾಗಿ ಪ್ರತ್ಯೇಕಿಸಿಕೊಳ್ಳುವಿಕೆಯೇ ಐಡೆಂಟಿಟಿಯಾಗಿ ನಿರೂಪಣೆಗೊಳ್ಳುವ ಸಾಧ್ಯತೆಗಳು ವಿಪರೀತವಾಗಿರುತ್ತವೆ.

ಹಾಗಾಗಿ ಒಮ್ಮೆಗೆ ಬಹುರೂಪಿ ಆಯಾಮಗಳನ್ನು ತಾನೇ ಜೀವಿಸುತ್ತಿರುತ್ತಾನೆ/ಳೆ. ಸಾಂದರ್ಭಿಕ ಭಿನ್ನತೆಗಳು ಈ ವಿಘಟಿಸುತ್ತಿರುವಿಕೆಯನ್ನು ತೀವ್ರಗೊಳಿಸುತ್ತ ಬಹುರೂಪಿ ನೆಲೆಗಳಲ್ಲಿ ಅವು ನಿರಸನಗೊಳ್ಳುತ್ತಿರುತ್ತವೆ. ಆದ್ದರಿಂದ ಇಂತಹ ಆಧುನಿಕತೆಗಳಲ್ಲಿ ನಿರಂತರವಾಗಿ ದ್ವಿದಳನ ಕ್ರಿಯೆಯು ವ್ಯಕ್ತಿ ಮತ್ತು ಸಮುದಾಯಗಳಲ್ಲಿ ತೀವ್ರವಾಗಿ ಪ್ರತ್ಯೇಕಿಸಿಕೊಳ್ಳುವಿಕೆಯೇ ಐಡೆಂಟಿಟಿಯಾಗಿ ನಿರೂಪಣೆಗೊಳ್ಳುವ ಸಾಧ್ಯತೆಗಳು ವಿಪರೀತವಾಗಿರುತ್ತವೆ. ಇಂತಹ ಸನ್ನಿವೇಶದಲ್ಲಿ ಪುರಾತನ/ಸನಾತನ, ಭಾಷಿಕ ಇಲ್ಲವೇ ಸಾಮುದಾಯಿಕ ಐಡೆಂಟಿಟಿಗಳು ಪ್ರಾಚೀನ ಪರಂಪರೆಯೊಂದನ್ನು ಸಂಘಟಿಸಿಕೊಳ್ಳುತ್ತಾ ಸಾರ್ವಜನಿಕ ಅವಕಾಶದಲ್ಲಿ ಬೇರೂರಲು ತೊಡಗುತ್ತವೆ. ಇಂತಹ ಸಂದರ್ಭದಲ್ಲಿ ಎಲ್ಲವುಗಳನ್ನು ಏಕಕಾಲದಲ್ಲಿ ನಿರ್ಭೀಡೆಯಿಂದ ಜೀವಿಸುವ ಕೌಶಲ್ಯ ವ್ಯಕ್ತಿಗೆ

ಬಹುರೂಪಿ ಪ್ರಕ್ರಿಯೆಗಳಲ್ಲಿ ವ್ಯಕ್ತಿ ಸಮುದಾಯಗಳು ಕ್ಷೋಭೆಗೆ ಒಳಗಾಗಿ ಶಕ್ತಿಹೀನತೆಯನ್ನು ನಿರಂತರವಾಗಿ ಅನುಭವಿಸುತ್ತವೆ. ಹಾಗೆಯೇ ತಾವು ರೂಢಿಸಿಕೊಂಡಿದ್ದ ಕೌಶಲ್ಯಗಳು, ಪ್ರಾವೀಣ್ಯತೆಗಳು ಕಾಲಾನುಕ್ರಮದಲ್ಲಿ ಅಪಮೌಲ್ಯಕ್ಕೆ ಒಳಗಾಗುತ್ತವೆ. ಆಧುನಿಕತೆ ಇಂಥದ್ದನ್ನು ತನ್ನೊಳಗೆ ಸೆಳೆದುಕೊಳ್ಳುತ್ತಿರುತ್ತದೆ. ಕಾಲ ಮತ್ತು ಅವಕಾಶಗಳ ಮಧ್ಯೆ ದೂರೀಕರಿಸುವಿಕೆ ಮತ್ತು ಅಮೂರ್ತ ವ್ಯವಸ್ಥೆಗಳ ಮೂಲಕ ಕೌಶಲ್ಯ ಹೀನರನ್ನಾಗಿಸುವುದು ನಿರಂತರವಾಗಿ ಕಂಡುಬರುತ್ತದೆ. ಆದ್ದರಿಂದ, ಪರಂಪರಾನುಗತವಾಗಿ ಬಂದಂತಹ ಕುಲಕಸುಬುಗಳು ಅವಹೇಳನಕ್ಕೆ ಒಳಗಾಗಿ ಆಧುನಿಕ ಅವಕಾಶದಲ್ಲಿ ತನ್ನ ನೆಲೆಯನ್ನು ಕಳೆದುಕೊಳ್ಳುತ್ತವೆ.

ಕರಗತವಾಗುತ್ತದೆ. ಆದ್ದರಿಂದ ಒಂದಾಗುವಿಕೆ ಮತ್ತು ಪ್ರತ್ಯೇಕಿಸಿಕೊಳ್ಳುವಂತಹ ಸಂದಿಗ್ಧತೆಗಳು ಅನೇಕರಿಗೆ ಮನೋಕ್ಷೋಭೆಯಾಗಿ ಕಾಣಿಸಿಕೊಳ್ಳುತ್ತವೆ. ಇದು ಕೆಲವೊಮ್ಮೆ ಮಾನಸಿಕ ಕಾಯಿಲೆಯೆಂಬಂತೆ ಚಿತ್ರಣಗೊಂಡು ಒಂದು ಸಮಾಜವು ಅದಕ್ಕೆ ಮಾನಸಿಕ ಆರೋಗ್ಯ ಕೇಂದ್ರವನ್ನು ಕಟ್ಟಿಕೊಳ್ಳುವಂತೆ ಮಾಡಬಹುದು.

೨.ಶಕ್ತಿಹೀನತೆ ಮತ್ತು ವಶೀಕರಣ:

ಮತ್ತೊಂದು ಸಂದಿಗ್ಧತೆ ಎಂದರೆ ವ್ಯಕ್ತಿಯು ವೈವಿಧ್ಯಮಯ ಸಾಮಾಜಿಕ ಲೋಕಗಳಲ್ಲಿ ವರ್ತಿಸುವಾಗ ತನ್ನ ಸ್ವ ನಿರೂಪಣೆಯಲ್ಲಿ ಈ ಶಕ್ತಿಹೀನತೆಯನ್ನು ಗಾಢವಾಗಿ ಅನುಭವಿಸುತ್ತಿರುತ್ತಾನೆ/ಳೆ. ಏಕೆಂದರೆ ಇಲ್ಲಿ ಅವನ/ಆಕೆಯ ಭವಿಷ್ಯ ಎನ್ನುವುದು ಬಾಹ್ಯ ಮಾಧ್ಯಮದಲ್ಲಿ ನಿರೂಪಿತಗೊಂಡಿರುತ್ತದೆ. ಮಾರ್ಕ್ಸ್‌ವಾದಿ ಪರಿಭಾಷೆಯಲ್ಲಿ ಇದನ್ನು Alienation ಎಂದು ವಿಶ್ಲೇಷಿಸುತ್ತಾರೆ. ಇಲ್ಲಿ ಉತ್ಪಾದನಾ ಶಕ್ತಿ ವೃದ್ಧಿಗೊಂಡಂತೆ ಬಂಡವಾಳಶಾಹಿ ಜಗತ್ತು ಬಹುರೂಪಿ ಉತ್ಪಾದನೆಗಳಲ್ಲಿ ತೊಡಗಿದ್ದು ವ್ಯಕ್ತಿಯು ತನ್ನ ಉತ್ಪಾದನೆಯ ನಿಯಂತ್ರಣವನ್ನು ಯಂತ್ರ ಮತ್ತು ಮಾರುಕಟ್ಟೆಗಳಿಗೆ ಬಿಟ್ಟುಕೊಡುವ ಸ್ಥಿತಿಯಾಗಿರುತ್ತದೆ ಎಂದು ಮಾರ್ಕ್ಸ್‌ವಾದ ಹೇಳುತ್ತದೆ. ಯಾವುದು ಮಾನವೀಯವಾಗಿತ್ತೊ ಅದು ಸಾಮಾಜಿಕವಾಗಿ ವ್ಯಕ್ತಿಯಿಂದ ಬೇರ್ಪಟ್ಟು ವಸ್ತುನಿಷ್ಠತೆಗೆ ಒಳಗಾಗುತ್ತದೆ. ಆದ್ದರಿಂದ ಆಧುನಿಕ ಸಾಮಾಜಿಕ ವ್ಯವಸ್ಥೆಗಳಲ್ಲಿ ವ್ಯಕ್ತಿ ಸಮುದಾಯಗಳು ತಮ್ಮ ಅಂತಃಶಕ್ತಿಯನ್ನು ಕಳೆದುಕೊಳ್ಳುತ್ತವೆ. ಬಹುರೂಪಿ ಪ್ರಕ್ರಿಯೆಗಳಲ್ಲಿ ವ್ಯಕ್ತಿ ಸಮುದಾಯಗಳು ಕ್ಷೋಭೆಗೆ ಒಳಗಾಗಿ ಶಕ್ತಿಹೀನತೆಯನ್ನು ನಿರಂತರವಾಗಿ ಅನುಭವಿಸುತ್ತವೆ.

ಹಾಗೆಯೇ ತಾವು ರೂಢಿಸಿಕೊಂಡಿದ್ದ ಕೌಶಲ್ಯಗಳು, ಪ್ರಾವೀಣ್ಯತೆಗಳು ಕಾಲಾನುಕ್ರಮದಲ್ಲಿ ಅಪಮೌಲ್ಯಕ್ಕೆ ಒಳಗಾಗುತ್ತವೆ. ಆಧುನಿಕತೆ ಇಂಥದ್ದನ್ನು ತನ್ನೊಳಗೆ ಸೆಳೆದುಕೊಳ್ಳುತ್ತಿರುತ್ತದೆ. ಕಾಲ ಮತ್ತು ಅವಕಾಶಗಳ ಮಧ್ಯೆ ದೂರೀಕರಿಸುವಿಕೆ ಮತ್ತು ಅಮೂರ್ತ ವ್ಯವಸ್ಥೆಗಳ ಮೂಲಕ ಕೌಶಲ್ಯ ಹೀನರನ್ನಾಗಿಸುವುದು ನಿರಂತರವಾಗಿ ಕಂಡುಬರುತ್ತದೆ. ಆದ್ದರಿಂದ, ಪರಂಪರಾನುಗತವಾಗಿ ಬಂದಂತಹ ಕುಲಕಸುಬುಗಳು ಅವಹೇಳನಕ್ಕೆ ಒಳಗಾಗಿ ಆಧುನಿಕ ಅವಕಾಶದಲ್ಲಿ ತನ್ನ ನೆಲೆಯನ್ನು ಕಳೆದುಕೊಳ್ಳುತ್ತವೆ. ಇಂಥ ಪ್ರಕ್ರಿಯೆಗಳಲ್ಲಿ ವ್ಯಕ್ತಿ ಅಥವಾ ಸಮುದಾಯಕ್ಕೆ ಏನೇನೂ ನಿರ್ಧಾರಾತ್ಮಕ ವಾಸ್ತವಗಳು ಇರುವುದಿಲ್ಲ. ಇದೊಂದು ಸಂಕೀರ್ಣ ಸ್ಥಿತಿಯಾಗಿದ್ದು ಶಕ್ತಿಹೀನತೆಯು ಒಂದು ಮನೋಧರ್ಮವಾಗಿ ಪರಿಣಮಿಸುತ್ತದೆ. ಬದುಕು ಇಲ್ಲಿ ಅಸ್ಥಿರತೆಗೆ ಒಳಪಟ್ಟು ಸಂಬಂಧಗಳು ತೀವ್ರವಾಗಿ ಔಪಚಾರಿಕ ಸ್ಥಿತಿಯನ್ನು ತಲುಪುತ್ತವೆ. ಇಂತಹ ಸಂದರ್ಭದಲ್ಲಿ ರೊಮ್ಯಾಂಟಿಕ್ ಆದ ಕಲ್ಪನೆಗಳು ಭೂತವನ್ನು ಪುನರ್ ನಿರ್ಮಿಸಿಕೊಡಲು ಪ್ರಯತ್ನಿಸುತ್ತಿರುತ್ತವೆ. ಇಲ್ಲಿ ವ್ಯಕ್ತಿಸಾಮರ್ಥ್ಯ ಅಥವಾ ಸಮುದಾಯ ಸಾಮರ್ಥ್ಯವೆನ್ನುವುದು ನಿರ್ವೀರ್ಯ ಸ್ಥಿತಿಗೆ ಒಳಪಡುತ್ತದೆ. ಈ ವಿದ್ಯಮಾನವು ಐಡೆಂಟಿಟಿಯಲ್ಲಿ ಬಿರುಕನ್ನು ಉಂಟುಮಾಡುತ್ತದೆ. ಈ ಬಿರುಕನ್ನು ನಿವಾರಿಸಿಕೊಳ್ಳಲು ವ್ಯಕ್ತಿ ಪ್ರಯತ್ನಿಸಿದಷ್ಟು ಸೋಲುತ್ತಿರುತ್ತಾನೆ/ಳೆ.

೩. ಅಧಿಕಾರ ಮತ್ತು ಗೊಂದಲ

ಮೂರನೇ ಸಂದಿಗ್ಧತೆಯು ಆಧುನಿಕಗೊಂಡಷ್ಟೂ ಸಾಮಾಜಿಕ ಬದುಕಿನಲ್ಲಿ ಭಿನ್ನ ಭಿನ್ನ ಅಧಿಕಾರ ಸಂಬಂಧಗಳನ್ನು ಜೀವಿಸುತ್ತಿರುತ್ತದೆ. ಇಂತಹ ಅಧಿಕಾರಕ್ಕೆ ಸ್ಪರ್ಧಿಗಳು ಅಧಿಕವಾಗಿಯೂ ಕಾಣಿಸಿಕೊಳ್ಳುತ್ತಾರೆ. ಇಂತಹ

ಆಧುನಿಕ ಅವಕಾಶದಲ್ಲಿ ಪರಂಪರೆ ಕೇಂದ್ರವಾಗುತ್ತದೆ. ಸ್ಥಳೀಯತೆಯಲ್ಲಿ ಇದು ಬೇರೂರದೆ ಸಾರ್ವಜನಿಕ ಬದುಕಲ್ಲಿ ನಿರ್ದಿಷ್ಟ ಸಾಂಸ್ಥಿಕ ರೂಪವನ್ನು ತಾಳಬಹುದು. ಇದನ್ನು ಎಷ್ಟು ವಿರೋಧಿಸಿದರೂ ಸಹ ಒಂದು ಪ್ರಧಾನ ಪ್ರಭಾವಶಾಲಿ ವ್ಯವಸ್ಥೆಯಾಗಿ ಉಳಿದುಕೊಳ್ಳುತ್ತದೆ. ಬ್ರಾಹ್ಮಣ್ಯ ಅಥವಾ ಪುರೋಹಿತಶಾಹಿ ಅಥವಾ ಧರ್ಮವು ಆಧುನಿಕ ಅಧಿಕಾರ ಜ್ಞಾನಕೇಂದ್ರಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸೆಣಸಾಡುತ್ತಿರುತ್ತದೆ. ಇಲ್ಲಿ ಸೆಕ್ಯುಲರ್ ಸಿದ್ಧಾಂತಿಗಳೊಡನೆ ಅದು ತೀವ್ರವಾದ ವಿವಾದಗಳನ್ನು ಸೃಷ್ಟಿಸುತ್ತದೆ. ಆಧುನಿಕತೆಯ ಈ ರೂಪವು ಧಾರ್ಮಿಕ ಪರಂಪರೆಯಾಗಿ ಅನುಕೂಲತೆಗಳನ್ನು ನಿಯಂತ್ರಿಸತೊಡಗುತ್ತದೆ. ಇಲ್ಲಿ ಆಧುನಿಕತೆಯನ್ನು ಸಂದೇಹಿಸುತ್ತಲೇ ಈ ಸಾಂಪ್ರದಾಯಿಕ ಪರಂಪರೆಗಳು ಪುನರುತ್ತಾನಗೊಳ್ಳುತ್ತಿರುತ್ತವೆ. ಸೆಕ್ಯುಲರಿಸಂ ನೆಲೆಯಲ್ಲಿ ಆಧುನಿಕತೆಯು ವೃತ್ತಿಪರವಾಗಿ, ವಸ್ತು-ಸಂಗತಿಯಲ್ಲಿ ಪ್ರಾವಿಣ್ಯವನ್ನು ಗಳಿಸಿಕೊಂಡು ಅಧಿಕಾರಯುತವಾಗಿ ಪುನಃ ತನ್ನನ್ನು ತಾನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತದೆ. ಇದು ಸಾಂಸ್ಥಿಕವಾಗಿ ಅನೇಕರನ್ನು ಶಿಸ್ತುಬದ್ಧ ತರಬೇತಿಗೂ ಒಳಪಡಿಸುತ್ತದೆ. ಇಲ್ಲಿ ಬಹುರೂಪಿ ಅಧಿಕಾರ ಕೇಂದ್ರಗಳು ಪೈಪೋಟಿಯಲ್ಲಿ ತೊಡಗಿ ಯಾಜಮಾನ್ಯವನ್ನು ಸ್ಥಾಪಿಸಲು ಹವಣಿಸುತ್ತಿರುತ್ತವೆ. ಇವುಗಳ ಮಧ್ಯೆ ವ್ಯಕ್ತಿ ಮತ್ತು ಸಮುದಾಯಗಳು ಅಧೀನರಾಗಿ ವರ್ತಿಸುವಂತೆ ಅಥವಾ ಯಾಜಮಾನ್ಯಕ್ಕೆ ಸಮ್ಮತಿಯನ್ನು ಪಡೆದುಕೊಳ್ಳಲಾಗುತ್ತದೆ. ಇದು ನಿರ್ದಯಿ ವಾತಾವರಣವನ್ನು ನಿರ್ಮಿಸುತ್ತದೆಯಲ್ಲದೆ ಎಲ್ಲವೂ ಗೊಂದಲಕ್ಕೊಳಗಾದಂತೆ ತೋರಿಸುತ್ತದೆ.

೪. ವೈಯಕ್ತಿಕತೆ ಮತ್ತು ಸಿದ್ಧ ವಸ್ತುವಿನ ಅನುಭವ:

ಈ ನಾಲ್ಕನೆಯ ಸಂದಿಗ್ಧವು ಆಧುನಿಕತೆಯ ಒಡಲೊಳಗೆ ಹುಟ್ಟಿಕೊಂಡು ಗ್ರಾಹಕ ಪ್ರವೃತ್ತಿಯನ್ನು ತೀವ್ರಗೊಳಿಸುತ್ತಿರುತ್ತದೆ. ಇದನ್ನು ಪದಾರ್ಥ ಬಂಡವಾಳಶಾಹಿ ಎಂದು ಕರೆಯಲಾಗುತ್ತದೆ. ಬಂಡವಾಳಶಾಹಿ ಆಧುನಿಕತೆಯು ಒಂದು ಪ್ರಧಾನ ಸಂಸ್ಥೆಯಾಗಿ ಬಂಡವಾಳವನ್ನು ಅಧಿಕ ಅಧಿಕವಾಗಿ ಕ್ರೋಢೀಕರಿಸಿಕೊಳ್ಳುವ ಪ್ರಕ್ರಿಯೆಯನ್ನೇ ಆಧುನಿಕತೆಯೆಂದು ಬಿಂಬಿಸುತ್ತಿರುತ್ತದೆ. ಇಂತಹ ಬಂಡವಾಳಶಾಹಿ ವ್ಯವಸ್ಥೆಯು ಎಲ್ಲವನ್ನು ಪದಾರ್ಥವನ್ನಾಗಿಸುತ್ತಿರುತ್ತದೆ. ಇಲ್ಲಿ ಎಲ್ಲವೂ ಒಂದು ವಿನಿಮಯ ದರಕ್ಕೆ ಒಳಗಾಗಿ ಲಾಭ ದೃಷ್ಟಿಯೇ ಮುಖ್ಯವಾಗುತ್ತದೆ. ಇದು ಮುಂದೆ ಶ್ರಮವನ್ನು ಮತ್ತಷ್ಟು ಅಪಮೌಲ್ಯಕ್ಕೆ ಒಳಪಡಿಸುತ್ತಿರುತ್ತದೆ. ಅಂತಿಮವಾಗಿ ಐಡೆಂಟಿಟಿಯನ್ನು ಅರಳಿಸಿಕೊಳ್ಳುವ ದುಡಿಮೆಯ ಮಾರುಕಟ್ಟೆಯ ಮೌಲ್ಯಕ್ಕೆ ಒಳಗಾಗುತ್ತದೆ. ಇದು ಪಾರಂಪರಿಕ ಬದುಕನ್ನು ಅವಹೇಳನಕ್ಕೆ ಒಳಪಡಿಸುತ್ತಿರುತ್ತದೆ. ಒಂದು ರೀತಿ ಬದುಕು ಭ್ರಷ್ಟತೆಗೆ ಒಳಗಾಗುತ್ತದೆ. ಇಲ್ಲಿ ಮಾರುಕಟ್ಟೆ ಪ್ರೇರಿತ ವ್ಯಕ್ತಿಸಾಧನೆ ಮುಖ್ಯವಾಗಿ ಐಡೆಂಟಿಟಿಯು ಅಲ್ಲೇ ಮೌಲ್ಯಮಾಪನಕ್ಕೊಳಗಾಗುತ್ತಿರುತ್ತದೆ. ಇಲ್ಲಿ ವೈಯಕ್ತಿಕ ಸ್ವಾತಂತ್ರ್ಯವೆನ್ನುವುದು ಭ್ರಮಾತ್ಮಕವಾಗಿ ನಿರೂಪಣೆಗೊಳ್ಳುತ್ತದೆ. ಜಾಹೀರಾತು ಮಾಧ್ಯಮಗಳು ಹೀಗೆ ವ್ಯಕ್ತಿಯನ್ನು ಗ್ರಾಹಕ ಪ್ರವೃತ್ತಿಗೆ ಅಡಿಯಾಳಾಗಿ ಸುತ್ತಾ ಹೋಗುತ್ತಿರುತ್ತವೆ. ಇಂತಹ ಸಮಯದಲ್ಲಿ ಐಡೆಂಟಿಟಿಯ ಪರಿಕಲ್ಪನೆಗಳು ಗ್ರಾಹಕ ಸಂಸ್ಕೃತಿಯ ಮೂಲಕವೇ ವಿವರಣೆಗೊಳಗಾಗುತ್ತವೆ.

೫. ಬಲಿಪಶು ಮತ್ತು ಕರ್ತೃತ್ವ:

ಈ ಪರಿಕಲ್ಪನೆಗಳು ಶೋಷಣೆಯನ್ನು ವಿವರಿಸಿಕೊಳ್ಳುವಾಗ ಬಳಕೆಯಾಗುವಂತಹವು. ಇಲ್ಲಿ ದ್ವಿಮಾನೋಪಾದಿಯಲ್ಲಿ ಶೋಷಕ ಮತ್ತು ಶೋಷಿತರ ನಡುವಿನ ಸಂಬಂಧಗಳನ್ನು ವ್ಯಾಖ್ಯಾನಿಸಲಾಗುತ್ತದೆ. ಒಮ್ಮೆ ವ್ಯಕ್ತಿ ಅಥವಾ ಸಮುದಾಯವೊಂದು ಶೋಷಣೆಗೊಂಡಲ್ಲಿ ಅದು ಯಾವತ್ತೂ ಶೋಷಣೆಯನ್ನು ತನ್ನದೇ ಎಂದು ಭಾವಿಸಿ ಜೀವಿಸುತ್ತಿರುತ್ತದೆ. ಇಲ್ಲಿ ತನ್ನ ಕರ್ತೃತ್ವ ಶಕ್ತಿಯನ್ನು ಶೋಷಕನಿಗೆ ಆರೋಪಿಸುತ್ತಾ ಕೊನೆಗೆ ಒಂದು ಬಾಹ್ಯ ಶಕ್ತಿಯನ್ನು ವಿಮೋಚನೆಗಾಗಿ ಬಯಸುತ್ತಿರುತ್ತದೆ. ಇಂತಹ ಸಮಯದಲ್ಲಿ ಶೋಷಣೆಯನ್ನು ವಿವರಿಸಿಕೊಳ್ಳುವಾಗ ಸರಳರೇಖಾತ್ಮಕ ಕಾಲ ಮತ್ತು ಅವಕಾಶಗಳಲ್ಲೇ ನಿರೂಪಿಸಿಕೊಂಡು ಮತ್ತಷ್ಟು ಶಕ್ತಿಹೀನತೆಯನ್ನು ಅನುಭವಿಸುತ್ತ ಬಲಿಪಶುತನವನ್ನು ಖಾಯಂ ಆಗಿ ಉಳಿಸಿಕೊಳ್ಳುತ್ತದೆ. ಪಾವುಲೊಫ್ರಿಯರಿ ಇದನ್ನು ಶೋಷಕನೊಳಗಿನ ಶೋಷಕ ಎಂದು ಕರೆಯುತ್ತಾನೆ. ಇದರ ಮತ್ತೊಂದು ರೂಪವೆಂದರೆ ಪ್ರತಿಯೊಂದು ಸಲವೂ ತನಗಾದ ಅವಮಾನವನ್ನು/ನೋವನ್ನು ನಿರೂಪಿಸುವಾಗ ವ್ಯಕ್ತಿ/ಸಮುದಾಯವು ಅದೇ ಸ್ಥಿತಿಯನ್ನು ಪುನರಾವರ್ತಿಸುತ್ತಿರುತ್ತದೆ. ಆದ್ದರಿಂದ ನ್ಯಾಯದ ಕಲ್ಪನೆಯು ಕೊನೆಗೆ ನಿರಂತರವಾಗಿ ಅನ್ಯಾಯವನ್ನು ಉಳಿಸಿಕೊಳ್ಳುತ್ತಲೇ ಸಾಗುತ್ತಿರುತ್ತದೆ. ಆದ್ದರಿಂದ ಆಧುನಿಕ ಅವಕಾಶದಲ್ಲಿ ಅವಮಾನವೆನ್ನುವುದು ಏಕವ್ಯಕ್ತಿಯ ನಿರೂಪಣೆಯಿಂದ ಬಹುರೂಪಗಳಲ್ಲಿ ವ್ಯವಸ್ಥಿತವಾಗಿ ಸಾಂಸ್ಥಿಕ ರೂಪಗಳನ್ನು ಗಮನಿಸಬೇಕಾಗುತ್ತದೆ. ಇಲ್ಲಿ ವಿಮೋಚನೆ ಎನ್ನುವುದು ಯಾವುದಾದರೊಂದು ಮಾದರಿಯನ್ನು ಕಟ್ಟಿಕೊಳ್ಳದೆ ಮಾದರಿಗಳೆಲ್ಲವನ್ನು ನಿರ್ದಯವಾಗಿ ಬಿಟ್ಟು ಹೊಸತನ್ನು ಕಟ್ಟಿಕೊಳ್ಳುವತ್ತ ಸಾಗಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ನ್ಯಾಯದ ಕಲ್ಪನೆಯು ಅದಂತಹ ಅನ್ಯಾಯವನ್ನು ಸರಿಪಡಿಸುವಷ್ಟಕ್ಕೆ ಸೀಮಿತಗೊಳ್ಳಬೇಕಾಗುತ್ತದೆ.



ಕಾರ್ಲ್ ಮಾರ್ಕ್ಸ್

ಹುಟ್ಟು ಸಾವುಗಳ ಮಧ್ಯೆ ಬದುಕಿನ ಅನುಭವವನ್ನು ಪ್ರಜ್ಞಾಪೂರ್ವಕವಾಗಿ ಇಲ್ಲವೇ ಅಪ್ರಜ್ಞಾಪೂರ್ವಕವಾಗಿ ಗ್ರಹಿಸುವಲ್ಲಿ ಈ ಲೋಕದೃಷ್ಟಿಯು ಕ್ರಿಯಾಶೀಲವಾಗಿರುತ್ತದೆ. ಆಧುನಿಕತೆಯ ಸಂದರ್ಭದಲ್ಲಿ ಪರಿಕಲ್ಪಿತವಾಗಿರುವ ಕಾಲ ಮತ್ತು ಅವಕಾಶಗಳೊಳಗೆ ಸಂವಾಹನ ಮಾಧ್ಯಮ ಏರ್ಪಡುವಾಗ ಜನರು ಆ ಸಂಬಂಧಗಳನ್ನು ಒಂದು ನಿಶ್ಚಿತ ಆಕೃತಿ ಮತ್ತು ವಿನ್ಯಾಸಗಳ ಮೂಲಕ ವಿವರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಜಾತಿಯಂತಹ ಗುರುತುಗಳಿಗೆ ನಿಷ್ಠರಾಗಿರುವಂತೆ ಒತ್ತಾಯಿಸಲು ಸಹ ಲೋಕದೃಷ್ಟಿಯು ಬಳಕೆಯಾಗುತ್ತದೆ. ಇಲ್ಲಿ ಮಾತೃಭಾಷೆಯನ್ನು ಕಲಿತವರು ಅಪ್ರಜ್ಞಾಪೂರ್ವಕವಾಗಿ ಕ್ರಿಯಾಶೀಲವಾಗಿರುತ್ತದೆ.

೬. ಭ್ರಾಮಾತ್ಮೀಕರಣ ಮತ್ತು ನಂಬಿಕೆ:

ಆಧುನಿಕತೆಯ ಬಹುರೂಪಿ ಸಾಧ್ಯತೆಗಳು ಜಾರಿಯಾಗುವಾಗ ಅದನ್ನು ಗ್ರಹಿಸಿ ತನ್ನದಾಗಿಸಿಕೊಳ್ಳುವ ಒಂದು ವಿಶಿಷ್ಟ ಪರಿಕಲ್ಪಿಸುವಿಕೆಯ ವ್ಯವಸ್ಥೆಯು ಪ್ರತಿಯೊಂದು ಸಮುದಾಯದಲ್ಲೂ ಇರುತ್ತದೆ. ಇದನ್ನು ಲೋಕದೃಷ್ಟಿಯಂತಲೂ ಕರೆಯಬಹುದು. ಹುಟ್ಟು ಸಾವುಗಳ ಮಧ್ಯೆ ಬದುಕಿನ ಅನುಭವವನ್ನು ಪ್ರಜ್ಞಾಪೂರ್ವಕವಾಗಿ ಇಲ್ಲವೇ ಅಪ್ರಜ್ಞಾಪೂರ್ವಕವಾಗಿ ಗ್ರಹಿಸುವಲ್ಲಿ ಈ ಲೋಕದೃಷ್ಟಿಯು ಕ್ರಿಯಾಶೀಲವಾಗಿರುತ್ತದೆ. ಆಧುನಿಕತೆಯ ಸಂದರ್ಭದಲ್ಲಿ ಪರಿಕಲ್ಪಿತವಾಗಿರುವ ಕಾಲ ಮತ್ತು ಅವಕಾಶಗಳೊಳಗೆ ಸಂವಾಹನ ಮಾಧ್ಯಮ ಏರ್ಪಡುವಾಗ ಜನರು ಆ ಸಂಬಂಧಗಳನ್ನು ಒಂದು ನಿಶ್ಚಿತ ಆಕೃತಿ ಮತ್ತು ವಿನ್ಯಾಸಗಳ ಮೂಲಕ ವಿವರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಜಾತಿಯಂತಹ ಗುರುತುಗಳಿಗೆ ನಿಷ್ಠರಾಗಿರುವಂತೆ ಒತ್ತಾಯಿಸಲು ಸಹ ಲೋಕದೃಷ್ಟಿಯು ಬಳಕೆಯಾಗುತ್ತದೆ. ಇಲ್ಲಿ ಮಾತೃಭಾಷೆಯನ್ನು ಕಲಿತವರು ಆ ಭಾಷೆಯ ವ್ಯಾಕರಣ ತಿಳಿದಿರಬೇಕೆಂದೇನು ಇಲ್ಲ. ಹಾಗೆಯೇ ಲೋಕದೃಷ್ಟಿಯು ಸಹ ಅಪ್ರಜ್ಞಾಪೂರ್ವಕವಾಗಿ ಕ್ರಿಯಾಶೀಲವಾಗಿರುತ್ತದೆ. ಈ ಮೂಲಕ ವ್ಯಕ್ತವಾಗುವ ನಡಾವಳಿ ರೂಪಗಳು ವಿಧಿವತ್ತಾಗಿ ಆಚರಣೆಗೊಳಪಟ್ಟು ಸ್ಥಿರೀಕರಣಕ್ಕೊಳಗಾಗುತ್ತಿರುತ್ತವೆ. ಇಂತ ಪ್ರಕ್ರಿಯೆಯಲ್ಲಿ ಒಂದು ವಿವರವಾದ ಚಿಂತನಾ ವಿನ್ಯಾಸವು ಹೊರಹೊಮ್ಮುತ್ತಿರುತ್ತದೆ. ಹಾಗಾಗಿ ಪ್ರತಿಯೊಂದು ಸಮುದಾಯವು ಸಹ ತನ್ನದೇ ಆಚರಣೆ ನಡಾವಳಿ ಶ್ರೇಷ್ಠ ಎಂದು ಭಾವುಕವಾಗಿ ಪ್ರತಿಪಾದಿಸುತ್ತದೆ. ತಮ್ಮದಲ್ಲದ ಆಚರಣೆಗಳನ್ನು ಅಪಮೌಲ್ಯೀಕರಿಸುವುದು ಉಂಟು. ತಮ್ಮ ಪ್ರಾದೇಶಿಕ ವಿಷಯದಲ್ಲೂ ಇಂತಹ ಕ್ರಿಯೆಗಳು ಒಂದು ಮಿಥ್ಯ ಲೋಕವನ್ನು ಸೃಷ್ಟಿಸುತ್ತವೆ. ಇದನ್ನೇ ಭ್ರಮಾತ್ಮೀಕರಣವೆಂದು ಕರೆಯುವುದು. ಇಲ್ಲಿ ಎರಡೂ ಆಯಾಮಗಳು ಕಾಣುತ್ತವೆ;

೧. ಭ್ರಮಾತ್ಮೀಕರಣಗೊಳಿಸುವ ಕ್ರಿಯೆ

೨. ಭ್ರಮಾತ್ಮೀಕರಣಕ್ಕೊಳಪಟ್ಟ ಸ್ಥಿತಿ

ಮೊದಲನೆಯದು ಕರ್ತರಿ ಪ್ರಯೋಗವಾದರೆ, ಮತ್ತೊಂದು ಕರ್ಮಣಿ ಪ್ರಯೋಗ. ಆಧುನಿಕತೆಯನ್ನು ಪಡೆದುಕೊಂಡಂತಹ ಅಕ್ಷರಸ್ಥರು ಹಾಗೂ ಮೇಲ್ಜಾತಿ ಜನರು ಅನಕ್ಷರಸ್ಥ ಸಮುದಾಯಗಳನ್ನು ತಮ್ಮ ಬದುಕಿನ ಬಗ್ಗೆಯೇ ಅಪನಂಬಿಕೆಯನ್ನುಟ್ಟಿಸುತ್ತ ಅವರನ್ನು ಭ್ರಮಾತ್ಮೀಕರಣಕ್ಕೆ ಒಳಪಡಿಸುತ್ತಾರೆ. ಇಲ್ಲಿ ಕೀಳರಿಮೆಯನ್ನು ಚಾರಿತ್ರಿಕ ವಾಸ್ತವವನ್ನಾಗಿ ಕಟ್ಟಿಕೊಟ್ಟು ಜನರನ್ನು, ಸಮುದಾಯಗಳನ್ನು ಗೊಂದಲಕ್ಕೆ ಒಳಪಡಿಸುತ್ತಾರೆ. ಇಲ್ಲಿ ತಮ್ಮವರಲ್ಲದವರಿಂದ ಏನನ್ನೋ ಮರೆಮಾಚುವುದು, ಸೂಕ್ಷ್ಮ ವಿವರಗಳನ್ನು ಗೋಜಲುಗೊಳಿಸುವುದು, ಅನುಭವ-ಕ್ರಿಯೆ-ಪ್ರಕ್ರಿಯೆಗಳನ್ನು ಮುಚ್ಚಿಟ್ಟು ನಿಗೂಢಗೊಳಿಸುವುದು ನೈಜ ಸಂಗತಿಗಳನ್ನು ವಿರೂಪಗೊಳಿಸುವುದು ಇತ್ಯಾದಿಗಳು

ನಿರಂತರವಾಗಿ ನಡೆಯುತ್ತಿರುತ್ತವೆ. ಅಂತಿಮವಾಗಿ ವಿವೇಚನೆ ತಪ್ಪಿಹೋಗಿ ವಿವೇಕವು ಭ್ರಮೆಯಾಗಿ ಪರಿವರ್ತನೆಯಾಗುತ್ತದೆ. ಇಲ್ಲಿ ಮಿಥ್ಯಗಳು ರಾರಾಜಿಸುತ್ತವೆ. ಜನರು ಗಾಳಿಯಲ್ಲಿ ಗುದ್ದಾಡಿದಂತೆ ತಮ್ಮ ಬದುಕನ್ನು ಹುಸಿಗೊಳಿಸಿಕೊಳ್ಳಿತ್ತಿರುತ್ತಾರೆ.

ಭ್ರಮೆಗೆ ಒಳಪಟ್ಟ ಸ್ಥಿತಿಯು ಗೊಂದಲದಲ್ಲಿರುವ ಭಾವವನ್ನು ವಿಷಾದೀಕರಿಸುತ್ತದೆ. ಈ ಭಾವವನ್ನು ಭ್ರಮೆಯೇ ಉಂಟುಮಾಡುತ್ತದೆ. ಇಲ್ಲಿ ವ್ಯಕ್ತಿ ಮತ್ತು ಸಮುದಾಯ ತನ್ನನ್ನು ತಾನೇ ಅರ್ಥ ಮಾಡಿಕೊಳ್ಳದೆ ಗೊಂದಲದಲ್ಲಿದ್ದು ಗೊಂದಲದ ಅರಿವು ಅವರಿಗಿರುವುದಿಲ್ಲ. ಇದನ್ನೇ **ಸುಭಿಕ್ಷಾಶಾಂತಿ** ಎಂದು ನಿರ್ಮಿಸುವ ಸನ್ನಿವೇಶಗಳು ಹೇರಳವಾಗಿರುತ್ತವೆ. ಇಂತಹ ಮಿಥ್ಯೆಗಳನ್ನು ಉಳಿಸಿಕೊಳ್ಳಲು ಘಟನೆಗಳಿಗೆ ನಿರ್ದಿಷ್ಟ ರೀತಿಯ ನಿರ್ದೇಶನಗಳನ್ನು ನೀಡಲಾಗುತ್ತದೆ. ತನ್ನ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು ಇತರರಲ್ಲಿ ಬದಲಾವಣೆಯನ್ನು ಉಂಟುಮಾಡುವ ಪ್ರಯತ್ನಗಳೂ ಕಾಣುತ್ತವೆ. ಇಲ್ಲಿ ವಸ್ತುಸ್ಥಿತಿಯನ್ನು ಮರೆಮಾಚುತ್ತಾ ಸಾರ್ವಜನಿಕ ಅವಕಾಶದಲ್ಲಿ ರಹಸ್ಯವನ್ನು ಕಾಪಾಡಿಕೊಳ್ಳಲಾಗುತ್ತದೆ. ಹೀಗೆ ವ್ಯಕ್ತಿ ಮತ್ತು ಸಮುದಾಯ ತಮ್ಮ ಕ್ರಿಯೆಗಳಿಗೆ ತಾವೇ ಜವಾಬ್ದಾರರಾಗದಂತಹ ಹೀನಸ್ಥಿತಿ ನಿರ್ಮಾಣವಾಗುತ್ತದೆ. ವ್ಯಕ್ತಿಯ ಅಭಿಪ್ರಾಯಗಳನ್ನು, ಕ್ರಿಯೆಗಳನ್ನು ತನ್ನದಲ್ಲದ ದೃಷ್ಟಿಕೋನದೊಳಗೆ ಅಡಗಿಸಲಾಗುತ್ತದೆ. ಹೀಗೆ ಮಾಡುವುದರಿಂದ ಸಮಾಜದ ಸಿದ್ಧ ರೂಪಗಳನ್ನು, ಸಂಪ್ರದಾಯಗಳನ್ನು ಚಾಚೂ ತಪ್ಪದೇ ಉಳಿಸಿಕೊಳ್ಳಲಾಗುತ್ತದೆ ಮತ್ತು ಮುಂದುವರೆಸಲಾಗುತ್ತದೆ. ಶ್ರೇಣೀಕರಣದ ಮೇಲು ತುದಿಯಲ್ಲಿರುವ ಜನ ಇಂತಹ ಕಾರ್ಯವನ್ನು ಸದಾ ಕೈಗೊಳ್ಳುತ್ತಿರುತ್ತಾರೆ. ಹೀಗೆನ್ನುವಾಗ ಇವರೇನೂ ಭ್ರಮಾತ್ಮೀಕರಣಕ್ಕೆ ಒಳಪಡಲಿಲ್ಲವೆಂದು ಅರ್ಥೈಸಬೇಕಿಲ್ಲ. ಆದರೆ ಇಲ್ಲಿ ಓರಿಯಂಟಲಿಸ್ಟ್ ವಿದ್ವತ್ತು ಇಂತಹ ಭ್ರಮೆಯನ್ನು ಸಂಘಟಿಸಿದ್ದನ್ನು ಈಗಾಗಲೇ ನೋಡಿದ್ದೇವೆ. ಆದರೆ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಜಾತಿ ಐಡೆಂಟಿಟಿಯು ಚರಿತ್ರೆಯಿಲ್ಲದ ವ್ಯಕ್ತಿಯ ಹುಟ್ಟಿನಲ್ಲೇ ಬಂದು ವ್ಯಕ್ತಿಯನ್ನು ನಿರಂತರ ಕಾಯುತಿರುತ್ತದೆ. ಹಾಗಾಗಿ ಆ ವ್ಯಕ್ತಿಗೆ ಜ್ಞಾತೃ ಸ್ಥಿತಿಯಷ್ಟೇ ಉಳಿದು ಬೌದ್ಧಿಕ ದಿವಾಳಿತನವನ್ನು ಅನುಭವಿಸಬೇಕಾಗುತ್ತದೆ.

೭. ರಕ್ತ ಸಂಬಂಧಿ ಮತ್ತು ಸಂಬಂಧೀಕರಣ:

ಇಲ್ಲಿ ಶ್ರೇಣೀಕೃತ ಮೌಲ್ಯಗಳನ್ನು ಸಹಜವೆಂಬಂತೆ ಕೌಟುಂಬಿಕ ಮಾದರಿಗಳಲ್ಲಿ ತೋರಿಸಲಾಗುತ್ತದೆ. ಅಪರಿಚಿತವಾದುದನ್ನು ಪರಿಚಿತ ಸಂಬಂಧಗಳಲ್ಲಿ ನಿರೂಪಿಸಲಾಗುತ್ತದೆ. ಸಂಕೀರ್ಣತೆಯನ್ನು ರಕ್ತಸಂಬಂಧಿಯಾಗಿ ಸರಳೀಕರಿಸಲಾಗುತ್ತದೆ. ಹಾಗೆಯೇ ಬ್ರಾಹ್ಮಣ ಮತ್ತು ದಲಿತ ಎನ್ನುವುದು ಸಹ ಯಾವುದೇ ಸಮಸ್ಯೆಗಳಿಲ್ಲದ ಸ್ಥಿತಿಯಾಗಿ ಕಾಣುವಂತೆ ಮಾಡಲಾಗುತ್ತದೆ.

೮.ಸಾಂಕೇತಿಕತೆ ಮತ್ತು ವಿನಿಮಯ ಜಾಲ:

ಇಲ್ಲಿ ಮಾಧ್ಯಮಗಳದ್ದೇ ಜಗತ್ತು. ಈ ಮಾಧ್ಯಮಗಳೇ ಸಾಂಕೇತಿಕ ಮೌಲ್ಯ ವ್ಯವಸ್ಥೆಗಳನ್ನು ನಿರೂಪಿಸುತ್ತಿರುತ್ತದೆ. ಇಲ್ಲಿ ಮೌಲ್ಯ ಎಂದರೆ ಮಾರುಕಟ್ಟೆಯಲ್ಲಿ ನಿರ್ಧಾರವಾಗುವ ಬೆಲೆ ಅಷ್ಟೆ. ಉದಾಹರಣೆಗೆ ಕರ್ನಾಟಕದ ದಲಿತ ಸ್ವಾಭಿಮಾನಕ್ಕೆ ಹೆಸರಾದ ಕವಿ ಸಿದ್ಧಲಿಂಗಯ್ಯ ಮತ್ತು ಕ್ರಿಕೆಟ್ ಲೋಕದ ಸಚಿನ್ ತೆಂಡೂಲ್ಕರ್‌ರನ್ನು ತೆಗೆದುಕೊಳ್ಳೋಣ. ಇವರಿಬ್ಬರಿಗೂ ಸಹ ಸಾಂಕೇತಿಕ ಮೌಲ್ಯಗಳಿವೆ. ಕವಿ ಸಿದ್ಧಲಿಂಗಯ್ಯನವರ ಮೌಲ್ಯವು ಸಾಂಸ್ಕೃತಿಕವಾಗಿದ್ದರೆ, ತೆಂಡೂಲ್ಕರ್ ಮಾರುಕಟ್ಟೆ ಮೌಲ್ಯ

ವ್ಯಕ್ತಿ ಮತ್ತು ಸಮುದಾಯ ತಮ್ಮ ಕ್ರಿಯೆಗಳಿಗೆ ತಾವೇ ಜವಾಬ್ದಾರರಾಗದಂತಹ ಹೀನಸ್ಥಿತಿ ನಿರ್ಮಾಣವಾಗುತ್ತದೆ. ವ್ಯಕ್ತಿಯ ಅಭಿಪ್ರಾಯಗಳನ್ನು, ಕ್ರಿಯೆಗಳನ್ನು ತನ್ನದಲ್ಲದ ದೃಷ್ಟಿಕೋನದೊಳಗೆ ಅಡಗಿಸಲಾಗುತ್ತದೆ. ಹೀಗೆ ಮಾಡುವುದರಿಂದ ಸಮಾಜದ ಸಿದ್ಧ ರೂಪಗಳನ್ನು, ಸಂಪ್ರದಾಯಗಳನ್ನು ಚಾಚೂ ತಪ್ಪದೇ ಉಳಿಸಿಕೊಳ್ಳಲಾಗುತ್ತದೆ ಮತ್ತು ಮುಂದುವರೆಸಲಾಗುತ್ತದೆ. ಶ್ರೇಣೀಕರಣದ ಮೇಲು ತುದಿಯಲ್ಲಿರುವ ಜನ ಇಂತಹ ಕಾರ್ಯವನ್ನು ಸದಾ ಕೈಗೊಳ್ಳುತ್ತಿರುತ್ತಾರೆ. ಇವರು ಭ್ರಮಾತ್ಮೀಕರಣಕ್ಕೆ ಒಳಪಡಲಿಲ್ಲವೆಂದು ಅರ್ಥೈಸಬೇಕಿಲ್ಲ. ಆದರೆ ಇಲ್ಲಿ ಓರಿಯಂಟಲಿಸ್ಟ್ ವಿದ್ವತ್ತು ಇಂತಹ ಭ್ರಮೆ ಯನ್ನು ಸಂಘಟಿಸಿದ್ದನ್ನು ಈಗಾಗಲೇ ನೋಡಿದ್ದೇವೆ.

ವನ್ನು ಹೊಂದಿದ್ದಾರೆ. ಆದರೆ ಮಾಧ್ಯಮಗಳ ಮೂಲಕ ಇಲ್ಲಿ ಕವಿ ಸಿದ್ಧಲಿಂಗಯ್ಯನವರಿಗೆ ಒಂದು ಮೌಲ್ಯವಿದ್ದರೆ, ತೆಂಡೂಲ್ಕರ್‌ಗೆ ಮತ್ತೊಂದು ಮೌಲ್ಯವಿದೆ. ಹೀಗೆ ಮಾಧ್ಯಮಗಳು ವ್ಯಕ್ತಿ ಸಮುದಾಯಗಳಿಗೆ ಸಾಮಾಜಿಕ ಮೌಲ್ಯೀಕರಣ ಮಾಡಿ ಆ ಸಮುದಾಯ ಮತ್ತು ವ್ಯಕ್ತಿಗಳನ್ನು ಅಳೆಯುತ್ತವೆ. ಈ ಪ್ರಕ್ರಿಯೆಯಲ್ಲಿ ರೂಪಾಯಿ ಡಾಲರ್ ಎದುರು ಅಪಮೌಲ್ಯಗೊಂಡಂತೆ ಜನರು ಸಹ ಅಪಮೌಲ್ಯಕ್ಕೊಳಗಾಗುತ್ತಿರುತ್ತಾರೆ. ಇದನ್ನೆ ಮುಂದೆ ಸ್ಥಿರೀಕರಿಸಿ ಉಳಿಸಿಕೊಳ್ಳಲಾಗುತ್ತದೆ. ಇಲ್ಲಿ ಅಧಿಕಾರವು ಅಗೋಚರವಾಗಿ ಕ್ರಿಯಾಶೀಲವಾಗಿರುತ್ತದೆ.

ಹೀಗೆ ಸಂದಿಗ್ಧತೆಗಳನ್ನು ಮೇಲಿನ ಪಟ್ಟಿಗೆ ಮತ್ತೂ ಸೇರಿಸುತ್ತಾ ಹೋಗಬಹುದು. ಅವುಗಳು ಕೇವಲ ಕೆಲವು ಪರಿಕಲ್ಪನಾ ಮಾದರಿಗಳಷ್ಟೆ.

"ಆಲೋಚಿಸುದೆಂದರೆ ಗುರುತಿಸುವುದು ಎಂದರ್ಥ". ಅಂದರೆ ಆಲೋಚನೆಯ ಮೂಲಕವೇ ನಾವು ಆಯ್ಕೆಗಳನ್ನು ಮಾಡುತ್ತಿರುತ್ತೇವೆ. ಹೀಗೆ ಮಾಡುವಾಗ ಒಂದು ಸಿದ್ಧಾಂತವನ್ನು ಮೇಲೇರಿಸಿ ಮತ್ತೊಂದನ್ನು ಕೆಳಗಿಳಿಸುತ್ತೇವೆ. ಅಲ್ಲದೆ ಅರಿವಿಲ್ಲದಂತೆಯೇ ನಮಗೆ ಬೇಕಾದುದ್ದನ್ನಷ್ಟೆ ನೋಡಲು/ಕೇಳಲು /ಚಿಂತಿಸಲು ಬಯಸುತ್ತೇವೆ. ಉದಾ: ಅನುಭವಾತ್ಮಕ ಮೀಮಾಂಸೆಯು ಜನಾಂಗೀಯ, ಪುರುಷ ಪ್ರಧಾನ ಮತ್ತು ಜಾತಿಯ ತಾರತಮ್ಯಗಳನ್ನು ನಿರೂಪಿಸುತ್ತದೆ. ಪುರುಷ ಪ್ರಧಾನ ಮೌಲ್ಯಗಳು ಒಬ್ಬ ಗಂಡಸಿನ ವರ್ಗಕ್ಕೆ ಅನುಕೂಲಸಿಂಧುವಾಗಿರುವಂತೆ ಅದು ನಿಯಮವಾಗಿ ಮಹಿಳೆ ಎನ್ನುವುದು ಗಂಡಸಿನ ಮತ್ತೊಂದು ರೂಪವಷ್ಟೆ ಆಗುತ್ತದೆ ಎಂದು ಸಹಜ ರೀತಿಯಲ್ಲಿ ಕೋರಿಸಲಾಗುತ್ತದೆ.

ಭವಿಷ್ಯದ ನಕಾಶೆ:

ಒಬ್ಬ ವಿದ್ವಾಂಸ ಹೀಗೆಂದಿದ್ದಾನೆ, "ಆಲೋಚಿಸುದೆಂದರೆ ಗುರುತಿಸುವುದು ಎಂದರ್ಥ". ಅಂದರೆ ಆಲೋಚನೆಯ ಮೂಲಕವೇ ನಾವು ಆಯ್ಕೆಗಳನ್ನು ಮಾಡುತ್ತಿರುತ್ತೇವೆ. ಹೀಗೆ ಮಾಡುವಾಗ ಒಂದು ಸಿದ್ಧಾಂತವನ್ನು ಮೇಲೇರಿಸಿ ಮತ್ತೊಂದನ್ನು ಕೆಳಗಿಳಿಸುತ್ತೇವೆ. ಅಲ್ಲದೆ ಅರಿವಿಲ್ಲದಂತೆಯೇ ನಮಗೆ ಬೇಕಾದುದ್ದನ್ನಷ್ಟೆ ನೋಡಲು/ಕೇಳಲು/ಚಿಂತಿಸಲು ಬಯಸುತ್ತೇವೆ. ಉದಾಹರಣೆಗೆ ಅನುಭವಾತ್ಮಕ ಮೀಮಾಂಸೆಯು ಜನಾಂಗೀಯ, ಪುರುಷ ಪ್ರಧಾನ ಮತ್ತು ಜಾತಿಯ ತಾರತಮ್ಯಗಳನ್ನು ಸಹಜವೆಂಬಂತೆ ನಿರೂಪಿಸುತ್ತದೆ. ಪುರುಷಪ್ರಧಾನ ಮೌಲ್ಯಗಳು ಒಬ್ಬ ಗಂಡಸಿನ ವರ್ಗಕ್ಕೆ ಅನುಕೂಲಸಿಂಧುವಾಗಿರುವಂತೆ ಅದು ನಿಯಮವಾಗಿ ಮಹಿಳೆ ಎನ್ನುವುದು ಗಂಡಸಿನ ಮತ್ತೊಂದು ರೂಪವಷ್ಟೆ ಆಗುತ್ತದೆ ಎಂದು ಸಹಜ ರೀತಿಯಲ್ಲಿ ಕೋರಿಸಲಾಗುತ್ತದೆ. ಹಾಗಾದರೆ ಮೀಮಾಂಸೆಯನ್ನು ಕಟ್ಟಲು ಭಿನ್ನ ಮಾರ್ಗಗಳು ಇಲ್ಲವೆ?

ಸಮುದಾಯಗಳಲ್ಲಿ ತಾವು ಪಾರಂಪರಿಕವಾಗಿ ರೂಢಿಸಿಕೊಂಡಿರುವ ಕೆಲವು ಪರಿಕಲ್ಪನಾ ವಿಧಾನಗಳಿವೆ. ಸದ್ಯಕ್ಕೆ ಅವನ್ನು ಕ್ರಿಯಾ ಮೀಮಾಂಸೆಯೆಂದು ಕರೆಯೋಣ. ಅಂದರೆ ಕ್ರಿಯೆಗಳ ಬಗ್ಗೆ ಅರಿವು ಅಲ್ಲ. ಬದಲು ಅರಿಯುವ ಸಲುವಾಗಿ ಕ್ರಿಯೆಯಲ್ಲಿ ತೊಡಗುವುದು. ಇಲ್ಲಿ ಕಲಿಯುವಿಕೆ ಎನ್ನೋದು ಒಂದು ಪ್ರದರ್ಶನವೇ ಆಗುತ್ತದೆ. ವ್ಯಕ್ತಿ ಮತ್ತು ಸಮುದಾಯಗಳು ಈ ಕಲಿಯುವಿಕೆಯಲ್ಲಿ ಸಂಪೂರ್ಣ ತೊಡಗಿಕೊಳ್ಳುತ್ತವೆ. ಇದನ್ನು ಮಾಡಬೇಕಾದರೆ ಏಕ ಘನೀಕೃತ ಸತ್ಯಗಳನ್ನು ಸಾಪೇಕ್ಷಗೊಳಿಸುವುದು ಬಹು ಮುಖ್ಯವಾಗುತ್ತದೆ. ಅಂದರೆ ಸ್ಥಿರೀಕರಿಸಿದ ಡಿಕ್ಷನರಿ ಅರ್ಥಗಳನ್ನು ತಿರಸ್ಕರಿಸಬೇಕಾಗುತ್ತದೆ. ಇದಕ್ಕೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ನಾವು ಕ್ರೈಸ್ತ ಧರ್ಮವನ್ನು ಹೇಗೆ ವ್ಯಾಖ್ಯಾನಿಸುತ್ತೇವೆ? ಕ್ರೈಸ್ತ ಧರ್ಮವೆಂದರೆ ಆ ಧರ್ಮಕ್ಕೆ ಜೀಸಸ್ ಅನಿವಾರ್ಯವಾಗಿಬಿಡುತ್ತದೆ. ಹೀಗಾದಾಗಲೇ ಅದು ತನ್ನ ಐಡೆಂಟಿಟಿಯನ್ನು ಉಳಿಸಿಕೊಳ್ಳುವುದು. ಆದರೆ ಈ ಧರ್ಮ ವಿಶ್ವಾಸಾತ್ಮಕವಾಗಬೇಕಾದರೆ ಅದು ತನ್ನ ಐಡೆಂಟಿಟಿಯನ್ನು ಸೆಕ್ಯುಲರ್ ಆಗಿಸಬೇಕಾಗುತ್ತದೆ. ಆದರೆ ಅದೊಂದೇ ಧರ್ಮ ಸತ್ಯ ಎನ್ನುವಾಗ ಅದು ತನ್ನ ಹಿಂಬಾಲಕರಿಗೆ ಮಾತ್ರ ಎಂದಾಗುತ್ತದೆ. ಆಗ ಅದು ತನ್ನ ನಿರ್ದಿಷ್ಟತೆಯನ್ನು ಕಾಯ್ದುಕೊಳ್ಳುತ್ತದೆ. ಇಲ್ಲಿ ಅದು ಮತ್ತೊಂದು ಧರ್ಮವನ್ನು ಸತ್ಯವೆಂದು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ಅದು ಮತ್ತೊಂದನ್ನು ಅನ್ಯಕರಿಸುವ ಅಥವಾ ತಪ್ಪೆಂದು ನಿರೂಪಿಸುವ ಮೂಲಕ ತನ್ನ ಐಡೆಂಟಿಟಿಯನ್ನು ಸ್ಥಾಪಿಸುತ್ತದೆ.

ಹೀಗೆಯೇ ನಾವು ಸತ್ಯದ ಉತ್ಪಾದನೆಯಲ್ಲಿ ತೊಡಗುತ್ತೇವೆ. ಅದನ್ನು ಅಧಿಕಾರ ಕೇಂದ್ರವಾಗುವಂತೆ ಮಾಡಿ ಸ್ಥಿರತೆಗೆ ಅದು ಮುಖ್ಯ ಎಂದು ಬಿಡುತ್ತೇವೆ. ಇದು ಅಂತಿಮವಾಗಿ ಶೋಷಣೆ ಮತ್ತು ಹಿಂಸೆಗೆ ಪ್ರಚೋದನೆಯಾಗುತ್ತದೆ. ಇದೇ ರೀತಿಯ ವಿಶ್ಲೇಷಣೆಯನ್ನು ಯಾವುದಕ್ಕೂ ಅನ್ವಯಿಸಬಹುದು. ವೇದಗಳಿಂದ ಹಿಡಿದು ಚಳುವಳಿಗಳ ತನಕ ಅದನ್ನು ವಿಸ್ತರಿಸಿಕೊಳ್ಳಬಹುದು.

ಇದಕ್ಕೆ ಪೂರಕವಾಗಿ ಜಾತಿ ವ್ಯವಸ್ಥೆಯನ್ನು ವಿಶ್ಲೇಷಣೆಗೆ ತೆಗೆದುಕೊಳ್ಳೋಣ. ಅದನ್ನು ವಿವರಿಸುವುದರಿಂದ ಒಂದು ಸಂದಿಗ್ಧತೆಯನ್ನು, ನಾವೇ ಸೃಷ್ಟಿಸಿಕೊಂಡು ಆ ಜಾತಿಯ ಭಾಗವಾಗಿ ಒಂದು ಜಾತಿಯಾಗಿ ಬಿಡುತ್ತೇವೆ.

(ಮಿಗಿಲೇ ಪಾಟಿಕೆ)

ದಲಿತ ಎನ್ನುವುದು ಆಧುನಿಕೋತ್ತರ ಸಾಂಸ್ಕೃತಿಕ ವಿದ್ಯಮಾನವೇ?

ದೃಷ್ಟಿಕೋನ

ಇತಿಹಾಸದ ಬಗೆಗಿನ ಮಾರ್ಕ್ಸ್‌ವಾದಿ ವ್ಯಾಖ್ಯಾನವು, ಮನುಷ್ಯ ಅಸ್ತಿತ್ವಕ್ಕೆ ಸಂಬಂಧಿಸಿದ ತತ್ವ ಶಾಸ್ತ್ರೀಯ ವಿವರಣೆಯಲ್ಲಿ ಅಂತರ್ಗತಗೊಂಡ ಮೋಸವನ್ನು ತೊಡೆದು ಹಾಕಲು ನೆರವಾಯಿತು. ಅದರಂತೆ ಮನುಷ್ಯನ ಮೂಲಸತ್ವವನ್ನು ಉತ್ಪಾದನಾ ಸಂಬಂಧಗಳ ಮೊತ್ತ ಎಂದು ವಿವರಿಸಲಾಯಿತು. ಇದು ಅಂತಿಮವಾಗಿ ಮಾನವನ ವೈಯಕ್ತಿಕತೆಗೆ ಹೆಚ್ಚಿನ ಒತ್ತು ನೀಡುತ್ತದೆ. ಆದಾಗ್ಯೂ, ಸೋವಿಯತ್ ಯೂನಿಯನ್‌ನ ಪತನ ಹಾಗೂ ತದನಂತರದ ಬೆಳವಣಿಗೆಗಳು ಅನನ್ಯತೆಯ ಪ್ರಶ್ನೆಯನ್ನು ಮತ್ತೆ ಶೋಧಿಸುವುದಕ್ಕೆ ದಾರಿ ಮಾಡಿಕೊಟ್ಟಿತು. ಈ ಮೂಲಕ ವ್ಯಕ್ತಿಗತ ಅನನ್ಯತೆಯನ್ನು ರೂಪಿಸುವ ಭಿನ್ನ ಅಂಶಗಳನ್ನು ಗಮನಿಸುವುದಕ್ಕೆ ಸಾಧ್ಯವಾಯಿತು.

ಡಾ|| ಪಿ.ಕೆ ಪೋಕರ್
ಅನು: ಕೆ. ವಿದ್ಯಾ

ರಾಚನಿಕೋತ್ತರ ಮತ್ತು ಆಧುನಿಕೋತ್ತರ ಸಿದ್ಧಾಂತಗಳು ಶೋಷಿತ ಮತ್ತು ತಳ ಸಮುದಾಯಗಳ ಸಾಂಸ್ಕೃತಿಕ ರಚನೆಗಳನ್ನು ಅರ್ಥೈಸಿಕೊಳ್ಳುವ ವಿಶ್ಲೇಷಣಾ ವಿಧಾನವನ್ನು ಕಂಡುಕೊಂಡಿರುವುದು ಈಗ ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ರಾಚನಿಕೋತ್ತರ ಸಿದ್ಧಾಂತಗಳು ಬರುವುದಕ್ಕೆ ಮುಂಚೆಯೇ, ಅಲ್ಜೀರಿಯಾದ ಕ್ರಾಂತಿಕಾರಿ ಹಾಗೂ ಮನೋವಿಜ್ಞಾನಿಯಾದ ಫ್ರಾನ್ಸ್ ಫ್ಯಾನನ್ (೧೯೨೫–೧೯೬೧) ವಸಾಹತು ಯಾಜಮಾನ್ಯರನ್ನು ಮೀರುವುದಕ್ಕೆ ಸಂಸ್ಕೃತಿ ನಿಷ್ಠ ಪ್ರತಿರೋಧವನ್ನು ರೂಪಿಸಿಕೊಳ್ಳುವ ಅಗತ್ಯವನ್ನು ವಸಾಹತುಗೊಳಗಾದ ವ್ಯಕ್ತಿಗೆ ನಿರೂಪಿಸಿದ. ವಸಾಹತುಶಾಹಿ ಹಾಗೂ ವಸಾಹತ್ತೋತ್ತರ ಇತಿಹಾಸದ ಸಾಂಸ್ಕೃತಿಕ ಅಂಶ (ಸಾಹಿತ್ಯವೂ ಸೇರಿ)ವನ್ನು ತನ್ನ ಚರ್ಚೆಗಳ ಕೇಂದ್ರ ಬಿಂದುವನ್ನಾಗಿ ಮಾಡಿಕೊಂಡಿದ್ದ.

ಅವರ ಎರಡು ಕೃತಿಗಳು The wretehed of the Earth. ಮತ್ತು ಬ್ಲಾಕ್ ಸ್ಕಿನ್, ವೈಟ್ ಮಾಸ್ಕ್ಸ್, ಸ್ಥಳೀಯ ಮತ್ತು ತಳಮಟ್ಟದ ಸಂಸ್ಕೃತಿಗಳಿಗೆ ಪ್ರಾಧಾನ್ಯತೆ ನೀಡುವುದರೊಂದಿಗೆ ಸಂಸ್ಕೃತಿಯ ಶೋಧನೆಗೆ ತೊಡಗಿತು. ಮಾರ್ಕ್ಸ್‌ವಾದವು ಮನುಷ್ಯ ಅಸ್ತಿತ್ವವನ್ನು ಸಾಮಾಜಿಕ ಸಂಬಂಧಗಳ ಮೊತ್ತ ಎಂದು ಭಾವಿಸಿಕೊಂಡಿತು. ಅದರಂತೆ ಅದೊಂದು ವರ್ಗಸಂಬಂಧ. ಇದು ಅಂತಿಮ ವಿಶ್ಲೇಷಣೆಯಲ್ಲಿ ವ್ಯಕ್ತಿಯ ಅಸ್ತಿತ್ವವನ್ನು ನಿರ್ಧರಿಸಿತು. ಈ ದೃಷ್ಟಿಯಿಂದ ಜಾತಿ ಮತ್ತು ಧರ್ಮವನ್ನು ಪರಿಗಣಿಸದೆ, ಜಗತ್ತಿನ ಪ್ರತಿಯೊಂದು ಭಾಗದಲ್ಲಿರುವ ಮನುಷ್ಯನು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಒಂದೇ ರೀತಿಯ ಅಸ್ತಿತ್ವವನ್ನು ಹೊಂದಿರುತ್ತಾನೆ.

ಸಾಮಾನ್ಯ ಸಂಗತಿ ಎಂದರೆ ಆರ್ಥಿಕ ಶೋಷಣೆಯು ಎಲ್ಲೆಡೆ ಹೆಚ್ಚು ಕಡಿಮೆ ಒಂದೇ ರೀತಿಯಾಗಿರುತ್ತದೆ ಹಾಗೂ ಬಹುತೇಕ ಪ್ರಪಂಚದ ಎಲ್ಲ ಭಾಗಗಳಲ್ಲಿ ಮನುಷ್ಯರು ಏಕರೀತಿಯ ಪ್ರತ್ಯೇಕೀಕರಣಕ್ಕೆ ಒಳಗಾಗಿದ್ದಾರೆ. ಇದೇ ಸಮಯದಲ್ಲಿ ವಸಾಹತುಶಾಹಿಯು ಸಂಸ್ಕೃತಿ ಕ್ಷೇತ್ರದಲ್ಲಿ ಪಾಶ್ಚಾತ್ಯ ಯಾಜಮಾನ್ಯಕ್ಕೆ ದಾರಿ ಮಾಡಿಕೊಟ್ಟಿತು. ಇದು ಬಿಳಿಬಣ್ಣ ಕೇಂದ್ರಿತ ಪಾಶ್ಚಾತ್ಯ ಜೀವನ ಶೈಲಿ ಹಾಗೂ ಕಪ್ಪು ಬಣ್ಣ ಕೇಂದ್ರಿತ ಆಫ್ರಿಕಾ ಜೀವನ ಶೈಲಿಯ ನಡುವೆ ಇದ್ದಂತಹ ಸಾಂಸ್ಕೃತಿಕ ಅನುಭವದಿಂದಾಗಿ ಫ್ಯಾನನ್ ಸಂಸ್ಕೃತಿ ನಿಷ್ಠ ಪ್ರತಿರೋಧವನ್ನು ನಿರೂಪಿಸಲು ಪ್ರೇರಣೆ ಪಡೆದುಕೊಂಡ.

ಫ್ಯಾನನ್ ವಸಾಹತು ವ್ಯಕ್ತಿತ್ವ ರೂಪುಗೊಳ್ಳುವಿಕೆ ಹಾಗೂ ಆ ಮೂಲಕ ವಸಾಹತುಶಾಹಿ ವಿರೋಧಿ ಪ್ರತಿರೋಧವು ಆರಂಭವಾದುದನ್ನು ವಿವರಿಸುತ್ತಾನೆ. ಮಾರ್ಕ್ಸ್‌ಗಿಂತ ಮುಂಚೆ ಮನುಷ್ಯ ಅಸ್ತಿತ್ವವನ್ನು ಮೀರುವ ವಿಧಾನವನ್ನು ದೈವೀ ಸ್ವರೂಪದಲ್ಲಿ ವಿವರಿಸಲಾಗಿತ್ತು.

ಇತಿಹಾಸದ ಬಗೆಗಿನ ಮಾರ್ಕ್ಸ್‌ವಾದಿ ವ್ಯಾಖ್ಯಾನವು, ಮನುಷ್ಯ ಅಸ್ತಿತ್ವಕ್ಕೆ ಸಂಬಂಧಿಸಿದ ತತ್ವಶಾಸ್ತ್ರೀಯ ವಿವರಣೆಯಲ್ಲಿ ಅಂತರ್ಗತಗೊಂಡ ಮೋಸವನ್ನು ತೊಡೆದು ಹಾಕಲು ನೆರವಾಯಿತು. ಅದರಂತೆ ಮನುಷ್ಯನ ಮೂಲಸತ್ವವನ್ನು ಉತ್ಪಾದನಾ ಸಂಬಂಧಗಳ ಮೊತ್ತ ಎಂದು ವಿವರಿಸಲಾಯಿತು. ಈ ಅರ್ಥದಲ್ಲಿ ಇದು ವರ್ಗ ಸಂಬಂಧವಾಗಿದೆ. ಇದು ಅಂತಿಮವಾಗಿ ಮಾನವನ ವೈಯಕ್ತಿಕತೆಗೆ ಹೆಚ್ಚಿನ ಒತ್ತು ನೀಡುತ್ತದೆ. ಆದಾಗ್ಯೂ, ಸೋವಿಯತ್ ಯೂನಿಯನ್‌ನ ಪತನ ಹಾಗೂ ತದನಂತರದ ಬೆಳವಣಿಗೆಗಳು ಅನನ್ಯತೆಯ ಪ್ರಶ್ನೆಯನ್ನು ಮತ್ತೆ ಶೋಧಿಸುವುದಕ್ಕೆ ದಾರಿ ಮಾಡಿಕೊಟ್ಟಿತು. ಈ ಮೂಲಕ ವ್ಯಕ್ತಿಗತ ಅನನ್ಯತೆಯನ್ನು ರೂಪಿಸುವ ಭಿನ್ನ ಅಂಶಗಳನ್ನು ಗಮನಿಸುವುದಕ್ಕೆ ಸಾಧ್ಯವಾಯಿತು. ಹೀಗೆಂದಾಗ ಅಸ್ತಿತ್ವ ರೂಪುಗೊಳ್ಳುವಿಕೆಯಲ್ಲಿ



ಪ್ರಮುಖ ಪಾತ್ರವಹಿಸುವ ಆರ್ಥಿಕ ಅಂಶವನ್ನು ನಾವು ನಿರಾಕರಿಸುತ್ತೇವೆ ಎಂದರ್ಥವಲ್ಲ. ವಾಸ್ತವವಾಗಿ, ಜ್ಞಾನಮೀಮಾಂಸೆಯಲ್ಲಿನ ರಾಚನಿಕ ಮತ್ತು ರಾಚನಿಕೋತ್ತರ ನೆಲೆಗಳು, ಫ್ಯಾನನ್ ಸೂಚಿಸಿದಂತೆ ಮನುಷ್ಯ ವ್ಯಾಖ್ಯಾನವನ್ನು ಪರಿಣಾಮಕಾರಿಯಾಗಿ ವೃದ್ಧಿಸಲು, ಮಾರ್ಕ್ಸ್‌ವಾದದ ಅರ್ಥೈಸುವಿಕೆಯನ್ನು ವಿಸ್ತರಿಸುವ ಪರಿಸರವನ್ನು ಸೃಷ್ಟಿಸುತ್ತದೆ. ಫ್ಯಾನನ್ ಪ್ರಕಾರ ವಸಾಹತುಶಾಹಿ ಸಂದರ್ಭದಲ್ಲಿ ಜೀವಿಸಿದ್ದ ಒಬ್ಬ ಬುದ್ಧಿಜೀವಿಯು ಮೂರು ಹಂತಗಳನ್ನು ದಾಟಿ ಬರುತ್ತಾನೆ. ಇದರ ಬಗ್ಗೆ ಫ್ಯಾನನ್‌ನ "The Wretehed of the Earth" ಉಲ್ಲೇಖವನ್ನು ಗಮನಿಸೋಣ.

"ಮೊದಲ ಹಂತದಲ್ಲಿ, ಒಬ್ಬ ನೇಟಿವ್ ಬುದ್ಧಿಜೀವಿಯು, ಆಕ್ರಮಣಕಾರಿ ಅಧಿಕಾರದ ಸಂಸ್ಕೃತಿಯನ್ನು ಜೀರ್ಣಿಸಿಕೊಂಡಿದ್ದಾನೆ ಎಂದು ಸಾಧಿಸುತ್ತಾನೆ. ಆತನ ಬರವಣಿಗೆಯ ಪ್ರತಿಯೊಂದು ಅಂಶವೂ ಸಹ ತನ್ನ ತಾಯ್ನಾಡಿನಲ್ಲಿನ ಸಂಖ್ಯೆಗೆ ತದ್ವಿರುದ್ಧವಾಗಿ ಹೋಲುತ್ತಿರುತ್ತದೆ. ಆತನ ಸ್ಫೂರ್ತಿ ಯೂರೋಪಿನದ್ದಾಗಿರುತ್ತದೆ ಹಾಗೂ ಆತನ ಪ್ರತಿಯೊಂದು ಕೆಲಸವನ್ನು ಆತನ ತಾಯ್ನಾಡಿನ ಸಾಹಿತ್ಯದೊಂದಿಗೆ ಗುರುತಿಸಬಹುದಾಗಿರುತ್ತದೆ. ಈ ಸಂದರ್ಭವು ವಿವರಣಾತೀತ ಜೀರ್ಣಕ್ರಿಯೆಯಾಗಿರುತ್ತದೆ.

ಎರಡನೇ ಹಂತದಲ್ಲಿ, 'ನೇಟಿವ್' ಎಂಬುದು ತಲ್ಲಣಗೊಂಡಿರುವಂಥದ್ದು. ಆತ ತಾನು ಏನಾಗಿದ್ದ ಎಂಬುದರ ಬಗ್ಗೆ ನೆನಪಿಸಿಕೊಳ್ಳಲು ನಿರ್ಧರಿಸುತ್ತಾನೆ. ನಾವು ಈಗ ವಿವರಿಸಿದ ಘಟ್ಟದಲ್ಲಿ ಮಗ್ನಗೊಳ್ಳಲು ಆತನ ಸೃಜನಾತ್ಮಕ ಕೆಲಸವು ತೊಡಗುತ್ತದೆ. ಆದರೂ ಆತ ತನ್ನ ಜನರ ಭಾಗವಾಗಿರುವುದಿಲ್ಲ. ಆತ ಅಲ್ಲಿ ಕೇವಲ ಅವರ ಬದುಕನ್ನು ನೆನಪಿಸಿಕೊಳ್ಳುವುದರಲ್ಲೇ ತೃಪ್ತಿಪಟ್ಟುಕೊಳ್ಳುತ್ತಾನೆ. ತನ್ನ ನೆನಪಿನಾಳದಲ್ಲಿ ಹೂತು ಹೋಗಿರುವ ಬಾಲ್ಯಾವಸ್ಥೆಯ ದಿನಗಳ ಘಟನೆಗಳನ್ನು ನೆನಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ತಾನು ಪಡೆದುಕೊಂಡಂಥ ಸೌಂದರ್ಯ ಮೀಮಾಂಸೆಯ ಬೆಳಕಿನಲ್ಲಿ ಹಳೆಯ

ಪುರಾಣಗಳ ಮರು ಓದಿಗೆ ತೊಡಗಿಕೊಳ್ಳುತ್ತಾನೆ. ಇತರ ಚೌಕಟ್ಟಿನ ಮೂಲಕ ತಾನು ಶೋಧಿಸಿದ ಜಗತ್ತನ್ನು ಪರಿಕಲ್ಪಿಸುತ್ತಾನೆ.

ಅಂತಿಮವಾಗಿ ಮೂರನೇ ಹಂತ. ಇದನ್ನು ಹೋರಾಟದ ಹಂತ ಎಂದು ಗುರುತಿಸುತ್ತಾರೆ. ಈ ಹಂತದಲ್ಲಿ ಈ ನೇಟಿವ್ ವ್ಯಕ್ತಿ ತನ್ನ ಜನರಲ್ಲಿ ತನ್ನನ್ನೇ ತಾನು ಕಳೆದುಕೊಂಡು ಆ ಜನರೊಡನೆ ದ್ವಂದ್ವ ರೀತಿಯಲ್ಲಿ ಹೋರಾಟದ ಸಾಹಿತ್ಯವನ್ನು ರಚಿಸಿಕೊಳ್ಳತ್ತಾ ಒಂದು ರಾಷ್ಟ್ರೀಯ ಸಾಹಿತ್ಯ ರಚನೆಯಲ್ಲಿ ತೊಡಗಿಕೊಳ್ಳುತ್ತಾನೆ! (ಫ್ರಾನ್ಸ್ ಫ್ಯಾನನ್ The Wretehed Earth, Penguin, ೧೯೬೭, ೧೭೮-೧೭೯)

ಹೀಗೆ ವಸಾಹತುಶಾಹಿ ಆಳ್ವಿಕೆಯ ಸಂಸ್ಕೃತಿಯನ್ನು ವಸಾಹ ತುಶಾಹಿಗೊಳಗಾದವರು ವಿರೋಧಿಸುವ ಅವಶ್ಯಕತೆಯಿದೆ ಎಂದು ಫ್ಯಾನನ್ ಹೇಳುತ್ತಾನೆ. ಅಂಥ ವ್ಯಕ್ತಿಯ ಸ್ವರೂಪವನ್ನು ಕೆಳಗಿನ ಎರಡು ಸಂಗತಿಗಳು ಸಾಧ್ಯವಾಗಿಸುತ್ತವೆ. ಒಂದು ಆಧುನಿಕ ವಸಾಹತುಶಾಹಿ ಶಿಕ್ಷಣದಲ್ಲಿ ತೊಡಗುವುದರ ಮೂಲಕ; ಇನ್ನೊಂದು ತಾನು ಬದುಕಿದ ಸಂಸ್ಕೃತಿಯನ್ನು ನೆನಪಿಸಿಕೊಳ್ಳುವುದರ ಮೂಲಕ. ಫ್ಯಾನನ್‌ನ ಕ್ರಾಂತಿಕಾರಿ ಆಲೋಚನೆಗಳು ಗೂಗಿ ವಾ ಥಿಯೊಂಗ್ ನಂಥ ಅನೇಕ ಬರಹಗಾರರನ್ನು ಪ್ರಭಾವಿಸಿದೆ ಹಾಗೂ ಅನೇಕ ಕಾರ್ಯಕರ್ತರನ್ನು ಮತ್ತು ಸಾಹಿತ್ಯವನ್ನು ಸೃಷ್ಟಿಸಿದೆ. ಆದಾಗ್ಯೂ, ೧೯೭೦ ರಿಂದೀಚೆಗೆ ಜಗತ್ತಿನಾದ್ಯಂತ ಎಲ್ಲ ಎಡಪಂಥೀಯ ಬುದ್ಧಿಜೀವಿಗಳು ಸಾಂಸ್ಕೃತಿಕ ರಚನೆಯ ವ್ಯಾಖ್ಯಾನಕ್ಕಾಗಿ ಫ್ರಾಯ್ಡ್, ಲ್ಯಾಕನ್, ಆಲ್ತೂಸರ್, ಬಾರ್ತ್, ಕ್ರಿಸ್ತೇವಾ, ರೇಮಂಡ್ ವಿಲಿಯಮ್ಸ್, ದೆರಿಡಾ ಮತ್ತು ಫುಕೊ ಅವರನ್ನು ಆಧರಿಸಿದ ಹೊಸ ಅಧ್ಯಯನಗಳೆಡೆಗೆ ತಿರುಗಿದರು. ಇದು "ಅಂತರ್ಗತ ಸಂಗತಿಗಳತ್ತ ತಿರುಗುವುದು" ಎಂಬ ಸೂತ್ರವನ್ನು ಮುಂದಿಟ್ಟಿತು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ "ಅನ್ಯ" ಎಂಬುದು ಸಂಸ್ಕೃತಿ ಯೊಳಗಡೆ ನಿರೂಪಿತವಾಗಿರುವುದರ ವಿಧಾನವನ್ನು ಲ್ಯಾಕನ್ ತೋರಿಸಿದ. ಅದೇ ರೀತಿ ಆಲ್ತೂಸರ್‌ನ ಐಡಿಯಾಲಜಿಯ ವಿವರಣೆಯು, ಅಡ್ಡಸೀಳುವ ಪ್ರಕ್ರಿಯೆಯು ಕರ್ತೃತ್ವದ ನಿರೂಪಣೆಯಾಗಿದೆ ಎಂದು ನಿರೂಪಿಸಿತು.

ಸಾಮಾನ್ಯ ಸಂಸ್ಕೃತಿ ರೂಪಿಕೆಯ ಬಗೆಗಿನ ರೇಮಂಡ್ ವಿಲಿಯಮ್ಸ್‌ನ ಮಹತ್ವಾಕಾಂಕ್ಷೆಯು ವಾಸ್ತವಿಕವಾಗಿ ಸಮಾಜವಾದಿ ದೃಷ್ಟಿಕೋನದಿಂದ ಬಂದದ್ದಾಗಿದೆ. ಅದೇ ಸಮಯದಲ್ಲಿ ಈ ಕ್ಷೇತ್ರದಲ್ಲಿನ ಅಧಿಪತ್ಯತೆಯ ತರ್ಕವನ್ನು ವಿಲಿಯಮ್ಸ್‌ಗೆ ಸಂಪೂರ್ಣವಾಗಿ ಬಹಿರಂಗ ಪಡಿಸಲಾಗಲಿಲ್ಲ. ವಿಲಿಯಮ್ಸ್ ಸಂಸ್ಕೃತಿಯನ್ನು ಭೌತಿಕ ಆಧಾರದಿಂದ ವಿಶ್ಲೇಷಿಸಿದ ಎಂಬುದರಲ್ಲಿ ಸಂಶಯವೇ ಇಲ್ಲ. ಆದಾಗ್ಯೂ, ಒಬ್ಬನ ಅಸ್ತಿತ್ವವನ್ನು ಕಟ್ಟಿಕೊಡುವಲ್ಲಿನ ಭಿನ್ನತೆಯು, ಭಿನ್ನ ಜನರ ಅಧಿಪತ್ಯ/ದಾಸ್ಯದಲ್ಲಿ ಪ್ರಮುಕ ಪಾತ್ರ ವಹಿಸುತ್ತದೆ. ನೇಟಿವ್ ಅಥವಾ ವಸಾಹತುಗೊಳಗಾಗದ ಹೊಸ ದೃಷ್ಟಿಕೋನದಿಂದ ತನ್ನ ಭೂತವನ್ನು ನೆನಪಿಸಿಕೊಂಡಾಗ ಕಂಡುಕೊಳ್ಳುವ ಒಂದು ಹಂತರವನ್ನು ಲ್ಯಾಕನ್ ಕನ್ನಡಿ ಹಂತ ಎಂದು ಕರೆಯುತ್ತಾರೆ. ಸಾಮಾನ್ಯ ಸಂಸ್ಕೃತಿಯ ಬದಲಿಗೆ ಭಿನ್ನ ವ್ಯಕ್ತಿಗಳು ಭಿನ್ನ ಸಂಸ್ಕೃತಿಗಳನ್ನು ನೆನಪಿಸಿಕೊಳ್ಳಬಹುದು. ವಾಸ್ತವವಾಗಿ ಇದು ವ್ಯಕ್ತಿಗತ ಭಿನ್ನ ವ್ಯತ್ಯಾಸವಾಗಿರದೆ ಸಾಮಾಜಿಕ ವ್ಯವಸ್ಥೆಯ [illegible] ಭಿನ್ನತೆಯನ್ನು [illegible]ಕೊಳ್ಳುವುದಾಗಿ

ರುತ್ತದೆ. ಅಪ್ರಜ್ಞಾ ಪೂರ್ವಕ ಅನುಭವವು ಏರುಪೇರುಗಳುಳ್ಳ 'ಡಯಾಕ್ರೋ ನಿಕ್' ರೇಖಾತ್ಮಕ ಕಾಲಕ್ಕಿಂತ ಸಿಂಕ್ರೋನಿಕ್ ಕಾಲದ (ಇದರಲ್ಲಿ ಭೂತ, ವರ್ತಮಾನ, ಭವಿಷ್ಯವು ಪರಸ್ಪರ ಸಂಬಂಧ ಹೊಂದಿದ್ದು, ಎಲ್ಲ ರೀತಿಯ ಹೇಳಲಾಗದ ರೂಪಗಳನ್ನು ಪರಸ್ಪರ ವ್ಯಾಪಿಸಿದೆ) ರೂಪದಲ್ಲಿ ಕೆಲಸ ಮಾಡುತ್ತದೆ ಎಂದು ಲ್ಯಾಕನ್ ಒತ್ತಿ ಹೇಳುತ್ತಾನೆ.

ಆದ್ದರಿಂದ ವ್ಯಕ್ತಿಗತ ಅನನ್ಯತೆ ಏನೋ ಆಗಿರದೆ ಪ್ರತ್ಯೇಕತೆಯಲ್ಲಿನ ಭೂತ ಅಥವಾ ವರ್ತಮಾನಗಳ ಸೃಷ್ಟಿಯಲ್ಲಿರುತ್ತದೆ. ಒಬ್ಬ ವ್ಯಕ್ತಿಯ ಬದುಕಿನ ಅನುಭವವೆಂದರೆ ಆತನ/ಆಕೆಯ ಪ್ರಜ್ಞಾಪೂರ್ವಕ ಮತ್ತು ಅಪ್ರಜ್ಞಾಪೂರ್ವಕ ಭೂತದ ಹಿನ್ನೆಲೆಯಲ್ಲಿ ವರ್ತಮಾನದ ಜಗತ್ತನ್ನು ಎದುರಿಸಲಾಗುತ್ತದೆ. ಆರ್ಥಿಕತೆಯ ಘನೀಕೃತ ರಚನೆಯನ್ನು ಹೊರತು ಪಡಿಸಿಯೂ ಸಾಂಸ್ಕೃತಿಕ ಭಿನ್ನತೆಗಳು ಸಾಮಾಜಿಕ ಜೀವನದಲ್ಲಿನ ಭಿನ್ನ ಅನನ್ಯತೆಗಳನ್ನು ಹಾಗೇ ಉಳಿಸಿಕೊಳ್ಳುತ್ತವೆ. ನಾವು ಸಾಮಾನ್ಯ ಆರ್ಥಿಕ ಸುಖಕಷ್ಟಗಳನ್ನು ಹಂಚಿಕೊಂಡರು ನಾವು ಯಾವ ಸಂಸ್ಕೃತಿಗೆ ಸೇರುತ್ತೇವೆಯೋ ಆ ಸಂಸ್ಕೃತಿಗೆ ಸಂಬಂಧಿಸಿದ ವಿವಿಧ ಸಾಂಸ್ಕೃತಿಕ ಅನನ್ಯತೆಗಳನ್ನು ಹೊಂದಿರುತ್ತೇವೆ. ಎಡ್ವರ್ಡ್ ಸಯೀದ್‌ರವರು "ಎಲ್ಲ ಸಂಸ್ಕೃತಿಗಳು ಒಂದಕ್ಕೊಂದು ಸೇರಿಕೊಂಡಿದೆ. ಯಾವುದು ಒಂದೇ ಆಗಿ ಅಥವಾ ಶುದ್ಧವಾಗಿ ಉಳಿದಿಲ್ಲ, ಎಲ್ಲವೂ ಬೆರೆಕೆ, ಮಿಶ್ರತಳಿಯ, ವಿಶೇಷವಾಗಿ ಭಿನ್ನತೆ ಉಳಿಸಿಕೊಂಡಂಥದ್ದು, ಬಹುರೂಪಿಯಾದದ್ದು" ಎಂದು ಹೇಳುತ್ತಾರೆ [ಎಡ್ವರ್ಡ್ ಸಯೀದ್, ಕಲ್ಚರ್ ಎಂಡ್ ಇಂಪೀರಿಯಲಿಸಂ (ಲಂಡಾನ್, ೧೯೯೩, ಪು.XXIX)]

ಎಡಪಂಥೀಯರು ಹಾಗೂ ನೆಹರೂಯನ್ ಸಮಾಜವಾದಿಗಳು ಬಂಡವಾಳಶಾಹಿ ಆಧುನಿಕತೆಯು ತನ್ನಷ್ಟಕ್ಕೆ ಜಾತಿ ತಾರತಮ್ಯವನ್ನು ತೊಡೆದುಹಾಕುತ್ತದೆ ಎಂಬ ಸಿದ್ಧಾಂತವನ್ನು ಮುಂದಿಟ್ಟರು. ಎಡಪಂಥೀಯ ಬುದ್ಧಿಜೀವಿಗಳು ಭಾರತೀಯ ಸ್ಥಿತಿಗತಿಯ ಬಗ್ಗೆ ವಸ್ತುನಿಷ್ಟ ಅಧ್ಯಯನವನ್ನು ಕೈಗೊಳ್ಳಲಿಲ್ಲ ಅಥವಾ ಅಭಿವೃದ್ಧಿ ಹೊಂದಿದ ಸಮಾಜಗಳ ಸೈದ್ಧಾಂತಿಕ ಮುಂದುವರಿಕೆ ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ಭಿನ್ನತೆಯ ಬಗ್ಗೆ ಕೆಲಸ ಮಾಡಿದ ಗ್ರಾಮ್ಸಿಯಂಥ ಎಡಪಂಥೀಯ ಬರಹಗಾರರನ್ನು ಅನುಸರಿಸಲು ತಯಾರಿರಲಿಲ್ಲ. ಪ್ರಸ್ತುತ ಭಾರತೀಯ ಸಂದರ್ಭದಲ್ಲಿ ಸೈದ್ಧಾಂತಿಕ ಶೌರ್ಯ ಮತ್ತು ಅದರ ಮುಂದುವರಿಕೆಯ ಬಗ್ಗೆ ಸ್ಪಷ್ಟತೆ ಕಂಡುಕೊಳ್ಳುವುದಕ್ಕಾಗಿ ಗ್ರಾಮ್ಸಿಪ್ರತಿಪಾದಿಸಿದ ಯಾಜಮಾನ್ಯ ಸಿದ್ಧಾಂತವನ್ನು ಅನುಸರಿಸಬೇಕು.

ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಭಿನ್ನತೆಗಳನ್ನು ಹಾಗು ಕರ್ತೃತ್ವದ ವೈಯಕ್ತಿಕ ಛಿದ್ರೀಕರಣವನ್ನು ಗುರುತಿಸುವ ಬದ್ಧತೆಗೆ ನಾವು ಒಳಗಾಗಿದ್ದೇವೆ. ಆದ್ದರಿಂದ ಒಬ್ಬ ವ್ಯಕ್ತಿ ಕಾರ್ಮಿಕನಾಗಿ ಪ್ರಕ್ಷೇಪಗೊಂಡಿದ್ದು ಆತನ ಕೆಲಸ ಹಾಗೂ ಅನುಭೋಗವು ಬಂಡವಾಳಶಾಹಿ ವ್ಯವಸ್ಥೆಯನ್ನು ನಿರ್ವಹಿಸುವುದಕ್ಕೆ ಅಗತ್ಯವಾಗಿದೆ. ಹಾಗೂ ಪ್ರಸ್ತುತ ಜಗತ್ತಿನಲ್ಲಿ ದಲಿತ ಮತ್ತು ಮಹಿಳೆ ಅಥವಾ ಕಪ್ಪುವರ್ಣೀಯ ಅಥವಾ ಮುಸ್ಲಿಮನೆಂಬುದು ಸಹ ಪ್ರಕ್ಷೇಪಗೊಂಡಿದೆ. ಅಂತಿಮವಾಗಿ ಒಬ್ಬ ದಲಿತನು ಪ್ರಸ್ತುತ ಜಗತ್ತಿನ ಶ್ರಮಜೀವಿ ವರ್ಗಕ್ಕೆ ಸೇರುತ್ತಾನೆ. ಯಾಕೆಂದರೆ ಆತ ಅಥವಾ ಆಕೆ ಗತ ಬಂಡವಾಳಶಾಹಿಯ ನೋವುಗಳನ್ನು ಹಂಚಿಕೊಳ್ಳುವುದಕ್ಕಷ್ಟೇ ಮೀಸಲಾಗಿರುತ್ತಾರೆ. ಉದಾಹರಣೆಗೆ ಆರ್ಥಿಕ ಸುಧಾರಣೆಗಳ ಪರಿಣಾಮವಾಗಿ ಆತ ಅಥವಾ ಆಕೆ ಜಾತಿ ಆಧಾರಿತ ಮೀಸಲಾತಿಯನ್ನು ಕಳೆದುಕೊಳ್ಳುತ್ತಾರೆ. ಇದು ಸಾರ್ವಜನಿಕ ವಲಯಗಳ ರಕ್ಷಣೆ ಹಾಗು ಕಲ್ಯಾಣ ಕಾರ್ಯಕ್ರಮಗಳ ಹಿಂತೆಗೆಯುರಿಕೆಯಲ್ಲಿ ಕೊನೆಯಾಗುತ್ತದೆ. ಇದೇ ಸಮಯದಲ್ಲಿ ದಲಿತ ವ್ಯಕ್ತಿಯ ಆತನ/ಆಕೆಯ ವರ್ತಮಾನವು ಮತ್ತೊಂದರಿಂದ ವಿಭಿನ್ನವಾದ ಕಾರಣಕ್ಕೆ ಮೇಲ್ಜಾತಿ ವ್ಯಕ್ತಿಗಿಂತ ಭಿನ್ನವಾದ ಅಸ್ತಿತ್ವ ಹೊಂದಿರುತ್ತಾನೆ/ಳೆ.

ಈ ಸಂಬಂಧದಲ್ಲಿ ಸಂಸ್ಕೃತಿಯು ತುಂಬಾ ಪ್ರಮುಖ ಪಾತ್ರವನ್ನು ವಹಿಸುತ್ತದೆ. ನಾಗರಿಕ ಸಮಾಜದ ಸಭ್ಯ ಸದಸ್ಯನಾಗಿ ವ್ಯಕ್ತಿಯನ್ನು ರೂಪಿಸುವುದಕ್ಕೆ ಇರುವ ಭಿನ್ನ ಸೈದ್ಧಾಂತಿಕ ರಾಜ್ಯಾಂಗ ಸಾಧನೆಗಳನ್ನು ಆಲ್ತೂಸರ್ ತೋರಿಸಿಕೊಟ್ಟ ಭಾರತೀಯ ಸಾಮಾಜಿಕ ಸಂದರ್ಭದಲ್ಲಿ, ರಾಜ್ಯಾಂಗದ ಅಸ್ತಿತ್ವ ಬಂದಾಗಿನಿಂದಲೇ ಜಾತಿವ್ಯವಸ್ಥೆಯ ಪ್ರಮುಖ ಪಾತ್ರವನ್ನು ವಹಿಸಿದೆ. ಇದು ಭಾರತೀಯ ವರ್ಗದ ಬಗೆಗಿನ ಯಾಂತ್ರಿಕ ಅರ್ಥೈಸುವಿಕೆಯಾಗಿದ್ದು, ಭಾರತೀಯ ಸಮಾಜದಲ್ಲಿ ಜಾತಿಪದ್ಧತಿಯ ಪಾತ್ರವನ್ನು ಗುರುತಿಸುವ ಸಾಧ್ಯತೆಯನ್ನೇ ನಿರ್ನಾಮಮಾಡಿದೆ. ಮೊದಲಿನ ಮಾರ್ಕ್ಸ್‌ವಾದಿಗಳು ಜಾತಿ ಶೋಷಣೆಯನ್ನು ಸೃಷ್ಟಿಸುವ ಆರ್ಥಿಕ ಸಂಗತಿಯನ್ನು ಗುರುತಿಸಿದರಷ್ಟೇ. ಇದರ ಪರಿಣಾಮವಾಗಿ ಆರ್ಥಿಕ ಕ್ಷೇತ್ರದಲ್ಲಿ ಬದಲಾವಣೆಯಾದರೆ ಜಾತಿ ಯಾಜಮಾನ್ಯ ನಿರ್ಮೂಲವಾಗುತ್ತದೆ ಎಂದು ನಂಬಿದ್ದರು. ನಾವು ಈ ವ್ಯಾಖ್ಯಾನವನ್ನು ಒಪ್ಪಿಕೊಂಡರೆ. ಬಂಡವಾಳಶಾಹಿ ಬಂದಾಗ ಜಾತಿವ್ಯವಸ್ಥೆಯು ತೊಲಗಬೇಕಿತ್ತು.

ಎಡಪಂಥೀಯರು ಹಾಗೂ ನೆಹರೂಯನ್ ಸಮಾಜವಾದಿಗಳು ಬಂಡವಾಳಶಾಹಿ ಆಧುನಿಕತೆಯು ತನ್ನಷ್ಟಕ್ಕೆ ಜಾತಿ ತಾರತಮ್ಯವನ್ನು ತೊಡೆದುಹಾಕುತ್ತದೆ ಎಂಬ ಸಿದ್ಧಾಂತವನ್ನು ಮುಂದಿಟ್ಟರು. ಎಡಪಂಥೀಯ ಬುದ್ಧಿಜೀವಿಗಳು ಭಾರತೀಯ ಸ್ಥಿತಿಗತಿಯ ಬಗ್ಗೆ ವಸ್ತುನಿಷ್ಟ ಅಧ್ಯಯನವನ್ನು ಕೈಗೊಳ್ಳಲಿಲ್ಲ ಅಥವಾ ಅಭಿವೃದ್ಧಿ ಹೊಂದಿದ ಸಮಾಜಗಳ ಸೈದ್ಧಾಂತಿಕ ಮುಂದುವರಿಕೆ ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ಭಿನ್ನತೆಯ ಬಗ್ಗೆ ಕೆಲಸಮಾಡಿದ ಗ್ರಾಮ್ಸಿಯಂಥ ಎಡಪಂಥೀಯ ಬರಹಗಾರರನ್ನು ಅನುಸರಿಸಲು ತಯಾರಿರಲಿಲ್ಲ. ಪ್ರಸ್ತುತ ಭಾರತೀಯ ಸಂದರ್ಭದಲ್ಲಿ ಸೈದ್ಧಾಂತಿಕ ಶೌರ್ಯ ಮತ್ತು ಅದರ ಮುಂದುವರಿಕೆಯ ಬಗ್ಗೆ ಸ್ಪಷ್ಟತೆ ಕಂಡುಕೊಳ್ಳುವುದಕ್ಕಾಗಿ ಗ್ರಾಮ್ಸಿಪ್ರತಿಪಾದಿಸಿದ ಯಾಜಮಾನ್ಯ ಸಿದ್ಧಾಂತವನ್ನು ಅನುಸರಿಸಬೇಕು.

ಆಂಟೋನಿಯೋ ಗ್ರಾಮ್ಸಿ ಹೀಗೆ ಬರೆಯುತ್ತಾರೆ:

"ಇಂಗ್ಲೆಂಡಿನಲ್ಲಿ ಅಭಿವೃದ್ಧಿ ಎನ್ನುವುದು ಫ್ರಾನ್ಸ್‌ಗಿಂತ ತುಂಬಾ ಭಿನ್ನವಾದುದು. ಆಧುನಿಕ ಕೈಗಾರಿಕೋದ್ಯಮದ

ಆಧಾರದಿಂದ ಬೆಳೆದ ಹೊಸ ಸಾಮಾಜಿಕ ಗುಂಪು ಅಸಾಧಾರಣ ಆರ್ಥಿಕ-ಕಾರ್ಪೊರೇಟ್ ಅಭಿವೃದ್ಧಿಯನ್ನು ತೋರಿಸುತ್ತದೆ. ಆದರೆ ಬೌದ್ಧಿಕ-ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಸದಾಕಾಡುತ್ತಲೇ ಮುನ್ನಡೆಯುತ್ತದೆ. ಅದೇ ಕೈಗಾರಿಕಾ ನಕಾಶೆಯಲ್ಲಿ ಒಂದು ಆರ್ಥಿಕ ಗುಂಪಾದ ಸಾವಯತ ಬುದ್ಧಿಜೀವಿ ವರ್ಗವೊಂದರ ಅಸ್ತಿತ್ವವಿರುವುದಾದರೂ, ಮತ್ತೊಂದು ಹಂತದಲ್ಲಿ ಹಳೆಯ ಊಳಿಗಮಾನ್ಯ ವರ್ಗವು ತನ್ನ ಏಕಸ್ವಾಮ್ಯತೆಯ ಸ್ಥಾನವನ್ನು ಸಾಂಕೇತಿಕವಾಗಿ ಹಿಡಿದುಕೊಂಡಿರುವುದನ್ನು ನಾವು ಕಾಣುತೇವೆ. ಇದು ತನ್ನ ಆರ್ಥಿಕ ಕಳೆದುಕೊಂಡರು, ರಾಜಕೀಯ-ಬೌದ್ಧಿಕ ಪ್ರಾಬಲ್ಯವನ್ನು ದೀರ್ಘಕಾಲದವರೆಗೆ ಉಳಿಸಿಕೊಂಡೇ ಬರುವುದಲ್ಲದೆ. ಪಾರಂಪರಿಕ ಬುದ್ಧಿಜೀವಿಗಳಾಗಿ ಜೀರ್ಣಿಸಿಕೊಂಡು ಅಧಿಕಾರದಲ್ಲಿರುವ ಹೊಸಗುಂಪಿಗೆ ನಿರ್ದೇಶನ ನೀಡುತ್ತ ಹಳೆ ಊಳಿಗಮಾನ್ಯ ಪ್ರಭುತ್ವವು ಒಂದು ದಾರದ ರೀತಿಯಲ್ಲಿ ಕೈಗಾರಿಕೋದ್ಯಮಿಗಳೊಂದಿಗೆ ಸೇರಿಕೊಂಡಿತ್ತು. ಇದು ಇತರ ದೇಶಗಳಲ್ಲಿ ಪಾರಂಪರಿಕ ಬುದ್ಧಿಜೀವಿಗಳು ಹೊಸ ಯಾಜಮಾನ್ಯ ವರ್ಗಗಳೊಂದಿಗೆ ಕರಾರುವಕ್ಕಾಗಿ ಸೇರಿಕೊಳ್ಳುವಂತೆ ಮಾಡುತ್ತಾನೆ", (ಆಂಟೋನಿಯೋ ಗ್ರಾಮ್ಸಿ, ಸಿಲೆಕ್ಷನ್ಸ್ ಫ್ರಮ್ ಪ್ರಿಸನ್ ನೋಟ್‌ಬುಕ್ಸ್, ಲಂಡನ್, ಪು.೧೮)

ಆದ್ದರಿಂದ ಗ್ರಾಮ್ಸಿ ವಿವರಿಸಿದ ಬುದ್ಧಿಜೀವಿಗಳ ಪಾತ್ರ ಮತ್ತು ರಾಜಕೀಯಬೌದ್ಧಿಕ ಯಾಜಮಾನ್ಯವು ಬೇರೆನಲ್ಲದೆ ಬಲಾಢ್ಯ ಗುಂಪಿನ ಸೈದ್ಧಾಂತಿಕ ಪ್ರಾಬಲ್ಯವೇ ಆಗಿರುತ್ತದೆ. ಭಾರತದಲ್ಲಿ ಬ್ರಿಟಿಷ್ ಆಡಳಿತಗಾರರಿಂದ ಅಧಿಕಾರವನ್ನು ಪಡೆಯುವುದನ್ನು ನಿರ್ವಹಿಸಲು ಊಳಿಗಮಾನ್ಯ ಪ್ರಭುತ್ವವು ಹೊಸದಾಗಿ ರೂಪುಗೊಂಡ ಕೈಗಾರಿಕಾ ವರ್ಗದೊಂದಿಗೆ ಕೈಜೋಡಿಸಿತು. ಇವರೇ ಸ್ವಾತಂತ್ರ್ಯನಂತರವೂ ಸಂಸ್ಕೃತಿಕ್ಷೇತ್ರದಲ್ಲಿ ಸೈದ್ಧಾಂತಿಕ ಪ್ರಾಬಲ್ಯವನ್ನು ಉಳಿಸಿಕೊಂಡರು. ನಾವು ಜಾತಿ ಶೋಷಣೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಮಾತನಾಡುವಾಗ ಮೇಲ್ಜಾತಿಯ ಪ್ರಾಬಲ್ಯವನ್ನು ಒಪ್ಪುವ ಪ್ರವೃತ್ತಿಯಿರುತ್ತದೆ. ಅಮೆರಿಕಾದಲ್ಲಿ ಭಿನ್ನ ಸಾಂಸ್ಕೃತಿಕ ಅಸ್ತಿತ್ವಗಳನ್ನು ಕಟ್ಟುವುದರ ಮೂಲಕ ಏಕಸಂಸ್ಕೃತಿಯನ್ನು ಶಿಥಿಲಗೊಳಿಸುವ ಉದ್ದೇಶಗಳನ್ನು ನಿರಚನಾವಾದಿಗಳು ಕೈಗೊಂಡಾಗ ಸರ್ಕಾರವು ತುಂಬಾ ತೊಂದರೆಗೊಳಗಾಯಿತು. ಆಗ ಸಾಂಸ್ಕೃತಿಕ ರಾಜಕಾರಣದ ಪರವಾಗಿದ್ದ ಸ್ಯಾಮುಯೆಲಾ ಹಂಚಿಗ್ಟನ್ ತನ್ನ ಹೊಸ ಪುಸ್ತಕ "ವೂ ಆರ್ ವಿ" ಎನ್ನುವುದರಲ್ಲಿ ನಿರಚನವಾದಿಗಳ ವಿರುದ್ಧ ನಿಂತ. ಹಂಚಿಗ್ಟನ್ ತನ್ನ ನಾಗರಿಕತೆಯ ಸಂಘರ್ಷದಲ್ಲಿ ಪ್ರತಿಪಾದಿಸಿದಂತೆ ವಾಸ್ತವವಾಗಿ ಇದೊಂದು ಅಣಕು ಹೋರಾಟವಾಗಿತ್ತು.

ಸಾಂಸ್ಕೃತಿಕ ಯುದ್ಧದ ಸಿದ್ಧಾಂತವನ್ನು ಪ್ರತಿಪಾದಿಸಿ ಇರಾಕ್ ಮತ್ತು ಆಫ್ಘಾನಿಸ್ತಾನ ಮೇಲೆ ಅಮೆರಿಕಾ ಮಾಡಿದ ಆಕ್ರಮಣವನ್ನು ಸಮರ್ಥಿಸಿದ ಬಲಪಂಥೀಯರಿಂದಾಗಿ, ಶೋಷಿತರ ಪರವಾಗಿ ನಿಂತ ಬುದ್ಧಿಜೀವಿಗಳಲ್ಲಿ ತುಂಬಾ ಗೊಂದಲ ಉಂಟಾಯಿತು. ಆದರೆ ಇದೊಂದು ಅಣಕು ಎಂದೇ ನಾನು ಹೇಳುತ್ತೇನೆ. ಯಾಕೆಂದರೆ ಅಂಚಿನಲ್ಲಿರುವ ಸಂಸ್ಕೃತಿಗಳನ್ನು ಅಪಮಾನಗೊಳಿಸುವ ಸ್ಪಷ್ಟ ಉದ್ದೇಶದಿಂದ ಜಗತ್ತಿನ ಸಾಂಸ್ಕೃತಿಕ ಸಂಘರ್ಷಗಳನ್ನು ತಪ್ಪಾಗಿ ವ್ಯಾಖ್ಯಾನ ಮಾಡಲಾಯಿತು. ಸಂಸ್ಕೃತಿ ಅಧ್ಯಯನದಲ್ಲಿ ಎಡ್ವರ್ಡ್ ಸಯೀದ್ ಹೇಳಿದ್ದಕ್ಕಿಂತ ವಿರುದ್ಧವಾಗಿ ಹಂಚಿಗ್ಟನ್ ಹೇಳಿದ. ಹಂಚಿಗ್ಟನ್‌ನ ನಿಜ ಬಣ್ಣವು ಆತನ ಹೊಸ ಪುಸ್ತಕದಿಂದ ಹೊರಬಂತು. ಇದು ಎಲ್ಲ ಅಂಚಿನಲ್ಲಿರುವ



ಜೋತಿಬಾ ಫುಲೆ

ಸಂಸ್ಕೃತಿಗಳನ್ನು ವಿರೋಧಿಸುತ್ತದೆ ಹಾಗೂ ಸಂಸ್ಕೃತಿ ಆಧಾರಿತ ಮೀಸಲಾತಿಯ ಮತ್ತು ಈವರೆಗೆ ಸೌಲಭ್ಯ ವಂಚಿತರಾದವರಿಗೆ ಶಿಕ್ಷಣದಲ್ಲಿ ನೀಡಿದ ಇತರ ಪ್ರಯೋಜನಗಳನ್ನು ನಿರಾಕರಿಸುವ ಪ್ರಕ್ರಿಯೆಗಳನ್ನು ಪ್ರಸ್ತಾಪಿಸುತ್ತದೆ.

ಆದರೆ ಈ ಲೇಖನದಲ್ಲಿ, ಹಂಚಿಗ್ಟನ್‌ನ ಸಾಂಪ್ರದಾಯಿಕ ಸ್ಥಿತಿಯ ವಿವರಗಳನ್ನು ದಾಖಲಿಸಲು ಸಾಧ್ಯವಿಲ್ಲ. ಆದರೆ ಹಂಚಿಗ್ಟನ್‌ನ ಈ ದೃಷ್ಟಿಕೋನದಿಂದಾಗಿ ಎಂಥ ನಾಗರಿಕ ಸಮಾಜ ಉದಯವಾಗಬಹುದು ಎಂಬುದನ್ನು ಕಲ್ಪಿಸಿಕೊಳ್ಳಲು ಓದುಗರ ವಿವೇಚನೆಗೆ ಬಿಟ್ಟುಬಿಡುತ್ತೇನೆ. ಏನೇ ಇರಲಿ, ಹಂಚಿಗ್ಟನ್ ಸೂಚಿಸಿದ ನಾಗರಿಕತೆಯ ರಾಜಕಾರಣದಿಂದ ಸಾಂಸ್ಕೃತಿಕ ಅಸ್ತಿತ್ವದ ರಾಜಕಾರಣವನ್ನು ಪ್ರತ್ಯೇಕಗೊಳಿಸಲೇಬೇಕು. ನಾಗರಿಕತೆಯ ತತ್ವವು ಪಾಶ್ಚಾತ್ಯ ನಿರ್ಮಿತಿ ಹಾಗೂ ಇದು ಗೊತ್ತಿದ್ದೊ, ಗೊತ್ತಿಲ್ಲದೆಯೋ ಹಿಂದಿನ ವಸಾಹತುಗಳಲ್ಲಿ ಸ್ಥಳೀಯ ಸಂಸ್ಕೃತಿಗಳನ್ನು ಅಪಮೌಲ್ಯಗೊಳಿಸಿದೆ. ಇನ್ನೊಂದೆಡೆ, ಸಂಸ್ಕೃತಿ ಎಂಬುದು "ಸಹಜವಾಗಿ ಬಂದದ್ದಕ್ಕಿಂತ ಹೆಚ್ಚಾಗಿ ಅದು

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಬ್ರಿಟಿಷ್ ಆಳ್ವಿಕೆಯನ್ನು ವಿರೋಧಿಸುವುದಕ್ಕೆ ಒಂದು ರಾಷ್ಟ್ರೀಯ ಪ್ರಜ್ಞೆಯನ್ನು ಹುಟ್ಟುಹಾಕಲಾಯಿತು. ಪರಕೀಯ ಆಡಳಿತವನ್ನು ಕೊನೆಗೊಳಿಸುವುದಕ್ಕೆ ಈ ರಾಷ್ಟ್ರೀಯ ಪ್ರಜ್ಞೆಯು ಚಾರಿತ್ರಿಕ ಅವಶ್ಯಕತೆಯಾಗಿತ್ತು. ಇದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ರಾಷ್ಟ್ರೀಯತೆಯ ರಾಜಕಾರಣದಲ್ಲಿ ಉದಯಗೊಂಡದ್ದು. ನಿಜವಾಗಿಯೂ ಸಾವರ್ಕರ್ ಮತ್ತು ಹೆಡಗೆವಾರ್ ಮುಂತಾದ ಹಿಂದೂ ಮೂಲಭೂತವಾದಿಗಳು ಬೆಂಕಿಗೆ ತುಪ್ಪ ಸುರಿದರು.

ಮಾನವ ನಿರ್ಮಿತವಾದುದು. ತರ್ಕಬದ್ಧವಾಗಿ ಕೈಗಾರಿಕ ಮಾಧ್ಯಮ ಹಾಗೂ ಎಲ್ಲ ಅನುಭೋಗ ಪ್ರೇಮವನ್ನು ಒಳಗೊಂಡಿರುತ್ತದೆ. (ಚರ್ರಿ ಈಗಲ್ಯನ್, ದಿ ಐಡಿಯಾ ಆಫ್ ಕಲ್ಚರ್, ಬ್ಲಾಕ್‌ವೆಲ್, ೨೦೦೦,ಪು.೩೩).

ಸಂಸ್ಕೃತಿ ಎಂಬುದು ಜೀವನಮಾರ್ಗ ಅಥವಾ ಅದೇ ಒಂದು ಜೀವನ ಶೈಲಿ ಪೆರಿಡಾನ ಶ್ರೇಣೀಕೃತ ನಿರಚನೆಯಲ್ಲಿ ಕೆಲವು ಸಂಸ್ಕೃತಿಗಳಿಗೆ ಇತರ ಸಂಸ್ಕೃತಿಗಳ ಮೇಲೆ ನೀಡಿದ ಪ್ರಾಮುಖ್ಯತೆಯನ್ನು ಪ್ರಶ್ನಿಸುತ್ತದೆ. ಇದು ಕ್ಕಿಂತಲೂ ಹೆಚ್ಚಾಗಿ ನಿರಚನವಾದವು ಕೆಲವು ಸಂಸ್ಕೃತಿಗಳಿಗೆ ನೀಡಿದ ಪ್ರಾಧಾನ್ಯತೆ ಮತ್ತು ಸೌಲಭ್ಯಗಳ ಹಿಂದಿನ ಕಾರಣವನ್ನು ಗುರುತಿಸುವುದಕ್ಕೆ ಸಹಾಯವಾಯಿತು. 'ಪಾಶ್ಚತ್ಯ' ಎಂಬುದು ಉತ್ತಮ ಸಂಸ್ಕೃತಿಗೆ ಕೇಂದ್ರವೆಂದು ಸೃಷ್ಟಿಸಿದಂತೆ ಭಾರತದಲ್ಲಿ ಬ್ರಾಹ್ಮಣ ಸವರ್ಣ ಸಂಸ್ಕೃತಿಯನ್ನು 'ಸಂಸ್ಕೃತಿಯುತ ಜೀವನ'ಕ್ಕೆ ಮಾದರಿ ಎಂದು ಗುರುತಿಸಲಾಗಿದೆ.

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಬ್ರಿಟಿಷ್ ಆಳ್ವಿಕೆಯನ್ನು ವಿರೋಧಿಸುವುದಕ್ಕೆ ಒಂದು ರಾಷ್ಟ್ರೀಯ ಪ್ರಜ್ಞೆಯನ್ನು ಹುಟ್ಟುಹಾಕಲಾಯಿತು. ಪರಕೀಯ ಆಡಳಿತವನ್ನು ಕೊನೆಗೊಳಿಸುವುದಕ್ಕೆ ಈ ರಾಷ್ಟ್ರೀಯ ಪ್ರಜ್ಞೆಯು ಚಾರಿತ್ರಿಕ ಅವಶ್ಯಕತೆಯಾಗಿತ್ತು. ಇದೇ ಸಂದರ್ಭದಲ್ಲಿ ಇದು ಅನೇಕ ಸಾಂಸ್ಕೃತಿಕ ಅಸ್ತಿತ್ವಗಳನ್ನು ತನ್ನೊಳಗೆ ವಿಲೀನಗೊಳಿಸಿಕೊಂಡು ಹಿಂದು ರಾಷ್ಟ್ರ ಸಿದ್ಧಾಂತವನ್ನು ಉತ್ಪಾದಿಸಿತು. ಇದು ಎರಡು ಸಂಗತಿಗಳ ಮೂಲಕ ಸಾಧ್ಯವಾಯಿತು. ಒಂದು, ರಾಷ್ಟ್ರದ ಪ್ರಧಾನ ಸಂಸ್ಕೃತಿಯಾದ ಹಿಂದು ಸಂಸ್ಕೃತಿಯ ಪ್ರಜ್ಞೆ ಅಥವಾ ಸಾಂಸ್ಕೃತಿಕ ರಾಷ್ಟ್ರೀಯತೆ. ಇದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ರಾಷ್ಟ್ರೀಯತೆಯ ರಾಜಕಾರಣದಲ್ಲಿ ಉದಯಗೊಂಡದ್ದು. ನಿಜವಾಗಿಯೂ ಸಾವರ್ಕರ್ ಮತ್ತು ಹೆಡಗೆವಾರ್ ಮುಂತಾದ ಹಿಂದೂ ಮೂಲಭೂತವಾದಿಗಳು ಬೆಂಕಿಗೆ ತುಪ್ಪ ಸುರಿದರು.

ಆದರೆ ಜಾತ್ಯತೀತ ದೃಷ್ಟಿಕೋನ ಹಾಗೂ ಇತರ ಧರ್ಮಗಳ ಬಗ್ಗೆ ಸಹಿಷ್ಣುತೆ ಹೊಂದಿದ್ದ ಮಹಾತ್ಮಾ ಗಾಂಧಿಯೂ ಸಹ ಇದಕ್ಕೆ ಜವಾಬ್ದಾರರಾಗಿದ್ದರು ಎಂಬುದು ವಿಷಾದದ ಸಂಗತಿಯೇ ಆಗಿದೆ. ಅವರ ರಾಮರಾಜ್ಯದ ಪರಿಕಲ್ಪನೆ ರಾಮನನ್ನು ವೈಭವೀಕರಿಸಿತಲ್ಲದೆ ಶಂಭೂಕನನ್ನು ಅಂಚಿಗೆ ಸರಿಸುವ ಉಪಾಯವನ್ನು ಒಳಗೊಂಡಿತ್ತು. ಇದು ಮುಸ್ಲಿಮರ ಮನಸ್ಸಿನಲ್ಲಿ "ಅನ್ಯ" ಎಂಬ ಪ್ರಜ್ಞೆಯನ್ನು ಸೃಷ್ಟಿಸಿತು. ಇದು ಸುಲಭವಾಗಿ ಹಿಂದು/ಮುಸ್ಲಿಂ ಧರ್ಮ ಎಂಬ ಧ್ರುವೀಕರಣಕ್ಕೆ ಕಾರಣವಾಯಿತು. ಎರಡನೆಯ ಸಂಗತಿ ಎಂದರೆ ದೇಶದ ಇಬ್ಭಾಗ ಹಾಗೂ ಪಾಕಿಸ್ತಾನದ ರಚನೆ. ಇದು ಮುಸ್ಲಿಂ ಸಮಾಜವನ್ನು 'ಅನ್ಯ' ಎಂದು ಯಾವಾಗಲೂ ಪರಿಗಣಿಸುವ ಸಾಂಸ್ಕೃತಿಕ ರಾಷ್ಟ್ರೀಯತೆಯ ಯೋಜನೆಯನ್ನು ಅನುಷ್ಠಾನಗೊಳಿಸಲು ನೆರವಾಯಿತು.

ವಾಸ್ತವವಾಗಿ 'ಅನ್ಯ' ಎಂಬ ಮುಸ್ಲಿಂ ಕಟ್ಟುಕೊಡುವಿಕೆಯು ಮೇಲ್ಜಾತಿ ಸೈದ್ಧಾಂತಿಕತೆಯ ಉದ್ದೇಶವನ್ನು ಈಡೇರಿಸಿತು. ಸ್ವಾತಂತ್ರ್ಯಾನಂತರವೂ ಸಹ ಪ್ರಭುತ್ವ ಸಿದ್ಧಾಂತವು ಸವರ್ಣ ಪ್ರಜ್ಞೆಯ ರೂಪದಲ್ಲಿ ವ್ಯಕ್ತಿಗಳ ಮನಸ್ಸುಗಳನ್ನು ಆಳುವುದನ್ನು ಮುಂದುವರಿಸಿತು. ನಮ್ಮ ಮಾಧ್ಯಮ 'ರಾಷ್ಟ್ರೀಯ ಮುಸ್ಲಿಂ' ಎಂಬ ಪದವನ್ನೇ ಸೃಷ್ಟಿಸಿಬಿಟ್ಟಿತು. ಹುಟ್ಟಿನಿಂದ ಮುಸ್ಲಿಮನಾದ ಕಾರಣಕ್ಕಾಗಿ ಆತ ಅಥವಾ ಆಕೆಯನ್ನು ರಾಷ್ಟ್ರೀಯ/ರಾಷ್ಟ್ರೀಯೇತರ ಮುಸ್ಲಿ

ಮನೆಂದು ಪರಿಗಣಿಸುವಂತೆ ಹಿಂದುವನ್ನು ಏಕೆ ಗುರುತಿಸಿಲ್ಲ ಎಂದು ಪ್ರಶ್ನಿಸಲು ನಮ್ಮ ಬುದ್ಧಿಜೀವಿ ವರ್ಗ ವಿಫಲವಾಗಿದೆ. ಆದ್ದರಿಂದ, ಸಾಂಸ್ಕೃತಿಕ ಅನ್ಯ ಎಂಬ ಮುಸ್ಲಿಂ ಕಟ್ಟುವಿಕೆಯು ದಲಿತ ಮತ್ತು ಇತರ ಸವರ್ಣೀಯೇತರ ಸಮುದಾಯಗಳನ್ನು ಮುಚ್ಚಿ ಹಾಕಿ ಮರೆ ಮಾಡಲು ಜಬಳಕೆಯಾಗಿದೆ. ಇದರ ಪರಾಕಾಷ್ಠತೆಯು ಗುಜರಾತ್ ಹತ್ಯಾಕಾಂಡದಲ್ಲಿ ಕಂಡುಬರುತ್ತದೆ.

ಡಾ॥ ಅಂಬೇಡ್ಕರರು ಒಂದೆಡೆ ಪಾಶ್ಚಾತ್ಯ ಆಧುನಿಕತೆಯ ತರ್ಕವನ್ನು ಅನುಸರಿಸಿದ್ದರು ಹಾಗೂ ಮತ್ತೊಂದೆಡೆ ಜಾತಿಕ್ರೌರ್ಯದಿಂದ ಪಾರಾಗುವುದಕ್ಕೆ ಬೌದ್ಧಧರ್ಮಕ್ಕೆ ಮತಾಂತರಗೊಂಡರು, ಅವರ ಹೋರಾಟ ಶ್ಲಾಘನೀಯವಾದದ್ದು. ಹಾಗೂ ಎಲ್ಲರ ಗಮನ ಸೆಳೆಯುವಂಥದ್ದಾಗಿದೆ. ಗೀತವನ್ನು ಕೈಯಲ್ಲಿ ಹಿಡಿದುಕೊಂಡು ಗಾಂಧಿ ಅಸ್ಪೃಶ್ಯರ ಬಗ್ಗೆ ಮಾತನಾಡಿದ ಸಂದರ್ಭವು ಸಹ ಗಮನಿಸಬೇಕಾದದ್ದೇ. ಇಂಥ ಒಂದು ದ್ವಂದ್ವವು ಎಲ್ಲೆಡೆ ಇತ್ತು. ಯಾಕೆಂದರೆ ಪರಂಪರೆಯು ಬುದ್ಧಿಜೀವಿಗಳು, ಲೇಖಕರು ಹಾಗೂ ಕಾರ್ಯಕರ್ತರನ್ನು ಯಾಜಮಾನ್ಯ ಸೈದ್ಧಾಂತಿಕತೆಯ ರೂಪದಲ್ಲಿ ಬೆಂಬತ್ತಿತ್ತು.

ಆರ್ಯಸಮಾಜ, ಬ್ರಹ್ಮಸ ಮಾಜಗಳಲ್ಲದೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪ್ರತಿನಿಧಿಸಿದ ರಾಷ್ಟ್ರೀಯ ಚಳವಳಿಯು ಸಹ ಭಾರತೀಯ ಅನನ್ಯತೆ ಎಂದು ಹೇಳಿಕೊಳ್ಳುವಲ್ಲಿ ಇರುವ ಭಿನ್ನತೆಗಳನ್ನು ಗಮನಿಸಿಲ್ಲ. ಇದನ್ನು ಸಾವಯವ ಬುದ್ಧಜೀವಿಗಳು ತಮ್ಮ ನೆನಪುಗಳಿಗೆ ಹಿಂತಿರುಗಿ ತಮ್ಮ ಅನನ್ಯತೆಯನ್ನು ಸ್ಥಾಪಿಸಿಕೊಳ್ಳಲು ವಿಫಲರಾಗಿದ್ದಾರೆ ಎಂದು ಗ್ರಾಮ್ಸಿ ಗುರುತಿಸಿದ್ದಾರೆ. ಯಾವುದೇ ಇತರ ಸಮಾಜದಂತೆ ತಮ್ಮ ಸಮಾಜ ಬದಲಾಗಲು ಪಾಶ್ಚಾತ್ಯ ಮಾದರಿಯನ್ನು ಅಥವಾ ಬ್ರಾಹ್ಮಣ ಅಥವಾ ಸವರ್ಣ ಎಂಬ ರಾಷ್ಟ್ರೀಯ ಧಾರೆಯ ಪ್ರಧಾನವಾಹಿನಿಯನ್ನು ಅನುಸರಿಸಬೇಕೆಂದೇ ಅವರು ವಾದಿಸುತ್ತಾರೆ. ಇದಕ್ಕೆ ಅಪವಾದವೆಂಬಂತೆ ಡಾ॥ ಅಂಬೇಡ್ಕರ್ ಮಾತ್ರ ಬೌದ್ಧಧರ್ಮವು ಪರ್ಯಾಯ ಎಂದು ಗುರುತಿಸಿದರು.

ಹೊಸದಾಗಿ ರೂಪುಗೊಂಡ ಪರಿಸ್ಥಿತಿಯಲ್ಲಿ ದಲಿತ ಮತ್ತು ಸವರ್ಣೇತರ ಬುದ್ಧಿಜೀವಿಗಳು ತಮ್ಮ ಅನನ್ಯತೆ ಅರಿತುಕೊಳ್ಳಲು ಹಾಗು ಭಾರತೀಯ ಊಳಿಗಮಾನ್ಯ ವ್ಯವಸ್ಥೆಯಿಂದ ರೂಪುಗೊಂಡ ಜಾತಿ ಆಧಾರಿತ ಶ್ರೇಣೀಕರಣದ ಯಾಜಮಾನ್ಯ ಸಿದ್ಧಾಂತವನ್ನು ಪ್ರಶ್ನಿಸುವುದಕ್ಕೆ ಆರಂಭಿಸಿದ್ದಾರೆ. ಭಾರತದಲ್ಲಿ ಕೈಗಾರಿಕಾ ಬಂಡವಾಳ ವ್ಯವಸ್ಥೆಯ ರಚನೆಯ ನಂತರವೂ ಸಹ ವ್ಯಕ್ತಿಗಳು ಜಾತಿ ಆಧಾರಿತ ಪರಂಪರೆಯನ್ನು ಜೀರ್ಣಿಕೊಳ್ಳುವಂತೆ ಸೈದ್ಧಾಂತಿಕ ಸಾಧನಗೆಳನ್ನು ಬಳಸಿಕೊಳ್ಳಲಾಗುತ್ತಿದೆ. ಪಾರಂಪರಿಕ ಬುದ್ಧಿಜೀವಿಗಳು ಹಾಗೂ ಸಾವಯವ ಬುದ್ಧಿಜೀವಿಗಳು ಪರಂಪರೆಯೇ ಸಂಸ್ಕೃತಿಯ ತಿರುಳು ಎಂದು ಪ್ರತಿಪಾದಿಸಿದ್ದಾರೆ.

ಡಾ॥ ಎಸ್. ರಾಧಾಕೃಷ್ಣನ್‌ರವರು ತತ್ವಶಾಸ್ತ್ರದಲ್ಲಿ ಹಿಂದೂ ಜೀವನಶೈಲಿಯನ್ನು ವ್ಯಾಖ್ಯಾನಿಸುವ ಮೂಲಕ ಈ ಸಾಧನೆ ಮಾಡಿದರು. (ನಮ್ಮ ಸರ್ವೋಚ್ಚ ನ್ಯಾಯಾಲಯವು ಸಹ ಹಿಂದುತ್ವದ ರಾಜಕೀಯವನ್ನು ಸಮರ್ಥಿಸಿಕೊಳ್ಳುವಾಗ ರಾಧಾಕೃಷ್ಣನ್‌ರ ವ್ಯಾಖ್ಯಾನವನ್ನೇ ಅವಲಂಭಿಸಿತ್ತು.) ಇಂಥ ಒಂದು ಸಂದಿಗ್ಧಸ್ಥಿತಿಯಲ್ಲಿ ಪ್ರಧಾನವಾಹಿನಿಯ ಏಕ ಸಂಸ್ಕೃತಿಯಲ್ಲಿ ಸೇರದ ಅಸಂಖ್ಯಾತ ಸಮುದಾಯಗಳ ಅನನ್ಯತೆಗಳನ್ನು ಗುರುತಿಸುವ ಅವಶ್ಯಕತೆಯಿದೆ. ಭಾರತದ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಮಾತ್ರವಲ್ಲ ಬ್ರಾಹ್ಮಣೇತರ ಸಂಸ್ಕೃತಿಯ ಇತರ ಎಲ್ಲ ಸಮುದಾಯಗಳು ಸಹ ಬಿಟ್ಟಿಗೆ ಬರತಕ್ಕದ್ದು ಹಾಗೂ ಮರೆಮಾಚಿಹೋದ ಅಥವಾ ಏಕಸಂಸ್ಕೃತಿಯೊಂದಿಗೆ ಸೇರಿಹೋದ ತಮ್ಮ ಸಾಹಿತ್ಯವನ್ನು ರಕ್ಷಿಸಬೇಕು. ಕಾಂಚಾ ಐಲಯ್ಯರು ಹೇಗೆ ದಲಿತ ಮುಂದೆ ಬರಬಹುದು ಎಂಬ ದಾರಿಯನ್ನು ತೋರಿಸಿಕೊಟ್ಟಿದ್ದಾರೆ.

ಕಾಂಚಾ ಐಲಯ್ಯರು ತಮ್ಮ ಲೇಖನ, "ಉತ್ಪಾದಕ ಶ್ರಮ, ಪ್ರಜ್ಞೆ ಮತ್ತು ಇತಿಹಾಸ: ದಲಿತ ಬಹುಜನ ಪರ್ಯಾಯ"ದಲ್ಲಿ ಈ ರೀತಿ ಹೇಳುತ್ತಾರೆ.

"ಆದ್ದರಿಂದ ವಾಸ್ತವವಾಗಿ ನಾನು ಯಾರು ಹಾಗೂ ಅವರಿಗಿಂತ ಹೇಗೆ ಭಿನ್ನ ಎಂಬ ಹೇಳಿಕೆಯನ್ನು ಮಾಡತಕ್ಕೆ ಸಮಯ ಬಂದಿದೆ ಎಂದು ಬಲವಾಗಿ ಭಾವಿಸಿದ್ದೇನೆ. ಅವರು ನಮಗೆ ತೋರಿಸಿದಂಥ ಮುಗ್ಧ, ಅರ್ಹತೆ ಹೊಂದಿರದ, ಕೌಶಲ್ಯರಹಿತ, ಮೂರ್ಖ 'ಅನ್ಯ' ಎಂಬಂಥ ಭಿನ್ನತೆ ಅಲ್ಲ; ಅವರಿಗಿಂತ ನಾವು ಭಿನ್ನ ಹೇಗೆಂದರೆ ನಾವು ಸಮಾಜದ ಭೌತಿಕ ಆಧಾರಸ್ತಂಭವಾದ ಕೌಶಲ್ಯ ಭರಿತ ಉತ್ಪಾದಕರು. ಉತ್ಪಾದಕ ಸಾಧನೆ ತಯಾರಕರು, ಸೃಜನಾತ್ಮಕ ಕಟ್ಟಡ ನಿರ್ಮಾಣಗಾರರು ಆಗಿದ್ದೇವೆ. ಪರಾವಲಂಬಿಗಳು ಹಾಗೂ ಅವರ ಪಾತ್ರವು ಋಣಾತ್ಮಕ ಹಾಗೂ ರಚನಾತ್ಮಕವಾದುದಲ್ಲ ಎಂಬ 'ಅನ್ಯ'ದ ಬಗೆಗಿನ ನೀಚ ದೃಷ್ಟಿಕೋನವನ್ನು ಪ್ರತಿಪಾದಿಸುತ ಹಿಂದುಧರ್ಮ ಹಾಗು ಬ್ರಾಹ್ಮಣ್ಯವನ್ನು ಇಂದು ನಾವು ಬಯಲಿಗೆಳೆಯಲಾಗಿದೆ."

ಐಲಯ್ಯರು ತನ್ನ ಶಾಲಾದಿನಗಳ ತನ್ನದೇ ನೆನಪುಗಳಲ್ಲಿನ ಭಿನ್ನತೆಯನ್ನು ಹೇಳುತ್ತಾರೆ. "ಬ್ರಾಹ್ಮಣ-ಬನಿಯಾ ದೇವಸ್ಥಾನಗಳು ಮಾತ್ರ ನಮ್ಮಿಂದ ದೂರ ಇಲ್ಲ. ಆದರೆ ಆ ದೇವಾಲಯಗಳಲ್ಲಿ ದೇವರು ಕುಳಿತುಕೊಳ್ಳುವುದು, ಮಲಗುವುದನ್ನು ಸಹ ನಮಗೆ ವಿರುದ್ಧವಾಗಿಯೇ ರೂಪಿಸಲಾಗಿದೆ. ಬ್ರಾಹ್ಮಣ-ಬನಿಯಾ ಮನೆಗಳು ನಮ್ಮ ಗ್ರಾಮಗಳೊಳಗೆ ಇರುತ್ತದೆ. ಆದರೆ ಅವು ನಮ್ಮವರು ಸಾಂಸ್ಕೃತಿಕ ಶತ್ರುಗಳು ಎಂಬಂತೆ ಕಟ್ಟಲ್ಪಟ್ಟಿವೆ. ನಮ್ಮ ಹಳ್ಳಿಯಲ್ಲಿ ಬ್ರಾಹ್ಮಣ-ಬನಿಯಾಗಳು ನಮ್ಮ ಸಂಸ್ಕೃತಿಯ ಶವಗಳ ಮೇಲೆ ನಡೆದು ಹೋಗುತ್ತಾರೆ. ಹಸಿವಿನಿಂದ ಕಂಗಾಲಾದ ನಮ್ಮ ತಂದೆತಾಯಿಗಳ ಉತ್ಪಾದಿಸಿದ ಎಲ್ಲವೂ ಸಹ ಆ ಹೊಟ್ಟೆಬಾಕರ ಸಂತೋಷಕ್ಕೆ ಮೀಸಲಾಯಿತು. ಅವರ ಮಕ್ಕಳು ಕೌಶಲ್ಯರಹಿತ ದೊಡ್ಡ ಹೊಟ್ಟೆಬಾಕರು. ನಮ್ಮ ಮಕ್ಕಳು ರಾಷ್ಟ್ರದ ಆರ್ಥಿಕತೆಗೆ ನಿಜವಾದ ದೇಣಿಗೆಕೊಡುವವರು. ಅವರ ಜೀವನಶೈಲಿಯೇ ಅಯೋಗ್ಯವಾದದ್ದು. ಆದರೂ ಅವರು ನಮ್ಮ ತಂದೆತಾಯಿಗಳಿಗೆ 'ನೀವು ಅತ್ಯಂತ ನಿರುಪಯುಕ್ತ ಜನರು' ಎಂದು ಪದೇ ಪದೇ ಹೇಳುತ್ತಿದ್ದರು.

ಜೀವನದ ಎಲ್ಲ ಹಂತಗಳನ್ನು ದಾಟಿಬಂದ ಮೇಲೆ ವಿದ್ಯಾಭ್ಯಾಸ ಪಡೆದು ಒಂದು ವಿಸ್ತಾರ ಪ್ರಪಂಚವನ್ನು ಕಾಣಾಲು ಸಾಧ್ಯವಾದಾಗ, ನಮ್ಮ ಬಾಲ್ಯ ಹಾಗೂ ಅದರ ಪ್ರಕ್ರಿಯೆಗಳೆಡೆ ಗಮನಹರಿಸಿದಾಗ, ನಮ್ಮ ಮನಸ್ಸುಗಳಲ್ಲಿ ಕೋಪ ಮತ್ತು ಸಂಕಟವಲ್ಲದೆ ಮತ್ತೇನೂ ಇರಲು ಸಾಧ್ಯ? [ಸಬಾಲ್ಟರ್ನ್ ಸ್ಟಡೀಡ್ ೧X ರೈಟಿಂಗ್ಸ್ ಆನ್ ಸೌತ್ ಏಷಿಯನ್ ಹಿಸ್ಟರಿ ಎಂಡ್ ಸೊಸೈಟಿ, ಎಡ್ವರ್ಡ್ ಸಾಯೀದ್ ಅಮಿನ್ ಮತ್ತು ದೀಪೇಶ್ ಚಕ್ರವರ್ತಿ, ಆರ್ಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೭, ಪಿ. ೧೬೭, ೧೮೦) ಇಲ್ಲಿ ಫ್ರೆಡರಿಕ್ ಜೇಮ್ಸನ್ ಹೇಳಿದಂತೆ ಸಂಸ್ಕೃತಿಯು ಯಾವಾಗಲೂ ಮತ್ತೊಬ್ಬರ ಆಲೋಚನೆಯಾಗಿರುತ್ತದೆ.

ಒಬ್ಬ ಬುದ್ಧಿಜೀವಿ ತನ್ನದೇ ಭೂತವನ್ನು ಸಹಜವಾಗಿ ಗಮನಿಸಿದಾಗ ಆತ/ಆಕೆಯ ಅನನ್ಯತೆಯನ್ನು ಹೇಗೆ ಕಟ್ಟಿಕೊಡಲಾಗಿದೆ ಎಂಬುದನ್ನು ಅರ್ಥೈಸಬಹುದು. 'ಅವರ್ಣ' ಸಮುದಾಯದ ಒಬ್ಬ ಸದಸ್ಯನು ಭಾರತೀಯ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ಅನ್ಯವಾಗಿರುತ್ತಾನೆ. ಆದ್ದರಿಂದ ಸಂಸ್ಕೃತಿಯ ಬ್ರಾಹ್ಮಣೇತರರಿಗೆ ತಮ್ಮನ್ನು ತಾವು ಸಮರ್ಥಿಸಿಕೊಳ್ಳುವುದಕ್ಕೆ ಒಂದು ಅಸ್ತ್ರವಾಗಿರುತ್ತದೆ. ನಾವೀಗ ಪ್ರತಿಯೊಂದು ಸಮುದಾಯದ ಸಂಸ್ಕೃತಿಯ ಒಳಿತು/ಕೆಡಕು(ಉತ್ಕೃಷ್ಟ/ಅಪಕೃಷ್ಟ) ಎಂಬ ಬೈನರಿಯನ್ನು ನಾಶಮಾಡಬೇಕು. ಯಾವುದೂ ಮೇಲು ಅಲ್ಲ, ಯಾವುದೂ ಕೀಳು ಅಲ್ಲ, ಪೊಕ್ಕುದನ್ ಎಂಬವರು ಕೇರಳದ ಪುಲಯಾ (ಪರಿಶಿಷ್ಟ ಜಾತಿ) ಸಮುದಾಯಕ್ಕೆ ಸೇರಿದ ಒಬ್ಬ ಕಾರ್ಯಕರ್ತ ಹಾಗೂ ಪರಿಸರವಾದಿ. ಇತ್ತೀಚೆಗೆ ಅವರ ಆತ್ಮಚರಿತ್ರೆ ಪ್ರಕಟವಾಗಿದೆ. ಇದರಲ್ಲಿ ಅವರು ತಮ್ಮ ಭೂತಕಾಲವನ್ನು ನೆನಪಿಸಿಕೊಳ್ಳುತ್ತಾರೆ. ಹಿಂದಿನ ದಿನಗಳಿಗೆ ಹೋಲಿಸಿದರೆ ಈಗ ಕೇರಳದಲ್ಲಿ ಜಾತಿಶೋಷಣೆ ಕಡಿಮೆಯಾಗಿದೆ ಎಂದು ಅವರು ಒಪ್ಪಿಕೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ಅವರು ಕೊಡಕ್‌ನಲ್ಲಿ ಕೂಲಿಕಾರರಾಗಿ ಕೆಲಸಕ್ಕೆ ಹೋಗುತ್ತಿದ್ದ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾರೆ. ಅಲ್ಲಿ ಅವರು ತಮ್ಮ ನಿಜ ಅಸ್ತಿತ್ವವನ್ನು ಬಚ್ಚಿಟ್ಟು, ಮೇಲ್ಜಾತಿಯಾರ ನಂಬಿಯಾರ್‌ಗೆ ಸೇರಿದವರೆಂದು ಹೇಳಿದ್ದರು. ಪುಲಯಾ ಮತ್ತು ನಂಬಿ ಯಾರ್ ನಡುವಣ ಭಿನ್ನತೆಯು ಬರೀ ಸಾಂಸ್ಕೃತಿಕ ಕಟ್ಟು ಕೊಡವಿಕೆಯಾಗಿದೆ ರೈತವರ್ಗಕ್ಕೆ ಸೇರಿದವನೇ ಅಥವಾ ಕೂಲಿಕಾರ್ಮಿಕ ವರ್ಗಕ್ಕೆ ಸೇರಿದವನೇ ಎಂಬುದನ್ನು ಪರಿ ಗಣಿಸದೆ ಸಾಮಾಜಿಕ ಅಂತಸ್ತಿನಲ್ಲಿ ನಿರ್ಣಾಯಕ ಪಾತ್ರ ವನ್ನು ಇದು ವಹಿಸುತ್ತದೆ. ಪೊಕ್ಕುದನ್ ನಂಬಿಯಾರ್ ಎಂಬ ಸುಳ್ಳು ಅಸ್ತಿತ್ವವನ್ನು ಸೃಷ್ಟಿಸಿಕೊಂಡು ಭೂಮಾಲೀಕ ಎಂಬಂಥ ಉನ್ನತ ಸಾಮಾಜಿಕ ಅಂತಸ್ತನ್ನು ಪಡೆದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪ್ರತಿನಿಧಿಸಿದ ರಾಷ್ಟ್ರೀಯ ಚಳವಳಿಯು ಸಹ ಭಾರತೀಯ ಅನನ್ಯತೆ ಎಂದು ಹೇಳಿಕೊಳ್ಳುವಲ್ಲಿ ಇರುವ ಭಿನ್ನತೆಗಳನ್ನು ಗಮನಿಸಿಲ್ಲ. ಇದನ್ನು ಸಾವಯವ ಬುದ್ಧಜೀವಿಗಳು ತಮ್ಮ ನೆನಪುಗಳಿಗೆ ಹಿಂತಿರುಗಿ ತಮ್ಮ ಅನನ್ಯತೆಯನ್ನು ಸ್ಥಾಪಿಸಿಕೊಳ್ಳಲು ವಿಫಲರಾಗಿದ್ದಾರೆ ಎಂದು ಗ್ರಾಮ್ಸಿ ಗುರುತಿಸಿದ್ದಾರೆ. ಯಾವುದೇ ಇತರ ಸಮಾಜದಂತೆ ತಮ್ಮ ಸಮಾಜ ಬದಲಾಗಲು ಪಾಶ್ಚಾತ್ಯ ಮಾದರಿಯನ್ನು ಅಥವಾ ಬ್ರಾಹ್ಮಣ ಅಥವಾ ಸವರ್ಣ ಎಂಬ ರಾಷ್ಟ್ರೀಯ ಧಾರೆಯ ಪ್ರಧಾನವಾಹಿನಿಯನ್ನು ಅನು ಸರಿಸಬೇಕೆಂದೇ ಅವರು ವಾದಿಸುತ್ತಾರೆ. ಇದಕ್ಕೆ ಅಪವಾದವೆಂಬಂತೆ ಡಾ॥ ಅಂಬೇಡ್ಕರ್ ಮಾತ್ರ ಬೌದ್ಧಧರ್ಮವು ಪರ್ಯಾಯ ಎಂದು ಗುರುತಿಸಿದರು.

ಆದಿವಾಸಿಗಳನ್ನು ಹೊರತು ಪಡಿಸಿ, ದಲಿತರ ಭೌತಕ ಸ್ಥಿತಿಗತಿಯು ತಮಿಳುನಾಡಿಗಿಂತ ಕೇರಳದಲ್ಲೇ ಉತ್ತಮವಾಗಿದೆ. ಇದಕ್ಕೆ ತಿರುಮವಲವನ್‌ರ ಬರಹಗಳೇ ಸಾಕ್ಷಿ. ಅವರ "ತಾಲಿಸ್ಮಾನ್ ತಿರುಮವಲವನ್" ಕೃತಿಯಲ್ಲಿ 'ಜಾತಿ-ಮತಾಂಧ ಉನ್ಮಾದವು ಪಾಪಪಟ್ಟಿ, ಕೀರಿಪಟ್ಟಿ, ನಟ್ಟಮಂಗಲಂ ಮತ್ತು ಕೊಟ್ಟಾಕಟ್ಟಿಯೆಂಡಲ್ ಮೀಸಲು ಪಂಚಾಯತ್ ಕ್ಷೇತ್ರಗಳಲ್ಲಿ ದಲಿತರು ನಾಮಿನೇಷನ್ ಪತ್ರ ದಾಖಲಿಸುವುದನ್ನು ಹೇಗೆ ತಡೆಯಿತು ಎಂಬುದನ್ನು ವಿವರಿಸುತ್ತಾರೆ. ಅಂತಹ ಅಸಂಖ್ಯ ಕಿರುಕುಳ, ಶೋಷಣೆಗಳ ಬಗ್ಗೆ ತಿರುಮವಲವನ್ ವಿವರಿಸುತ್ತಾರೆ. ಕೇರಳದಲ್ಲಿ ಅಂಥ ಕಿರುಕುಳಗಳ ಸಾಧ್ಯತೆ ಕಡಿಮೆ. ಜಾತಿ ಆಧಾರಿತ ಮೀಸಲಾತಿಯ ವಿರುದ್ಧದ ಇತ್ತೀಚಿನ ಚರ್ಚೆಗಳ ಬಗ್ಗೆ ನಮಗೆ ಆತಂಕವುಂಟಾಗಿದೆ. ಇಂಥ ಚರ್ಚೆಗಳು ಅರ್ಹತೆ ಮತ್ತು ಸಮಾನ ಅವಕಾಶವನ್ನು ಆಧರಿಸಿದ ಸುಳ್ಳು ವಾದಗಳನ್ನು ಸೃಷ್ಟಿಸುವ ಸಾಧ್ಯತೆಯಿದೆ. ಅನುದಾನ ರಹಿತ ಆಡಳಿತ ಮಂಡಳಿಯನ್ನು ಸಮರ್ಥಿಸುವ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ತೀರ್ಪು ಸಹ ಶೋಷಿತ ಜಾತಿಗಳ ಅದರಲ್ಲೂ ವಿಶೇಷವಾಗಿ ಭಾರತದ ಪರಿಶಿಷ್ಟ ಜಾತಿಗಳ ಅವಕಾಶಗಳನ್ನು ಮೊಟಕುಗೊಳಿಸುತ್ತದೆ.

ಕೇರಳದ ಸಂದರ್ಭದಲ್ಲಿ ದಲಿತರು ಸಾರ್ವಜನಿಕ ಜೀವನದಲ್ಲಿ ಪಡೆದುಕೊಂಡದ್ದನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ. ಜಾತಿ ಅಥವಾ ಸಮುದಾಯ ಮೀಸಲಾತಿಯನ್ನು ಹಿಂದೆ ನಡೆಸಿದ ದೌರ್ಜನ್ಯಗಳ ಪರಿಹಾರವೆಂದೇ ಎಲ್ಲ ಸಂದರ್ಭಗಳಲ್ಲಿ ವಿವರಿಸಲಾಗಿದೆ. ಇದೊಂದು ಶುದ್ಧ ಅವಿವೇಕತನದವಾದ. ಜಾತಿ ಆಧಾರಿತ ಮೀಸಲಾತಿಯು ಅಂಥ ಸಮುದಾಯಗಳ ಸದಸ್ಯರಿಗೆ ನಿರಾಕರಿಸಲಾಗಿದ್ದ ರಾಜಕೀಯ ಮತ್ತು ಆಡಳಿತಾತ್ಮಕ ಅಧಿಕಾರವನ್ನು ಪಡೆದುಕೊಳ್ಳುವುದೇ ಆಗಿದೆ. ಸಮಾಜಗಳ ಭಿನ್ನ ಪಂಗಡಗಳು ಅಧಿಕಾರದಲ್ಲಿ ಪಡೆಯುವ ಪಾಲು ಸಂಸ್ಕೃತಿ ಆಧಾರಿತ ಪೂರ್ವಗ್ರಹಗಳನ್ನು ನಿರ್ಮೂಲ ಮಾಡಲು ಅನಿವಾರ್ಯವಾಗಿದೆ. ಮಹಿಳೆಯರ ಸಂದರ್ಭದಲ್ಲೂ ಸಹ ಇದು ಲಿಂಗ-ಆಧಾರಿತ ಪೂರ್ವಗ್ರಹವನ್ನು ಕಿತ್ತೊಗೆಯುವ ಒಂದು ಪ್ರಮುಖ ಸಾಧನವಾಗಿದೆ.

ಆಗಸ್ಟ್ ೧೯೯೦ ರಲ್ಲಿ ಪ್ರಧಾನಿ ವಿ.ಪಿ.ಸಿಂಗ್ ಅವರು, ಪರಿಶಿಷ್ಟ ಜಾತಿಗಳು ಹಾಗು ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿದ ೨೨% ಜೊತೆಗೆ ಇತರ ಹಿಂದುಳಿದ ವರ್ಗಗಳಿಗೆ ಕೇಂದ್ರಸರ್ಕಾರದ ಹುದ್ದೆಗಳಲ್ಲಿ ಶೇ ೨೭ ರಷ್ಟು ಮೀಸಲಾತಿಯನ್ನು ಘೋಷಿಸಿದರು. ಮಂಡಲ್ ಆಯೋಗವು ಭಾರತದಲ್ಲಿರುವ ಸುಮಾರು ೪೦೦ ಜಾತಿಗಳಿಗೆ ಮೀಸಲಾತಿಯನ್ನು ಈ ಮುಂದಿನ ಅವಲೋಕನದ ಆಧಾರದ ಮೇಲೆ ಶಿಫಾರಸ್ಸು ಮಾಡಿತ್ತು. "ಒಂದು ಮರವನ್ನು ಅದರ ಹಣ್ಣುಗಳಿಂದ ತೀರ್ಮಾನಿಸುವಂತೆ. ಸಮಾನ ಅವಕಾಶಗಳು, ನ್ಯಾಯಯುತ ಮತ್ತು ನಿಷ್ಪಕ್ಷಪಾತ ವ್ಯವಸ್ಥೆಯನ್ನು ಗಳಿಸುವುದಕ್ಕೆ ನಮ್ಮ ಆಶೋತ್ತರಗಳ ಮತ್ತು ಪ್ರಯತ್ನಗಳ ಅತ್ಯಂತ ನಂಬಿಕಸ್ತ ಪರೀಕ್ಷೆಯಾಗಿದೆ.

ಈ ಘೋಷಣೆಗೆ ಸಂಬಂಧಿಸಿದಂತೆ ದೇಶದ ಮೇಲ್ಜಾತಿಗಳು ಯಾವ ರೀತಿ ಪ್ರತಿಕ್ರಿಯಿಸಿದರು ಎಂಬುದನ್ನು ನೆನಪಿಸುವುದಕ್ಕೆ ಹಿಂದುಳಿದ ಸಮುದಾಯಗಳ ಮೀಸಲಾತಿಗೆ ಸಂಬಂಧಿಸಿದ ಮೇಲಿನ ಅಂಶಗಳನ್ನು 'ದಲಿತ ಐಡೆಂಟಿಟಿ' ಎಂಬ ಈ ಲೇಖನದಲ್ಲಿ ದಾಖಲಿಸಬೇಕಾಯಿತು. ಮಂಡಲ ಘೋಷಣೆಯು ಹಿಂದುತ್ವ ಶಕ್ತಿಗಳನ್ನು ಗಟ್ಟಿಗೊಳಿಸಿತು. ಅದೇ 'ಅನ್ಯತೆ'ಯನ್ನು ಭಾರತದ

> **ಒಬ್ಬ ಆದಿವಾಸಿ ತನ್ನ ಹಿಂದಿನ ನೆನಪುಗಳಿಗೆ ಹೋದಾಗ ಅದು ಆತ/ಆಕೆ ಸೇರಿದ ಸ್ವಭಾವಕ್ಕೆ ಸಂಬಂಧಿಸಿದ ಅನನ್ಯತೆಯನ್ನು ಗುರುತಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಇದು ಆದಿವಾಸಿಯನ್ನು ರಕ್ಷಿಸುವುದು ಮಾತ್ರವಲ್ಲದೆ ಪರಿಸರವನ್ನು ಸಹ ರಕ್ಷಿಸುತ್ತದೆ. ಒಂದು ಕಥೆಯಲ್ಲಿ ನಾರಾಯಣನ್, ಅವರ ಮಗ ಜೇನಿನಂಥ ಸಿಹಿಹೊಂದಿದ್ದ ಹಲಸಿನ ಮರವನ್ನು ಮಾರಿದಾಗ ಅವರ ಕುಟುಂಬ ಸಂಕಟಕ್ಕೀಡಾದ ಬಗೆಯನ್ನು ವಿವರಿಸುತ್ತಾರೆ. ನಾರಾಯಣನ್ ಆದಿವಾಸಿ ಸಮುದಾಯಕ್ಕೆ ಸೇರಿದ ಒಬ್ಬ ಲೇಖಕ. ನಾರಾಯಣನ್ ಶಾಲೆಯಲ್ಲಿ ಔಪಚಾರಿಕ ಶಿಕ್ಷಣ ಪಡೆದು ಸರ್ಕಾರಿ ಉದ್ಯೋಗವನ್ನು ಪಡೆದು ಲೇಖಕರಾದರು ಹಾಗೂ ಅವರ ಸಮುದಾಯದ ಸ್ಥಿತಿಯ ಬಗ್ಗೆ ಇತರರ ಗಮನ ಸೆಳೆದರು**

ಮೇಲ್ಜಾತಿಗಳನ್ನು ಬಲಗೊಳಿಸಲು ಬಳಸಲಾಯಿತು. ಬ್ರಿಟಿಷ್ ಸಾಮ್ರಾಜ್ಯಶಾಹಿಯು ಭಾರತದ ಸಣ್ಣ ಪ್ರಾಂತ್ಯಗಳನ್ನು ಆಕ್ರಮಣ ಮಾಡಲು ಮುಸ್ಲಿಂ ಎಂಬ 'ಅನ್ಯ'ವನ್ನು ಸೃಷ್ಟಿಸಿದಂತೆ ಸವರ್ಣ ಸಿದ್ಧಾಂತವು ಸವರ್ಣೇತರರ ಮೇಲೆ ಅಧಿಕಾರ ಸಾಧಿಸಲು ಮುಸ್ಲಿಂ ಎಂಬ 'ಅನ್ಯ'ವನ್ನು ಸೃಷ್ಟಿಸಿತು. ದೇಶದ ದಲಿತರ ಸಮಸ್ಯೆಗಳನ್ನು ಪರಿಹರಿಸದೆ ಮೇಲ್ಜಾತಿ ಆಕ್ರಮಣದ ವಿರುದ್ಧ ಅವರ ಪ್ರತಿರೋಧವನ್ನು ಒಡ್ಡುವಂತೆ ಪ್ರೇರೇಪಿಸಲು ಸಾಧ್ಯವಿಲ್ಲ.

ನಾನು ಈ ಲೇಖನವನ್ನು ಮುಕ್ತಾಯಗೊಳಿಸುವುದಕ್ಕೆ ಮುಂಚೆ ಕೇರಳದ ಕೆಲವು ಇತ್ತೀಚಿನ ದಲಿತ ಬರಹಗಳ ಬಗ್ಗೆ ದಾಖಲಿಸಲು ಇಚ್ಛಿಸುತ್ತೇನೆ. ಇವುಗಳಲ್ಲಿ ಯಾಜಮಾನ್ಯ ಸಿದ್ಧಾಂತವನ್ನು ವಿರೋಧಿಸಿ, ಸಂಸ್ಕೃತಿ ಆಧಾರಿತ ಅನನ್ಯತೆಯನ್ನು ಬೆಳೆಸುವ ಪ್ರಕ್ರಿಯೆಯನ್ನು ಕಾಣಾಬಹುದು. ಇವೆಲ್ಲಕ್ಕಿಂತ ಹೆಚ್ಚಾಗಿ ಅವು ಆಧುನಿಕೋತ್ತರ ರಾಜಕೀಯ ವಿವರದಿಂದ ಪುಟಿಯುತ್ತದೆ. ಅಂತಿಮವಾಗಿ ಅವು ಬಡವರ ಮತ್ತು ಶೋಷಿತರ ಹಿತವನ್ನು ಕಾಯುತ್ತವೆ. ಸಿ.ಕೆ. ಜಾನುರವರ ಆತ್ಮಚರಿತ್ರೆಯು ಪರಿಶಿಷ್ಟ ಪಂಗಡಕ್ಕೆ ಸೇರಿದ ಆದಿವಾಸಿ ಅನನ್ಯತೆಯನ್ನು ವಿವರಿಸುತ್ತದೆ. ಅದರಂತೆ ಬಡತನದಿಂದ ಬಳಲಿ, ತಮ್ಮ ಜೀವನಾಧಾರಕ್ಕಾಗಿ ಕಾಡನ್ನು ಅವಲಂಬಿಸಿದ ಆದಿವಾಸಿಗಳಿಗೆ ಕಾಡನ್ನು ಉಪಯೋಗಿಸಿಕೊಳ್ಳುವ ಅವರ ಹಕ್ಕನ್ನು ನಿರಾಕರಿಸಲಾಗಿದೆ. ಆಕೆ ತನ್ನ ಹಿಂದಿನ ದಿನಗಳನ್ನು ನೆನಪಿಸಿಕೊಂಡು, ಆಕೆ ಪಡೆದ ಹೊಸ ತಿಳಿವಳಿಕೆಯ ಹಿನ್ನೆಲೆಯಲ್ಲಿ ತನ್ನ ಅನನ್ಯತೆಯನ್ನು ಕಟ್ಟಿಕೊಳ್ಳುತ್ತಾಳೆ. ಆಕೆ ಸಾಕ್ಷರತಾ ಕೆಲಸ ಹಾಗೂ ಎಡಪಂಥೀಯ ರಾಜಕೀಯದಲ್ಲಿ ಪಾಲ್ಗೊಳ್ಳುವ ಮೂಲಕ ಮುಖ್ಯವಾಹಿನಿ ಜೀವನದ ಸಂಪರ್ಕ ಗಳಿಸುತ್ತಾಳೆ. ನಂತರದಲ್ಲಿ ಎಡಪಂಥದಿಂದ ತನ್ನ ಗಮನವನ್ನು ಆದಿವಾಸಿ ಸಮಸ್ಯೆಯ ಕಡೆ ತಿರುಗಿಸುತ್ತಾಳೆ. ಯಾಕೆಂದರೆ ಇದು ಎಡಪಂಥೀಯರಿಗೆ ಇತರ ಸಮಸ್ಯೆಗಳ ಪೈಕಿ ಒಂದಷ್ಟೇ ಆಗಿರುತ್ತದೆ.

ಹೀಗಿದ್ದರೂ ಸಾಕ್ಷರತಾ ಕೆಲಸ ಮತ್ತು ಎಡಪಂಥೀಯ ಕಾರ್ಮಿಕ ಸಂಘ ಚಟುವಟಿಕೆಗಳು ಮುಂತಾದ ಸಾಮಾಜಿಕ ಚಳವಳಿಗಳು ಆಕೆಗೆ ತನ್ನದ ಸಾಮಾಜಿಕ ಸ್ಥಿತಿಗತಿಯನ್ನು ಗುರುತಿಸಿಕೊಳ್ಳಲು ನೆರವಾಯಿತು. ಇದರಿಂದ ಆಕೆಗೆ ಆದಿವಾಸಿಗಳ ಸಮಸ್ಯೆಗಳಿಗಾ ಹೋರಾಟ ನಡೆಸಲು ಸಹಾಯವಾಗುತ್ತದೆ. ಒಬ್ಬ ಆದಿವಾಸಿ ತನ್ನ ಹಿಂದಿನ ನೆನಪುಗಳಿಗೆ ಹೋದಾಗ ಅದು ಆ /ಆಕೆ ಸೇರಿದ ಸ್ವಭಾವಕ್ಕೆ ಸಂಬಂಧಿಸಿದ ಅನನ್ಯತೆಯನ ಗುರುತಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಇದು ಆದಿವಾಸಿಯನ್ನು ರಕ್ಷಿಸುವುದು ಮಾತ್ರವಲ್ಲದೆ ಪರಿಸರವನ ಸಹ ರಕ್ಷಿಸುತ್ತದೆ. ತನ್ನ ಒಂದು ಕಥೆಯಲ್ಲಿ ನಾರಾಯಣನ್, ಅವರ ಮಗ ಜೇನಿನಂಥ ಸಿಹಿಹೊಂದಿದ್ದ ಹಲಸಿ ಮರವನ್ನು ಮಾರಿದಾಗ ಅವರ ಕುಟುಂಬ ಸಂಕಟಕ್ಕೀಡಾದ ಬಗೆಯನ್ನು ವಿವರಿಸುತ್ತಾರೆ. ನಾರಾಯಣನ್ ಆದಿವಾಸಿ ಸಮುದಾಯಕ್ಕೆ ಸೇರಿದ ಒಬ್ಬ ಲೇಖಕ. ಮುಖ್ಯವಾಹಿನಿಯ ಮುದ್ರಣ ಮಾಧ್ಯಮದಲ್ಲಿ ಇತರರು ಅವರ ಸಮುದಾಯವನ್ನು ತಪ್ಪಾಗಿ ನಿರೂಪಿಸಿರುವುದನ್ನು ಗಮನಿ ದ್ದಾರೆ. ನಾರಾಯಣನ್ ಶಾಲೆಯಲ್ಲಿ ಔಪಚಾರಿಕ ಶಿಕ್ಷ ಪಡೆದು ಸರ್ಕಾರಿ ಉದ್ಯೋಗವನ್ನು ಪಡೆದು ಲೇಖಕರಾದರು ಹಾಗೂ ಅವರ ಸಮುದಾಯದ ಸ್ಥಿತಿಯ ಬ ಇತರರ ಗಮನ ಸೆಳೆದರು. "ನಿಸ್ಸಹಾಯಂತೆ ನಿಲಾವಿಲಿ (ಅಸಹಾಯಕತನದ ನಿಟ್ಟುಸಿರು) ಎಂಬ ಕಥಾ ಸಂಗ್ರಹ ಕಥೆಗಳಲ್ಲಿ ಮುಖ್ಯಾವಾಹಿನಿಯು ಆದಿವಾಸಿಗಳನ್ನು ಪರಿಗ ಸುವ ರೀತಿಯ ಬಗ್ಗೆ ಸಂಕಟ ವ್ಯಕ್ತವಾಗಿದೆ ಏತನ್ಮ ಅವರು ಬದುಕುವ ವಾತಾವರಣವನ್ನು ಹೊಸ ತಲೆಮಾರ ಹೇಗೆ ನಾಶಪಡಿಸುತ್ತಿದೆ ಎಂಬುದರ ಬಗ್ಗೆ ಅಳಲನ್ನು ವ್ಯಕ್ತಪಡಿಸುತ್ತಾರೆ. ಜೇನುಸಿಹಿಯುಳ್ಳ ಹಲಸಿನ ಮರ ತಾನು ಕೆಳಕ್ಕುರುಳುವುದಕ್ಕೆ ಮುಂಚೆ ಅಯ್ಯಪ್ಪನ್ ಜ ಮಾತನಾಡುತ್ತದೆ.

"ಅನೇಕ ತಲೆಮಾರುಗಳಿಂದ ಕುಟುಂಬದ ಹ ವನ್ನು ನಿವಾರಿಸಿದ್ದೆ. ನೆರಳನ್ನು ಒದಗಿಸಿದ್ದೆ. ಜಲಸಂರಕ್ಷಣ ಮಾಡಿದ್ದೆ. ನನ್ನ ಸುತ್ತಲಿನ ಮಣ್ಣನ್ನು ಫಲವತ್ತು ಮಾಡಿದ್ದೆ ಈ ಕೃತ್ಯಗಳು ಹೊಸ ಕಾನೂನಿನ ಪ್ರಕಾರ ಅಪರಾಧವೇ ಹಲಸಿನ ಮರವು ರಬ್ಬರು ಬೆಳೆಯಲು ಅಡ್ಡಿಯಾಗು ದೆಂದು ನಿಮ್ಮ ಮಗ ಭಾವಿಸಿದ್ದಾನೆ. ನನ್ನನ್ನು ಮಾರಿ ಆ ಹಣ ಪಡೆಯುತ್ತಾನೆ."

ಕಥೆ ಈ ರೀತಿ ಮುಕ್ತಾಯವಾಗುತ್ತದೆ "ಸುರೇಂದ್ರನ್, ಮರಗಳು ಮತ್ತು ಭೂಮಿಯ ನಡುವಣ ಸಂಬಂಧದ ಬಗ್ಗೆ ನಿನಗೇನೂ ತಿಳಿಯದು. ನೀನ ಮರವನ್ನು ಕಡಿದರೆ ಅದರ ಬೇರುಗಳು ಒಣಗಿಹೋಗು ತ್ತದೆ; ಮಳೆಯಿಂದಾಗಿ ಮಣ್ಣಿನ ಸವೆತ ಉಂಟಾಗುವುದು ಗಾಳಿ ಬಿರುಸಾಗುತ್ತದೆ, ಕಲ್ಲುಗಳು ಮೇಲೇರುವ ನೀರನ್ನು ಹಿಡಿದುಕೊಳ್ಳುವುದಿಲ್ಲ. ನೀನು ಈ ಜಾಗವನ್ನು ಬಿಟ್ಟು ಬೇರೆಡೆ ಹೋಗಬಾರದೇಕೆ?' 'ಎಲ್ಲಿಗೆ, ಅಪ್ಪ?" [೧೦೫-೧೧೦, ಭಾರತೀಯ ಸಾಹಿತ್ಯ.೨೨೪]

("ಎಕ್ಸ್‌ಪ್ಲೋರಿಂಗ್ ಥಿಯರಿಟಿಕಲ್ ಅಂಡ್ ಫಿಲಾಸ ಕಲ್ ಗ್ರೌಂಡ್ಸ್ ಫಾರ್ ಸಬಾಲ್ಟರ್ನ್-ದಲಿತ್ ಸ್ಟಡೀಸ್ ಅಂಡ ಪರ್ಸ್‌ಪೆಕ್ಟಿವ್ಸ್" ಎಂಬ ದಕ್ಷಿಣ ಭಾರತ ಸಮ್ಮೇಳನ/ಸೆಮಿನಾ ನಲ್ಲಿ ದಿನಾಂಕ ೧೬-೧೮-೨೦೦೫ ರಂದು ಮಂಡಿಸಲಾದ ಲೇಖನ. ಇದನ್ನು ದಲಿತ/ಸಬಾಲ್ಟರ್ನ್ ಅಧ್ಯಯನ ಕೇಂದ್ರ ನವದೆಹಲಿ ಮತ್ತು ತತ್ವಶಾಸ್ತ್ರ ವಿಭಾಗ, ಅರಲ್ ಆನಂದರ ಕಾಲೇಜ್, ಕರುಮತ್ತೂರು, ಮಧುರೈ. ಜಂಟಿಯಾಗಿ ಆಯೋ ಜಿಸಿದ್ದವು. ಲೇಖಕರು ಕೇರಳದ ಕ್ಯಾಲಿ ಕಟ್ ವಿಶ್ವವಿದ್ಯಾಲಯ ತತ್ವಶಾಸ್ತ್ರ ವಿಭಾಗದಲ್ಲಿ ರೀಡರ್ ಆಗಿದ್ದಾರೆ.) □

ದಲಿತ ಪ್ರಜ್ಞೆ ಮತ್ತು ಕುಲ ಮೀಮಾಂಸೆ: ಕೆಲವು ಪ್ರಶ್ನೆಗಳು

೨೫ ನೇ ಪುಟದಿಂದ

ಹಾಗಾದಾಗ ವ್ಯಕ್ತಿಯ ಮೂಲ ನೆಲೆಗಳು ಮೌನಿಯಾಗಿ ಅಗಾಧ ಸಾಧ್ಯತೆಗಳ ಸನಾತನ ಸ್ಥಿತಿಯತ್ತ ಚರಿತ್ರೆಯಲ್ಲಿ ಹಿಮ್ಮುಖವಾಗಿ ಚಲಿಸಲಾರಂಭಿಸುತ್ತವೆ. ಹೀಗೆ ಜಾತಿಯ ಏಕರೂಪವಾಗಿ ಬದಲಾಗಿಬಿಡುತ್ತೇವೆ.

ಹೀಗೆಯೇ ಅಸಂಖ್ಯ ಸಮುದಾಯಗಳು ಆಧುನಿಕವಾಗಬೇಕಾದರೆ ವರ್ಣ/ಜಾತಿಯ ಶ್ರೇಣಿಯಲ್ಲಿ ನಿರಂತರವಾಗಿ ಹೋರಾಟ ನಡೆಸುವ ಅನಿವಾರ್ಯತೆಯಲ್ಲಿ ಸಿಕ್ಕಿಕೊಳ್ಳುತ್ತವೆ. ಆದ್ದರಿಂದಲೇ ದಲಿತ/ಆದಿವಾಸಿ ಅಥವಾ ಎಸ್‌ಸಿ/ಎಸ್‌ಟಿ ಎನ್ನುವ ಮಾದರಿಗಳು ಸಹ ಅಸ್ತಿತ್ವದಲ್ಲಿರುವ ನೂರಾರು ಸಮುದಾಯಗಳನ್ನು ತನ್ನ ಒಡಲೊಳಗೆ ಸೆಳೆದುಕೊಳ್ಳುತ್ತವೆ. ಅದರ ಬದಲು ಆ ಸಮುದಾಯಗಳ ಬದುಕಿನ ಕ್ರಮಗಳನ್ನು ಭಿನ್ನತೆಯ ಅರ್ಥದಲ್ಲಿ ಪರಿಗಣಿಸಿದಾಗ ಅಲ್ಲಿ ಬಹುರೂಪಿಯಾದ ಕುಲ ಪದ್ಧತಿಗಳು ಕಾಣತೊಡಗುತ್ತವೆ. ಆಗ ಸಮುದಾಯಗಳು ಸಂಸ್ಕೃತ ಪರಂಪರೆಯ ಜಾತಿಯನ್ನು ಬಿಟ್ಟು ತಮ್ಮ ತಮ್ಮ ಕುಲಸಂಬಂಧಗಳಲ್ಲಿ ಅನನ್ಯತೆಗಳನ್ನು ಕಟ್ಟಿಕೊಳ್ಳತೊಡಗುತ್ತವೆ. ಆದ್ದರಿಂದಲೆ ಸಮುದಾಯಗಳು ಮಾಹರ್, ಮಾಲಾ, ಮಾದಿಗ, ತಿಗಳ, ಕೊರಮ, ಮುಂಡಾ... ಮುಂತಾಗಿ ತಮ್ಮ ಕುಲ ಮೂಲಗಳನ್ನು ಉಳಿಸಿಕೊಂಡಿರುವುದು. ಈ ಸಮುದಾಗಳ ನಡುವಿನ ಸಂಬಂಧಗಳನ್ನು ನಾನು **ಒಳಗೊಳ್ಳುವಿಕೆಯ ಭಿನ್ನತೆ**ಗಳೆಂದು ಕರೆಯುತ್ತೇನೆ. ಈ ಸಂಗತಿಯೇ ಮಂಟೆಸ್ವಾಮಿ ಪರಂಪರೆ ಅಥವಾ ಮಲೆಮಾದೇಶ್ವರ ಪರಂಪರೆಗಳಲ್ಲಿ ಕಾಣುವುದು. ಈ ದೃಷ್ಟಿಯಲ್ಲಿ ಒಕ್ಕಲಿಗ ಎನ್ನುವುದು ಏಕರೂಪಿಯಾಗಿರದೆ ತನ್ನೊಳಗೇ ಅದು ಅನೇಕ ಕುಲಗಳನ್ನು ಬಂಧಿಸಿಟ್ಟುಕೊಂಡಿರುತ್ತದೆ. ಹೀಗೆ ಮಾಡುವುದರಿಂದಲೇ ಅದು ತನ್ನ ರಾಜಕೀಯ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳುವುದು.

ಕುಲಮೂಲೀಯ (ಎತ್ನಿಕ್) ಚಳುವಳಿಗಳು, ಸಂಕೇತಗಳು ಮತ್ತು ಐಡೆಂಟಿಟಿಗಳು:

೧೯೫೦ ಮತ್ತು ೧೯೬೦ರ ದಶಕಗಳಲ್ಲಿ ಭಾರತಾದ್ಯಂತ ಭಾಷೆ, ಕುಲಧರ್ಮಗಳ ಮೂಲಕ ರಾಜ್ಯಗಳು ವಿಂಗಡನೆಯಾಗುತ್ತವೆ ಮತ್ತು ಹೊಸ ರಾಜ್ಯಗಳ ಬೇಡಿಕೆ ತೀವ್ರಗೊಳ್ಳುತ್ತವೆ. ಆದರೂ ಈ ಪ್ರಕ್ರಿಯೆಯಲ್ಲಿ ಉದಯೀಮಾನ ಸ್ಥಿತಿಯಲ್ಲಿದ್ದ ಐಡೆಂಟಿಟಿಗಳು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಭಿನ್ನ ರೀತಿಯಲ್ಲಿ ಪ್ರತಿಭಟನಾ ಚಳುವಳಿಗಳನ್ನು ಪ್ರೇರೇಪಿಸಲಾರಂಭಿತ್ತವೆ. ಹೀಗಿರುವಲ್ಲಿ ೧೯೮೦ರ ದಶಕವು ಈ ಕುಲಮೂಲೀಯ ಎತ್ನಿಕ್ ಐಡೆಂಟಿಟಿಗಳಿಗೆ ಚಳುವಳಿಯ ರೂಪ ನೀಡುತ್ತದೆ. ಉತ್ತರದಲ್ಲಿ ಜಾರ್ಖಂಡ್ ಮತ್ತು ಗೋರ್ಖಾಲ್ಯಾಂಡ್ ಚಳುವಳಿಗಳು ಮತ್ತು ದಕ್ಷಿಣದಲ್ಲಿ ಪ್ರತ್ಯೇಕತಾ ಚಳುವಳಿಗಳು ಹಾಗೂ ಒಳಮೀಸಲಾತಿಯ ಹೋರಾಟಗಳ ಮೂಲಕ ತಮ್ಮ ಕುಲ ಸಂಕೇತಗಳನ್ನು ಘನತೆಯ ಸಂಕೇತಗಳನ್ನಾಗಿ ಮಾಡಿಕೊಳ್ಳತೊಡಗುತ್ತವೆ. ಅನೇಕ ಸಲ ಆರ್ಥಿಕ ಶೋಷಣೆಯ ಹೋರಾಟವು ಸಹ ಕುಲ ಸಂಕೇತಗಳ ಮೂಲಕವೇ ಸಂಘಟಿತಗೊಂಡಿರುವುದನ್ನು ನಾವು ಕಾಣುತ್ತೇವೆ.

ಈ ಕುಲಮೂಲೀಯ ಚಳುವಳಿಗಳು ಎಲ್ಲಾ ರಾಜ್ಯಗಳಲ್ಲೂ ಕಂಡು ಬರುತ್ತಿದ್ದು ಅವು ರಾಜ್ಯ ಮತ್ತು ಆ ರಾಜ್ಯದ ಅಭಿವೃದ್ಧಿ ನೀತಿಗಳಿಗೆ ಸವಾಲಾಗಿ ನಿಂತಿವೆ.

ಈ ಸಂಗತಿಯನ್ನು ಅನೇಕ ಸಿದ್ಧಾಂತಿಗಳು ಮೀಮಾಂಸೆಯ ಮಾದರಿಗಳೆಂದು ಒಪ್ಪಿಕೊಳ್ಳಲು ಇನ್ನೂ ನಿರಾಕರಿಸುತ್ತಲೇ ಬಂದಿದ್ದಾರೆ. ಈ ಸಿದ್ಧಾಂತಿಗಳ ಪ್ರಕಾರ ಈ ಅತ್ಯಾಧುನಿಕವಾದ ಕುಲಮೂಲೀಯ ಸಂಗತಿಗಳು ಸಾಂಪ್ರದಾಯಿಕ ಸಂಗತಿಗಳೆಂದೇ ಪರಿಗಣಿತವಾಗಿ, ಅಭಿವೃದ್ಧಿಗೆ ಅಡ್ಡಿಯಾಗಿವೆ. ಆದರೆ ಈ ಕುಲಮೂಲೀಯ ಸಮುದಾಯಗಳಿಗೆ ಅಭಿವೃದ್ಧಿ ಇನ್ನೂ ಪರಕೀಯವಾಗಿಯೇ ಉಳಿದಿದೆಯಾದ್ದರಿಂದ ಆಧುನಿಕತೆಯನ್ನು ತಮ್ಮದಾಗಿಸಿಕೊಳ್ಳಲು ಈ ಸಮುದಾಯಗಳಿಗೆ ಉಳಿದಿರುವ ಮಾರ್ಗವೆಂದರೆ ತಮ್ಮ ಕುಲಪದ್ಧತಿಗಳನ್ನು ಆಚರಣೆಗೆ ತರುವುದೇ ಆಗಿದೆ. ಆದ್ದರಿಂದ ಈ ಕುಲಮೀಮಾಂಸೆಯ ಮೂಲಕ ಬಂಡವಾಳ ಜಗತ್ತಿನ ಮೂರು ಆಧಾರಗಳೆಂದೇ ಪರಿಗಣಿತವಾಗಿರುವ ರಾಜ್ಯಾಂಗ ವ್ಯವಸ್ಥೆ, ತಂತ್ರಜ್ಞಾನ ಮತ್ತು ವಿಶ್ವಾತ್ಮಕವಾದ ಶಿಕ್ಷಣ ವ್ಯವಸ್ಥೆಯನ್ನು ಎಲ್ಲಾ ಸಮುದಾಯಗಳಿಗೆ ಸಿಗುವಂತೆ ಮಾಡಬಹುದಾಗಿದೆ. ಆದರೆ ಏಕಾತ್ಮಕವಾದ ರಾಜ್ಯಾಂಗವು ಈ ಬಹುರೂಪಿ ಕುಲ ಸಮುದಾಯಗಳನ್ನು ಏಕೀಕರಿಸಲು ಪ್ರಯತ್ನ ನಡೆಸುತ್ತಲೇ ಬಂದಿದೆ. ಅನೇಕ ಸಲ ಈ ಕುಲ ಸಮುದಾಯಗಳ ಪ್ರತಿರೋಧವನ್ನು ಭಯೋತ್ಪಾದನೆ ಎಂದೋ ಅಥವಾ ಪ್ರತ್ಯೇಕತಾ ಕೂಗೆಂದೋ ಕರೆದುಬಿಡುತ್ತದೆ. ಆದರೆ ಈ ಪ್ರತಿರೋಧಗಳು ನ್ಯಾಯ ಮತ್ತು ತಮ್ಮ ಸಾಮುದಾಯಿಕ ಅಸ್ತಿತ್ವಗಳ ರಕ್ಷಣೆಯ ಅಭಿವ್ಯಕ್ತಿಯಲ್ಲದೆ ಬೇರೇನೂ ಅಲ್ಲ ಎಂಬುದನ್ನು ಇನ್ನು ಮುಂದಾದರೂ ಗಮನಿಸಬೇಕಾಗಿದೆ.

ಅಲ್ಲದೆ ಈ ಕುಲಮೂಲೀಯ ಪ್ರತಿರೋಧಗಳು ತಮ್ಮ ಪಾರಂಪರಿಕ ಕುಲ ಸಂಕೇತಗಳನ್ನು ಬಳಸಿ ತಮ್ಮ ದೈನಂದಿನ ಅಗತ್ಯಗಳ ಬೇಡಿಕೆಯನ್ನು ಮುಂದಿಡುತ್ತಲೇ ತಮ್ಮ ಸಮುದಾಯದ ವ್ಯಕ್ತಿಗಳನ್ನು ಸಂಘಟಿಸುತ್ತಿರುತ್ತವೆ.

ಆದ್ದರಿಂದ ಈ ಲೇಖನ **"ದಲಿತ ಪ್ರಜ್ಞೆ ಮತ್ತು ಕುಲ ಮೀಮಾಂಸೆ: ಕೆಲವು ಪ್ರಶ್ನೆಗಳು"** ಮಂಡಿಸುವ ವಾದವೆಂದರೆ ದಲಿತ ಎನ್ನುವ ಪರಿಕಲ್ಪನೆ ಬಹುವ್ಯಾಪ್ತಿಯದ್ದಾಗಿದ್ದು, ಇನ್ನು ಮುಂದೆ ಅದು ಕುಲ ಪ್ರಜ್ಞೆಯಾಗಿ ಎಲ್ಲಾ ಸಮುದಾಯಗಳ ಕುಲವೃದ್ಧಿಗೆ ವೇದಿಕೆಯಾಗಿ ಬದಲಾಗಬೇಕಾಗುತ್ತದೆ ಹಾಗೂ ಕುಲ ಮೀಮಾಂಸೆಯ ಹೊಸ ಸಾಧ್ಯತೆಗಳತ್ತ ಹೆಜ್ಜೆ ಇಡಬೇಕಾಗುತ್ತದೆ. ಆಗಲೇ ಅದು ತನ್ನ ಏಕಘನೀಕೃತ ಸ್ಥಿತಿಯಿಂದ ಹೊರ ಬಂದು ಬಹುರೂಪಿಯಾಗುತ್ತ ಚಲಿಸಿದಂತಾಗುತ್ತದೆ.

(ಸೆಂಟರ್ ಫಾರ್ ದಲಿತ್/ಸಬಾಲ್ಟ್ರನ್ ಸ್ಟಡೀಸ್. ನವದೆಹಲಿ ಮತ್ತು ತತ್ವಶಾಸ್ತ್ರ ವಿಭಾಗ, ಅರುಳಾನಂದರ್ ಕಾಲೇಜ್, ಕೊಯಮತ್ತೂರು ಇವರು ಸಂಘಟಿಸಿದ್ದ ದಕ್ಷಿಣ ಭಾರತ ಮಟ್ಟದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ) □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಅಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಅಂಬೇಡ್ಕರ್ v/s ಆರ್‌ಎಸ್‌ಎಸ್

ವರ್ತಮಾನ

ಹಿಂದೂ ರಾಷ್ಟ್ರ ಕಲ್ಪನೆಯನ್ನು ಬಲವಾಗಿ ವಿರೋಧಿಸಿದ ಡಾ॥ ಅಂಬೇಡ್ಕರ್ ಅವರ ಆಶಯಗಳನ್ನು ವಿರೋಧಿಸಲೆಂದೇ ಜನ್ಮತಾಳಿದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಾಖೆಯಲ್ಲಿ ಬೆಳೆದು ಬಂದ ಯಡಿಯೂರಪ್ಪ ಬಾಬಾಸಾಹೇಬರನ್ನು ಒಪ್ಪಲು ಸಾಧ್ಯವಿಲ್ಲ ಎಂದು ನಮಗೂ ಗೊತ್ತು. ಆದರೆ ಯಡಿಯೂರಪ್ಪ ತಮ್ಮ ಸ್ವಂತ ಮನೆಯಲ್ಲಿ ಇಲ್ಲವೇ ತಮ್ಮ ಪಕ್ಷದ ಕಚೇರಿಯಲ್ಲಿ ಡಾ॥ ಅಂಬೇಡ್ಕರ್ ಫೋಟೋ ಯಾಕೆ ಹಾಕಿಲ್ಲ ಎಂದು ಯಾರೂ ಕೇಳುವುದಿಲ್ಲ. ಅದು ಅವರ ವೈಯಕ್ತಿಕ ಸ್ವಾತಂತ್ರ್ಯ. ಚುನಾವಣೆಗೆ ನಿಂತು ಜಯಶಾಲಿಯಾಗಿ ಬರುವ ಯಾರೇ ಆಗಿರಲಿ,ಯಾವ ಪಕ್ಷಕ್ಕೇ ಸೇರಿರಲಿ ಅವರು ಕೆಲ ಶಿಷ್ಟಾಚಾರಗಳನ್ನು ಪಾಲಿಸಬೇಕಾಗುತ್ತದೆ.

○ಸನತ್ ಕುಮಾರ ಬೆಳಗಲಿ

ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದ ಮಾರನೆ ದಿನ ಅದು. ಕೋಮು ಸೌಹಾರ್ದ ವೇದಿಕೆಯ ಕಾರ್ಯಾಗಾರವೊಂದರಲ್ಲಿ ಪಾಲ್ಗೊಳ್ಳಲು ನಾನು ಮತ್ತು ಕವಿ ಮಿತ್ರ, ಶಾಸಕ ಹನುಮಂತಯ್ಯ ಮಂಗಳೂರಿಗೆ ಬಂದಿದ್ದೆವು. ನಸುಕಿನ ಜಾವ ಬಸ್ಸಿನಿಂದಿಳಿದು ಪತ್ರಿಕೆಯನ್ನು ಬಿಡಿಸಿ ನೋಡಿದಾಗ ಒಂದು ಸುದ್ದಿ. ನೂತನ ಉಪಮುಖ್ಯಮಂತ್ರಿ ಯಡಿಯೂರಪ್ಪನವರ ವಿಧಾನ ಸೌಧದಲ್ಲಿನ ಕೊಠಡಿಯಿಂದ ಡಾ॥ ಅಂಬೇಡ್ಕರ್ ಭಾವಚಿತ್ರದ ಎತ್ತಂಗಡಿ. ಈ ಸುದ್ದಿ ನೋಡಿ ನಮಗೆ ಅಚ್ಚರಿಯಾಗಲಿಲ್ಲ. ಆದರೆ ಆತಂಕ ಉಂಟಾಯಿತು.

ಹಿಂದೂ ರಾಷ್ಟ್ರ ಕಲ್ಪನೆಯನ್ನು ಬಲವಾಗಿ ವಿರೋಧಿಸಿದ ಡಾ॥ ಅಂಬೇಡ್ಕರ್ ಅವರ ಆಶಯಗಳನ್ನು ವಿರೋಧಿಸಲೆಂದೇ ಜನ್ಮತಾಳಿದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಾಖೆಯಲ್ಲಿ ಬೆಳೆದು ಬಂದ ಯಡಿಯೂರಪ್ಪ ಬಾಬಾಸಾಹೇಬರನ್ನು ಒಪ್ಪಲು ಸಾಧ್ಯವಿಲ್ಲ ಎಂದು ನಮಗೂ ಗೊತ್ತು. ಆದರೆ ಯಡಿಯೂರಪ್ಪ ತಮ್ಮ ಸ್ವಂತ ಮನೆಯಲ್ಲಿ ಇಲ್ಲವೇ ತಮ್ಮ ಪಕ್ಷದ ಕಚೇರಿಯಲ್ಲಿ ಡಾ॥ ಅಂಬೇಡ್ಕರ್ ಫೋಟೋ ಯಾಕೆ ಹಾಕಿಲ್ಲ ಎಂದು ಯಾರೂ ಕೇಳುವುದಿಲ್ಲ. ಅದು ಅವರ ವೈಯಕ್ತಿಕ ಸ್ವಾತಂತ್ರ್ಯ. ಆದರೆ ವಿಧಾನಸೌಧ ಅಂದರೆ ಯಡಿಯೂರಪ್ಪ ನವರ ಅಪ್ಪನ ಆಸ್ತಿಯಲ್ಲ. ಚುನಾವಣೆಗೆ ನಿಂತು ಜಯಶಾಲಿಯಾಗಿ ಬರುವ ಯಾರೇ ಆಗಿರಲಿ, ಯಾವ ಪಕ್ಷಕ್ಕೇ ಸೇರಿರಲಿ ಅವರು ಕೆಲ ಶಿಷ್ಟಾಚಾರಗಳನ್ನು ಪಾಲಿಸಬೇಕಾಗುತ್ತದೆ. ಸಂವಿಧಾನದ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಯಡಿಯೂರಪ್ಪ ಸೈದ್ಧಾಂತಿಕವಾಗಿ ಗೋಳ್ವಲಕರ್, ಗೋಡ್ಸೆಯ ಆರಾಧಕರಾಗಿರಬಹುದು. ಆದರೆ ಉಪ ಮುಖ್ಯಮಂತ್ರಿಯಾಗಿ ರಾಜ್ಯಾಂಗದ ವಿಧಿ ವಿಧಾನಗಳಿಗೆ ಬಹಿರಂಗವಾಗಿಯಾದರೂ ಬದ್ಧತೆಯನ್ನು ತೋರಿಸಬೇಕಾಗುತ್ತದೆ.

ವಿಧಾನಸೌಧದ ಮೂರನೆ ಮಹಡಿಯಲ್ಲಿರುವ ಆ ಕೊಠಡಿಯಲ್ಲಿ ಮುಂಚೆ ಮಲ್ಲಿಕಾರ್ಜುನ ಖರ್ಗೆ ಅವರಿದ್ದರು. ಅದೇ ಕೊಠಡಿಯನ್ನು ಆರಿಸಿಕೊಂಡ ಯಡಿಯೂರಪ್ಪನವರು ಪುರೋಹಿತರಿಂದ ಪೂಜೆ ಮಾಡಿಸಿ ತೆಂಗಿನಕಾಯಿ ಒಡೆದು ಒಳಗೆ ಕಾಲಿರಿಸಿದರು. ಆಗ ಅವರು ಮಾಡಿದ ಮೊದಲ ಕೆಲಸ ಡಾ॥ ಅಂಬೇಡ್ಕರ್ ಮತ್ತು ಇಂದಿರಾಗಾಂಧಿ ಅವರ ಫೋಟೋಗಳನ್ನು ಎತ್ತಂಗಡಿ ಮಾಡಿಸಿದ್ದು, ಇದು ಮಾರನೆ ದಿನ ಕನ್ನಡಪ್ರಭದಲ್ಲಿ ಸುದ್ದಿಯಾಗಿ ಆಕ್ರೋಶದ ಅಲೆಯನ್ನು ಎಬ್ಬಿಸಿತು. ದಲಿತ ಸಂಘಟನೆಗಳು ಮಾತ್ರವಲ್ಲ ಎಲ್ಲ ಪ್ರಗತಿಪರ ಸಂಘಟನೆಗಳು ಒಂದುಗೂಡಿ ಪ್ರತಿಭಟನೆ ಆರಂಭಿಸಿದವು. ಆಗಲೂ ಯಡಿಯೂರಪ್ಪ ಈ ಬಗ್ಗೆ ಸ್ಪಷ್ಟೀಕರಣ ಕೊಡಲಿಲ್ಲ. ಪ್ರತಿಭಟನೆ ನಡೆದ ಮಾರನೆ ದಿನ ಇದು ತನ್ನ ತೇಜೋ ವಧೆ ಯತ್ನ. ಈ ವರದಿ ಪ್ರಕಟಿಸಿದ ಪತ್ರಿಕೆ ವಿರುದ್ಧ ಪತ್ರಿಕಾ ಮಂಡಲಿಗೆ ದೂರು ನೀಡುವುದಾಗಿ, ಕೋರ್ಟಿಗೆ ಹೋಗುವು ದಾಗಿ ಅಬ್ಬರಿಸಿದರು. ಈ ಪ್ರಚೋದನಕಾರಿ ಮಾತಿ ನಿಂದ ಪ್ರತಿಭಟನೆ ತೀವ್ರ ಗೊಂಡು ನೂತನ ಉಪ ಮುಖ್ಯಮಂತ್ರಿಯ ಪ್ರತಿಕೃತಿ ದಹನ ಕಾರ್ಯಕ್ರ ಮಗಳು ನಡೆದವು, ಇನ್ನೂ ನಡೆಯುತ್ತಿವೆ. ಹೀಗೆ ಪ್ರತಿಭಟನೆ ತೀವ್ರವಾಗುತ್ತಿದ್ದಂತೆ ಯಡಿಯೂರಪ್ಪ ಗಾಬರಿಯಾದರು. ಮತ್ತೆ ಅಂಬೇಡ್ಕರ್ ಫೋಟೋ ತರಿಸಿ ಹಾಕಿದ್ದಾಗಿ ದೇವರಾಣೆ ಮಾಡತೊಡಗಿದರು. ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಅಂಬೇಡ್ಕರ್ ಫೋಟೋ ಹಾಕುವಂತೆ ಆದೇಶ ಹೊರಡಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಪತ್ರ, ಬರೆಯುವುದಾಗಿ ಸಬೂಬು ಹೇಳತೊಡಗಿದರು. ಆದರೆ ಫೋಟೋ ತೆಗೆದ ಸಂಗತಿಯನ್ನು ಸ್ಪಷ್ಟವಾಗಿ ಅವರು ತಳ್ಳಿಹಾಕಲಿಲ್ಲ. ಕೊನೆಗೆ ಘಟನೆ ಬಗ್ಗೆ ವಿಷಾದ ವ್ಯಕ್ತಪಡಿಸಿ ಕೈ ತೊಳೆದುಕೊಂಡರು. ಆದರೆ ಸದರಿ ಪತ್ರಿಕೆ ವಿರುದ್ಧ ದೂರು ನೀಡುವ ವಿವಾದ ಕೈಬಿಟ್ಟರು. ಡಾ॥ ಅಂಬೇಡ್ಕರ್ ಅವರು ನಡೆಸಿದ ಅವಿರತ ಸ್ವಾಭಿಮಾನಿ ಹೋರಾಟದ ಫಲವಾಗಿ ಈ ದೇಶದ ತುಳಿತಕ್ಕೊಳಗಾದ ಜನತೆ ಈ ರೀತಿ ತಮ್ಮ ಪಾಲಿನ ಹಕ್ಕನ್ನು ಕೇಳಲು ಮುಂದಾಗಿದ್ದನ್ನು ಕಂಡ ಸಂಘ ಪರಿ ವಾರದ ಪರೋಹಿತಶಾಹಿಗಳು ಅಸ್ಪೃಶ್ಯ ಸಮುದಾಯದ ಅಂತರಾಳದ ಚೈತನ್ಯವನ್ನು ನಂದಿಸುವ ಹುನ್ನಾರವನ್ನು ನಡೆಸುತ್ತಲೇ ಬಂದಿವೆ.

ಈ ಶತಮಾನದ ಆರಂಭದಲ್ಲಿ ಮಹಾರಾಷ್ಟ್ರದಲ್ಲಿ ಜಾತಿಪದ್ಧತಿಯ ಸಾಮಾಜಿಕ ಕಂದಾಚಾರಗಳ ವಿರುದ್ಧ ವೀರೋಚಿತವಾದ ಹೋರಾಟ ಆರಂಭವಾಯಿತು. ಪುಣೆಯ ಜ್ಯೋತಿಬಾ ಪುಲೆ, ಅಗರ್ಕರ್, ಕೊಲ್ಲಾಪುರದ ಶಾಹು ಮಹಾರಾಜರು ಶ್ರೇಣೀಕೃತ ಸಮಾಜದ ವಿರುದ್ಧ ಸಿಡಿದೆದ್ದರು. ಸಮಾಜದ ಅವಕಾಶ ವಂಚಿತ ವರ್ಗದಲ್ಲಿ ಹೊಸ ಜಾಗೃತಿ ಮೂಡಿಸಿದರು. ಈ ಪರಂಪರೆಯ ಬಂಡಾಯದ ಬಾವುಟವನ್ನು ಡಾ॥ ಅಂಬೇಡ್ಕರ್ ಎತ್ತಿ ಹಿಡಿದರು.

ಹೀಗೆ ಹಿಂದೂ ಸಮಾಜದಲ್ಲಿನ ಅಸ್ಪೃಶ್ಯ ಜನ ಸಮುದಾಯಗಳು ಸಿಡಿದೆದ್ದುದರಿಂದ ಗಾಬರಿಗೊಂಡು ಅಂಡು ಸುಟ್ಟ ಬೆಕ್ಕಿನಂತೆ ಕಂಗಾಲಾದ ಮಹಾರಾಷ್ಟ್ರದ ಕೆಲ ಚಿತ್ಪಾವನ ಬ್ರಾಹ್ಮಣರು ಹಿಂದುತ್ವದ ಸಿದ್ಧಾಂತ ಹುಟ್ಟಿ ಹಾಕಿದರು. ಹಿಂದುಗಳೆಲ್ಲ ಒಂದೇ ನಮ್ಮ ನಿಜವಾದ ಶತ್ರು ಮುಸಲ್ಮಾನರು ಮತ್ತು ಕ್ರೈಸ್ತರು ಎಂದು ಬಿಂಬಿಸಿ ಜಾಗೃತಗೊಂಡ ದಲಿತ ಹಾಗೂ ಹಿಂದುಳಿದ ಜನ ಸಮುದಾಯಗಳನ್ನು ತಮ್ಮ ಧೃತರಾಷ್ಟ್ರಾಲಿಂಗನದಿಂದ ನಿರ್ನಾಮ ಮಾಡಲು ಸಂಚು ರೂಪಿಸಿದರು.

ಪುರೋಹಿತ ಶಾಹಿಯ ಇಂಥ ಪಿತೂರಿಯ ಭಾಗವಾಗಿ ೧೯೨೫ ರಲ್ಲಿ ನಾಗಪುರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಜನ್ಮ ತಾಳಿತು. ಆಂಧ್ರ ಮೂಲದ ಮುಲಕನಾಡು ಬ್ರಾಹ್ಮಣ ಕೇಶವ

ನಾನು ಹಿಂದುವಾಗಿ ಜನಿಸಿದ್ದರೂ ಹಿಂದುವಾಗಿ ಸಾಯುವುದಿಲ್ಲ ಎಂದು ಅಂಬೇಡ್ಕರ್ ಬೌದ್ಧ ಧರ್ಮವನ್ನು ಸೇರಿದರು. ನಂತರ ಬುದ್ಧನನ್ನು ಹತ್ತನೇ ಅವತಾರ ಮಾಡಿ ಜೀರ್ಣಿಸಿಕೊಳ್ಳಲು ಯತ್ನಿಸಿದಂತೆ ಅಂಬೇಡ್ಕರ್‌ರನ್ನು ನುಂಗಲು ಫ್ಯಾಸಿಸ್ಟ್ ಪರಿವಾರ ಯತ್ನಿಸಿತು. ಈ ಹುನ್ನಾರದ ಭಾಗವಾಗಿ ಎಬಿವಿಪಿ ಯಂತ ಪರಿವಾರದ ವೇದಿಕೆಗಳು ಅಂಬೇಡ್ಕರ್ ಜಯಂತಿಯ ನಾಟಕವನ್ನು ನಡೆಸುತ್ತ ಬಂದಿವೆ. ಆದರೆ ಅಂಬೇಡ್ಕರ್‌ರನ್ನು ಜೀರ್ಣಿಸಿಕೊಳ್ಳುವುದು ಸುಲಭದ ಸಂಗತಿಯಲ್ಲ. ಬಾಬಾ ಸಾಹೇಬರ ಸ್ವಾಭಿಮಾನದ ಬಾವುಟವನ್ನು ದಲಿತ ತರುಣರು ಎತ್ತಿ ಹಿಡಿದು ಮುನ್ನಡೆಸಿದರು. ಸುಳ್ಳು ಕತೆಗಳನ್ನು ಸೃಷ್ಟಿಸುವಲ್ಲಿ ಸಂಘ ಪರಿವಾರದವರು ಹಿಟ್ಲರ್‌ನ ಪ್ರಚಾರ ಮಂತ್ರಿ ಗೊಬ್ಬೆಲ್ಸ್‌ನನ್ನು ಮೀರಿಸಿದವರು.

ಬಲಿರಾಮ್ ಹೆಡ್ಗೆವಾರ್, ಡಾ॥ ಮೂಂಜೆ ಪರಾಂಜಪೆ ಮುಂತಾದ ವರು ಸೇರಿ ಈ ಫ್ಯಾಸಿಸ್ಟ್ ಸಂಘಟನೆಗೆ ಚಾಲನೆ ನೀಡಿದರು. ಅಷ್ಟರ ಲ್ಲಾಗಲೇ ವಿನಾಯಕ ದಾಮೋದರ್ ಸಾವ ರ್ಕರ್ ಹಿಂದೂ ಮಹಾಸಭೆಯ ಮೂಲಕ ಇಂಥದೇ ವಿಚಾರಗಳನ್ನು ಪ್ರಚಾರ ಮಾಡುತ್ತಿದ್ದರು.

ಶೇ. ೨ ರಷ್ಟಿರುವ ಆದರೆ ಇಡೀ ದೇಶವನ್ನು ಮನುಧರ್ಮ ಶಾಸ್ತ್ರದ ನೇಣಿಗೆ ಹಾಕಿ ಶ್ರೇಣೀಕೃತ ಸಮಾಜ ನಿರ್ಮಾಣ ಮಾಡಿ ತಲೆ ಭಾಗದಲ್ಲಿ ಬ್ರಾಹ್ಮಣರನ್ನು ಕೆಳಭಾಗ ದಲ್ಲಿ ಶೂದ್ರರನ್ನು ಕುಳ್ಳಿರಿ ಸಿದ ಪಾತಕಿಗಳಿಗೆ ಈ ವ್ಯವಸ್ಥೆಯ ರಕ್ಷಣೆಗಾಗಿ ಸಿದ್ಧಾಂತವೊಂದು ಬೇಕಾಗಿತ್ತು. ಅದಕ್ಕಾಗಿ ಡಾ॥ ಮೂಂಜೆ ಅವರು ಇಟಲಿಗೆ ಹೋಗಿ ಅಲ್ಲಿನ ಫ್ಯಾಸಿಸಸ್ಟ್ ಸರ್ವಾಧಿ ಕಾರಿ ಮುಸಲೋನಿಯನ್ನು ಭೇಟಿಮಾಡಿ ತಿಂಗಳು ಗಟ್ಟಲೆ ಅಲ್ಲಿದ್ದು ಫ್ಯಾಸಿಸ್ಟ್ ಪಕ್ಷದ ಪ್ರಣಾಳಿಕೆಯನ್ನು ತಂದು ಅದಕ್ಕೆ ಮನು ಶಾಸ್ತ್ರದ ಲೇಪನ ನೀಡಿ ಹಿಂದುತ್ವ ಸಿದ್ಧಾಂತ ಹುಟ್ಟು ಹಾಕಿದರು.

ಹೀಗೆ ವಿದೇಶದಿಂದ ಎರವಲು ತಂದ ಸಿದ್ಧಾಂತ ವನ್ನು ಜನಾಂಗ ದ್ವೇಷಿ ವಿಚಾರಗಳನ್ನು ಯುವಕರ ತಲೆಯಲ್ಲಿ ಇಂಜೆಕ್ಟ್ ಮಾಡುತ್ತ ಆರ್‌ಎಸ್‌ಎಸ್ ಈ ದೇಶದಲ್ಲಿ ಬೆಳೆದು ಬಂತು. ಈ ಗಂಡಾಂತರದ ಅರಿವಿದ್ದ ಡಾ॥ ಅಂಬೇಡ್ಕರ್ ಹಿಂದು ರಾಷ್ಟ್ರ ಸ್ಥಾಪಿಸಲ್ಪಟ್ಟರೆ ಅದು ಈ ದೇಶಕ್ಕೆ ಒಂದು 'ಮಹಾ ಆಪತ್ತಾಗಿರುತ್ತದೆ' ಎಂದು ಅವರು ಅಂದೇ ಹೇಳಿದ್ದರು.

ನಾನು ಹಿಂದುವಾಗಿ ಜನಿಸಿದ್ದರೂ ಹಿಂದುವಾಗಿ ಸಾಯುವುದಿಲ್ಲ ಎಂದು ಅಂಬೇಡ್ಕರ್ ಬೌದ್ಧ ಧರ್ಮವನ್ನು ಸೇರಿದರು. ನಂತರ ಬುದ್ಧನನ್ನು ಹತ್ತನೇ ಅವತಾರ ಮಾಡಿ ಜೀರ್ಣಿಸಿಕೊಳ್ಳಲು ಯತ್ನಿಸಿದಂತೆ ಅಂಬೇಡ್ಕರ್ ರನ್ನು ನುಂಗಲು ಫ್ಯಾಸಿಸ್ಟ್ ಪರಿವಾರ ಯತ್ನಿಸಿತು. ಈ ಹುನ್ನಾರದ ಭಾಗವಾಗಿ ಎಬಿವಿಪಿಯಂತ ಪರಿವಾರದ ವೇದಿಕೆಗಳು ಅಂಬೇಡ್ಕರ್ ಜಯಂತಿಯ ನಾಟಕವನ್ನು ನಡೆಸುತ್ತ ಬಂದಿವೆ.

ಆದರೆ ಅಂಬೇಡ್ಕರ್‌ರನ್ನು ಜೀರ್ಣಿಸಿಕೊಳ್ಳುವುದು ಸುಲಭದ ಸಂಗತಿಯಲ್ಲ. ಬಾಬಾ ಸಾಹೇಬರ ಸ್ವಾಭಿಮಾ ನದ ಬಾವುಟವನ್ನು ದಲಿತ ತರುಣರು ಎತ್ತಿಹಿಡಿದು ಮುನ್ನಡೆಸಿದರು. ಸುಳ್ಳು ಕತೆಗಳನ್ನು ಸೃಷ್ಟಿಸುವಲ್ಲಿ ಸಂಘ ಪರಿವಾರದವರು ಹಿಟ್ಲರ್‌ನ ಪ್ರಚಾರಮಂತ್ರಿ ಗೊಬ್ಬೆಲ್ಸ್‌ನನ್ನು ಮೀರಿಸಿದವರು. ಅಂತಲೆ ಅಂಬೇಡ್ಕರ್ ಮುಸ್ಲಿಂ ವಿರೋ ಧಿಯಾಗಿದ್ದರು ಎಂದು ಪ್ರಚಾರ ನಡೆಸಿದರು. ಉತ್ತರ ಪ್ರದೇಶ ಬಿಜೆಪಿ ಅಧ್ಯಕ್ಷ ವಿನಯ್‌ಕಟಿಯಾರ್ ೨೦೦೩ ರ ಜನವರಿಯಲ್ಲಿ ಆ ರಾಜ್ಯದ ೩೦ ಜಿಲ್ಲೆಗಳಲ್ಲಿ ೧೪ ದಿನಗಳ ಕಾಲ ಯಾತ್ರೆ ಮಾಡಿ ಅಂಬೇಡ್ಕರ್ ಮುಸ್ಲಿಮರನ್ನು ವಿರೋಧಿಸುತ್ತಿದ್ದರು ಎಂದು ಪ್ರಚಾರ ಮಾಡಿದ್ದರು.

ಪುರೋಹಿತಶಾಹಿ ಫ್ಯಾಸಿಸ್ಟ್ ಸಂಘ ಪರಿವಾರಕ್ಕೆ ಸೇರಿದ ಯಡಿಯೂರಪ್ಪ ಅಂಬೇಡ್ಕರ್ ಫೋಟೋವನ್ನು ತಮ್ಮ ಕೊಠಡಿಯಿಂದ ತೆಗೆದು ಹಾಕಿದ್ದು ಅಚ್ಚರಿಪಡಬೇಕಾದ ಸಂಗತಿಯೇನಲ್ಲ. ಬರಲಿರುವ ದಿನಗಳಲ್ಲಿ ಕರ್ನಾಟಕವನ್ನು ಗುಜರಾತನ್ನಾಗಿ ಮಾಡಲು ಹೋರ ಟಿರುವುದರಿಂದ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ವರ್ಗದ ಜನರ ಮೇಲೆ ಇನ್ನೂ ಹೆಚ್ಚು ದಾಳಿ ನಡೆದರೆ ಅಚ್ಚರಿ ಪಡಬೇಕಾಗಿಲ್ಲ.

ಆದರೆ ಉತ್ತರ ಪ್ರದೇಶದ ಜನ ಈ ಸುಳ್ಳು ಪ್ರಚಾ ರಕ್ಕೆ ಸೊಪ್ಪು ಹಾಕಲಿಲ್ಲ. ಅಂಬೇಡ್ಕರ್ ಬರೆದ ಪುಸ್ತಕಗ ಳಲ್ಲಿ ಹಾಗೂ ತಮ್ಮ ಜೀವಿತಾವಧಿಯಲ್ಲಿ ಅವರು ನಡೆಸಿದ ಚಳುವಳಿಗಳಲ್ಲೆಲ್ಲೂ ಅವರು ಮುಸ್ಲಿಂ ವಿರೋಧಿ ಎಂಬು ದಕ್ಕೆ ದಾಖಲೆಗಳಿಲ್ಲ. ಆದರೆ ಮನುಷ್ಯರನ್ನು ನಾಯಿ ನರಿಗ ಳಿಗಿಂತ ಕೀಳಾಗಿ ಕಂಡ ಹಿಂದೂ ಪುರೋಹಿತ ಶಾಹಿಯ ವಿರುದ್ಧ ಬಾಬಾಸಾಹೇಬರು ನಡೆಸಿದ ಹೋರಾಟ ಚರಿತ್ರಾ ರ್ಹವಾಗಿದೆ. ಮಹಾರಾಷ್ಟ್ರ ಪ್ರಗತಿಪರ ಚಿಂತಕ ಡಾ॥ ಆನಂದ ತೇಲ ತುಂಬಡೆ ತಮ್ಮ ಪುಸ್ತಕದಲ್ಲಿ ಈ ಬಗ್ಗೆ ಸುದೀರ್ಘವಾಗಿ ವಿವರಿಸಿದ್ದಾರೆ.

ಹೀಗೆ ಒಂದೆಡೆ ಅಂಬೇಡ್ಕರ್‌ರನ್ನು ತನ್ನ ಹಿಡನ್ ಫ್ಯಾಸಿಸ್ಟ್ ಅಜೆಂಡಾದ ಜಾರಿಗಾಗಿ ಬಳಸಿಕೊಳ್ಳಲು ಯತ್ನಿಸಿ ವಿಫಲಗೊಂಡ ಸಂಘ ಪರಿವಾರ ಇನ್ನೊಂದೆಡೆ ಬಾಬಾ ಸಾಹೇಬರ ವಿರುದ್ಧ ನಿರಂತರ ಅಪಪ್ರಚಾರ ನಡೆಸಿತು. ಆರ್.ಎಸ್.ಎಸ್ ಚಿಂತನ ಚಿಲುಮೆ ಅರುಣ್ ಶೌರಿ ತಮ್ಮ 'ಹುಸಿದೇವತೆ' ಎಂಬ ಪುಸ್ತಕವನ್ನು ಅಂಬೇಡ್ಕರರ ತೇಜೋವಧೆಗಾಗಿ ಮೀಸಲಾಗಿಟ್ಟರು. ಈ ಶೌರಿಯನ್ನು ವಾಜಪೇಯಿ ತಮ್ಮ ಸಚಿವ ಸಂಪುಟದಲ್ಲಿ ಸೇರಿಸಿಕೊಂಡು ಬಂಡವಾಳ ವಾಪಸಾತಿ ಸಚಿವನನ್ನಾಗಿ ಮಾಡಿದರು.

ಮಹಾರಾಷ್ಟ್ರದಲ್ಲಿ ಬಿಜೆಪಿ ಶಿವಸೇನೆ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಅಂಬೇಡ್ಕರ್ ಪುಸ್ತಕವೊಂದನ್ನು ನಿಷೇ ಧಿಸಿತು. ಆಗ ಮಹಾರಾಷ್ಟ್ರದ ಶೋಷಿತ ಜನತೆ ಸಿಡಿದೆದ್ದು ಮನುವಾದಿಗಳಿಗೆ ಸರಿಯಾದ ಪಾಠ ಕಲಿಸಿದರು. ಎಡ ಪಂಥೀಯ ವಿಚಾರಧಾರೆಯ ಭಗತ್ ಸಿಂಗ್‌ರನ್ನು ಸಂಘ ಪರಿವಾರ ಇದೇ ರೀತಿ ದುರುಪಯೋಗವನ್ನು ಮಾಡಿ ಕೊಳ್ಳಲು ವಿಫಲಯತ್ನ ನಡೆಸುತ್ತಾ ಬಂದಿದೆ.

ಇಂಥ ಪುರೋಹಿತಶಾಹಿ ಫ್ಯಾಸಿಸ್ಟ್ ಸಂಘ ಪರಿವಾರಕ್ಕೆ ಸೇರಿದ ಯಡಿಯೂರಪ್ಪ ಅಂಬೇಡ್ಕರ್ ಫೋಟೋವನ್ನು ತಮ್ಮ ಕೊಠಡಿಯಿಂದ ತೆಗೆದು ಹಾಕಿದ್ದು ಅಚ್ಚರಿಪಡಬೇಕಾದ ಸಂಗತಿಯೇನಲ್ಲ. ಬರಲಿರುವ ದಿನಗ ಳಲ್ಲಿ ಕರ್ನಾಟಕವನ್ನು ಗುಜರಾತನ್ನಾಗಿ ಮಾಡಲು ಹೋರ ಟಿರುವುದರಿಂದ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ವರ್ಗದ ಜನರ ಮೇಲೆ ಇನ್ನೂ ಹೆಚ್ಚು ದಾಳಿ ನಡೆದರೆ ಅಚ್ಚರಿ ಪಡಬೇಕಾಗಿಲ್ಲ.

ಎಲ್ಲ ಶೋಷಿತ ಜನರು, ಪ್ರಗತಿ ಪರ ಸಂಘಟ ನೆಗಳು ಒಂದುಗೂಡಿ ನಿಂತು ಈ ಜನಾಂಗದ ದ್ವೇಷಿಗಳ ಹುನ್ನಾರವನ್ನು ವಿಫಲಗೊಳಿಸಬೇಕಾಗಿದೆ. ಬಾಬಾಬುಡನ್ ಗಿರಿ ಯಶಸ್ಸು ನಮ್ಮ ಕಣ್ಣ ಮುಂದಿದೆ ಕೋಮು ಸೌಹಾರ್ದ ವೇದಿಕೆ ಈ ಮತಾಂಧರಿಗೆ ಕಲಿಸಿದ ಪಾಠ ಮಾರ್ಗದರ್ಶಿಯಾಗಿದೆ. ಹೋರಾಟದ ಮೂಲಕ ಈ ಫ್ಯಾಸಿಸ್ಟ್ ಶಕ್ತಿಗಳನ್ನು ಮಣ್ಣು ಮುಕ್ಕಿಸುವುದೊಂದೆ ಉಳಿದ ದಾರಿಯಾಗಿದೆ. □

'ಸಂವಾದ' ದೊರೆಯುವ ಸ್ಥಳ

ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
+ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು- ೫೬೦ ೦೦೧, ☎ : ೨೨೨೦೩೫೮೦
+ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೦೩೮೨, +ಸ್ಟೇಷನ್ ರಸ್ತೆ, ಗುಲ್ಬರ್ಗ-೨ ☎ : ೪೨೪೩೦೨
+ಕೆ.ಎಸ್.ರಾವ್.ರಸ್ತೆ, ಮಂಗಳೂರು-೧, ☎ : ೨೪೪೧೦೦೧೬, +ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೮೯೪
ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು - ೫೬೦೦೨೦
ಕೆ.ಎಸ್.ಆರ್.ಟಿ.ಸಿ. ಬುಕ್ ಸ್ಟಾಲ್, ಫ್ಲಾಟ್ ಫಾಮ್ ನಂ.೧, ಸ್ಟಾಲ್ ನಂ.೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು

ಶಿಕ್ಷಣ, ದಲಿತರು ಮತ್ತು ಭಾಷೆ

ಶಿಕ್ಷಣ, ದಲಿತರು ಮತ್ತು ಭಾಷೆ ಎಂಬ ವಿಷಯಕ್ಕೆ ಸಂಬಂಧಿಸಿ ಇತ್ತೀಚಿನ ದಿನಗಳಲ್ಲಿ ಕಾವೇರಿದ ಚರ್ಚೆ ಮತ್ತು ಹೋರಾಟಗಳು ಒಟ್ಟೊಟ್ಟಿಗೆ ನಡೆಯುತ್ತಿವೆ. ಈ ವಿಷಯದ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳು ನಿರಂತರವಾಗಿ ಆವರ್ತನೆಗೊಳ್ಳುತ್ತಿವೆ. ಅವುಗಳು ಇಂತಿವೆ.

೧. ದಲಿತರ ಸ್ವಂತಿಕೆಯ ಭಾಷೆ ಒಂದು. ತಾವು ಕಲಿಯಲೆತ್ನಿಸುತ್ತಿರುವ ಭಾಷೆ ಇನ್ನೊಂದು ಮತ್ತು ಅದು ಪರಕೀಯರದು. ಆದ್ದರಿಂದ ತಮ್ಮದಲ್ಲದ ಭಾಷೆಯ ಪಠ್ಯಕ್ರಮ ಮತ್ತು ಬೋಧನೆಗಳ ಎದುರು ಕಲಿಕೆಗೆ ಅನೇಕ ತೊಡಕುಗಳುಂಟಾಗಿವೆ. ಆದ್ದರಿಂದ ದಲಿತೀಯ ಭಾಷೆಯಲ್ಲಿಯೇ ಶಿಕ್ಷಣವನ್ನು ನೀಡಿದರೆ ಶೈಕ್ಷಣಿಕ ಪ್ರಗತಿ ಸುಗಮವಾಗುತ್ತದೆ.

೨. ದಲಿತರು ಸರ್ಕಾರಿ ಶಾಲೆಗಳಲ್ಲಿ ಮತ್ತು ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿದ್ದಾರೆ. ಇವರಿಗೆ ಇಂಗಿಷ್ ಪ್ರವೇಶಗೊಳ್ಳುವುದು ಐದನೆಯ ತರಗತಿಯಿಂದ ಮಾತ್ರ. ಬೆಳೆದ ವಯಸ್ಸಿನಲ್ಲಿ ಪ್ರವೇಶವಾಗುವ ಇಂಗ್ಲಿಷ್ ಮತ್ತು ಅದರ ಕಲಿಕೆ ಕಷ್ಟಸಾಧ್ಯವಾಗಿ ಇವತ್ತಿನ ವೃತ್ತಿ ಶಿಕ್ಷಣ ಮತ್ತು ಖಾಸಗಿ ಉದ್ಯಮಗಳಲ್ಲಿ ಔದ್ಯೋಗಿಕ ಸಮಸ್ಯೆಯನ್ನು ಇವರು ಎದುರಿಸುವಂತಾಗಿದೆ. ಆದ್ದರಿಂದ ಇವರ ಇಂಗ್ಲಿಷ್ ಕಲಿಕೆ ಪ್ರಾಥಮಿಕ ಹಂತದ ಒಂದನೆಯ ತರಗತಿಯಿಂದಲೇ ಆರಂಭಗೊಳ್ಳಬೇಕು. ಹಾಗಾದಾಗ ಮಾತೃಭಾಷಾ ಮಾಧ್ಯಮವನ್ನು ಗಟ್ಟಿಗೊಳಿಸಿದಂತಾಗುತ್ತಲ್ಲದೆ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಪ್ರಮಾಣವನ್ನು ಹೆಚ್ಚಿಸಿದಂತಾಗುತ್ತದೆ.

ಮೇಲ್ಕಂಡ ಪ್ರಶ್ನೆಗಳನ್ನು ಎತ್ತುವವರು ಇಟ್ಟುಕೊಂಡಿರುವ ದಲಿತಪರ ಕಾಳಜಿ ಪ್ರಶ್ನಾತೀತ ಎಂಬುದು ತನ್ನ ಅನುಭವ ಮೂಲದ ದೃಢ ನಿಲುವು. ಹಾಗೆಯೇ ಇದಕ್ಕೆ ಪರ್ಯಾಯ ಚಿಂತನೆಗಳುನ್ನು ಮಂಡಿಸುತ್ತಿರುವ ವಲಯದ ಕಾಳಜಿ ಕೂಡ. ಈ ಎರಡೂ ವಲಯಗಳು ದಲಿತಪರ ಮತ್ತು ಕನ್ನಡಪರವಾದ ಕೇವಲ ಭಾವನಾತ್ಮಕ ನೆಲೆಗಳನ್ನು ಬಿಟ್ಟು ಹೊರಬಂದಾಗ ಮಾತ್ರ ಅರ್ಥಪೂರ್ಣ ಚರ್ಚೆ ಸಾಧ್ಯವಾಗುತ್ತದೆ.

ದಲಿತರ ಭಾಷೆಯ ಸ್ವರೂಪ ವಿಶಿಷ್ಟವಾದುದು. ಅದಕ್ಕೆ ತನ್ನದೇ ಆದ ರಾಚನಿಕ ವಿನ್ಯಾಸವಿದೆ ಎಂದು ಹಲವು ವಿದ್ವಾಂಸರು ಹೇಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇದಕ್ಕಾಗಿ ಮೂರ್‍ನಾಲ್ಕು ಕನ್ನಡ ನಿಬಂಧಗಳೂ ರಚನೆಯಾಗಿವೆ. ಆದರೆ ನನ್ನ ಅನುಭವಕ್ಕೆ ಬಂದಂತೆ ಯಾವುದೇ ಜಾತಿಯಲ್ಲಿ ಕೆಲವು ಪಾರಿಭಾಷಿಕಗಳು ಪುನರಾವರ್ತನೆಗೊಳ್ಳುತ್ತಿರುತ್ತವೆ ಎಂಬುದು ನಿಜವಾದರೂ ಅಷ್ಟರಿಂದಲೇ ಅದೊಂದು ಸಾಮಾಜಿಕ ಉಪಭಾಷೆ ಎಂದು ಗುರುತಿಸುವುದು ಶಕ್ಯವೇ? ಎಂಬ ಪ್ರಶ್ನೆ. ಉದಾಹರಣೆಗೆ, ದಲಿತ ಸಂಸ್ಕೃತಿಯಲ್ಲಿ ಡಾ॥ ಸಿದ್ಧಲಿಂಗಯ್ಯ ಅವರು ಪ್ರಸ್ತಾಪಿಸಿದಂತಹ 'ಕೋಣನ ಕರಿಕಾಲು' ಅಂತಹ ಪಾರಿಭಾಷಿಕಗಳಲ್ಲಿ ಒಂದು. ಇಂತಹ ಪಾರಿಭಾಷಿಕಗಳು ಬೆರಳೆಣಿಕೆಯಷ್ಟು ಮಾತ್ರ ಇರಲು ಸಾಧ್ಯ ಎಂದು ಅನುಭವದಿಂದ ತಿಳಿದಿದ್ದೇನೆ. ಉಳಿದಂತೆ ಒಂದು ಗ್ರಾಮದಲ್ಲಿರುವ ಬ್ರಾಹ್ಮಣ, ಮುಸ್ಲಿಂ ಮುಂತಾದ ಕೆಲ ಕೋಮುಗಳನ್ನು ಹೊರತುಪಡಿಸಿದರು ಉಳಿದಂತೆ ಎಲ್ಲ ಜಾತಿಗಳ ಜನರೂ ಸಾಮಾನ್ಯ ಸ್ತರದಲ್ಲಿ ಒಂದೇ ಭಾಷೆಯನ್ನು ಬಳಸುತ್ತಾರೆ. ಅಂತಹ ಮೂರ್‍ನಾಲ್ಕು ಜಾತಿಗಳ ವಕ್ತೃಗಳನ್ನು ಅವರಾಡುವ ಭಾಷೆಯ ಮೂಲಕವೇ ಅವರವರ ಜಾತಿಯನ್ನು ಅಥವಾ ದಲಿತನೊಬ್ಬನ ಜಾತಿಯನ್ನು ಗುರುತಿಸುವುದು ಅಸಾಧ್ಯವೆಂದು ಭಾವಿಸಿದ್ದೇನೆ. ಆದ್ದರಿಂದ ಮುಸ್ಲಿಂ ಕನ್ನಡ, ಬ್ರಾಹ್ಮಣರ ಕನ್ನಡ, ಮಹಿಳೆಯರ ಕನ್ನಡ ಮುಂತಾದ ಕೆಲವು ಭಾಷಾ ಪ್ರಬೇಧಗಳನ್ನು ಕೊಂಚ ನಿಚ್ಚಳವಾಗಿ ಕಾಣಬಹುದೇ ಹೊರತು ದಲಿತರ ಭಾಷೆಯನ್ನಲ್ಲ. ಹಾಗೊಮ್ಮೆ ಒಂದು ನಿರ್ದಿಷ್ಟ ಭಾಷೆಯನ್ನು ದಲಿತೀಯ ಭಾಷೆ ಎಂದು ಕರೆದರೆ ಅದು ತನಗೆ ಸಂವಾದಿಯಾಗಿರುವ ಸಮಾನ ಆರ್ಥಿಕ ಅಂತಸ್ತನ್ನು ಪಡೆದ ಇನ್ನೊಂದು ಜಾತಿಯ ಭಾಷೆಯೂ ಆಗಿರುತ್ತದೆ ಎಂಬುದನ್ನು ನೋಡಬೇಕು. ಅಲ್ಲದೆ ಇಂತಹ ದಲಿ

ಚರ್ಚೆ

ದಲಿತರ ಭಾಷೆಯ ಸ್ವರೂಪ ವಿಶಿಷ್ಟವಾದುದು. ಅದಕ್ಕೆ ತನ್ನದೇ ಆದ ರಾಚನಿಕ ವಿನ್ಯಾಸವಿದೆ ಎಂದು ಹಲವು ವಿದ್ವಾಂಸರು ಹೇಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇದಕ್ಕಾಗಿ ಮೂರ್‍ನಾಲ್ಕು ಕನ್ನಡ ನಿಬಂಧಗಳೂ ರಚನೆಯಾಗಿವೆ. ದಲಿತ ಸಂಸ್ಕೃತಿಯಲ್ಲಿ ಡಾ॥ ಸಿದ್ಧಲಿಂಗಯ್ಯ ಅವರು ಪ್ರಸ್ತಾಪಿಸಿದಂತಹ 'ಕೋಣನ ಕರಿಕಾಲು' ಅಂತಹ ಪಾರಿಭಾಷಿಕಗಳಲ್ಲಿ ಒಂದು. ಇಂತಹ ಪಾರಿಭಾಷಿಕಗಳು ಬೆರಳೆಣಿಕೆಯಷ್ಟು ಮಾತ್ರ ಇರಲು ಸಾಧ್ಯ ಎಂದು ಅನುಭವದಿಂದ ತಿಳಿದಿದ್ದೇನೆ. ಬ್ರಾಹ್ಮಣ, ಮುಸ್ಲಿಂ ಮುಂತಾದ ಕೋಮುಗಳನ್ನು ಹೊರತುಪಡಿಸಿದರು ಉಳಿದಂತೆ ಎಲ್ಲ ಜಾತಿಗಳ ಜನರೂ ಸಾಮಾನ್ಯ ಸ್ತರದಲ್ಲಿ ಒಂದೇ ಭಾಷೆಯನ್ನು ಬಳಸುತ್ತಾರೆ.

○ಡಾ॥ ಕಾ.ವೆಂ.ಶ್ರೀನಿವಾಸ ಮೂರ್ತಿ

ತೀಯ ಭಾಷೆ ಅಥವಾ ಕೆಳವರ್ಗದ ಅಥವಾ ಮೇಲ್ವರ್ಗದ ನಿರ್ದಿಷ್ಟ ಭಾಷಾ ಪ್ರಬೇಧವು ಪ್ರಾದೇಶಿಕವಾಗಿಯು ವ್ಯತ್ಯಸ್ತಗೊಳ್ಳುತ್ತದೆ ಎಂಬುದನ್ನು ಒಪ್ಪಬೇಕು. ಉದಾಹರಣೆಗೆ, ಉತ್ತರ ಕರ್ನಾಟದ ದಲಿತರ ಭಾಷೆಗೂ ಮೈಸೂರು ಕರ್ನಾಟಕದ ದಲಿತರ ಭಾಷೆಗೂ ಮಂಗಳೂರು ದಲಿತರ ಭಾಷೆಗೂ ಇರುವ ವ್ಯತ್ಯಾಸವನ್ನು ಪ್ರಾದೇಶಿಕ ಉಪ ಭಾಷೆಗಳ ಹಿನ್ನೆಲೆಯಲ್ಲಿ ಲಕ್ಷಿಸಬಹುದು. ಆದ್ದರಿಂದ ದಲಿತರಿಗೆ ತಮ್ಮದೇ ಆದ ಭಾಷೆಯೊಂದಿದೆ ಎಂಬುದು ಬಹುತೇಕ ಅವಾಸ್ತವವೆನ್ನಿಸುತ್ತದೆ.

ದಲಿತರು ತಾವು ಬಳಸುತ್ತಿರುವ ಮತ್ತು ಔಪಚಾರಿಕ ವಲಯದಲ್ಲಿ (ಶಿಕ್ಷಣವನ್ನೂ ಸೇರಿ) ಎದುರಿಸುತ್ತಿರುವ ಸಮಸ್ಯೆ ಮತ್ತು ಭಾಷಿಕ ಸ್ವರೂಪಗಳು ಭಿನ್ನವಾಗಿವೆ. ಆದ್ದರಿಂದ ಕಲಿಕೆ ಮತ್ತು ಸಂವಹನದಲ್ಲಿ ಅನೇಕ ತೊಡಕುಗಳುಂಟಾಗುತ್ತಿವೆ. ಅಲ್ಲದೇ ತಮ್ಮದಲ್ಲದ ಅನ್ಯರ ಭಾಷಾ ಹೇರಿಕೆ ತಮ್ಮ ಮೇಲಾಗುತ್ತಿದೆ ಎಂಬ ಅಳಲೂ ಇಲ್ಲಿ ಕಾಣುತ್ತಿದೆ.

ದಲಿತರು ಬಳಸುವ ಭಾಷೆಯನ್ನೇ ದಲಿತೀಯ ಭಾಷೆ ಎಂದು ಪ್ರಮೇಯಕ್ಕಾಗಿ ಇಲ್ಲಿ ಒಪ್ಪಿದ್ದೇನೆ ಎಂದು ಇಟ್ಟುಕೊಳ್ಳೋಣ. ಆಗ ತಮ್ಮ ಎದುರಿಗೆ ಕಾಣುವ ಭಾಷೆ ಅನ್ಯರದ್ದೆಂದು ಹೇಳುವ ಆ ಭಾಷೆ ಯಾರದು? ಎಂಬ ಪ್ರಶ್ನೆ ಉದಿಸುತ್ತದೆ. ಆ ಪ್ರಶ್ನೆಗೆ ಉತ್ತರ ಎಲ್ಲಿದೆ? ಇದೇ ಪ್ರಶ್ನೆಯನ್ನು ಕರ್ನಾಟಕದ, ಭಾರತದ ಎಲ್ಲ ಜಾತಿಗಳೂ ಎತ್ತಬಹುದಲ್ಲವೇ? ಹೀಗಿರುವಾಗ ಅವರ ಎದುಗಿರುವ ಪ್ರಮಾಣ ಭಾಷೆ ಯಾರದು ಎಂದು ಅದನ್ನು ಯಾರ ಕೊರಳಿಗೆ ಹಾಕುವುದು? ನನ್ನ ಉತ್ತರವೆಂದರೆ: ಇಂತಹ ಪ್ರಮಾಣ ಭಾಷೆಯ ನಿರ್ಮಾಣದಲ್ಲಿ ಎಲ್ಲ ಜಾತಿಗಳ ಮೇಲ್ವರ್ಗಗಳು ಪಾಲುದಾರರಾಗಿವೆ ಎಂಬುದು.

ದಲಿತ ಸಂಸ್ಕೃತಿಯನ್ನೂ ಒಳಗೊಂಡು ಎಲ್ಲ ಜಾತಿಗಳ ಕೆಳವರ್ಗದ ಸಂಸ್ಕೃತಿಗಳು ದೇಸೀ ಸ್ವರೂಪದ ಭಾಷೆಯನ್ನು ಉಳಿಸಿಕೊಂಡಿವೆ. ಇದರ ಸೊಗಡು ಸೌಂದರ್ಯ ಬೇರೆಯೇ ಆಗಿದೆ. ಇದರ ಸೃಜನಶೀಲ ಸಾಧ್ಯತೆಗಳು ಸಾಹಿತ್ಯದ ಅನೇಕ ಪ್ರಕಾರಗಳನ್ನು ಈಗಾಗಲೇ ಶ್ರೀಮಂತಗೊಳಿಸಿವೆ. ಇದು ಸ್ವಾಗತಾರ್ಹವಾದ ವಿಚಾರವೇ ಸರಿ. ಹಾಗೆಂದು ಇದರ ಭಾಷಿಕ ಸ್ವರೂಪದಲ್ಲಿ ಔಪಚಾರಿಕ ವಲಯದ ಭಾಷಿಕ ವ್ಯಾಪಾರ ಇರಬೇಕೆಂದು ಪ್ರತಿಪಾದಿಸುವುದು ಚರ್ಚಾರ್ಹ ವಿಚಾರವೆನ್ನಿಸುತ್ತದೆ. ಅಲ್ಲದೆ ಇದನ್ನು ಪ್ರತಿಪಾದಿಸುವವರೇ ತಮ್ಮ ಜೀವನದಲ್ಲಿ ಇದನ್ನು ಸಾಕಾರಗೊಳಿಸಿಕೊಂಡಿರುವರೇ? ಎಂಬ ಪ್ರಶ್ನೆಯನ್ನು ಎದುರಿಸಬೇಕಾಗುತ್ತದೆ. ಹಾಗಾಗಿ ಸೃಜನೇತರ ಚಟುವಟಿಕೆಗಳಾದ ಶಿಕ್ಷಣ, ಪತ್ರಿಕೆ, ಆಡಳಿತ, ನ್ಯಾಯಾಂಗ ಮೊದಲಾದ ರಂಗಗಳಲ್ಲಿ ಕೆಳವರ್ಗದ ಬದ್ಧತೆಯನ್ನುಳಿಸಿಕೊಂಡೇ ಪ್ರಮಾಣ ಬದ್ಧ ಭಾಷೆಯನ್ನು ಬಳಸುವುದು (ಈಗಾಗಲೇ ಬಳಸುತ್ತಿರುವಂತೆ) ಸೂಕ್ತ ಮತ್ತು ಪರಿಣಾಮಕಾರಿ ಎನ್ನಿಸುತ್ತದೆ. ಕಾರಣ, ಇಲ್ಲಿ ಸಂವಹನ ಮತ್ತು ಪರಿಣಾಮ ಮುಖ್ಯವೇ ಹೊರತು ಸೃಜನಶೀಲತೆ ಅಲ್ಲ.

ದಲಿತ ಮತ್ತು ಹಿಂದುಳಿದವರೇ ಹೆಚ್ಚು ಓದುತ್ತಿರುವ ಮಾತೃಭಾಷಾ ಮಾಧ್ಯಮದ ಶಿಕ್ಷಣದಲ್ಲಿ ಪ್ರಾಥಮಿಕ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಕೆ ಸಾಧ್ಯವಾಗಬೇಕು ಎಂಬುದು ಇತ್ತೀಚಿನ ದೊಡ್ಡ ವಾದ (ಈಗಾಗಲೇ ಸ್ಥಾಪಿಸಿರುವಂತೆ). ಇವರು ಇದಕ್ಕೆ ಕೊಡುತ್ತಿರುವ ಕಾರಣ ಮೀಮಾಂಸೆಯೆಂದರೆ ಬೆಳೆದ ಮಕ್ಕಳಿಗಿಂತ ಸಣ್ಣ ಮಕ್ಕಳಿಗೆ ಭಾಷೆಯ ಗ್ರಹಣ ಶಕ್ತಿ ಹೆಚ್ಚು ಇರುತ್ತದೆ. ಆದ್ದರಿಂದ ಎರಡನೆಯದಾದ ಮತ್ತು ಇವತ್ತು ಹೆಚ್ಚು ಮಾರುಕಟ್ಟೆಯ ಮೌಲ್ಯವನ್ನು ಪಡೆದಿರುವ ಇಂಗ್ಲಿಷಿನ ಕಲಿಕೆ ಒಂದನೆಯ ತರಗತಿಯಿಂದ ಸಾಧ್ಯವಾದರೆ ಅದು ಪರಿಣಾಮಕಾರಿಯಾಗಿರುತ್ತದೆ. ಆಗ ಇಂಗ್ಲಿಷ್ ಸಮಸ್ಯೆ ದೂರವಾಗಿ ಕಾಲ್‌ಸೆಂಟರ್ ಮೊದಲಾದ ನೂತನ ಖಾಸಗಿ ಉದ್ಯಮಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಇದರಿಂದ ದಲಿತರು ಮತ್ತು ಹಿಂದುಳಿದವರಿಗೆ ಲಾಭವುಂಟಾಗಿ, ಮೇಲ್ಜಾತಿಗಳ ಎದುರಿಗೆ ಸ್ಪರ್ಧೆ ಸುಲಭವಾಗುತ್ತದೆ ಎಂಬುದು. ಹೀಗೆ ಹೇಳುತ್ತಲೇ ತಾವು ಸಹ ಮಾತೃಭಾಷಾ ಮಾಧ್ಯಮದ ಪರವಾಗಿಯೇ ಇದ್ದೇವೆ ಎಂದು ಹೇಳುತ್ತಾರೆ.

ವಿಪರ್ಯಾಸವೆಂದರೆ ಇಂಗ್ಲಿಷ್ ಕಲಿಕೆಯ ವಿಚಾರದಲ್ಲಿ ಇವತ್ತು ಆಗುತ್ತಿರುವ ಹೋರಾಟ ಮಾತೃಭಾಷಾ ಮಾಧ್ಯಮದ ವಿಚಾರದಲ್ಲಿ ಎಂಬುದು. ಒಂದನೆಯ ತರಗತಿಯಿಂದ ಇಂಗ್ಲಿಷನ್ನು ಬೋಧಿಸಬೇಕೆಂದು ವಾದಿಸುತ್ತಿರುವ ಬಹುತೇಕರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮದ ಶಾಲೆಗಳಿಗೆ ಕಳುಹಿಸುತ್ತಿರುವುದನ್ನು ಅನುಭವದಿಂದ ತಿಳಿಯಬೇಕು. ತಮ್ಮ ಮಕ್ಕಳು ಆಂಗ್ಲ ಮಾಧ್ಯಮದಲ್ಲಿ ಕಲಿಯುತ್ತಿರುವಾಗ ಬಡವರ್ಗದ ಮಕ್ಕಳು ಕಡೆಯ ಪಕ್ಷ ಇಂಗ್ಲಿಷನ್ನು ಒಂದು ಪತ್ರಿಕೆಯ ರೂಪದಲ್ಲಾದರೂ ಕಲಿಯಲಿ ಎಂಬುದು ಇವರ ಔದಾರ್ಯ! ಒಟ್ಟಾರೆ ಇಂಗ್ಲಿಷ್ ಕಲಿಕೆಯ ವಿಚಾರದಲ್ಲಿ ಹೋರಾಟಗಳು ನಡೆದಿವೆಯೇ ಹೊರತು ಮಾತೃಭಾಷಾ ಮಾಧ್ಯಮ ಮುಖ್ಯವಾದ ವಿಚಾರದಲ್ಲಿ ಅಲ್ಲ ಎಂಬುದು ಕನ್ನಡ ಭಾಷೆಯ ಆಧಾರದ ಮೇಲೆ ಏಕೀಕೃತಗೊಂಡ ಕರ್ನಾಟಕದ ದೊಡ್ಡ ವ್ಯಂಗ್ಯ.

ದಲಿತ ಮತ್ತು ಹಿಂದುಳಿದವರೇ ಹೆಚ್ಚು ಓದುತ್ತಿರುವ ಮಾತೃಭಾಷಾ ಮಾಧ್ಯಮದ ಶಿಕ್ಷಣದಲ್ಲಿ ಪ್ರಾಥಮಿಕ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಕೆ ಸಾಧ್ಯವಾಗಬೇಕು ಎಂಬುದು ಇತ್ತಿಚಿನ ದೊಡ್ಡ ವಾದ. ಇವರು ಇದಕ್ಕೆ ಕೊಡುತ್ತಿರುವ ಕಾರಣ ಮೀಮಾಂಸೆಯೆಂದರೆ ಬೆಳೆದ ಮಕ್ಕಳಿಗಿಂತ ಸಣ್ಣ ಮಕ್ಕಳಿಗೆ ಭಾಷೆಯ ಗ್ರಹಣ ಶಕ್ತಿ ಹೆಚ್ಚು ಇರುತ್ತದೆ. ಆದ್ದರಿಂದ ಎರಡನೆಯದಾದ ಮತ್ತು ಇವತ್ತು ಹೆಚ್ಚು ಮಾರುಕಟ್ಟೆಯ ಮೌಲ್ಯವನ್ನು ಪಡೆದಿರುವ ಇಂಗ್ಲಿಷಿನ ಕಲಿಕೆ ಒಂದನೆಯ ತರಗತಿಯಿಂದ ಸಾಧ್ಯವಾದರೆ ಅದು ಪರಿಣಾಮಕಾರಿಯಾಗಿರುತ್ತದೆ. ಆಗ ಇಂಗ್ಲಿಷ್ ಸಮಸ್ಯೆ ದೂರವಾಗಿ ಕಾಲ್‌ಸೆಂಟರ್ ಮೊದಲಾದ ನೂತನ ಖಾಸಗಿ ಉದ್ಯಮಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಇದರಿಂದ ದಲಿತರು ಮತ್ತು ಹಿಂದುಳಿದವರಿಗೆ ಲಾಭವುಂಟಾಗಿ, ಮೇಲ್ಜಾತಿಗಳ ಎದುರಿಗೆ ಸ್ಪರ್ಧೆ ಸುಲಭವಾಗುತ್ತದೆ. ಹೀಗೆ ಹೇಳುತ್ತಲೇ ಮಾತೃಭಾಷಾ ಮಾಧ್ಯಮದ ಪರವಾಗಿಯೇ ಇದ್ದೇವೆ ಎಂದು ಹೇಳುತ್ತಾರೆ.

ಭಾರತದ ಸ್ವಾತಂತ್ರ್ಯಾನಂತರ, ಕರ್ನಾಟಕ ಏಕೀಕರಣದ ಅನಂತರ ಇಂಗ್ಲಿಷ್ ಮಾಧ್ಯಮದ ಶಾಲೆಗಳ ಸಂಖ್ಯೆ ನಿರಂತರವಾಗಿ ವಿಕಾಸಗತಿಯಲ್ಲಿ ಸಾಗಿದೆ. ರಾಜ್ಯೋತ್ಸವವನ್ನು ಆಚರಿಸಿಕೊಂಡು ಬರುತ್ತಿರುವ ಜನತೆ ಮತ್ತು ಸರ್ಕಾರ ಇದಕ್ಕೆ ಎಂದೂ ಪ್ರತಿರೋಧವನ್ನು ಒಡ್ಡದಿರುವುದು ಸ್ವಾತಂತ್ರ್ಯಾನಂತರದ ಬೌದ್ಧಿಕ ಇಂಗ್ಲಿಷ್ ಗುಲಾಮಗಿರಿಯ ಸಂಕೇತವೆನ್ನಿಸಿದೆ. ಹೊಸ ಭಾರತವು ಪರಿಸರದ ಭಾಷೆಗಳಿಂದಲೇ ಬೌದ್ಧಿಕ ಮತ್ತು ಭೌತಿಕ ಪ್ರಗತಿಯನ್ನು ಸಾಧಿಸಿಕೊಂಡ ಜಪಾನ್, ಜರ್ಮನ್, ಚೈನಾ, ರಷ್ಯಾ ಮುಂತಾದ ರಾಷ್ಟ್ರಗಳನ್ನು ಮಾದರಿಯನ್ನಾಗಿ ಇಟ್ಟುಕೊಳ್ಳಲಿಲ್ಲ. ಕಾರಣ, ತನ್ನ ಇತಿಹಾಸವೇ ಬೇರೆ. ಇವತ್ತಾದರೂ ಅದು ಬೇರೆ ಆಗಬೇಕು ಎಂಬುದು ಅನೇಕರ ಅಪೇಕ್ಷೆ.

ಒಂದನೆ ತರಗತಿಯಿಂದಲೇ ಇಂಗ್ಲಿಷ್ ಬೇಡ. ಯಾಕೆಂದರೆ ಒಂದನೆಯ ತರಗತಿಯಲ್ಲಿ ಕನ್ನಡವನ್ನಷ್ಟೇ ಕಲಿಸಿದರೆ ಅದು ಕನ್ನಡ ಮಾಧ್ಯಮವಾಗುತ್ತದೆ? ಇಲ್ಲಿ ಎರಡು ಭಾಷೆಗಳು ಒಟ್ಟಿಗೆ ಸೇರಿ ಅದು ಚೌಚೌ ಮಾಧ್ಯಮ ಎನ್ನಿಸುವುದಿಲ್ಲವೇ? ಮಗು ಏಕಕಾಲಕ್ಕೆ ಎರಡು ಭಾಷೆಗಳ ಅಕ್ಷರ ಮತ್ತು ಪದ ಜ್ಞಾನವನ್ನು ಪಡೆಯುವುದು ದುಸ್ತರವೆನ್ನಿಸುವುದಿಲ್ಲವೆ? ಆದ್ದರಿಂದ ಪ್ರಾಥಮಿಕ ಹಂತದ ಮೊದಲ ಎರಡು ತರಗತಿಗಳಲ್ಲಿ ಮಾತೃಭಾಷೆಯ ಅರಿವು ಪರಿಸರದ ಭಾಷೆಯೊಂದರ ಕಲಿಕೆ ಮಾತ್ರ ಸಮರ್ಥವಾಗಿ ಸಾಧ್ಯ ಎಂಬುದು ನನ್ನ ಗ್ರಹಿಕೆ. ಎರಡು ವರ್ಷಗಳಾದ ನಂತರ, ಅಂದರೆ ಮೂರನೆಯ ತರಗತಿಯಿಂದ ಎರಡನೆಯ ಭಾಷೆಯನ್ನು ಪ್ರವೇಶಗೊಳಿಸಿದರೆ ಕಲಿಯುವ ಮಗುವಿಗೆ ಹೆಚ್ಚಿನ ಹೊರೆ ಉಂಟಾಗುವುದಿಲ್ಲ ಎಂದು ಭಾವಿಸಿದ್ದೇನೆ. ಆದರೆ ಪರಿಸರದ ಭಾಷೆಯ ಕಲಿಕೆ ಮತ್ತು ಬೋಧನೆಯ ವಿಧಾನಕ್ಕೂ ಅನ್ಯಮೂಲದ ಮತ್ತು ವಿಭಿನ್ನವಾದ ರಾಚನಿಕ ಸ್ವರೂಪವನ್ನು ಹೊಂದಿರುವ ಎರಡನೆಯ ಭಾಷೆಯ ಕಲಿಕೆ ಮತ್ತು ಬೋಧನೆಗೂ ಅಜಗಜಾಂತರ ವ್ಯತ್ಯಾಸವಿದೆ. ಇದನ್ನು ತಿಳಿದ ಮತ್ತು ನುರಿತ ಅಧ್ಯಾಪಕ ಮಾತ್ರ ಇಂತಹ ಕಲಿಕೆಯನ್ನು ಮಕ್ಕಳಿಗೆ ಸುಲಭ ಸಾಧ್ಯವಾಗಿಸುತ್ತಾನೆ. ಅಂತಹ ಅಧ್ಯಾಪಕನಿಗೆ ಪೂರಕ ಕಲಿಕಾ ಸಾಮಗ್ರಿ, ನಿಯಮಿತ ಸಂಖ್ಯೆಯ ವಿದ್ಯಾರ್ಥಿಗಳು ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಕಲ್ಪಿಸಬೇಕು. ಇಲ್ಲವಾದಲ್ಲಿ ಮೊದಲನೆಯ ತರಗತಿಯಿಂದ ಆಗುವ ಇಂಗ್ಲಿಷ್ ಕಲಿಕೆ ನಿಷ್ಫಲವಾಗುತ್ತದೆ. ಒಂದನೆಯ ತರಗತಿಯಿಂದ ಕನ್ನಡ ಎಂ.ಎ ವರೆಗೂ ಕಲಿತವರು ಮಾಡುವ ಕಾಗುಣಿತ ದೋಷಗಳನ್ನು (ನಗರದ ಹಿನ್ನೆಲೆಯಲ್ಲಿ ಬಂದ ಮೇಲ್ವರ್ಗದ ವಿದ್ಯಾರ್ಥಿಗಳ) ಮತ್ತು ಕನ್ನಡ ಮಾಧ್ಯಮದ ಐದನೆಯ ತರಗತಿಯಿಂದ ಇಂಗ್ಲಿಷನ್ನು ಕಲಿತವರು ಇಂಗ್ಲಿಷ್ ಪ್ರಾಧ್ಯಾಪಕರಾಗಿರುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು.

ದಲಿತರು ಮಾತ್ರ ಕನ್ನಡ ಮಾಧ್ಯಮ ಮತ್ತು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಲ್ಲ!

ಪ್ರಸಕ್ತ ವಿಚಾರದ ಪರಿಶೀಲನೆಗಾಗಿ ನಗರ ಮತ್ತು ಗ್ರಾಮೀಣ ಪ್ರದೇಶದ ತಲಾ ಎರಡು ಶಾಲೆಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಈ ಎರಡೆರಡು ಶಾಲೆಗಳಲ್ಲಿ ತಲಾ ಒಂದು ಸರ್ಕಾರಿ ಮತ್ತು ಖಾಸಗಿ ಶಾಲೆಯಿದೆ. ಸರ್ಕಾರಿ ಶಾಲೆ ಮತ್ತು ಕನ್ನಡ ಮಾಧ್ಯಮ; ಅಂತೆಯೇ ಖಾಸಗಿ ಶಾಲೆ ಮತ್ತು ಇಂಗ್ಲಿಷ್ ಮಾಧ್ಯಮ ಇಲ್ಲಿ ಸಮೀಕರಣಗೊಂಡಿವೆ. ಎರಡೂ ಮಾದರಿ ಶಾಲೆಗಳಲ್ಲಿ

ಒಂದರಿಂದ ಎಂಟನೆಯ ತರಗತಿವರೆಗಿನ ವಿದ್ಯಾರ್ಥಿಗಳನ್ನು ಗಮನಿಸಿದ್ದೇನೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಮತ್ತು ಕನ್ನಡ ಮಾಧ್ಯಮದ ನಗರ ಮತ್ತು ಗ್ರಾಮೀಣ ಶಾಲೆಗಳಲ್ಲಿ ದಲಿತರ ಸರಾಸರಿ ಪ್ರಮಾಣ ಹೆಚ್ಚಾಗಿದ್ದರೆ ಖಾಸಗಿ ಮತ್ತು ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ ಇವರ ಸರಾಸರಿ ಪ್ರಮಾಣ ಕಡಿಮೆಯಿದೆ. ಇದಕ್ಕೆ ವಿರುದ್ಧವಾದ ಚಿತ್ರ ದಲಿತೇತರರದ್ದು. ಉದಾಹರಣೆಗೆ ಭಾರತದಲ್ಲಿ ಶೇಕಡ ೨೫ ರಷ್ಟಿರುವ ದಲಿತರು ನಗರದ ಸರ್ಕಾರಿ ಶಾಲೆಯಲ್ಲಿ ಶೇ. ೫೧ ರಷ್ಟಿದ್ದರೆ, ಅದೇ ಶಾಲೆಯ ಪಕ್ಕದಲ್ಲಿರುವ ಖಾಸಗಿ ಶಾಲೆಯಲ್ಲಿ ಶೇ.೨೫ ರಷ್ಟಿದ್ದಾರೆ. ಅಂತೆಯೇ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಯಲ್ಲಿ ಇವರ ಪ್ರಮಾಣ ಶೇ. ೬೪ ರಷ್ಟಿದ್ದರೆ, ಖಾಸಗಿ ಶಾಲೆಯಲ್ಲಿ ಶೇ. ೨೧ ರಷ್ಟಿದೆ. ಇದರಿಂದ ತಿಳಿಯುವುದೇನೆಂದರೆ ಗ್ರಾಮೀಣ ಪ್ರದೇಶದ ದಲಿತರಿಗಿಂತ ನಗರ ಪ್ರದೇಶದ ದಲಿತರು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಖಾಸಗಿ ಮತ್ತು ಇಂಗ್ಲಿಷ್ ಮಾಧ್ಯಮದ ಶಾಲೆಯಲ್ಲಿ ಕಲಿಯುತ್ತಿದ್ದಾರೆ ಎಂಬುದು. ಅಂತೆಯೇ ಅದು ನಗರ ಇರಲಿ, ಗ್ರಾಮ ಇರಲಿ–ಎಲ್ಲೆಡೆಯೂ ದಲಿತರ ಸರಾಸರಿ ಪ್ರಮಾಣ ಸರ್ಕಾರಿ ಮತ್ತು ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಹಾಗೂ ದಲಿತೇತರರ ಸರಾಸರಿ ಪ್ರಮಾಣ ಖಾಸಗಿ ಮತ್ತು ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ ಹೆಚ್ಚು ಎಂಬುದು.

ಇಲ್ಲಿ ದಲಿತರು ಹೆಚ್ಚಿನ ಪ್ರಮಾಣದಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿರುವುದಕ್ಕೆ ಕನ್ನಡಾಭಿಮಾನ ಕಾರಣವೆಂದಾಗಲೀ ದಲತೇತರರು ಹೆಚ್ಚು ಪ್ರಮಾಣದಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುತ್ತಿರವುದಕ್ಕೆ ಅವರಲ್ಲಿರುವ ಕನ್ನಡದ ಬಗೆಗಿನ ನಿರಭಿಮಾನ ಕಾರಣ ಎಂದಾಗಲೀ ನಾನು ತಿಳಿಯುವುದಿಲ್ಲ. ಇವರ ಈ ವರ್ತನೆಗಳಿಗೆ ಮುಖ್ಯ ಕಾರಣ ಆರ್ಥಿಕ ಬೆನ್ನೆಲುಬು. ಇದು ಸದೃಢವಾಗಿದ್ದರೆ ಇಂಗ್ಲಿಷ್ ಶಾಲೆಗೆ, ದುರ್ಬಲವಾಗಿದ್ದರೆ ಕನ್ನಡ ಶಾಲೆಗೆ - ಇದು ಎಲ್ಲಿಂದೆಲ್ಲಿಗೂ ವಾಸ್ತವ.

ಹೀಗೆ ದಲಿತರು ಸಾಮಾಜಿಕ ಹಿಂದುಳಿದಿರುವಿಕೆ ಯೊಂದಿಗೆ ಆರ್ಥಿಕ ಹಿಂದುಳಿದಿರುವಿಕೆ ಸಹ ಸಮೀಕರಣಗೊಂಡಿರುವುದನ್ನು ಇಲ್ಲಿ ಗಮನಿಸಬೇಕು. ಈ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆಗಳ ಬಹು ಪ್ರಮಾಣದ ದಲಿತರೂ ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಾಬೇಕೆಂದು ನಾನು ಬಯಸುವುದಿಲ್ಲ. ಬದಲಿಗೆ ಖಾಸಗಿ ಶಾಲೆಗಳ ಬಹು ಪ್ರಮಾಣದ ದಲಿತೇತರರು ಮಾತೃಭಾಷಾ ಮಾಧ್ಯಮದ ವಿದ್ಯಾರ್ಥಿಗಳಾಗಬೇಕೆಂದು ಬಯಸುತ್ತೇನೆ.

ಇಂಗ್ಲಿಷ್ ಇಲ್ಲಿ ಯಾರ ಮಾತೃಭಾಷೆಯೂ ಅಲ್ಲ. ಅಂತಹ ಭಾಷೆಯಲ್ಲಿನ ಕಲಿಕೆ ನಮ್ಮ ಪರಿಸರವನ್ನು ನಮ್ಮ ದೇಶದ ಸಾಮಾಜಿಕ ಚರಿತ್ರೆಯನ್ನು ತನ್ನ ಮೂಲ ಸಂವೇದನೆಗಳೊಂದಿಗೆ ತಿಳಿಸುವುದಿಲ್ಲ. ಅದನ್ನು ತಿಳಿಯದ ಹೊರತು ಸಮಕಾಲೀನ ಸಾಮಾಜಿಕ ವಿಮೋಚನೆಯ ಆಶಯಗಳು ಮಾರು ದೂರವೇ ಸರಿ. ಹಾಗಾಗಿ ಪಂಪನ ಕನ್ನಡ, ಬಸವಣ್ಣನ ಕನ್ನಡ ನಮಗೆ ಮಾದರಿಯಾಗಿ ನಮ್ಮ ಭಾಷೆಗಿರುವ ಸೃಜನಶೀಲತೆಯ ಸಾಧ್ಯತೆಗಳನ್ನು ಶೋಧಿಸಿಕೊಳ್ಳುವಂತಾಗಬೇಕು. ಸಾಮಾಜಿಕ ವಿಮೋಚನೆಗೆ ದೇವನೂರರಲ್ಲಿ ಸಾಧ್ಯವಾದಂತೆ ಭಾಷೆಯೂ ಒಂದು ವಿಮೋಚನೆಯ ಅಸ್ತ್ರವಾಗಬೇಕು. ಈ ನಿಟ್ಟಿನಲ್ಲಿ ದಲಿತರ ವಿಮೋಚನೆ ಮತ್ತು ಭಾರತೀಯರೆಲ್ಲರ ಸಾಮಾಜಿಕ ಸಮಾನತೆ ಸಾಧ್ಯಗೊಳ್ಳುವ ಹೆದ್ದಾರಿಯಲ್ಲಿ ಭಾಷೆ ಮತ್ತು ಶಿಕ್ಷಣದ ಕಿರುದಾರಿಗಳು ಕೂಡಬೇಕೆಂದು ಆಶಿಸುತ್ತೇನೆ.

ಕೋಷ್ಟಕ–೧

ಬೆಂಗಳೂರು ನಗರ ಸರ್ಕಾರಿ ಶಾಲೆ: ಕನ್ನಡ ಮಾಧ್ಯಮ

ತರಗತಿ: ಒಂದರಿಂದ ಎಂಟು

ಸರ್ಕಾರಿ ಮಾದರಿ ಪಾಠಶಾಲೆ, ಕಾವಲು ಬೈರಸಂದ್ರ

ದಲಿತರು		ದಲಿತೇತರರು		
ಪ್ರಮಾಣ	ಸರಾಸರಿ	ಪ್ರಮಾಣ	ಸರಾಸರಿ	ಒಟ್ಟು ಸಂಖ್ಯೆ
೨೬೧	೫೧%	೨೫೫	೪೯%	೫೧೬

ಕೋಷ್ಟಕ–೨

ಬೆಂಗಳೂರು ನಗರ

ಖಾಸಗಿ ಶಾಲೆ: ಆಂಗ್ಲ ಮಾಧ್ಯಮ

ಕರ್ನಾಟಕ ಬಿಳಿಗುಲಾಬಿ ಪಾಠಶಾಲೆ, ಕಾವಲು ಬೈರಸಂದ್ರ

ದಲಿತರು		ದಲಿತೇತರರು		
ಪ್ರಮಾಣ	ಸರಾಸರಿ	ಪ್ರಮಾಣ	ಸರಾಸರಿ	ಒಟ್ಟು ಸಂಖ್ಯೆ
೮೭	೨೫%	೨೬೯	೭೫%	೩೫೬

ಕೋಷ್ಟಕ–೩

ಬೆಂಗಳೂರು ಗ್ರಾಮಾಂತರ

ಸರ್ಕಾರಿ ಶಾಲೆ: ಕನ್ನಡ ಮಾಧ್ಯಮ

ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಸೊಣಪನಹಳ್ಳಿ

ದಲಿತರು		ದಲಿತೇತರರು		
ಪ್ರಮಾಣ	ಸರಾಸರಿ	ಪ್ರಮಾಣ	ಸರಾಸರಿ	ಒಟ್ಟು ಸಂಖ್ಯೆ
೨೦೭	೬೪%	೧೧೭	೩೬%	೩೨೪

ಕೋಷ್ಟಕ–೪

ಬೆಂಗಳೂರು ಗ್ರಾಮಾಂತರ

ಖಾಸಗಿ ಶಾಲೆ: ಆಂಗ್ಲ ಮಾಧ್ಯಮ

ಆಕ್ಸ್‌ಫರ್ಡ್ ಶಾಲೆ, ಸೊಣಪನಹಳ್ಳಿ

ದಲಿತರು		ದಲಿತೇತರರು		
ಪ್ರಮಾಣ	ಸರಾಸರಿ	ಪ್ರಮಾಣ	ಸರಾಸರಿ	ಒಟ್ಟು ಸಂಖ್ಯೆ
೭೯	೨೧%	೨೯೦	೭೯%	೩೬೯

ಟಿಪ್ಪಣಿ : ಭಾರತದಲ್ಲಿ ದಲಿತರು ಪ್ರಮಾಣ ಸುಮಾರು ಶೇ. ೨೫ರಷ್ಟಿದೆ. ಆದರೆ ಇವರ ಪ್ರಮಾಣ ಬೆಂಗಳೂರು ನಗರದ ಸರ್ಕಾರಿ ಶಾಲೆ, ಕನ್ನಡ ಮಾಧ್ಯಮದಲ್ಲಿ ಶೇ. ೫೧ ರಷ್ಟಿದೆ, ಅದೇ ಪ್ರದೇಶದ ಆಂಗ್ಲ ಮಾಧ್ಯಮದ ಖಾಸಗಿ ಶಾಲೆಯಲ್ಲಿ ಶೇ. ೨೫ ರಷ್ಟಿದೆ. ಅಂತೆಯೇ ಬೆಂಗಳೂರು ಗ್ರಾಮಾಂತರದ ಕನ್ನಡ ಮಾಧ್ಯಮ, ಸರ್ಕಾರಿ ಶಾಲೆಯಲ್ಲಿ ಶೇ. ೬೪ ರಷ್ಟಿದ್ದರೆ, ಅದೇ ಪ್ರದೇಶದ ಆಂಗ್ಲ ಮಾಧ್ಯಮದ ಖಾಸಗಿ ಶಾಲೆಯಲ್ಲಿ ಇವರ ಪ್ರಮಾಣ ಶೇ. ೨೧ ರಷ್ಟಿದೆ. ಇದರ ಸಾರವೆಂದರೆ ನಗರ ಮತ್ತು ಗ್ರಾಮಾಂತರ ಎರಡೂ ಪ್ರದೇಶಗಳಲ್ಲಿ ಕನ್ನಡ ಮಾಧ್ಯಮ ಮತ್ತು ಸರ್ಕಾರಿ ಶಾಲೆಯಲ್ಲಿ ದಲಿತರ ಸರಾಸರಿ ಪ್ರಮಾಣ ಅಧಿಕವಾಗಿದ್ದರೆ, ದಲಿತೇತರರ ಪ್ರಮಾಣ ಇದೇ ಶಾಲೆಗಳಲ್ಲಿ ಸರಾಸರಿ ಪ್ರಮಾಣ ಕಡಿಮೆ ಇದೆ. ದಲಿತೇತರರ ಪ್ರಮಾಣವು ಅವರ ಸರಾಸರಿ ಪ್ರಮಾಣಕ್ಕಿಂತ ಅಧಿಕವಾಗಿ ಖಾಸಗಿ ಶಾಲೆಯಲ್ಲಿರುವುದು, ಅಂತಯೇ ಈ ಸರಾಸರಿಗಿಂತ ಕಡಿಮೆ ಪ್ರಮಾಣ ಸರ್ಕಾರಿ ಶಾಲೆಯಲ್ಲಿರುವುದು ಇದರ ಆರ್ಥಿಕ ಮುಂದು ವರಿಕೆಯನ್ನು ತೋರುತ್ತದೆ. ಈ ಹಿನ್ನೆಲೆಯಲ್ಲಿ ದಲಿತರ ಸಾಮಾಜಿಕ ಹಿಂದುಳಿದಿರುವಿಕೆಯು ಆರ್ಥಿಕ ಹಿಂದುಳಿದಿರುವಿಕೆಯೂ ಮತ್ತು ದಲಿತೇತರರ ಸಾಮಾಜಿಕ ಮುಂದುವರಿಕೆಯ ಆರ್ಥಿಕ ಮುಂದುವರಿಕೆಯೂ ಆಗಿರುವುದು ಇಲ್ಲಿ ಸೂಚಿತವಾಗುತ್ತದೆ. ಆದರೂ ಮಾತೃಭಾಷಾ ಮಾಧ್ಯಮವೇ ವೈಜ್ಞಾನಿಕ ವಿಚಾರವಾದುದರಿಂದ ದಲಿತೇತರರು ದಲಿತರಿಗೆ ಮಾದರಿಯಾಗಬೇಕಿಲ್ಲ. ಇವರ ಶಿಕ್ಷಣ ಸ್ವರೂಪವೇ ದಲಿತೇತರರಿಗೆ ಮಾದರಿಯಾಗಬೇಕು. ☐

'ಇಡಿ' 'ಬಿಡಿ' ನಾಯಕರನ್ನು ಕುರಿತು ಗಡಿಬಿಡಿಯಾಗಿ....

ಈ ಶ್ರೇಣೀಕೃತ ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿ ಎದೆಯುಬ್ಬಿಸಿ ಮಾತನಾಡುತ್ತಾನೆ ಎಂದರೆ ಅವನಿಗಿಂತಲೂ ಇನ್ನೊಬ್ಬ ಕೆಳಗಿರುತ್ತಾನೆ ಎಂದರ್ಥ. ಈಗ ಕೆಳಜಾತಿ ಶೂದ್ರರು ಸ್ವಾಭಿಮಾನ ಗಳಿಸಿಕೊಂಡಿರುವುದು at the cost of untouchables ಎಂಬುದೇ ನನ್ನ ಅಭಿಪ್ರಾಯ. ಈ ಮಧ್ಯಮ-ಕೆಳಜಾತಿ ಶೂದ್ರರು ಅಸ್ಪೃಶ್ಯತೆಯ ನೋವಿಲ್ಲದ ಕಾರಣ ಯಾರ ಪೂಜೆ ಯಾರು ಮಾಡಿದರೆ ನಮಗೇನು ಎನ್ನುವ ಧೋರಣೆ ತಳೆದು ಅಧ್ಯಾತ್ಮವನ್ನು ಪರಭಾರೆ ಮಾಡಿ ನಿರುಂಬಳವಾಗಿರಬಲ್ಲರು.

(೪ನೇ ಪುಟದಿಂದ)

...ೊಳ್ಳಲಾಗಿದೆ. ಅದರೊಳಗಿದ್ದುಕೊಂಡೇ ಸುಧಾರಣೆ ಸಾಧ್ಯ ...ನ್ನುವ ಮಾತು ಸುಳ್ಳಾಗಿದೆ. ಇವತ್ತೂ ನಮ್ಮ ಕಣ್ಣ ...ಮುಂದೆಯೇ ಕೊಪ್ಪಳ ಜಿಲ್ಲೆಯ ಬನ್ನಿಕೊಪ್ಪ ಎಂಬ ...ಊರಿನಲ್ಲಿ ಸಾರ್ವಜನಿಕ ಕೆರೆಯ ನೀರನ್ನು ದಲಿತರ ...ೂಡಗಳಿಗೆ ಮೊಗೆದು ತುಂಬಿಸಲು ದೊಣ್ಣೆ ನಾಯಕನನ್ನು ನಿಯೋಜಿಸಲಾಗಿದೆ (ನೋಡಿ ...ಪ್ರಜಾವಾಣಿ ದಿ. ೧೨-೦೩-೨೦೦೬). ಆದರೂ ಹಿಂದೂ ಧರ್ಮದ ಸಮರ್ಥನೆ ಯೊಂದಿಗೆ ...ಪ್ರಗತಿಯ ಮಾತುಗಳನ್ನಾಡುವವರು 'ಇಡಿ' ನಾಯಕರಾಗಿಬಿಡುತ್ತಾರೆ. ಈ ಘಟನೆ ಯನ್ನು ...ಂಡಿಸುವುದರೊಂದಿಗೆ ಮತ್ತಷ್ಟು ಸಮಾಜ ಸುಧಾರಕರು ಹುಟ್ಟಿಕೊಳ್ಳುತ್ತಾರೆ.

ಕೆಳಜಾತಿಯ ಶಿಕ್ಷಿತ ಶೂದ್ರರಿಗೂ ಅಸ್ಪೃಶ್ಯತೆಯ ನೋವು ಅರಿವಾಗದಿರುವುದು ಮೊದ ...ಮೊದಲು ಆಶ್ಚರ್ಯ ಹುಟ್ಟಿಸುತ್ತಿತ್ತಾದರೂ ಇದು ಜಾತಿ ಪದ್ಧತಿಯ ಮಾಯಾ ವೈಶಿಷ್ಟ್ಯವೆಂದು ...ಈಗ ಅರ್ಥವಾಗುತ್ತಿದೆ. ಶಾಸ್ತ್ರಗಳ ಪ್ರಕಾರ ಶೂದ್ರನೊಬ್ಬ ಸ್ವಾಭಿಮಾನಿಯಾಗಿರಲು ಸಾಧ್ಯವಾಗ ...ಾರದು. ಕಾಲ ಬದಲಾದಂತೆ ಶೂದ್ರ ಈಗ ಸ್ವಾಭಿಮಾನವನ್ನು ಗಳಿಸಿಕೊಂಡಿದ್ದಾನೆ. ಅದನ್ನು ...ಗ ಮಾಡಿರುವ ವರ್ಗವೆಂದರೆ ಪಂಚಮರು (ಮಹದೇವ ಇದನ್ನು ಶೂದ್ರರಿಗೆ ಪ್ರಮೋಷನ್ ...ಕ್ಕಿದೆ ಎನ್ನುತ್ತಾರೆ). ಈ ಶ್ರೇಣೀಕೃತ ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿ ಎದೆಯುಬ್ಬಿಸಿ ಮಾತನಾ ...ುತ್ತಾನೆ ಎಂದರೆ ಅವನಿಗಿಂತಲೂ ಇನ್ನೊಬ್ಬ ಕೆಳಗಿರುತ್ತಾನೆ ಎಂದರ್ಥ. ಈಗ ಕೆಳಜಾತಿ ...ೂದ್ರರು ಸ್ವಾಭಿಮಾನ ಗಳಿಸಿಕೊಂಡಿರುವುದು at the cost of untouchables ...ಂಬುದೇ ನನ್ನ ಅಭಿಪ್ರಾಯ. ಈ ಮಧ್ಯಮ – ಕೆಳಜಾತಿ ಶೂದ್ರರು ಅಸ್ಪೃಶ್ಯತೆಯ ನೋವಿ ...ದ ಕಾರಣ ಯಾರ ಪೂಜೆ ಯಾರು ಮಾಡಿದರೆ ನಮಗೇನು ಎನ್ನುವ ಧೋರಣೆ ತಳೆದು ...ಧ್ಯಾತ್ಮವನ್ನು ಪರಭಾರೆ ಮಾಡಿ ನಿರುಂಬಳವಾಗಿರಬಲ್ಲರು. ಆರ್ಥಿಕ ಅಭಿವೃದ್ಧಿ ಸ್ವಾಭಿಮಾನವನ್ನು ತಂದು ಕೊಡಲಾರದೆಂದು ಈಗಾಗಲೇ ಸಾಬೀತಾಗಿದೆ. ಇತ್ತೀಚಿನ ದೃಷ್ಟಾಂತವೊಂದನ್ನು ಕೊಡುವುದಾದರೆ ಗುಲ್ಬರ್ಗಾ ಜಿಲ್ಲೆಯ ಸುರಪುರದ ಮೌನೇಶ್ವರ ದೇವಸ್ಥಾನದಲ್ಲಿ ವಿವಾಹ ಮಹೋತ್ಸವನ್ನು ನಡೆಸಲು ದಲಿತ ಐ.ಎ.ಎಸ್ ಅಧಿಕಾರಿಯ ಸಂಬಂಧಿಕರೊಬ್ಬರಿಗೆ ಅವಕಾಶವನ್ನು ನಿರಾಕರಿಸಲಾಯಿತು (ನೋಡಿ ಪ್ರಜಾವಾಣಿ ದಿ. ೧೫-೦೩-೨೦೦೬). ಅಭಿಷೇಕ್ ಗೌಡ, ಶ್ವೇತ ಗೌಡ ಎಂಬ ಹೆಸರುಗಳನ್ನು ಅಹಮಿಕೆಯ ಪ್ರದರ್ಶನಕ್ಕಾಗಿಯೇ ತಂದೆ ತಾಯಿಗಳು ಇಟ್ಟಿರಲು ಸಾಧ್ಯ. ಆದರೆ ಸುಬ್ಬು ಮತ್ತು ಬಸಪ್ಪ ಅವರುಗಳು ಹೊಲೆಯಾರ್ ಹಾಗೂ ಮಾದಾರ್ ಎಂಬ ಸರ್ವನಾಮಗಳನ್ನು ತಾವಾಗಿಯೇ ತಗುಲಿಸಿಕೊಂಡಿರುವುದು Vengeance ನಿಂದ. ಅದರಿಂದಾಗಿ ಅವರು ಪಡುತ್ತಿರಬಹುದಾದ ಯಾತನೆ ಅವರಿಗೆ ಮಾತ್ರ ತಿಳಿಯುವಂಥದ್ದು. 'ನೊಂದವರ ನೋವ ನೋಯದವರೆತ್ತ ಬಲ್ಲರು' ಎಂಬುದು ಅಕ್ಕನಂಥವರಿಗೆ ಮಾತ್ರ ತಿಳಿಯುವಂಥದ್ದು.

ಹಿಂದೂ ಧರ್ಮದೊಳಗೆ ಇದ್ದುಕೊಂಡು ಅಸ್ಪೃಶ್ಯತೆಯ ನಾಶದ ಭರವಸೆ ಇಟ್ಟುಕೊಂಡ ಸುಧಾರಕರು ಹೇಳಿದ್ದಿಷ್ಟೆ: ಈ ಹಾದಿಯಲ್ಲಿ ಕಲ್ಲಿದೆ, ಮುಳ್ಳಿದೆ, ಹೊಲಸಿದೆ. ನೀವು ಕಾಲಿಗೆ ಕಬ್ಬಿಣದ ಜೋಡು ಕಟ್ಟಿಕೊಳ್ಳಿ, ಮರದ ಎಕ್ಕಡ ಮಾಡಿಸಿಕೊಳ್ಳಿ, ಮೂಗಿಗೆ ಹತ್ತಿ ತುಂಬಿಕೊಳ್ಳಿ ಮತ್ತು ನಡೆಯಿರಿ ಎಂದು. ಆದರೆ ಬುದ್ಧ, ಬಸವರು ಅದೂ ಮೂಢರೂ, ಮೂರ್ಖರೂ ಹಾಗೂ ಹುಂಬರು ನಡೆಯುವ ಹಾದಿ ಎಂದು ಹೊಸ ಹಾದಿಯೊಂದನ್ನು ನಿರ್ಮಿಸಿ ಅಲ್ಲಿ ಹೂವುಗಳನ್ನು ಚೆಲ್ಲಿದರು, ಇಷ್ಟವಿದ್ದವರು ನಡೆಯಿರಿ ಎಂದರು. ಈ ಹಾದಿಯಲ್ಲಿ ತ್ರಿಶೂಲಗಳು ಕಾವಲಿರುವುದಿಲ್ಲ ಆತ್ಮ ವಿಶ್ವಾಸದಿಂದ ನಡೆಯಬಹುದು.

ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಸಾಮಾಜಿಕ ನ್ಯಾಯವನ್ನು ಊರ್ಜಿತಗೊಳಿಸುವ ಸಲುವಾಗಿ ತಂದ ಮೀಸಲಾತಿ ನೀತಿಯನ್ನು ವಿರೋಧಿಸಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಗೆ ತಮ್ಮ ರಾಜೀನಾಮೆಯನ್ನು ಒಪ್ಪಿಸಿದ ಸರ್.ಎಂ ವಿಶ್ವೇಶ್ವರಯ್ಯನವರು ನಾಗಭೂಷಣರ ದೃಷ್ಟಿಯಲ್ಲಿ ಜಾತ್ಯತೀತರಾಗಿದ್ದಾರೆ. ಅಹಿಂದ ರಾಜಕೀಯದ ವಿಷಯವಾಗಿ ನಾನು ಚರ್ಚಿಸಲಾರೆನಾದ್ದರಿಂದ ಈ ನನ್ನ ಪ್ರತಿಕ್ರಿಯೆಯನ್ನು ಲಭಿಸದೆ ಮುಕ್ತಾಯಗೊಳಿಸುತ್ತೇನೆ. ಕೊನೆಯದಾಗಿ ಸ್ವಾಮಿ ವಿವೇಕಾನಂದರು ಅಮೆರಿಕೆಯಲ್ಲಿ ಹೋಗಿ ೧೮೯೩ ರಲ್ಲಿ ಮಾಡಿದ ಪ್ರಸಿದ್ಧ ಭಾಷಣದ ನಂತರ ಪತ್ರಕರ್ತನೊಬ್ಬನ ಪ್ರಶ್ನೆಗೆ ಉತ್ತರಿಸುತ್ತಾ 'ಸತಿ' ಪದ್ಧತಿಯನ್ನು ಸಮರ್ಥಿಸಿಕೊಂಡರು ಎಂಬ ಗಹನ ವಿಚಾರವನ್ನು ಗೆಳೆಯರೊಬ್ಬರು ನನ್ನ ಗಮನಕ್ಕೆ ತಂದರು ಎಂಬುದನ್ನು ಉಲ್ಲೇಖಿಸಬೇಕಾಗಿದೆ. ಅವರು ಹೇಳಿದ್ದಿಷ್ಟೆ ಆಫ್ರೋ-ಅಮೆರಿಕಾದ ಬುಡಕಟ್ಟು ಜನಾಂಗದಲ್ಲಿ ಕನ್ಯೆಯರನ್ನು ಮೊಸಳೆಗೆ ಬಲಿ ನೀಡುತ್ತಾರೆ. ಸತಿ ಪದ್ಧತಿ ಅದಕ್ಕಿಂತ ಅನಾಗರಿಕವೇನಲ್ಲ. ಅದನ್ನು ಹೆಣ್ಣು ತನ್ನ ಮಾನ ರಕ್ಷಣೆಗಾಗಿ ಮಾಡುತ್ತಾಳೆ ಎಂದಿದ್ದಾರೆ [ಎಸ್.ಕೆ. ಬಿಸ್ವಾಸ್, ಹಿಂದೂ ರಾಜ್; ಟುಡೇ, ಎಸ್ಟರ್‌ಡೇ ಅಂಡ್ ಟುಮಾರೋ ಆರ್ಯನ್ ಬುಕ್ಸ್-೧೯೯೬] ಯಾತ್ರೆಯನ್ನು ಮುಗಿಸಿ ಅವರು ಸ್ವದೇಶಕ್ಕೆ ಮರಳಿದಾಗ ಮದರಾಸಿನಲ್ಲಿ ಭವ್ಯವಾದ ಸ್ವಾಗತಕ್ಕೆ ಏರ್ಪಾಡು ನಡೆದಿತ್ತು. ಅವರು ಬ್ರಾಹ್ಮಣರಲ್ಲವೆಂದು ತಿಳಿದಾಕ್ಷಣ ಆ ಸಭೆಯನ್ನು ರದ್ದುಗೊಳಿಸಲಾಯಿತು. ಈ ಅವಮಾನವನ್ನು ನುಂಗಿಯೂ ಸಹಾ ಅವರು ಕೊಲ್ಕತ್ತಾದಲ್ಲಿ ಕಾಳಿ ದೇವಾಲಯವನ್ನು ನಿರ್ಮಿಸಿದರು. ಜೈ ಕಾಳೀಮಾತೆ!? □

Statement about ownership and other particulars about newspaper

FORM IV

1.	Place of Publication	:	Bangalore
2.	Periodicity of its publication	:	Monthly
3.	Printer's Name	:	**S.R. Govindu**
	Nationality		Indian
	Address		No. 63, Anjananagar, Vishwaneedam Post, Bangalore-560 091
4.	Publisher's Name	:	**S.R. Govindu**
	Nationality		Indian
	Address		No. 63, Anjananagar, Vishwaneedam Post, Bangalore-560 091
5.	Editor's Name	:	**Indudhara Honnapura**
	Nationality		Indian
	Address		No. 402, 1st main, 2nd Block, HBR Layout, Bangalore-560 043
6.	Name and address of individuals who own the newspaper and partners and shareholders holding more than one per cent of the total capital	:	Spoorthidhama, No. 63, Anjananagar, Vishwaneedam Post, Bangalore - 560 091 (Sole proprietors)

I, **S.R. Govindu,** hereby declare that the particulars given above are true to the best of my knowledge and belief.

Date: 28-02-2006

Sd/-
S.R. Govindu
Publisher

ಭಾರತದ ಸಮಾಜವನ್ನು ಅದರ ಚರಿತ್ರೆಯ ಚಲನೆಗಳಲ್ಲಿಟ್ಟು ಅತ್ಯಂತ ಸೂಕ್ಷ್ಮವಾಗಿ ಮತ್ತು ಸೈದ್ಧಾಂತಿಕವಾಗಿ ವಿವರಿಸಿದ ವಿಶ್ವದ ಕೆಲವೇ ಕೆಲವು ಸಮಾಜಶಾಸ್ತ್ರಜ್ಞರಲ್ಲಿ ಅಂಬೇಡ್ಕರ್ ಅಗ್ರಗಣ್ಯರು. ಅವರನ್ನು 'ಸಮಾಜಶಾಸ್ತ್ರಜ್ಞ' ಎಂಬ ಚೌಕಟ್ಟಿನಲ್ಲಿ ಮಾತ್ರ ಗ್ರಹಿಸುವುದು ಅಸಾಧ್ಯ. ಒಬ್ಬ ಧರ್ಮ ಮೀಮಾಂಸಕರಾಗಿ, ರಾಜಕಾರಣಿಯಾಗಿ, ಕಾನೂನು ತಜ್ಞರಾಗಿ ಅಂಬೇಡ್ಕರ್ ಜಗತ್ತಿನ ಮಹತ್ವದ ಚಿಂತಕರಲ್ಲಿ ಅತ್ಯಂತ ವಿಶಿಷ್ಟ ಸ್ಥಾನಮಾನಗಳನ್ನು ಪಡೆದುಕೊಂಡಿದ್ದಾರೆ. ಅಂಬೇಡ್ಕರ್ ಈ ದೇಶದ ಶೋಷಿತರಿಗೆ ನೀಡಿರುವ ಕೊಡುಗೆಗಳೇನು? ಎಂದು ಪಟ್ಟಿ ಮಾಡುವುದಾಗಲಿ, ಶೋಷಿತರ ವರ್ತಮಾನದ ಸ್ಥಿತಿಗೆ ಅಂಬೇಡ್ಕರ್ ಚರಿತ್ರೆಯಲ್ಲಿ ಕಂಡುಕೊಂಡ ಕಾರಣಗಳೇನು? ಎಂದು ವಿವರಿಸುವುದಾಗಲಿ ಸರಳ ಸಂಗತಿಯಲ್ಲ. ಅದು ಆಕಾಶಕ್ಕೆ ಕನ್ನಡಿ ಹಿಡಿವ ಪ್ರಯತ್ನದಂತೆ. ಹಲವು ಸಂಪುಟಗಳಲ್ಲಿ ನಮ್ಮೆದುರಿಗಿರುವ ಅವರ ಬರಹಗಳಲ್ಲಿ ಈ ದೇಶದ ಶೋಷಿತರ ದುಮ್ಮಾನುಗಳು ಮತ್ತು ಅವುಗಳಿಗೆ ತಕ್ಕುದಾದ ಪರಿಹಾರೋಪಾಯಗಳೇ ತುಂಬಿಕೊಂಡಿವೆ. ತಮ್ಮ ಜೀವಮಾನವಿಡೀ ಅಂಬೇಡ್ಕರ್ ಈ ದೇಶದ ಅಸಹಾಯಕ ಶೋಷಿತರ ಕುರಿತು ಚಿಂತಿಸಿದ್ದಾರೆ. ಅದಕ್ಕಾಗಿ ಇಡೀ ಜಗತ್ತಿನ ತತ್ವಶಾಸ್ತ್ರವನ್ನು ಅಂಬೇಡ್ಕರ್ ಮುಖಾಮುಖಿ ಮಾಡುತ್ತಾರೆ.

ಡಾ|| ಅಂಬೇಡ್ಕರ್ : ಆದಿವಾಸಿಗಳ ಕುರಿತು

ಅವರ ಚಿಂತನೆಯಲ್ಲಿ ಕೇವಲ ಹುಟ್ಟಿನ ಕಾರಣಕ್ಕೆ ನಿತ್ಯನಾರಕಿಯಾಗುವ, ಈ ಸಮಾಜದ ಎಲ್ಲ ಬಗೆಯ ಅಧಿಕಾರಗಳಿಂದ ವಂಚಿತವಾಗುವ ಸಮುದಾಯಗಳ ಕುರಿತ ತೀವ್ರ ಕಾಳಜಿ ಮಡುಗಟ್ಟಿದೆ. ಇಂಡಿಯಾದ ಸಮಾಜ ಶತಮಾನಗಳಿಂದ ಸಾಕಿಕೊಂಡು ಬಂದ ಹಿಂಸೆ ಮತ್ತು ಅಮಾನವೀಯ ಕ್ರೌರ್ಯಗಳ ಕುರಿತು ಉಗ್ರ ಆಕ್ರೋಶ ಮಡುಗಟ್ಟಿದೆ. ಸ್ವತಃ ಅಸ್ಪೃಶ್ಯರಾಗಿದ್ದ ಕಾರಣಕ್ಕೋ ಅಥವಾ ತಮ್ಮ ಸಮಕಾಲೀನ ಬದುಕನ್ನು ಗ್ರಹಿಸುವ ಸೂಕ್ಷ್ಮಜ್ಞನಾಗಿದ್ದಕ್ಕೋ ಏನೋ ಅಂಬೇಡ್ಕರ್ ಮಡುಗಟ್ಟಿದ ಅಸಹಾಯಕ ಪ್ರತಿರೋಧಗಳ ಸಾಕ್ಷಿಪ್ರಜ್ಞೆಯಂತೆ ಕಾಣಬರುತ್ತಾರೆ. ಮತ್ತು ತಣ್ಣಗಿನ ಕ್ರೌರ್ಯವನ್ನು ಇಡಿಯಾಗಿ ಧ್ವಂಸ ಮಾಡಿಬಿಡುವ ಜ್ವಾಲಾಮುಖಿಯಂತೆ ಅಂಬೇಡ್ಕರ್ ಗೋಚರಿಸುತ್ತಾರೆ. ಹಾಗಂತ ಅಂಬೇಡ್ಕರ್ ತನ್ನ ಸಮುದಾಯದ ಹೀನ ಸ್ಥಿತಿಯನ್ನು ಬಳಸಿಕೊಂಡು ಭಾವುಕವಾಗಿ ಗದ್ಗದಿತರಾಗುವುದಿಲ್ಲ. ಮಾತೇ ಹೊರಡದಂತಹ ಉಗ್ರ ಆಕ್ರೋಶವನ್ನು ತಂದುಕೊಂಡು ನಿಶ್ಚಲರಾಗುವುದಿಲ್ಲ. ಆವೇಶಗಳ ಹುಚ್ಚು ಪ್ರವಾಹದ ಮಿತಿ ಅರಿತ ಅಂಬೇಡ್ಕರ್ ಹಿಂದೂ ಧರ್ಮದ ವಿಮರ್ಶೆಗೆ ತೊಡಗುತ್ತಾರೆ.

ಹಿಂದೂ ಧರ್ಮದ ಚಾರಿತ್ರಿಕ ಕ್ರೌರ್ಯವನ್ನು ತಕ್ಕ ಪುರಾವೆಗಳ ಮೂಲಕ ನಮ್ಮೆದುರಿಗಿಡುತ್ತಾರೆ. ಅಂಬೇಡ್ಕರ್‌ರವರ ಇಡೀ ಬರಹಗಳಲ್ಲಿ ಅವರು ಹಿಂದೂ ಧರ್ಮದ ಕುರಿತು ಎತ್ತುವ ಪ್ರಖರ ಪ್ರಶ್ನೆಗಳಿಗೆ ಪ್ರಾಯಶಃ ಹಿಂದೂ ಧರ್ಮದ ಯಾವ ಸಮರ್ಥಕನೂ ಉತ್ತರಿಸಲಾರ. ಆಧುನಿಕ ಯುಗದಲ್ಲಿ ತನ್ನೆಲ್ಲ ಸಂಕೀರ್ಣ ಆಯಾಮಗಳಿಂದ ಮೈದಾಳಿದ ಶೋಷಕ ವರ್ಗವನ್ನು ಮತ್ತು ಶೋಷಣೆಗೊಳಗಾದ ಅಸಹಾಯಕ ದುಡಿವ ವರ್ಗವನ್ನು ಸೈದ್ಧಾಂತಿಕವಾಗಿ ವಿವರಿಸಿದವರಲ್ಲಿ ಪ್ರಮುಖರೆಂದರೆ ಒಬ್ಬರು ಕಾರ್ಲ್‌ಮಾರ್ಕ್ಸ್, ಇನ್ನೊಬ್ಬರು ಡಾ|| ಅಂಬೇಡ್ಕರ್. ಈ ಇಬ್ಬರು ಮಹಾನ್ ಚಿಂತಕರ ಗುರಿ ಒಂದೇ ಆದರೂ, ಚಿಂತನೆಯ ಮಾರ್ಗಗಳು ಮಾತ್ರ ಭಿನ್ನ.

ಈ ಲೇಖನ ಅಂಬೇಡ್ಕರ್, ಸಂವಿಧಾನಾತ್ಮಕವಾಗಿ ಪರಿಶಿ
ಪಂಗಡಗಳಿಗೆ ಅಥವಾ ಬುಡಕಟ್ಟುಗಳಿಗೆ ಸಂವಿಧಾನಾತ್ಮಕವಾ
ಯಾವ ಯಾವ ಸವಲತ್ತುಗಳನ್ನು ಒದಗಿಸಲು ಯತ್ನಿಸಿದರು ಮ
ಯಾವ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿದು
ಎಂಬುದನ್ನು ವಿವರಿಸುವುದಿಲ್ಲ. ಈ ದೇಶದ ಕೆಳಜಾತಿಗಳಿಗೆ ಮ
ಸಾಮಾಜಿಕವಾಗಿ ಶೋಷಣೆಗೊಳಗಾದ ಸಮುದಾಯಗಳಿಗೆ ಕಲ್ಪಿಸಿ
'ಮೀಸಲಾತಿ'ಯು ಅಂಬೇಡ್ಕರ್ ಅವರ ಬಹುದೊಡ್ಡ ಕೊಡುಗೆಯ
ಗಿದೆ. ಈ ಮೀಸಲಾತಿಯನ್ನು ಕೇಳುವ ಮತ್ತು ರೂಪಿಸುವ ಹ
ದಲ್ಲಿ ಅಂಬೇಡ್ಕರ್ ಅತ್ಯಂತ ವಿಲಕ್ಷಣ ರಾಜಕೀಯ ಸವಾಲುಗಳ
ಎದುರಿಸಿದ್ದಾರೆ. ಈ ದೇಶದಲ್ಲಿನ ದನಿ ಇಲ್ಲದ ಮತ್ತು ಶತಮಾ
ಳಿಂದ ಶೋಷಣೆಗೊಳಗಾದ ಸಮುದಾಯಗಳಿಗೆ 'ರಾಜಕೀಯ
ರ್ಥಿಕ' ಸವಲತ್ತುಗಳನ್ನು ಒದಗಿಸುವ ಮೀಸಲಾತಿಯನ್ನು ಕೇಳಿದಾ
ಮಹತ್ಮಗಾಂಧೀಜಿಯವರನ್ನು ಒಳಗೊಂಡಂತೆ ಅಂದಿನ ಕಾಂಗ್ರೆಸ
ಬಹುತೇಕ ದೊಡ್ಡ 'ವ್ಯಕ್ತಿತ್ವ'ಗಳೆಲ್ಲ ಅಂಬೇಡ್ಕರ್ ರವರನ್ನು 'ದೆ
ದ್ರೋಹಿ' ಎಂದೇ ಪ್ರತಿಬಿಂಬಿಸಿದ್ದವು. 'ಹಿಂದೂ' ಧರ್ಮದ
ಒಡಕನ್ನುಂಟು ಮಾಡುವ 'ಪಾತಕಿ' ಎಂದೇ ಅಂಬೇಡ್ಕರ್‌ರವರ
ಅವರ ವಾರಿಗೆಯ ಕಾಂಗ್ರೆಸ್ ನಾಯಕರು ಪರಿಗಣಿಸಿದ್ದರು. ಆ
ಅಂಬೇಡ್ಕರ್, 'ಪರ್ಯಾಯ'ಗಳೇ ಇಲ್ಲದೆ ಅನಿವಾರ್ಯವಾಗಿ ಒಪ್ಪಿಕೊಳ್ಳ
ಬೇಕಿದ್ದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶೋಷಿತ
'ಕನಿಷ್ಠ' ಮೀಸಲಾತಿಯನ್ನಾದರೂ ಕಲ್ಪಿಸಬೇಕೆಂದು ಪಣತೊ
ಅದರಲ್ಲಿ ಯಶಸ್ಸನ್ನು ಕಂಡರು.

ಪರಿಶಿಷ್ಟಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಎಂ
ನಾವೀಗ ಕರೆಯುತ್ತಿರುವ ಶೋಷಿತ ಸಮುದಾಯಗಳಿಗೆ ಅಂಬೇಡ್
ಕೊಟ್ಟ ದೊಡ್ಡ ಕೊಡುಗೆ ಎಂದರೆ ಮೀಸಲಾತಿ ಎಂಬುದ
ಎರಡು ಮಾತಿಲ್ಲ. ಈ ಲೇಖನದಲ್ಲಿ, ಆ ಮೀಸಲಾತಿಯ ಸ್ವರೂ

ಚಿಂತನೆ

ಹಿಂದೂ ಧರ್ಮದ ಚಾರಿತ್ರಿಕ ಕ್ರೌರ್ಯವನ್ನು ತಕ್ಕಪುರಾವೆಗಳ ಮೂಲಕ ನಮ್ಮೆದುರಿಗಿಡುತ್ತಾರೆ. ಅಂಬೇಡ್ಕರ್‌ರವರ ಇಡೀ ಬರಹಗಳಲ್ಲಿ ಅವರು ಹಿಂದೂ ಧರ್ಮದ ಕುರಿತು ಎತ್ತುವ ಪ್ರಖರ ಪ್ರಶ್ನೆಗಳಿಗೆ ಪ್ರಾಯಶಃ ಹಿಂದೂ ಧರ್ಮದ ಯಾವ ಸಮರ್ಥಕನೂ ಉತ್ತರಿಸಲಾರ. ಆಧುನಿಕ ಯುಗದಲ್ಲಿ ತನ್ನೆಲ್ಲ ಸಂಕೀರ್ಣ ಆಯಾಮಗಳಿಂದ ಮೈದಾಳಿದ ಶೋಷಕ ವರ್ಗವನ್ನು ಮತ್ತು ಶೋಷಣೆಗೊಳಗಾದ ಅಸಹಾಯಕ ದುಡಿವ ವರ್ಗವನ್ನು ಸೈದ್ಧಾಂತಿಕವಾಗಿ ವಿವರಿಸಿದವರಲ್ಲಿ ಪ್ರಮುಖರೆಂದರೆ ಒಬ್ಬರು ಕಾರ್ಲ್‌ಮಾರ್ಕ್ಸ್, ಇನ್ನೊಬ್ಬರು ಡಾ|| ಅಂಬೇಡ್ಕರ್. ಈ ಇಬ್ಬರು ಮಹಾನ್ ಚಿಂತಕರ ಗುರಿ ಒಂದೇ ಆದರೂ, ಚಿಂತನೆಯ ಮಾರ್ಗಗಳು ಮಾತ್ರ ಭಿನ್ನ.

○ ಎ.ಎಸ್. ಪ್ರಭಾಕರ

ಮತ್ತು ಅದರ ಸಫಲತೆ ಮತ್ತು ವಿಫಲತೆಗಳನ್ನು ಚರ್ಚಿಸಲು ಹೋಗಿಲ್ಲ. ಜೊತೆಗೆ ಈ ಖೇಸಲಾತಿಯ ಕಾರ್ಯಕ್ರಮಗಳ ಕುರಿತು ಇಲ್ಲಿ ವಿವರಿಸಿಲ್ಲ. ಅಂಬೇಡ್ಕರ್ ತಮ್ಮ ಸಮಕಾಲೀನ ಸಂದರ್ಭದಲ್ಲಿ ಈ ದೇಶದ ಕೆಳಜಾತಿಗಳನ್ನು ಮತ್ತು ಆದಿವಾಸಿಗಳನ್ನು ಹೇಗೆ ಗ್ರಹಿಸಿದ್ದರು? ಯಾವ ಸೈದ್ಧಾಂತಿಕ ಹಿನ್ನಲೆಯಲ್ಲಿ ಈ ಸಮುದಾಯಗಳ ಸ್ಥಿತಿಗತಿಗಳನ್ನು ವಿವರಿಸಿಕೊಳ್ಳಲು ಯತ್ನಿಸಿದರು? ಅದರಲ್ಲೂ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ಉದ್ಭವಿಸಿದ ಆದಿವಾಸಿಗಳ ಅಭಿವೃದ್ಧಿ ಮತ್ತು ಅವರು ಕೇಳುತ್ತಿದ್ದ ಸ್ವಯಂ ಆಡಳಿತದ ಕುರಿತ ಸಮಸ್ಯೆಗಳನ್ನು ಅಂಬೇಡ್ಕರ್ ತಮ್ಮ ಸಮಕಾಲೀನರ ಜೊತೆ ಯಾವ ರೀತಿಯಲ್ಲಿ ಮುಖಾಮುಖಿ ಮಾಡಿದರು? ಎಂಬ ಪ್ರಶ್ನೆಗಳನ್ನು ಮುಖ್ಯವಾಗಿಟ್ಟುಕೊಂಡು ಈ ಬರಹವನ್ನು ರೂಪಿಸಲೆತ್ನಿಸಲಾಗಿದೆ.

ಪ್ರಸ್ತುತ ಲೇಖನ ನಾಲ್ಕು ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿದೆ.

೧. ಅಂಬೇಡ್ಕರ್ ಅವರ ಗ್ರಹಿಕೆಯಲ್ಲಿ ಆದಿವಾಸಿಗಳು

೨. ಆದಿವಾಸಿಗಳ ಸಂಸ್ಕೃತಿ ರಕ್ಷಣೆ ಮತ್ತು ಅಂಬೇಡ್ಕರ್

೩. ಆದಿವಾಸಿಗಳ ಅಭಿವೃದ್ಧಿಯ ಕುರಿತು ಅಂಬೇಡ್ಕರ್ ನಿಲುವುಗಳು

೪. ಆದಿವಾಸಿಗಳ ರಾಷ್ಟ್ರೀಯತೆ ಮತ್ತು ಸ್ವಯಂ ಆಡಳಿತ

ಅಂಬೇಡ್ಕರ್ ಅವರ ಗ್ರಹಿಕೆಯಲ್ಲಿ ಆದಿವಾಸಿಗಳು

ಅಂಬೇಡ್ಕರ್ 'ಹಿಂದೂ' ಅಥವಾ ಭಾರತೀಯ ಸಮಾಜವನ್ನು ಮೂರು ಹಂತದಲ್ಲಿ ವಿವರಿಸಿಕೊಳ್ಳುತ್ತಾರೆ. ೧. ಸವರ್ಣೀಯ ಹಿಂದೂ ೨. ಅವರ್ಣೀಯ ಆದಿಮ ಜನಾಂಗಗಳು ೩. ಅಹಿಂದ, ಅಸ್ಪೃಶ್ಯರು. ಈ ಮೂರು ವಿಭಾಗಗಳನ್ನು ಅವುಗಳ ಒಟ್ಟು ಚಾರಿತ್ರಿಕ ವಿಕಾಸದಲ್ಲಿಟ್ಟು ಅಂಬೇಡ್ಕರ್ ಮೇಲಿನ ವಿಂಗಡನೆ ಮಾಡಿದ್ದಾರೆ. ಜೊತೆಗೆ ಹಿಂದೂ ಧರ್ಮದ ಪಾರಂಪರಿಕ ನಿಯಮಗಳಿಗನುಗುಣವಾಗಿ ಶೋಷಣೆಗೊಳಗಾದ ಸಮುದಾಯಗಳನ್ನು ಹೀಗೆ ಪಟ್ಟಿಮಾಡುತ್ತಾರೆ "ಇಲ್ಲಿನ ಪತಿತ ಮಾನವಕುಲ ಮೂರು ಪಂಗಡಗಳಲ್ಲಿ ಹಂಚಿಕೊಂಡಿದೆ. ಮೊದಲನೆಯದು, ಆದಿಮ ಜನಾಂಗವೆಂದು ಹೆಸರಾದ ಜನವರ್ಗ, ಎರಡನೆಯದು ಅಪರಾಧಿ ಜನಾಂಗವೆಂದು ಪಟ್ಟಿಮಾಡಿರುವ ಜಾತಿಗಳದ್ದು, ಮೂರನೆಯದು ಅಸ್ಪೃಶ್ಯರೆಂದು ಪರಿಗಣಿತರಾದವರ ವಿಶಿಷ್ಟ ಪಂಗಡ" ಈ ಮೂರು ಶೋಷಿತ ಜನವರ್ಗಗಳ ಸಮಾನ ಶತ್ರುವೆಂದು ಅವರು ಪರಿಗಣಿಸುವುದು ಹಿಂದೂ ಧರ್ಮವನ್ನೆ.

"ಹಿಂದೂ ನಾಗರಿಕತೆಯ ಮೂಲತತ್ವಗಳೇ ಈ ಆದಿಮ ಜನಾಂಗಗಳ, ಅಪರಾಧಿ ಬುಡಕಟ್ಟುಗಳ ಹಾಗೂ ಅಸ್ಪೃಶ್ಯವರ್ಗದ ಹೀನ ಸ್ಥಿತಿಗೆ ಕಾರಣವಾಗಿವೆ ಎನ್ನುವುದರಲ್ಲಿ ಕಿಂಚಿತ್ತು ಸಂದೇಹವಿಲ್ಲ" ಹಿಂದೂ ಧರ್ಮ ತನ್ನೆಲ್ಲ ಪಾರಂಪರಿಕ ಸಮರ್ಥನೆಗಳ ಮೂಲಕ ಪೋಷಿಸಿಕೊಂಡು ಬಂದ ಶ್ರೇಣೀಕೃತ ಸಮಾಜದ ಅಂಚಲ್ಲಿ ಆದಿಮ ಜನಾಂಗಗಳು ಬದುಕುತ್ತಿವೆ. ಕಾಡೊಳಗಿರುವ ಈ ಜನಾಂಗಗಳು ಈ ಸಮಾಜದ 'ನಾಗರಿಕತೆಯ' ಆಚೆಗಿರುವ ಅನಾಗರಿಕ ಸಮುದಾಯಗಳೂ. ಅವು ಯಾವ ಸಮಾಜದ ನಾಗರಿಕತೆಯನ್ನು ಹೊಂದಿಲ್ಲ. ಜೊತೆಗೆ ನಾಗರಿಕವೂ ಆಗಿಲ್ಲ. ಕಾಡೊಳಗಿನ ಕಂದಮೂಲಗಳು, ಅರೆಬೆತ್ತಲು ಮತ್ತು ಅಸಹಜ ಸಾವುಗಳು ಅವರ ಜನ್ಮಾಂತರದಲ್ಲಿ ಮಾಡಿದ ಪಾಪಗಳಿಂದಾಗಿ ಅವರಿಗೆ ಲಭಿಸುತ್ತಿವೆ. ಇನ್ನು ಅಪರಾಧಿ ಬುಡಕಟ್ಟುಗಳು ಹುಟ್ಟು ಕಳ್ಳರು, ದರೋಡೆಕೋರರು ಮತ್ತು ಕೊಲೆಗಡುಕರು.

ಸಾವಿರಾರು ವರ್ಷಗಳಿಂದ ಜತನದಿಂದ ಕಾಪಾಡಿಕೊಂಡು ಬಂದ ನಾಗರಿಕತೆಯ ವಾರಸುದಾರರು. "ಈ ನಾಗರಿಕತೆ. ಅದರ ಸೆರಗಿನಲ್ಲೇ ಬದುಕಿಕೊಂಡಿರುವ ಆದಿಮ ಜನಾಂಗದ ಇಪ್ಪತ್ತೈದು ಮಿಲಿಯ ಜನಕ್ಕೆ ಏನನ್ನು ಕೊಟ್ಟಿತು? ತನ್ನ ನಡುವಿನಲ್ಲೇ ಬದುಕಿಕೊಂಡಿರುವ ಐದು ಮಿಲಿಯ ಅಪರಾಧಿ ಜನಾಂಗದವರಿಗೆ ಏನನ್ನು ಕೊಟ್ಟಿತು? ತನ್ನ ಮಧ್ಯೆಯೇ ಬದುಕುತ್ತಿರುವುದು ಮಾತ್ರವಲ್ಲದೆ ತನ್ನನ್ನು ಸೇವಿಸಿ ಪೋಷಿಸಲು ನೇಮಿಸಿಕೊಂಡಿರುವ ಐವತ್ತರು ಮಿಲಿಯ ಅಸ್ಪೃಶ್ಯರಿಗೆ ಈ ನಾಗರಿಕತೆ ಏನನ್ನು ಕೊಟ್ಟಿತು? ಅವರನ್ನು ತನ್ನ ಆವಾರದೊಳಕ್ಕೆ ಕರೆದುಕೊಳ್ಳಲು ಯಾವ ಪ್ರಯತ್ನವನ್ನೂ ಮಾಡದಿರುವ ಈ ನಾಗರಿಕತೆಯ ಬಗ್ಗೆ ಆದಿಮ ಜನಾಂಗದವರು ಏನೆಂದಾರು?" ಎಂದು ಅಂಬೇಡ್ಕರ್ ಪ್ರಶ್ನಿಸುತ್ತಾರೆ. ತಮ್ಮೆದುರಿಗೆ, ಹಿಂದೂಧರ್ಮದ ಪ್ರತಿಪಾದಕರು ಸಾವಿರಾರು ವರ್ಷಗಳ ತಮ್ಮ ನಾಗರಿಕತೆಯ ಕುರಿತು ಕಿರುಚಿಕೊಳ್ಳುವಾಗ ಅಂಬೇಡ್ಕರ್ "ಈ ನಾಗರಿಕತೆ ಎಷ್ಟು ಪ್ರಾಚೀನವಾದದ್ದು ಹಾಗೂ ಎಷ್ಟು ದೀರ್ಘ ಬಾಳಿತು ಎನ್ನುವುದರಲ್ಲಿ ಅದರ ಮೌಲ್ಯ ಎಷ್ಟು? ದೀರ್ಘಕಾಲ ಬಾಳಿದ್ದರೆ ಯವ ಕಾರಣದಿಂದ ಬಾಳಿತು ಎನ್ನುವುದು ಮುಖ್ಯ ಪ್ರಶ್ನೆ" ಎಂದು ತಿರುಗೇಟು ನೀಡುತ್ತಾರೆ.



ಇಂತಹ ಸಮುದಾಯಗಳನ್ನು ಪಾರಂಪರಿಕ ನಿಯಮಗಳ ಮೂಲಕ ನಿಯಂತ್ರಿಸಬೇಕು. ಜೊತೆಗೆ ಹಿಂದೂ ಧರ್ಮದ ನಿಯಮಗಳಿಗೆ ಅನುಗುಣವಾಗಿ ಅವರು ಯಾವುದೇ ಕಠಿಣ ಶಿಕ್ಷೆಗೆ ಅರ್ಹರು ಎಂದು ಹಿಂದೂಧರ್ಮದ ಶಾಸ್ತ್ರಗ್ರಂಥಗಳು ಪ್ರತಿಪಾದಿಸುತ್ತವೆ. ಹೀಗೆ ಪರಿಗಣಿಸಲ್ಪಡುವ ಸಮುದಾಯಗಳು ಅಕ್ಷರಶಃ ಪ್ರಾಣಿಗಳಿಗಿಂತಲೂ ಹೀನ ಬದುಕನ್ನು ಬದುಕುತ್ತಿವೆ. ತಾವು ಮಾತ್ರ ನಾಗರಿಕರು. ತಮ್ಮ ಸುಖಕ್ಕಾಗಿ ಯಾವುದೇ ಹೀನ ಕೃತ್ಯವೆಸಗಿ ಪರಂಪರೆಯ ಹೆಸರಲ್ಲಿ ಸಮರ್ಥಿಸಿಕೊಳ್ಳುವ ಅನುಕೂಲ ಈ ದೇಶದ ನಾಗರಿಕರಿಗಿದೆ. ಏಕೆಂದರೆ ಅವರು ಸಾವಿರಾರು ವರ್ಷಗಳಿಂದ ಜತನದಿಂದ ಕಾಪಾಡಿಕೊಂಡು ಬಂದ ನಾಗರಿಕತೆಯ ವಾರಸುದಾರರು.

"ಈ ನಾಗರಿಕತೆ. ಅದರ ಸೆರಗಿನಲ್ಲೇ ಬದುಕಿಕೊಂಡಿರುವ ಆದಿಮ ಜನಾಂಗದ ಇಪ್ಪತ್ತೈದು ಮಿಲಿಯ ಜನಕ್ಕೆ ಏನನ್ನು ಕೊಟ್ಟಿತು? ತನ್ನ ನಡುವಿನಲ್ಲೇ ಬದುಕಿಕೊಂಡಿರುವ ಐದು ಮಿಲಿಯ ಅಪರಾಧಿ ಜನಾಂಗದವರಿಗೆ ಏನನ್ನು ಕೊಟ್ಟಿತು? ತನ್ನ ಮಧ್ಯೆಯೇ ಬದುಕುತ್ತಿರುವುದು ಮಾತ್ರವಲ್ಲದೆ ತನ್ನನ್ನು ಸೇವಿಸಿ ಪೋಷಿಸಲು ನೇಮಿಸಿಕೊಂಡಿರುವ ಐವತ್ತಾರು ಮಿಲಿಯ ಅಸ್ಪೃಶ್ಯರಿಗೆ ಈ ನಾಗರಿಕತೆ ಏನನ್ನು ಕೊಟ್ಟಿತು? ಅವರನ್ನು ತನ್ನ ಆವಾರದೊಳಕ್ಕೆ ಕರೆದುಕೊಳ್ಳಲು ಯಾವ ಪ್ರಯತ್ನವನ್ನೂ ಮಾಡದಿರುವ ಈ ನಾಗರಿಕತೆಯ ಬಗ್ಗೆ ಆದಿಮ ಜನಾಂಗ ದವರು ಏನೆಂದಾರು?" ಎಂದು ಅಂಬೇಡ್ಕರ್ ಪ್ರಶ್ನಿಸುತ್ತಾರೆ.

ತಮ್ಮೆದುರಿಗೆ, ಹಿಂದೂಧರ್ಮದ ಪ್ರತಿಪಾದಕರು ಸಾವಿರಾರು ವರ್ಷಗಳ ತಮ್ಮ ನಾಗರಿಕತೆಯ ಕುರಿತು ಕಿರುಚಿಕೊಳ್ಳುವಾಗ ಅಂಬೇಡ್ಕರ್ "ಈ ನಾಗರಿಕತೆ ಎಷ್ಟು ಪ್ರಾಚೀನವಾದದ್ದು ಹಾಗೂ ಎಷ್ಟು ದೀರ್ಘ ಬಾಳಿತು ಎನ್ನುವುದರಲ್ಲಿ ಅದರ ಮೌಲ್ಯ ಎಷ್ಟು? ದೀರ್ಘಕಾಲ ಬಾಳಿದ್ದರೆ ಯಾವ ಕಾರಣದಿಂದ ಬಾಳಿತು ಎನ್ನುವುದು ಮುಖ್ಯ ಪ್ರಶ್ನೆ" ಎಂದು ತಿರುಗೇಟು ನೀಡುತ್ತಾರೆ. ತಮ್ಮವರಲ್ಲದವರಿಂದ ಮುಟ್ಟಿಸಿಕೊಳ್ಳುವುದೇ ಪಾಪವೆಂದು ಪರಿಗಣಿಸುವ ಧರ್ಮಕ್ಕೆ ಮತ್ತು ಅದನ್ನು ಪೋಷಿಸುವ ಜೀವನ ವಿಧಾನಕ್ಕೆ ಮಾನವೀಯ ಸಂವೇದನೆಗಳಿರಲು ಸಾಧ್ಯವೇ? ಕಾಡಲ್ಲಿಯೇ ಇದ್ದು ಗಡ್ಡೆಗೆಣಸು ತಿನ್ನುತ್ತ ಬದುಕುವ ಜನರು ತನ್ನ ಸಮಾಜದ ಸೆರಗಂಚಲ್ಲಿಯೇ ಬದುಕುತ್ತಿರುವಾಗ, ತಾವು ಜೀವಿಸಲೋಸುಗ ಅಪರಾಧಗಳನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡಿರುವ ಸಮುದಾಯಗಳು ಬದುಕಲು ಸಂಘರ್ಷ ಮಾಡುತ್ತಿರುವಾಗ ಧರ್ಮ ಸಭೆಗಳಲ್ಲಿ ತಮ್ಮ ನಾಗರಿಕತೆಗೆ ತಾವೇ ಪರಾಕು ಹೇಳಿಕೊಳ್ಳುವ ಜನರನ್ನು ಅಂಬೇಡ್ಕರ್ ಕೆಂಗಣ್ಣಿನಿಂದ ಪ್ರಶ್ನಿಸುತ್ತಾರೆ.

ಈ ಆದಿಮ ಜನಾಂಗಗಳು, ಅಪರಾಧಿ ಬುಡಕಟ್ಟುಗಳು ಮತ್ತು ಅಸ್ಪೃಶ್ಯರನ್ನು ವಿವರಿಸುವಾಗ ಅಂಬೇಡ್ಕರ್ ಕೆಲವು ಸೂಕ್ಷ್ಮಗಳನ್ನು ಗುರುತಿಸಲು ಯತ್ನಿಸುತ್ತಾರೆ. ಬುಡಕಟ್ಟುಗಳ ಸಮಸ್ಯೆ 'ಅಸ್ಪೃಶ್ಯರ' ಸಮಸ್ಯೆಗಳಿಗಿಂತ ಭಿನ್ನ ಎಂದು ಅಂಬೇಡ್ಕರ್ ಬಲವಾಗಿ ಪ್ರತಿಪಾದಿಸುತ್ತಾರೆ. ಅದಕ್ಕೆ ಅವರು ಕೊಡುವ ಕಾರಣಗಳೂ ಹೀಗಿವೆ. ಹಿಂದೂ ಸಮಾಜದ ದೃಷ್ಟಿಯಲ್ಲಿ ಬುಡಕಟ್ಟುಗಳು 'ಸ್ಪೃಶ್ಯ', ಆದರೆ ಹೊಲೆ ಮಾದಿಗರು ಅಸ್ಪೃಶ್ಯರು. ಅಷ್ಟರಮಟ್ಟಿಗೆ ಬುಡಕಟ್ಟುಗಳೂ ಹಿಂದೂಧರ್ಮದ ಚೌಕಟ್ಟಿನಲ್ಲಿ ಕೆಲವು ಸಾಮಾಜಿಕ ರಿಯಾಯಿತಿಗಳನ್ನು ಪಡೆದುಕೊಂಡಿವೆ. ಹೊಲೆಯರು ಮತ್ತು ಮಾದಿಗರನ್ನು ಹಲವು ಬುಡಕಟ್ಟುಗಳು ಅಸ್ಪೃಶ್ಯರೆಂದೇ ಭಾವಿಸುತ್ತವೆ ಎಂದು ಅಂಬೇಡ್ಕರ್ ಹೇಳುತ್ತಾರೆ.

ಇನ್ನೊಂದೆಡೆ "ಈ ಆದಿವಾಸಿಗಳು ಅನಾಗರಿಕ ಸ್ಥಿತಿಯಲ್ಲಿ ಉಳಿಯಲು ಹಿಂದುವಿನ ಜಾತಿಯೊಂದೇ ಕಾರಣ. ತಮ್ಮ ನಾಗರಿಕತೆಯ ಮಧ್ಯದಲ್ಲಿ ಇವರನ್ನು ಅನಾಗರಿಕ ಸ್ಥಿತಿಯಲ್ಲಿಡಲು ಹಿಂದುಗಳಿಗೆ ನಾಚಿಕೆಯಾಗಲಿ, ಪಶ್ಚಾತ್ತಾಪವಾಗಲಿ ಇಲ್ಲವೇ ಇಲ್ಲ." ಎನ್ನುತ್ತಾರೆ.

ಒಟ್ಟಿನಲ್ಲಿ ಅಂಬೇಡ್ಕರ್ ಈ ದೇಶದ ಸಾಮಾಜಿಕ ಅನಿಷ್ಟಗಳನ್ನೆಲ್ಲ ಹುರಿಮಾಡಿಕೊಂಡು ಹಿಂದೂ ಧರ್ಮವನ್ನು ಸೈದ್ಧಾಂತಿಕವಾಗಿ ಮಣಿಸಲು ಯತ್ನಿಸುತ್ತಾರೆ. ಆದರೆ ಒಬ್ಬ ಆದಿವಾಸಿ ಮತ್ತು ಒಬ್ಬ ಅಸ್ಪೃಶ್ಯನ ನಡುವೆ ಸಾಮಾಜಿಕವಾಗಿ ಒಂದು ತೆಳುವಾದ, ಆದರೆ ಕಣ್ಣಿಗೆ ಕಾಣುವ ಗೆರೆಯೊಂದನ್ನು ಅಂಬೇಡ್ಕರ್ ಎಳೆಯುತ್ತಾರೆ. ಆರ್ಥಿಕವಾಗಿ ಅಸ್ಪೃಶ್ಯನಿಗಿಂತ ಆದಿವಾಸಿಯು ಹಿಂದುಳಿದಿದ್ದರೂ, ಅವರು ಸ್ಪೃಶ್ಯನಾಗಿರುವ ಕಾರಣಕ್ಕಾಗಿ ಆದಿವಾಸಿಗಳಿಗೆ ಹಿಂದೂ ಸಮಾಜದಲ್ಲಿ ಮಾನ್ಯತೆ ಇದೆ ಎಂದು ಅಂಬೇಡ್ಕರ್ ಭಾವಿಸುತ್ತಾರೆ.

ಆದರೆ ಭಾರತ ಸಮಾಜದ ಸಂರಚನೆ ಶ್ರೇಣೀಕೃತಗೊಂಡದ್ದೇ ಆರ್ಥಿಕ ವಿಷಮತೆಯ ಕಾರಣಕ್ಕಾಗಿ ಅಸ್ಪೃಶ್ಯರಿಗೆ ಎಲ್ಲೆಲ್ಲಿ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಅಧಿಕಾರಗಳಿಲ್ಲವೋ ಅಲ್ಲೆಲ್ಲ ಆದಿವಾಸಿಗಳೂ ಅಸ್ಪೃಶ್ಯರಂತೆಯೇ ಪರಿಗಣಿಸಲ್ಪಟ್ಟಿದ್ದಾರೆ. ಮತ್ತು ಭಾರತದ ಸನಾತನ ಆರ್ಥಿಕ ಅಸಮಾನತೆಯಲ್ಲಿ ಅಸ್ಪೃಶ್ಯರು ಮತ್ತು ಆದಿವಾಸಿಗಳೂ ಸಮಾನ ದುಃಖಿಗಳೇ ಆಗಿದ್ದಾರೆ. ಇಂಡಿಯಾದ ಈ ಬಗೆಯ ಸನಾತನ ರಾಜಕೀಯಾರ್ಥಿಕ ಅಸಮಾನತೆಯ ವಿರುದ್ಧ ಹೋರಾಡುವಾಗ ಈ ಕಾರಣಗಳಿಗಾಗಿ ನೊಂದ ಎಲ್ಲ ಸಮುದಾಯಗಳನ್ನು ಸೈದ್ಧಾಂತಿಕವಾಗಿ ಒಗ್ಗೂಡಿಸಬೇಕಾಗುತ್ತದೆ. ಸಾಮಾಜಿಕವಾಗಿ ಆದಿವಾಸಿಯೊಬ್ಬ ಸ್ಪೃಶ್ಯನಾದ ಒಂದೇ ಕಾರಣಕ್ಕೆ, ಇಂಡಿಯಾದಲ್ಲಿನ ಅಸಮಾನತೆಯಲ್ಲಿ ಆತನಿಗೆ ಭಾರೀ ರಿಯಾಯಿತಿಗಳೇನೂ ಸಿಕ್ಕಿಲ್ಲ. ಅಸ್ಪೃಶ್ಯನಷ್ಟೇ ಆದಿವಾಸಿಯೊಬ್ಬ ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ತುಳಿಯಲ್ಪಟ್ಟಿದ್ದಾನೆ. ಈ ಕಾರಣಕ್ಕಾಗಿ ಆದಿವಾಸಿಗಳು, ಈ ದೇಶ ಸಾಕಿಕೊಂಡು ಬಂದ ಎಲ್ಲ ಬಗೆಯ ಅಸಮಾನತೆಗಳಿಂದ ನೊಂದವರೇ ಆಗಿದ್ದಾರೆ.

ಇಂಡಿಯಾದ ಅಮಾನವೀಯ ಅಸಮಾನತೆಯನ್ನು ಜೀವಂತವಾಗಿಡುವ ಹೀನ ರಾಜಕಾರಣವನ್ನು ಧ್ವಂಸ ಮಾಡಬೇಕಾದಾಗೆಲ್ಲ ಅಸ್ಪೃಶ್ಯರ ಜೊತೆ ಎಲ್ಲ ಶೋಷಿತರು ಕೈ ಜೋಡಿಸಬೇಕಾಗುತ್ತದೆ. ಸಾವಿರಾರು ವರ್ಷಗಳ ಕಾಲ ಸಾಮಾಜಿಕಾರ್ಥಿಕ ಅಸಮಾನತೆ ಜಗತ್ತಿನಲ್ಲಿ ಜೀವಂತವಿದೆ ಎಂದಾದರೆ ಅದು ಭಾರತದಲ್ಲಿ ಮಾತ್ರ. ಹೀಗೆ ಜೀವಂತವಿರುವ ಅಸಮಾನತೆಯನ್ನು ಪೋಷಿಸುವ ಸನಾತನ ಕೇಂದ್ರಗಳಲ್ಲಿ ಈ ವಿಷಮತೆಯನ್ನು ಸಮರ್ಥಿಸುವ ಯಾವುದೇ ಶಕ್ತಿಶಾಲಿ ಸೈದ್ಧಾಂತಿಕ ನಿಲುವುಗಳಿಲ್ಲ.

ಆದರೆ ಈ ದುರ್ಬಲ ಕರ್ಮಠ ಕೇಂದ್ರಗಳನ್ನು ನಾಶ ಮಾಡಲು ಯತ್ನಿಸುವ ಶೋಷಿತರಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ ಹುಟ್ಟಿಕೊಂಡ ಕೃತಕ ಕಂದಕಗಳಿವೆ. ಈ ಕಂದಕಗಳು ದುರ್ಬಲವಾಗಿದ್ದರೂ, ಈ ಕ್ಷಣಕ್ಕೆ ಶೋಷಿತರೆಲ್ಲ ಒಂದಡೆ ಒಗ್ಗೂಡುವ ಕ್ರಿಯೆಗೆ ಈ ಕಂದಕಗಳು ಅಡ್ಡಿ ಮಾಡುತ್ತಿವೆ. ಈ ಕಾರಣಕ್ಕಾಗಿ ದುರ್ಬಲ ಕರ್ಮಠ ಕೇಂದ್ರಗಳೂ ಅಗಾಧ ಶಕ್ತಿಯನ್ನು ಪಡೆದುಕೊಳ್ಳುತ್ತಲೇ ಹೋಗುತ್ತಿವೆ. ನಮ್ಮನ್ನು ನಾವು ಸೈದ್ಧಾಂತಿಕವಾಗಿ ವಿವರಿಸಿಕೊಳ್ಳಲು ವಿಫಲರಾಗಿರುವುದರಿಂದ ಮತ್ತು ಇಂಡಿಯಾದ ಶೋಷಿತರ ಅನೈಕ್ಯತೆಯಿಂದ ಈ ದೇಶದ ಊಳಿಗಮಾನ್ಯತೆ

> **ಆದಿವಾಸಿಗಳ ಬದುಕು 'ನಾಗರಿಕರಿಗೆ' ವಿಲಕ್ಷಣವಾಗಿ, ಸುಂದರವಾಗಿ ಕಾಣಬಹುದು ಆದರೆ, ಅವರು ನಿತ್ಯದ ಬದುಕಲ್ಲಿ ಎದುರಿಸುವ ಕಷ್ಟಗಳಿಗೆ ಅವರ 'ಸಂಸ್ಕೃತಿ' ಎಂದಿಗೂ ನೆರವಾಗಲಾರದು. ಸಂಸ್ಕೃತಿಯೆಂಬುದು ಮನುಷ್ಯನ ನಡುವೆ ಅನೇಕ ಕಾರಣಗಳಿಗಾಗಿ ರೂಪುಗೊಳ್ಳುವಂತಹದ್ದು. ಅದು ಮಾನವ ಬದುಕಿನ ಒಂದು ಅಮೂರ್ತ ಸಂಗತಿ ಮಾತ್ರ. ಹಸಿವಿನಿಂದ ನರಳುವುದು, ಸಾಮಾಜಿಕವಾಗಿ ಅವಮಾನಕ್ಕೀಡಾಗುವುದು ಮತ್ತು ಸಮುದಾಯದ ಆತ್ಮ ಪ್ರಯ್ನಯವನ್ನೆ ನಾಶ ಮಾಡುವ ಜೀವನ ವಿಧಾನವನ್ನೇ ಸಂಸ್ಕೃತಿ ಎನ್ನುವುದಾರೆ ಅಂಬೇಡ್ಕರ್ ಅದು ಉಳಿಯ ಕೂಡದು, ಎನ್ನುತ್ತಾರೆ.**

ಕೊಬ್ಬುತ್ತಲೇ ಹೋಗಿದೆ. ಸಮಾನ ಕಾರಣಗಳಿಗಾಗಿ ತುಳಿಯಲ್ಪಟ್ಟವರು ರಾಜಕೀಯವಾಗಿ ಐಕ್ಯತೆ ಸಾಧಿಸದೆ ಸಾಂಸ್ಕೃತಿಕ ಕಾರಣಗಳನ್ನು ಮುಂದು ಮಾಡಿ ಪಲ್ಲಟಗೊಳ್ಳುವುದು ಈ ದೇಶದಲ್ಲಿ ಅನೂಚಾನವಾಗಿ ನಡೆದುಬಂದಿದೆ.

ಆದಿವಾಸಿಗಳ ಸಂಸ್ಕೃತಿ ರಕ್ಷಣೆ ಮತ್ತು ಅಂಬೇಡ್ಕರ್

ಈ ಮೊದಲೇ ಹೇಳಿದಂತೆ ಹಿಂದೂ ಧರ್ಮ ಸಾಕಿಕೊಂಡು ಬಂದ ಶ್ರೇಣೀಕೃತ ವ್ಯವಸ್ಥೆಯನ್ನು ಸಂಸ್ಕೃತಿ ಪಂಡಿತರು ವೈವಿಧ್ಯತೆಯ ಹೆಸರಲ್ಲಿ ಎಷ್ಟೇ ಹೊಗಳಿದರೂ, ಅಂಬೇಡ್ಕರ್ ಅದನ್ನು ಉಗ್ರವಾಗಿ ಖಂಡಿಸುತ್ತಾರೆ. ವೈವಿಧ್ಯತೆಯ ಹೆಸರಲ್ಲಿ ಇಂಡಿಯಾದ ಸಮಾಜ ಮುಂದುವರಿಸಿಕೊಂಡು ಬಂದ ಸಾಮಾಜಿಕಾರ್ಥಿಕ ಅಸಮಾನತೆಗಳನ್ನು ಮತ್ತು ಹೇಯ ಸಾಮಾಜಿಕ ನಿಯಮಗಳನ್ನು ಅಂಬೇಡ್ಕರ್ ತಮ್ಮ ಜೀವಮಾನದುದ್ದಕ್ಕೂ ವಿರೋಧಿಸಿದರು. ಈ ಕಾರಣಕ್ಕಾಗಿ, ಅಂಬೇಡ್ಕರ್ ಅವರು 'ಸಂಸ್ಕೃತಿ' ಎಂಬುದು ಉಳಿಸಿಕೊಳ್ಳಬಹುದಾದ ಮೌಲ್ಯವೇನಲ್ಲ ಎಂಬ ತೀರ್ಮಾನಕ್ಕೆ ಬರುತ್ತಾರೆ.

ಆತ್ಮಪ್ರತ್ಯಯವೇ ಇಲ್ಲದ ಅಸಹಾಯಕ ಸಮುದಾಯವೊಂದು ತನ್ನ ಹುಟ್ಟನ್ನೇ ದ್ವೇಷಿಸಿಕೊಳ್ಳುವ ಈ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವ ಮತ್ತು ಯಾರ ಸಂಸ್ಕೃತಿ ಉಳಿಯಬೇಕು? ಎಂದು ಅಂಬೇಡ್ಕರ್ ಪ್ರಶ್ನಿಸು

> **ಈ ದೇಶದ ಭಾರೀ ಶ್ರೀಮಂತರಲ್ಲಿ ಶ್ರೀಮಂತ ನೆಹರು. ಅಂಬೇಡ್ಕರ್ ಈ ದೇಶದ ಹತ ಭಾಗ್ಯರ ಪ್ರತಿನಿಧಿ. ನೆಹರುವಿನದು ಉದಾರ ವಾದಿ ವಿಶಾಲ ದೃಷ್ಟಿಕೋನ. ಅಂಬೇಡ್ಕರ್ ಅವರದು ದಂಗೆಯ ಪ್ರವೃತ್ತಿಯ ಸಕೀಲ ದೃಷ್ಟಿಕೋನ. ಯುರೋಪಿನ ಮಾನವಶಾಸ್ತ್ರದ ಚಿಂತನೆಗಳಿಂದ ನೆಹರು ಪ್ರಭಾವಿರಾಗಿದ್ದರೆ, ಅಂಬೇಡ್ಕರ್ ಈ ದೇಶದ ನೊಂದವರ ಬವಣೆಗಳಿಂದ ರೂಗೊಂಡವರಾಗಿದ್ದರು. ಈ ಕಾರಣಕ್ಕಾಗಿಯೇ, ಭಾರತದ ವೈವಿಧ್ಯತೆ ನೆಹರುವಿಗೆ ರೋಮಾಂಚನ ಹುಟ್ಟಿಸಿದರೆ,**

ತ್ತಾರೆ. ಮನುಷ್ಯನ ವ್ಯಕ್ತಿತ್ವದ ಉದಾತ್ತತೆಯ ಅನಾವರಣವನ್ನು ದ್ವೇಷಿಸುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವ ಬಗೆಯ ಸಂಸ್ಕೃತಿ ರೂಪುಗೊಂಡಿರಲು ಸಾಧ್ಯ? ಅದರಲ್ಲೂ ಅಸ್ಪೃಶ್ಯನೊಬ್ಬ ತನ್ನ ಮುಂದಿನ ತಲೆಮಾರು ಹೆಮ್ಮೆಪಡಬಹುದಾದ ಯಾವುದಾದರೊಂದು ಸಂಗತಿ ಅವನಲ್ಲಿ ರೂಪುಗೊಳ್ಳುವಂತಾಗಲು ಈ ಶ್ರೇಣೀಕೃತ ವ್ಯವಸ್ಥೆ ಅನುವು ಮಾಡಿಕೊಟ್ಟಿದೆಯೇ? ತನ್ನ ಬದುಕನ್ನೇ ದ್ವೇಷಿಸುವಂತೆ ಮಾಡಿರುವ ಅವನ ಜೀವನ ವಿಧಾನ ಯಾಕಾಗಿ ಸಂರಕ್ಷಿಸಲ್ಪಡಬೇಕು? ಹಿಂದೂಧರ್ಮದಿಂದ ನೇರವಾಗಿ ಲಾಭ ಪಡೆದುಕೊಳ್ಳುವ ಜನ, ತಮ್ಮ ಸೇವೆ ಮಾಡಲೆಂದೇ ಹುಟ್ಟಿರುವ ನಿಕೃಷ್ಟರ ಬದುಕಲ್ಲಿ ಮಾದರಿಯಾಗಿ ನಿಲ್ಲಬಲ್ಲ ಯಾವ ಅಂಶಗಳೂ ರೂಪುಗೊಳ್ಳದಂತೆ ನಾಶಮಾಡಿದ್ದಾರೆ. ಜೊತೆಗೆ, ಯಾವ ಶೋಷಿತನೂ ತನ್ನ ವರ್ತಮಾನದ ಹಿಂಸಾತ್ಮಕ ಬದುಕನ್ನು ಯಾವತ್ತಿಗೂ ರಕ್ಷಿಸಿ ಕೊಳ್ಳಕೂಡದು.

ಆದಿವಾಸಿಗಳ ಬದುಕು 'ನಾಗರಿಕರಿಗೆ' ವಿಲಕ್ಷಣವಾಗಿ, ಸುಂದರವಾಗಿ ಕಾಣಬಹುದು ಆದರೆ, ಅವರು ನಿತ್ಯದ ಬದುಕಲ್ಲಿ ಎದುರಿಸುವ ಕಷ್ಟಗಳಿಗೆ ಅವರ 'ಸಂಸ್ಕೃತಿ' ಎಂದಿಗೂ ನೆರವಾಗಲಾರದು. ಸಂಸ್ಕೃತಿಯೆಂಬುದು ಮನುಷ್ಯನ ನಡುವೆ ಅನೇಕ ಕಾರಣಗಳಿಗಾಗಿ ರೂಪುಗೊಳ್ಳುವಂತಹದ್ದು. ಅದು ಮಾನವ ಬದುಕಿನ ಒಂದು ಅಮೂರ್ತ ಸಂಗತಿ ಮಾತ್ರ. ಹಸಿವಿನಿಂದ ನರಳುವುದು, ಸಾಮಾಜಿಕವಾಗಿ ಅವಮಾನಕ್ಕೀಡಾಗುವುದು ಮತ್ತು ಸಮುದಾಯದ ಆತ್ಮ ಪ್ರಯತ್ನವನ್ನೇ ನಾಶಮಾಡುವ ಜೀವನ ವಿಧಾನವನ್ನೇ ಸಂಸ್ಕೃತಿ ಎನ್ನುವುದಾದರೆ ಅಂಬೇಡ್ಕರ್ ಅದು ಉಳಿಯಕೂಡದು, ಅದು ನಾಶಕ್ಕೆ ಅರ್ಹವಾದದ್ದು ಎನ್ನುತ್ತಾರೆ. ಈ ಕಾರಣಕ್ಕೆ, ಅಂಬೇಡ್ಕರ್ ಸಂಸ್ಕೃತಿಯನ್ನು 'ರಕ್ಷಿಸುವ' ಆವತ್ತಿನ ನೆಹರುವಿನ ಚಿಂತನೆಗೆ ತದ್ವಿರುದ್ಧ ನಿಲುವನ್ನು ತಳೆದಿದ್ದರು.

ನೆಹರು ಈ ದೇಶದ ವೈವಿಧ್ಯತೆ ಮತ್ತು ಆದಿವಾಸಿಗಳ ಕಲೆ, ನೃತ್ಯಗಳನ್ನು ಕಂಡು ವಿಸ್ಮಯಗೊಳ್ಳುತ್ತಿದ್ದರು. ರೋಮಾಂಚನಗೊಂಡು, ಮೈತುಂಬಿ ಆದಿವಾಸಿಗಳ ಸಭೆಗಳಲ್ಲಿ ಅವರ 'ಸಂಸ್ಕೃತಿ'ಯನ್ನು ಉಳಿಸಿಕೊಳ್ಳುವ ಭಾಷಣ ಮಾಡುತ್ತಿದ್ದರು. ಆದಿವಾಸಿಗಳ ಅಭಿವೃದ್ಧಿಗಾಗಿ ನೆಹರು ರೂಪಿಸಿದ ಪಂಚಶೀಲ ತತ್ವಗಳಲ್ಲೂ ಸಹ ಈ 'ರಕ್ಷಿಸುವ' ಮನೋಧರ್ಮ, ಕಣ್ಣಿಗೆ ಕಟ್ಟಿದಂತೆ ವ್ಯಕ್ತವಾಗುತ್ತದೆ. ನೆಹರು ಯುರೋಪಿನ ಮನೋಭಾವದವರಾದರೆ, ಅಂಬೇಡ್ಕರ್ ಶ್ರೇಣೀಕರಣದ ಕಟ್ಟ ಕಡೆಯ ಮನುಷ್ಯ.

ಈ ದೇಶದ ಭಾರೀ ಶ್ರೀಮಂತರಲ್ಲಿ ಶ್ರೀಮಂತ ನೆಹರು. ಅಂಬೇಡ್ಕರ್ ಈ ದೇಶದ ಹತಭಾಗ್ಯರ ಪ್ರತಿನಿಧಿ. ನೆಹರುವಿನದು ಉದಾರವಾದಿ ವಿಶಾಲ ದೃಷ್ಟಿಕೋನ. ಅಂಬೇಡ್ಕರ್ ಅವರದು ದಂಗೆಯ ಪ್ರವೃತ್ತಿಯ ಸಕೀಲ ದೃಷ್ಟಿಕೋನ. ಯುರೋಪಿನ ಮಾನವಶಾಸ್ತ್ರದ ಚಿಂತನೆಗಳಿಂದ ನೆಹರು ಪ್ರಭಾವಿತರಾಗಿದ್ದರೆ, ಅಂಬೇಡ್ಕರ್ ಈ ದೇಶದ ನೊಂದವರ ಬವಣೆಗಳಿಂದ ರೂಪುಗೊಂಡವರಾಗಿದ್ದರು. ಈ ಕಾರಣಕ್ಕಾಗಿಯೇ, ಭಾರತದ ವೈವಿಧ್ಯತೆ ನೆಹರುವಿಗೆ ರೋಮಾಂಚನ ಹುಟ್ಟಿಸಿದರೆ, ಅಂಬೇಡ್ಕರ್ ಅವರಲ್ಲಿ ರೋಷವನ್ನು ಚಿಮ್ಮಿಸುತ್ತಿತ್ತು.

ಹಳ್ಳಿಗಳು ಪುನರುಜ್ಜೀವನಗೊಳ್ಳಬೇಕು. ಅಲ್ಲಿನ ಗುಡಿಕೈಗಾರಿಕೆಗಳು ಮತ್ತೆ ಜೀವ ಪಡೆದು ಭಾರೀ ಯಂತ್ರಗಳ ರಾಕ್ಷಸ ಸಂಸ್ಕೃತಿ ಭಾರತವನ್ನು ಆಕ್ರಮಿಸಿಕೊಳ್ಳುವುದನ್ನು ತಡೆಯಬೇಕು ಎಂದು ಗಾಂಧೀಜಿ ನಂಬಿದ್ದರು.

ಸಂಸ್ಕೃತಿ ಯಾವತ್ತೂ ಸೃಜನಶೀಲ ಶ್ರಮಪ್ರವೃತ್ತಿಯ ಕಾರಣಕ್ಕಾಗಿ ರೂಢಿಯಲ್ಲಿರುತ್ತದೆ ಎಂಬುದನ್ನು ಮಾರ್ಕ್ಸ್‌ವಾದಿ ಸಂಸ್ಕೃತಿ ಮೀಮಾಂಸೆಯ ಮೂಲಕ ಅಂಬೇಡ್ಕರ್ ವಿವರಿಸುತ್ತಾರೆ. ಹೀಗಾಗಿ 'ಸಂಸ್ಕೃತಿ' ಎಂಬುದು ಮನುಷ್ಯನ ದುಡಿಮೆಗೆ ನೇರವಾಗಿ ಸಂಬಂಧಿಸಿದ್ದು, ಪರಂಪರೆಯ ರಕ್ಷಣೆಯ ಕಾರಣಕ್ಕೆ ಸಾಂಪ್ರದಾಯಿಕ ಕುಲಕಸಬುಗಳು ಉಳಿಯಬೇಕೆಂದರೆ, ಸನಾತನ ಉತ್ಪಾದನಾ ವ್ಯವಸ್ಥೆ ಮತ್ತು ಉತ್ಪಾದನಾ ಸಂಬಂಧಗಳು ಯಾವ ಬದಲಾವಣೆಗೂ ಒಳಗಾಗದೆ ಉಳಿಯಬೇಕಾಗುತ್ತದೆ. ಜೊತೆಗೆ ಪರಂಪರೆಯು ಸೃಷ್ಟಿಸಿದ ವರ್ಣಶ್ರೇಣಿಯೂ ಮತ್ತೆ ಅದರ ಹೇಯ ಕ್ರೌರ್ಯಗಳೂ ಜೀವಂತವಾಗಿರಬೇಕಾಗುತ್ತದೆ.

ಆದರೆ ಅಂಬೇಡ್ಕರ್‌ಗೆ ಹಳ್ಳಿಗಳು ಫ್ಯೂಡಲಿಸಂನ್ನು ಪೋಷಿಸುವ ವೇದಿಕೆಗಳಂತೆಯೇ ಗೋಚರಿಸಿದವು. ಹಳ್ಳಿಯೊಂದು ತನ್ನೆಲ್ಲಾ ಸ್ವಯಂಪೂರ್ಣತೆಯೊಂದಿಗೆ, ಈ ದೇಶದ ಸನಾತನ ಕ್ರೌರ್ಯವನ್ನು ಅಕ್ಷರಶಃ ಆಚರಣೆಗೆ ತರುವ ಸಾಮಾಜಿಕ ಘಟಕ ಎಂದು ಅಂಬೇಡ್ಕರ್ ಭಾವಿಸುತ್ತಾರೆ. ಜೊತೆಗೆ ಗುಡಿಕೈಗಾರಿಕೆಗಳೂ ಮತ್ತು ಪಾರಂಪರಿಕ ಕುಲಕಸಬುಗಳು ಉಳಿಯಬೇಕೆಂದು ಕರೆಕೊಡುವ ಗಾಂಧೀಜಿಯವರಿಗೆ ಅಂಬೇಡ್ಕರ್ "ಕುಲವೃತ್ತಿ ತನ್ನ ಶಕ್ತಿಗಳಿಗೆ ಒಗ್ಗದೆ ಇದ್ದಾಗ ಕೂಡ, ಅದು ಈ ಲಾಭದಾಯಕವಾಗಿಲ್ಲವೆಂದಾಗ ಕೂಡ ಅದನ್ನು ಕೈಗೊಂಡು ಮುಂದುವರಿಸ ಬೇಕೇ? ತಮ್ಮ ಕುಲವೃತ್ತಿ ಅನೈತಿಕವಾಗಿದ್ದರು ಕೂಡ ಅಂಥವರು ಅದರಿಂದಲೇ ಉಪಜೀವಿಸಬೇಕೇ? ಪ್ರತಿಯೊಬ್ಬರೂ ತಮ್ಮ ಕುಲವೃತ್ತಿಯನ್ನೇ ಕೈಗೊಳ್ಳಬೇಕಾದರೆ ತಲೆಹಿಡುಕನ ವಂಶದವರು ತಲೆಹಿಡುಕರಾಗಿಯೇ ಬದುಕತಕ್ಕದ್ದು. ಮತ್ತು ವೇಶ್ಯೆಯಮೊಮ್ಮಗಳು ವೇಶ್ಯೆಯೇ ಆಗಿರತಕ್ಕದ್ದು ಎಂದಾಗುತ್ತದೆ.

ತಮ್ಮ ತತ್ವದ ಮೇರೆಗೆ ತರ್ಕಬದ್ಧವಾಗಿ ಬರುವ ನಿರ್ಣಯವನ್ನು ಮಹಾತ್ಮರು ಒಪ್ಪಿಕೊಳ್ಳುವರೇ? ಈ ಪ್ರಾಚೀನ ಕುಲವೃತ್ತಿಯ ಆದರ್ಶವು ಅವ್ಯವಹಾರ್ಯವೂ ಆಗಿರುವುದಷ್ಟೇ ಅಲ್ಲದೆ, ನೈತಿಕವಾಗಿ ಅಸಮರ್ಥನೀಯವೂ ಆಗಿದೆ" ಎನ್ನುತ್ತಾರೆ. 'ಮಹಾತ್ಮರಿಗೆ ಒಂದು ಪ್ರತ್ಯುತ್ತರ' ಎಂಬ ಅಂಬೇಡ್ಕರ್‌ರವರ ಸುದೀರ್ಘ ಲೇಖನದಲ್ಲಿನ ವೈಚಾರಿಕ ಆವೇಶ ಗಾಂಧೀಜಿಯವರ ಉದಾರವಾದಿ ಮಾನವತಾವಾದವನ್ನು ಕೊಚ್ಚಿ ಹರಿದಿದೆ. ಸಮುದಾಯವೊಂದು ರೂಢಿಸಿಕೊಂಡು ಬಂದ ಸಂಸ್ಕೃತಿ ಅದರ ಉತ್ಪಾದಕ ಚಟುವಟಿಕೆಗಳಿಂದಾಗಿಯೇ ರೂಪುಗೊಂಡಿರುತ್ತದೆ.

ಸಂಸ್ಕೃತಿ ಯಾವತ್ತೂ ಸೃಜನಶೀಲ ಶ್ರಮಪ್ರವೃತ್ತಿಯ ಕಾರಣಕ್ಕಾಗಿ ರೂಢಿಯಲ್ಲಿರುತ್ತದೆ ಎಂಬುದನ್ನು ಮಾರ್ಕ್ಸ್‌ವಾದಿ ಸಂಸ್ಕೃತಿ ಮೀಮಾಂಸೆಯ ಮೂಲಕ ಅಂಬೇಡ್ಕರ್ ವಿವರಿಸುತ್ತಾರೆ. ಹೀಗಾಗಿ 'ಸಂಸ್ಕೃತಿ' ಎಂಬುದು ಮನುಷ್ಯನ ದುಡಿಮೆಗೆ ನೇರವಾಗಿ ಸಂಬಂಧಿಸಿದ್ದು, ಪರಂಪರೆಯ ರಕ್ಷಣೆಯ ಕಾರಣಕ್ಕೆ ಸಾಂಪ್ರದಾಯಿಕ ಕುಲಕಸಬುಗಳು ಉಳಿಯಬೇಕೆಂದರೆ, ಸನಾತನ ಉತ್ಪಾದನಾ ವ್ಯವಸ್ಥೆ ಮತ್ತು ಉತ್ಪಾದನಾ ಸಂಬಂಧಗಳು ಯಾವ ಬದಲಾವಣೆಗೂ ಒಳಗಾಗದೆ ಉಳಿಯಬೇಕಾಗುತ್ತದೆ. ಜೊತೆಗೆ ಪರಂಪರೆಯು ಸೃಷ್ಟಿಸಿದ ವರ್ಣಶ್ರೇಣಿಯೂ ಮತ್ತೆ ಅದರ ಹೇಯ ಕ್ರೌರ್ಯಗಳೂ ಜೀವಂತವಾಗಿರಬೇಕಾಗುತ್ತದೆ.

ಸಂಸ್ಕೃತಿಯನ್ನು 'ರಕ್ಷಿಸುವ' ತರ್ಕ ಅಂತಿಮವಾಗಿ ಎಲ್ಲಾ ಮೂರ್ತ ಸತ್ಯಗಳನ್ನು ಅರಗಿಸಿಕೊಳ್ಳುವುದಿಲ್ಲ. ಮತ್ತು ಈ ದೇಶದಲ್ಲಿ ಯಾವ ಅಧಿಕಾರಗಳನ್ನು, ಹಕ್ಕುಗಳನ್ನು ಹೊಂದದ ಮತ್ತು ಆತ್ಮಪ್ರತ್ಯಯವನ್ನೇ ನಾಶಮಾಡಿಕೊಂಡು ಪರಂಪರೆಯ ಹೆಸರಲ್ಲಿ ನಿತ್ಯ ಅವಮಾನಿತನಾಗುವ ಯಾವ ಮನುಷ್ಯನೂ ತನ್ನ ಸಂಸ್ಕೃತಿ 'ಉಳಿಯಲಿ' ಎಂದು ಬಯಸುವುದಿಲ್ಲ. ಅಂಬೇಡ್ಕರ್ ಈ ಅರ್ಥದಲ್ಲಿ 'ರಕ್ಷಿಸುವ' ಧೋರಣೆಯ ಪಂಡಿತರ ತರ್ಕಗಳನ್ನು ಸ್ಫೋಟಿಸುತ್ತಾರೆ.

ಇನ್ನು ಮತಾಂತರದ ವಿಷಯದಲ್ಲಿ ಅಂಬೇಡ್ಕರ್ ಅವರ ನಿಲುವು ಬಹುತೇಕ ಎಲ್ಲರಿಗೂ ಚಿರಪರಿಚಿತವಾದುದ್ದೇ ಆಗಿದೆ. ಸ್ವತಃ ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಮತಾಂತರಗೊಂಡವರು. ಅಂಬೇಡ್ಕರ್ ಯಾವತ್ತೂ ಮತಾಂತರದ ಪರವಾಗಿಯೇ ಇದ್ದವರು. ಅರಣ್ಯದಲ್ಲಿನ ಆದಿವಾಸಿಗಳನ್ನು ಮತ್ತು ಹಳ್ಳಿಗಳಲ್ಲಿನ ಅಸ್ಪೃಶ್ಯರನ್ನು ಇಂಗ್ಲೆಂಡಿನ ಚರ್ಚ್‌ಗಳು ಮತಾಂತರಗೊಳಿಸುತ್ತಿವೆ. ಈ ಮುಗ್ಧ ಜನರಿಗೆ ಅನೇಕ ಆಮಿಷಗಳನ್ನು ಒಡ್ಡಿ ಅವರನ್ನು ಕ್ರೈಸ್ತಧರ್ಮಕ್ಕೆ ಧರ್ಮಾಂತರಗೊಳಿಸಲಾಗುತ್ತದೆ. ಕೆಲವು ಕಡೆ ಮತಾಂತರ ಬಲಪ್ರಯೋಗದ ಮೂಲಕ ನಡೆಯುತ್ತಿದೆ. ಮತ್ತು ಭಾರತ ದೇಶದ ಬಡವರ ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡು ಮಿಷನರಿಗಳು ಅವರನ್ನು ಮತಾಂತರಗೊಳಿಸುತ್ತಿವೆ ಎಂಬ ಆರೋಪಗಳು ಅಂದು ಇದ್ದವು. ಈವತ್ತೂ ಸಹ ಸಂಘ ಪರಿವಾರ ಇವೇ ವಾಕ್ಯಗಳನ್ನು ಕಿರಿಚುತ್ತಿದೆ. ಗಾಂಧೀಜಿ ಮತ್ತು ನೆಹರು ಸಹ ಇದೇ ಬಗೆಯ ಧೋರಣೆಯನ್ನು ಹೊಂದಿದ್ದವರು. ಮತಾಂತರ ಮುಂದುವರೆದರೆ ಮುಂದೊಂದು ದಿನ ಹಿಂದೂಧರ್ಮ ಇಲ್ಲವಾಗುತ್ತದೆ ಎಂದು ಗಾಂಧೀಜಿ ಆತಂಕಪಡುತ್ತಿದ್ದರೆ, "ಅಸ್ಪೃಶ್ಯತೆ ಸದಾ ಉಳಿಯುವುದೇ ಆದರೆ, ನಾನು ಹಿಂದೂ ಧರ್ಮ ನಾಶವಾಗಲೆಂದು ಬಯಸುತ್ತೇನೆ" ಎನ್ನುತ್ತಾರೆ ಅಂಬೇಡ್ಕರ್. ಮನುಷ್ಯನ ಸೃಜನಶೀಲತೆಯ ಅನಾವರಣವನ್ನು ಮತ್ತು ಮಾನವಪ್ರೇಮವನ್ನು ದ್ವೇಷಿಸುವ ಹಿಂದು ಧರ್ಮದಲ್ಲಿ ಬದುಕುವುದು ಅಸಾಧ್ಯವೆಂದು ಅಂಬೇಡ್ಕರ್ ಯಾವತ್ತೋ ತೀರ್ಮಾನಿಸಿದ್ದರು. ಅದಕ್ಕಾಗಿ "ಅಸ್ಪೃಶ್ಯರು ಇಸ್ಲಾಂ ಅಥವ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರೂ ನಾನು ನಿಷೇಧಿಸಲಾರೆ. ಹಿಂದು ಧರ್ಮವು ಒಡೆದು ಹಳ್ಳಿ ಹಳ್ಳಿಯಲ್ಲಿಯೂ ಎರಡು ಭಾಗಗಳಾಗುವುದಕ್ಕಿಂತ ಇದನ್ನೇ ನಾನು ಸಹಿಸಿಯೇನು' ಎನ್ನುತ್ತಾರೆ. ಮತಾಂತರ ಒಂದು ಜನತಾಂತ್ರಿಕ ಆಶಯವಾಗಿದ್ದು, ಯಾವೊಬ್ಬ ಪ್ರಜೆಯೂ ತನಗೆ ಬೇಕಾದ ಧರ್ಮವನ್ನು ಆಯ್ದುಕೊಳ್ಳುವಲ್ಲಿ ಸರ್ವ ಸ್ವತಂತ್ರನಾಗಿರುತ್ತಾನೆ. ತನ್ನ ಜೀವಮಾನದ ಇಷ್ಟಗಳು ಮತ್ತು ತನ್ನ ಅಂತರಂಗ ವಿಕಸಿಸಲು ಆಸ್ಪದ ಕೊಡುವ ಯಾವುದೇ ಆಧ್ಯಾತ್ಮಿಕ ವಲಯವನ್ನು ಒಬ್ಬ ವ್ಯಕ್ತಿ ಆಯ್ದುಕೊಳ್ಳಬಹುದು. ಈ ಬಗೆಯ ಸ್ವಾತಂತ್ರ್ಯವನ್ನು ಒಬ್ಬ ವ್ಯಕ್ತಿ ಹುಟ್ಟುತ್ತಲೇ ಪಡೆದುಕೊಳ್ಳುತ್ತಾನೆ. ಮತಾಂತರಗೊಳ್ಳುವ ಭಾರತದ ಅಂಚಿನ ಸಮುದಯಗಳೂ ಸಾಮಾಜಿಕ ಅವಮಾನಗಳನ್ನು ಮೀರಿ ನಿಲ್ಲಲು ಹಂಬಲಿಸುತ್ತಿವೆ. ಈ ಬಗೆಯ ಹಂಬಲಗಳು ಕೇವಲ ಒಪ್ಪತ್ತಿನ ಹಸಿವೆಯ ಕಾರಣಕ್ಕಾಗಿ ಹುಟ್ಟುವುದಿಲ್ಲ. ಸಾವಿರಾರು ವರ್ಷಗಳ ಕಾಲ ತನ್ನ ಅಂತರಂಗವನ್ನು ಬಚ್ಚಿಟ್ಟುಕೊಂಡು ಜನತೆಯ ಸೃಜನಶೀಲ ಆಧ್ಯಾತ್ಮ ಅನಾವರಣಗೊಳ್ಳುವ ಸಲುವಾಗಿ ಈ ಬಗೆಯ ಹಂಬಲಗಳು ಹುಟ್ಟುತ್ತವೆ ಎಂದು ಅಂಬೇಡ್ಕರ್ ಭಾವಿಸಿದ್ದರು. "ಮತಾಂತರದ ವಾದವಿವಾದಗಳಲ್ಲಿ ಯಾವನೇ ಒಬ್ಬ ಹಿಂದು ಕೂಡ, ಹಿಂದು ಧರ್ಮದಲ್ಲಿ ಯಾವ ದೋಷವಿದೆ ಎಂದು ಸಿದ್ಧ ಮಾಡಿ ತೋರಿಸಲು ಯಾವ ಅಸ್ಪೃಶ್ಯರನ್ನೂ ಆಹ್ವಾನಿಸಿಲ್ಲ" ಏಕೆಂದರೆ ಅಮಾನವೀಯತೆಯೇ ಸ್ಥಾಯಿಯಾಗಿರುವ ಧರ್ಮದಲ್ಲಿ ಚರ್ಚೆಗೆ ಮತ್ತು ಸಂವಾದಕ್ಕೆ ಯಾವತ್ತೂ ಅವಕಾಶಗಳಿರುವುದಿಲ್ಲ. ಧಾರ್ಮಿಕ ಆವೇಶಗಳು ಮಾನವೀಯತೆಯನ್ನು ತುಳಿದು ಮುನ್ನುಗ್ಗಿಬಿಡುತ್ತವೆ. ಅದಕ್ಕಾಗಿ "ಅಸ್ಪೃಶ್ಯರು ಎರಡು ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಮೊದಲನೆಯದು, ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವಲ್ಲಿ ಹಿಂದು ಧರ್ಮವೂ ಸಮರ್ಥವಾಗಿದೆ ಎಂದು ಭಾವಿಸುವುದೇ ತಪ್ಪು. ಅಂಥ ಕೆಲಸವನ್ನು ಬೇಕಾದರೆ ಇಸ್ಲಾಂ ಧರ್ಮ, ಕ್ರೈಸ್ತ ಅಥವ

ಬೌದ್ಧ ಧರ್ಮಗಳು ಮಾಡಬಲ್ಲವು" ಎನ್ನುತ್ತಾರೆ, ಜೊತೆಗೆ ಭಾರತದಲ್ಲಿ ಚರ್ಚ್‌ಗಳ ಸೇವೆಯನ್ನು ಅಂಬೇಡ್ಕರ್ ಶ್ಲಾಘಿಸುತ್ತಾರೆ. ಕೆಳಜಾತಿಯವರನ್ನು ಮುಟ್ಟಿದರೆ ಅಸಹ್ಯಿಸಿ ಕೊಳ್ಳುವ ಧರ್ಮದಲ್ಲಿ ಹುಟ್ಟಿದ ಸಮುದಾಯಗಳ ಪರಂಪರೆಯ ಗಾಯಗಳಿಗೆ ಮುಲಾಮು ಹಚ್ಚಿದ್ದು ಕ್ರಿಶ್ಚಿಯನ್ ಮಿಷನರಿಗಳು. ಸಿಡುಬು ಮತ್ತು ಪ್ಲೇಗ್ ಬಂದು ಹುಳಗಳಂತೆ ಜನರು ಸಾಯುತ್ತಿದ್ದಾಗ, ಘಾಸಿಕೊಂಡ ಅಂತಃಕರಣದ ಮೂಲಕ ಇಂಡಿಯಾದ ಹತಭಾಗ್ಯ ಸಮುದಾಯಗಳಿಗೆ ಪ್ರೀತಿಯಿಂದ ಔಷಧಿ ಕೊಟ್ಟು ಸಾಂತ್ವಾನ ನೀಡಿದ್ದು ಕ್ರಿಶ್ಚಿಯನ್ ಪಾದ್ರಿಗಳು. "ಕ್ರೈಸ್ತ ಧರ್ಮ ಸಂಸ್ಥೆಗಳು ದೀನದಲಿತರಿಗಾಗಿ, ಕಷ್ಟ ಜೀವಿಗಳಿಗಾಗಿ ಸಲ್ಲಿಸುತ್ತಿರುವ ಸೇವೆ ಅವರ ಧರ್ಮದ ಅಗತ್ಯ ಕರ್ತವ್ಯವೆಂದು ನಂಬಲು ಯಾಕೆ ಸಾಧ್ಯವಿಲ್ಲ? ಇಂತಹ ಒಂದು ಪ್ರಕ್ರಿಯೆಯಿಂದಾಗಿ ಒಬ್ಬ ವ್ಯಕ್ತಿ ಕ್ರೈಸ್ತಧರ್ಮದಿಂದ ಆಕರ್ಷಿತನಾದರೆ ಅದು ತಪ್ಪೇ?"[೧೦] ಎನ್ನುತ್ತಾರೆ.

ಮಾನವೀಯ ಸಮಾಜ ರೂಪುಗೊಳ್ಳಲು ಮತ್ತು ಮಾನವಪ್ರೇಮ ಅನಾವರಣಗೊಳ್ಳಲು ತಾಯ್ತನದ ಧರ್ಮವೊಂದು ಮನುಷ್ಯನಿಗೆ ಅವಶ್ಯ ಎಂದು ಅಂಬೇಡ್ಕರ್ ನಂಬಿದ್ದರು. ಈ ಕಾರಣಕ್ಕಾಗಿಯೇ ಅವರು ಹಿಂದೂ ಧರ್ಮವನ್ನು ಎದುರು ಹಾಕಿಕೊಂಡು ಜಗಳ ಮಾಡುವ ಯಾವ ಸಂದರ್ಭಗಳನ್ನೂ ತಪ್ಪಿಸಿಕೊಳ್ಳುವುದಿಲ್ಲ. ಏಕೆಂದರೆ ಹಿಂದೂ ಧರ್ಮದಲ್ಲಿ ಸಾಮಾಜಿಕ ನ್ಯಾಯಕ್ಕೆ ಎಂದೂ ಅವಕಾಶವಿಲ್ಲ ಎಂದು ಅವರು ಬಲವಾಗಿ ನಂಬಿದ್ದರು.

ಆದಿವಾಸಿಗಳ ಅಭಿವೃದ್ಧಿಯ ಕುರಿತ ಅಂಬೇಡ್ಕರ್ ನಿಲುವುಗಳು

ಅಂಬೇಡ್ಕರ್ ಆದಿವಾಸಿಗಳ ಅಭಿವೃದ್ಧಿ ಕುರಿತು ಚಿಂತಿಸುವಾಗ, ತಮ್ಮ ಸಮಕಾಲೀನ ಚಿಂತಕರಾದ ಗಾಂಧೀಜಿ ಮತ್ತು ನೆಹರುವಿಗಿಂತ ಭಿನ್ನವಾಗಿ ಕಾಣುತ್ತಾರೆ. ಗುಡಿಕೈಗಾರಿಕೆಗಳು ಉಳಿಯಬೇಕು, ಹಳ್ಳಿಗಳನ್ನು ಸಂರಕ್ಷಿಸಬೇಕು ಎನ್ನುವ ಗಾಂಧೀಜಿ ಮತ್ತು ಭಾರತದ ವೈವಿಧ್ಯತೆ ವಿಶಿಷ್ಟವಾದದ್ದು, ಅದಕ್ಕಾಗಿ ಆದಿವಾಸಿಗಳು ತಮ್ಮ ಸಂಸ್ಕೃತಿ ಇತ್ಯಾದಿಗಳನ್ನು ರಕ್ಷಿಸಿಕೊಳ್ಳಬೇಕು ಎನ್ನುವ ನೆಹರು ಅವರ ಚಿಂತನೆಗಳಲ್ಲಿ 'ರಕ್ಷಿಸುವ' ಉದಾರವಾದಿ ಮನೋಭಾವವಿದೆ. ಸಮಾಜದ 'ಅತ್ಯುತ್ತಮ' ಎನ್ನುವ ಮಾದರಿಗಳನ್ನು ಪಂಜರದ ವಸ್ತುವಾಗಿಸಿ ಪ್ರದರ್ಶಿಸುವ ಉಮೇದು ಇವರಲ್ಲಿ ಜಾಗ್ರತವಾಗಿದೆ. ಈ ಬಗೆಯ 'ರಕ್ಷಿಸುವ' ಮನಸ್ಥಿತಿ, ಸಮು ದಾಯವೊಂದರ ಚಲನಶೀಲತೆಯನ್ನು ಆಳದಲ್ಲಿ ವಿರೋಧಿಸುತ್ತಲೇ ಇರುತ್ತದೆ. ವಸ್ತು ಸಂಗ್ರಹಾಲಯದ ಮನಸ್ಥಿತಿ ಮೂಲತಃ ಯುರೋಪಿನದ್ದು, ಅದು ಬದುಕಿನ ಸೃಜನಶೀಲ ಗುಣವನ್ನೇ ನಿರಾಕರಿಸುತ್ತದೆ. ಜೀವಂತ ಮನುಷ್ಯ ಹಸಿದಿದ್ದರು ಸಹ, ಅವನು ತನ್ನ 'ಸಂಸ್ಕೃತಿ'ಯನ್ನು 'ಉಳಿಸಿ'ಕೊಳ್ಳಬೇಕೆಂದು ವಾದಿಸುತ್ತದೆ. ಆದರೆ ಅಂಬೇಡ್ಕರ್ ಈ 'ಮ್ಯೂಸಿಯಂ' ವಾದಿಗಳನ್ನು ಖಂಡಿಸುತ್ತಾರೆ. ಸಂಸ್ಕೃತಿಯೊಂದನ್ನು ಯಾರೂ ರಕ್ಷಿಸಬೇಕಿಲ್ಲ. 'ಸಂಸ್ಕೃತಿ'ಯೊಂದು ತನ್ನ ಪರಂಪರೆಯ ಎಲ್ಲ ಬಗೆಯ ಮಾನವೀಯ ಸತ್ವವನ್ನು ಹೀರಿ ಬೆಳೆದಿದ್ದರೆ ಅದು ತಾನಾಗಿಯೇ ತನ್ನನ್ನು ರಕ್ಷಿಸಿಕೊಳ್ಳುತ್ತದೆ. ಆದಿವಾಸಿಗಳು ಕೇವಲ ಭಾರತದ ವೈವಿಧ್ಯತೆ ಉಳಿಯುವ ಸಲುವಾಗಿಯೇ ಕಾಡಿನಲ್ಲಿ ಪ್ರತ್ಯೇಕವಾಗಿರಕೂಡದು. ಅವರು ಅಭಿವೃದ್ಧಿ ಹೊಂದಬೇಕಾದರೆ, ಕಾಡನ್ನು ಬಿಟ್ಟು ಹೊರಬರಬೇಕು ಎನ್ನುತ್ತಾರೆ. "ಆದಿಮ ಜನಾಂಗಗಳಿಗೆ ಅಭಿವೃದ್ಧಿಯ ಸಾಧ್ಯತೆಯಿಲ್ಲ ಎಂದರೆ ಅದಕ್ಕೆ ಕಾರಣ ಅವರು ಪ್ರತ್ಯೇಕತೆಯಲ್ಲಿಯೇ ಉಳಿದಿರಲು ನಿರ್ಧರಿಸಿರುವುದು. ಆದರೆ, ಒಮ್ಮೆ ಅವರು ತಮ್ಮ ಕಾಡಿನ ಮೂಲೆಗಳಿಂದ ಹೊರ ಬಂದು ನಾಗರಿಕತೆಯಲ್ಲಿ ಪಾಲ್ಗೊಳ್ಳತೊಡಗಿದರೆ ಅವರ ಪ್ರಗತಿಯ ಹಾದಿಯಲ್ಲಿ ಕಂಟಕವಿರಲಾರದು"[೧೧] ಈ ಕಾರಣಕ್ಕಾಗಿಯೇ ಆದಿವಾಸಿಗಳು ತಮ್ಮ ನಿಲುವುಗಳನ್ನು ಬದಲಿಸಿಕೊಳ್ಳಬೇಕು. ಮತ್ತು ಜಗತ್ತಿನ ವೇಗದ ಲಯಗಳಿಗೆ ತಕ್ಕಂತೆ ತಮ್ಮನ್ನು ರೂಪಿಸಿಕೊಳ್ಳಲು ಯತ್ನಿಸಬೇಕು. ಆದಿವಾಸಿಗಳು ಪ್ರತ್ಯೇಕವಾಗಿಯೇ ಬದುಕಿ ತಮ್ಮನ್ನು ರಕ್ಷಿಸಿಕೊಳ್ಳುವ ಪ್ರಯತ್ನ ಮಾಡಿದರೆ, ಮುಖ್ಯವಾಹಿನಿಯ ಆರ್ಥಿಕ ಪ್ರಗತಿಯ ಭಾಗವಾಗಿ ಅವರು ಬದುಕಲು ಸಾಧ್ಯವಿಲ್ಲ. ಅವರು ತಮ್ಮ ಬದುಕನ್ನು ಉತ್ತಮಗೊಳಿಸಿಕೊಳ್ಳುವುದಕ್ಕೆ ಅವಕಾಶ ಅರಣ್ಯದಲ್ಲಿ ಸಿಕ್ಕುವುದಿಲ್ಲ. "ಆದಿಮ ಜನಾಂಗಗಳ ಸಮಸ್ಯೆಯಿರುವುದು ಭೌಗೋಳಿಕ ಪ್ರತ್ಯೇಕತೆಯಲ್ಲಿ ಮತ್ತು ಉತ್ತಮಗೊಳ್ಳಲು ಬೇಕಾದ ಸದವಕಾಶಗಳನ್ನು ತಾವು ಪಡೆದುಕೊಳ್ಳಬೇಕು ಎಂಬ ಹಂಬಲವೇ ಹುಟ್ಟದಿರುವ ಜಡತೆಯಲ್ಲಿ"[೧೨] ಈ ಕಾರಣಗಳಿಗಾಗಿ ಆದಿವಾಸಿಗಳು ಮುಖ್ಯವಾಹಿನಿಯ ಭಾಗವಾಗುವುದು ಮತ್ತು ಜನತಂತ್ರದಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಡುವುದು ಅನಿವಾರ್ಯವೆಂದು ಅಂಬೇಡ್ಕರ್ ಭಾವಿಸುತ್ತಾರೆ.

ಅಂಬೇಡ್ಕರ್ ಆದಿವಾಸಿಗಳ ಅಭಿವೃದ್ಧಿ ಕುರಿತು ಚಿಂತಿಸುವಾಗ, ತಮ್ಮ ಸಮಕಾಲೀನ ಚಿಂತಕರಾದ ಗಾಂಧೀಜಿ ಮತ್ತು ನೆಹರುವಿಗಿಂತ ಭಿನ್ನವಾಗಿ ಕಾಣುತ್ತಾರೆ. ಗುಡಿಕೈಗಾರಿಕೆಗಳು ಉಳಿಯಬೇಕು, ಹಳ್ಳಿಗಳನ್ನು ಸಂರಕ್ಷಿಸಬೇಕು ಎನ್ನುವ ಗಾಂಧೀಜಿ ಮತ್ತು ಭಾರತದ ವೈವಿಧ್ಯತೆ ವಿಶಿಷ್ಟವಾದದ್ದು, ಅದಕ್ಕಾಗಿ ಆದಿವಾಸಿಗಳು ತಮ್ಮ ಸಂಸ್ಕೃತಿ ಇತ್ಯಾದಿಗಳನ್ನು ರಕ್ಷಿಸಿಕೊಳ್ಳಬೇಕು ಎನ್ನುವ ನೆಹರು ಅವರ ಚಿಂತನೆಗಳಲ್ಲಿ 'ರಕ್ಷಿಸುವ' ಉದಾರವಾದಿ ಮನೋಭಾವವಿದೆ. ಸಮಾಜದ 'ಅತ್ಯುತ್ತಮ' ಎನ್ನುವ ಮಾದರಿಗಳನ್ನು ಪಂಜರದ ವಸ್ತುವಾಗಿಸಿ ಪ್ರದರ್ಶಿಸುವ ಉಮೇದು ಇವರಲ್ಲಿ ಜಾಗ್ರತವಾಗಿದೆ. ಈ ಬಗೆಯ 'ರಕ್ಷಿಸುವ' ಮನಸ್ಥಿತಿ, ಸಮುದಾಯವೊಂದರ ಚಲನಶೀಲತೆಯನ್ನು ಆಳದಲ್ಲಿ ವಿರೋಧಿಸುತ್ತಲೇ ಇರುತ್ತದೆ.

ಆದಿವಾಸಿಗಳ ರಾಷ್ಟ್ರೀಯತೆ ಮತ್ತು ಸ್ವಯಂ ಆಡಳಿತ

ಆದಿವಾಸಿಗಳ ಸ್ವಯಂ ಆಡಳಿತ ಮತ್ತು ಅವರು ಬಯಸುವ ಪ್ರತ್ಯೇಕ ಆಡಳಿತ ಪ್ರಾಂತಗಳ ಕುರಿತು ಅಂಬೇಡ್ಕರ್ ವೈರುಧ್ಯಮಯ ಅಭಿಪ್ರಾಯಗಳನ್ನು ಪ್ರಕಟಿಸುತ್ತಾರೆ. ಅವರು ಅತ್ಯಂತ ಬಲಿಷ್ಠ ಕೇಂದ್ರ ಸರಕಾರವಿರುವ ಆಡಳಿತ ವ್ಯವಸ್ಥೆಯನ್ನು ಬಯಸುತ್ತಾರೆ. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅದರಲ್ಲೂ ಸಂಯುಕ್ತ ರಾಜ್ಯಗಳ ಒಕ್ಕೂಟ ವ್ಯವಸ್ಥೆಯಲ್ಲಿ ಅತ್ಯಂತ ಬಲಿಷ್ಠವಾದ ಕೇಂದ್ರ ಸರಕಾರವಿರುವುದು ಅವಶ್ಯ ಎಂಬುದು ಅಂಬೇಡ್ಕರ್ ಅವರ ಪ್ರತಿಪಾದನೆ. ಅಲ್ಲದೆ ದೇಶದಲ್ಲಿ ಏಕಭಾಷಾ ಸೂತ್ರ ಅಳವಡಿಸಿ, ಆಡಳಿತ ಭಾಷೆಯಾಗಿ ಹಿಂದಿಯನ್ನು ಒಪ್ಪಿಕೊಳ್ಳುವುದು ಅನಿವಾರ್ಯವೆನ್ನುತ್ತಾರೆ. "ಭಾಷಾವಾರು ತತ್ವದ ಆಧಾರದ ಮೇಲೆ ಪ್ರಾಂತಗಳು ಪುನಃ ನಿರ್ಮಾಣವಾಗಬೇಕೆನ್ನುವ ಬೇಡಿಕೆಯನ್ನು ಅಂಗೀಕರಿಸುವಾಗ, ಕೇಂದ್ರದಲ್ಲಿರುವ ಆಡಳಿತ ಭಾಷೆಯೇ ಎಲ್ಲ ಪ್ರಾಂತಗಳ ಆಡಳಿತ ಭಾಷೆ ಆಗಬೇಕೆಂದು ಭಾರತದ ಸಂವಿಧಾನದಲ್ಲಿ ಅವಕಾಶ ಕಲ್ಪಿಸಬೇಕು. ಕೇವಲ ಈ ಭೂಮಿಕೆಯ ಆಧಾರದ ಮೇಲೆ ನಾನು ಭಾಷಾವಾರು ಪ್ರಾಂತಗಳ ಬೇಡಿಕೆಯನ್ನು ಅನುಮೋದಿಸುತ್ತೇನೆ"[೧೩] ಈ ಬಗೆಯ ಅವರ ನಿಲುವನ್ನು ಅಂಬೇಡ್ಕರ್ ಹೀಗೆ ಸಮರ್ಥಿಸಿಕೊಳ್ಳುತ್ತಾರೆ.

ಭಿನ್ನ ಭಿನ್ನ ಭಾಷೆಗಳನ್ನು ಮಾತಾಡುವ ಜನ ರಾಜಕೀಯ ಪ್ರತ್ಯೇಕತೆಯನ್ನು ಬಯಸಿದರೆ ಭಾರತ ಒಂದು ರಾಷ್ಟ್ರವಾಗಿ ಉಳಿಯಲು ಸಾಧ್ಯವಿಲ್ಲ. ಜೊತೆಗೆ ಅನೇಕ ಭಿನ್ನಾಭಿಪ್ರಾಯಗಳ ಕಾರಣಕ್ಕಾಗಿಯೇ ಒಂದು ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡಲು ಆಗುವುದಿಲ್ಲ. ಭಾಷೆಗಳ ಕಾರಣಕ್ಕಾಗಿ ಪ್ರತ್ಯೇಕ ರಾಷ್ಟ್ರಗಳಾಗಿ ರೂಪಗೊಂಡ ಯುರೋಪಿನ ದೇಶಗಳು ಅನೇಕ ಬಗೆಯ ಭಿನ್ನಾಭಿನ್ನಪ್ರಾಯಗಳಿಂದಾಗಿ ಎರಡು ಜಾಗತಿಕ ಯುದ್ಧಗಳನ್ನೇ ಸೃಷ್ಟಿಸಿದವು. ಅಲ್ಲದೆ ಜಗತ್ತಿನಾದ್ಯಂತ ಹಲವು ಬಗೆಯ ಸಂಘರ್ಷಗಳಿಗೆ ಈ ದೇಶಗಳು ಕಾರಣವಾಗಿವೆ. ಭಾಷಾವಾರು ಪ್ರಾಂತಗಳ ಅನನ್ಯತೆಗಳು ಅಪಾಯಕಾರಿಯೂ ಆಗಬಲ್ಲವು ಎಂಬುದು ಅಂಬೇಡ್ಕರ್ ಅವರ ಅಭಿಪ್ರಾಯ. ಆದರೆ ಇವರೇ ಇನ್ನೊಂದೆಡೆ, "ಪ್ರಾಂತ್ಯಗಳು ವಿಶಿಷ್ಟ ರಾಷ್ಟ್ರೀಯತೆಯ ಅಂಶಗಳನ್ನು ಹೊಂದಿರುತ್ತವೆ. ರಾಷ್ಟ್ರೀಯತೆತಯನ್ನು ಪೂರ್ಣ ಬೆಳೆಸುವುದಕ್ಕೆ ಅವುಗಳಿಗೆ ಸ್ವಾತಂತ್ರ್ಯ ಇರಬೇಕು"[೧೪] ಎನ್ನುತ್ತಾರೆ. ಅಂಬೇಡ್ಕರ್ ರಾಷ್ಟ್ರೀಯತೆಗಳ ಹೋರಾಟ ಮತ್ತು ಸ್ವಯಂ ಆಡಳಿತದ ಹಕ್ಕೊತ್ತಾಯಗಳನ್ನು ಬೇರೆಯದೇ ಆದ ಅರ್ಥದಲ್ಲಿ ವಿವರಿಸಿಕೊಳ್ಳುತ್ತಾರೆ. ವಸಾಹತು ಆಡಳಿತದ ಸಂದರ್ಭದಲ್ಲಿ ಮಾನಸಿಕವಾಗಿ ಭಾರತದೇಶದಿಂದ ದೂರ ಸರಿದಿದ್ದ ಆದಿವಾಸಿಗಳು, ಸ್ವಾತಂತ್ರ್ಯಾನಂತರ ಸಹಜವಾಗಿಯೇ ಭಾರತ ಒಕ್ಕೂಟದಲ್ಲಿ ಪ್ರತ್ಯೇಕ ರಾಜ್ಯ ಮತ್ತು ಸ್ವಯಂ ಆಡಳಿತದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟವು. ಈಶಾನ್ಯ

ಭಿನ್ನ ಭಿನ್ನ ಭಾಷೆಗಳನ್ನು ಮಾತಾಡುವ ಜನ ರಾಜಕೀಯ ಪ್ರತ್ಯೇಕತೆಯನ್ನು ಬಯಸಿದರೆ ಭಾರತ ಒಂದು ರಾಷ್ಟ್ರವಾಗಿ ಉಳಿಯಲು ಸಾಧ್ಯವಿಲ್ಲ. ಜೊತೆಗೆ ಅನೇಕ ಭಿನ್ನಾಭಿಪ್ರಾಯಗಳ ಕಾರಣಕ್ಕಾಗಿಯೇ ಒಂದು ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡಲು ಆಗುವುದಿಲ್ಲ. ಭಾಷೆಗಳ ಕಾರಣಕ್ಕಾಗಿ ಪ್ರತ್ಯೇಕ ರಾಷ್ಟ್ರಗಳಾಗಿ ರೂಪಗೊಂಡ ಯುರೋಪಿನ ದೇಶಗಳು ಅನೇಕ ಬಗೆಯ ಭಿನ್ನಾಭಿನ್ನಪ್ರಾಯಗಳಿಂದಾಗಿ ಎರಡು ಜಾಗತಿಕ ಯುದ್ಧಗಳನ್ನೇ ಸೃಷ್ಟಿಸಿದವು. ಅಲ್ಲದೆ ಜಗತ್ತಿನಾದ್ಯಂತ ಹಲವು ಬಗೆಯ ಸಂಘರ್ಷಗಳಿಗೆ ಈ ದೇಶಗಳು ಕಾರಣವಾಗಿವೆ. ಭಾಷಾವಾರು ಪ್ರಾಂತಗಳ ಅನನ್ಯತೆಗಳು ಅಪಾಯಕಾರಿಯೂ ಆಗಬಲ್ಲವು ಎಂಬುದು ಅಂಬೇಡ್ಕರ್ ಅವರ ಅಭಿಪ್ರಾಯ.

ಭಾರತದ ಆದಿವಾಸಿಗಳು, ಬಿಹಾರ, ಪಶ್ಚಿಮ ಬಂಗಾಳ, ಆಸ್ಸಾಂ ಮತ್ತು ದಂಡಕಾರಣ್ಯದಲ್ಲಿ ವಾಸಿಸುತ್ತಿರುವ ಆದಿವಾಸಿಗಳು ಈ ಸ್ವಯಂ ಆಡಳಿತದ ಕುರಿತು ಚಳುವಳಿಗಳನ್ನೇ ರೂಪಿಸಿದರು.ಈ ಬಗೆಯ ಪ್ರತ್ಯೇಕ ರಾಜ್ಯ ಮತ್ತು ಸ್ವಯಂ ಆಡಳಿತದ ಬೇಡಿಕೆಗಳ ಹಿಂದೆ ಅನೇಕ ಸಾಮಾಜಿಕಾರ್ಥಿಕ ಕಾರಣಗಳು ಅಡಗಿವೆ. ವಸಾಹತು ಆಡಳಿತದ ಸಂದರ್ಭದಲ್ಲಿ ಆದಿವಾಸಿಗಳು ಕಂಪನಿ ಸರ್ಕಾರದ ಮತ್ತು ಭಾರತದ ಊಳಿಗಮಾನ್ಯಶಾಹಿ ಆಕ್ರಮಣಗಳಿಂದ ದಿಕ್ಕೆಟ್ಟು ಹೋಗಿದ್ದರು. ಅವರ ಕೃಷಿ ಭೂಮಿಗಳು ಎಸ್ಟೇಟುಗಳಾಗಿ, ವಾಣಿಜ್ಯ ಬೆಳೆಗಳನ್ನು ಬೆಳೆವ ಪ್ಲಾಂಟರುಗಳ ವಶವಾದವು. ಸಂತಾಲರು, ಜಾರ್ಖಂಡಿಗಳೂ, ಬೋಡೋಗಳು ಆರಂಭದಲ್ಲಿಯೇ ಕಂಪನಿ ಸರ್ಕಾರದ ಸೈನ್ಯಕ್ಕೆ ಮುಖಾಮುಖಿಯಾದರು. ಬಹಳ ಸಲ ಆದಿವಾಸಿಗಳು ಈ ಮುಖಾಮುಖಿಯಲ್ಲಿ ಹಿಂಸಾತ್ಮಕವಾಗಿ ಹತ್ತಿಕ್ಕಲ್ಪಟ್ಟರು. ವಸಾಹತುಶಾಹಿಗೆ ವಸಾಹತು ರಾಷ್ಟ್ರಗಳ ಅಮಾಯಕ, ಮೂಕ ಸಮುದಾಯಗಳನ್ನು ಹತ್ತಿಕ್ಕುವುದು ಕಷ್ಟಕರ ಕೆಲಸವಾಗಿರಲಿಲ್ಲ. ಆದರೆ ವಸಾಹತು ಆಡಳಿತದ ಸಂದರ್ಭದಲ್ಲಿ ಈ ಭಾಗದ ಆದಿವಾಸಿಗಳು ಪದೇ ಪದೇ ತಮ್ಮ ಪಾರಂಪರಿಕ ನೆಲೆಗಳಿಗಾಗಿ ಹೋರಾಟ ಮಾಡುತ್ತಲೇ ಬಂದರು. ಈ ಹೋರಾಟಗಳು ಸ್ವಾತಂತ್ರ್ಯ ನಂತರವೂ ಮುಂದುವರೆದವು. ಆದರೆ ಭಾರತ ಸರ್ಕಾರವು ಸಹ ಈ ಜನತಂತ್ರ ಹೋರಾಟಗಳನ್ನು ವಿದೇಶಿ ಏಜೆಂಟರ ಇಲ್ಲವೇ ಮಿಷಿನರಿಗಳ ಪಿತೂರಿ ಎಂದೇ ಭಾವಿಸಿತು.

ಆದಿವಾಸಿಗಳ ಹೋರಾಟಗಳು ಅವರ ಸಾಮಾಜಿಕಾರ್ಥಿಕ ನೆಲೆಗಳಿಂದ ರೂಪಗೊಂಡಿವೆ ಎಂದು ಅಂದಿನ ರಾಷ್ಟ್ರ ನಾಯಕರು ಭಾವಿಸಲಿಲ್ಲ. 'ಸರ್ವಶಕ್ತ ಬೃಹತ್ ಭಾರತ' ಮಾತ್ರ ಅವರ ಪ್ರಧಾನ ಪರಿಗಣನೆ ಯಾಗಿತ್ತು. ಭಾರತದ ವೈವಿಧ್ಯಮಯ ಸಮಾಜವನ್ನು ಇನ್ನೂ ಶ್ರೀಮಂತಗೊಳಿಸಲು ಆದಿವಾಸಿಗಳು ಈ ದೇಶದ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಲೇಬೇಕೆಂಬುದು ಅವರ ಆಸೆಯಾಗಿತ್ತು. ಅವರಿಗೆ ಬೇಕಾದ ಶಾಲೆ, ರಸ್ತೆಗಳನ್ನು ಕೊಟ್ಟುಬಿಡೋಣ ಆದರೆ ಆದಿವಾಸಿಗಳು ತರಲೆ ಮಾಡದೆ ಭಾರತದ ಭಾಗವಾಗಿ ಬದುಕಬೇಕು ಎಂಬುದು ಅವರ ವಾದವಾಗಿತ್ತು. ಸ್ವಯಂ ಆಡಳಿತದ ಹಕ್ಕನ್ನು ಒಂದು ಸಮುದಾಯ ಯಾಕಾಗಿ ಪದೇ ಪದೇ ತನ್ನ ಅಸ್ತಿತ್ವದ ಕಾರಣಕ್ಕಾಗಿ ಮಂಡಿಸುತ್ತಿದೆ ಎಂಬ ರಾಜಕೀಯ ಪ್ರಶ್ನೆ ಅಂಬೇಡ್ಕರ್ ಮತ್ತು ನೆಹರು ಅವರ ಚಿಂತನೆಯಲ್ಲಿ ಗೈರುಹಾಜರಾಗಿದೆ. ಆದಿವಾಸಿಗಳ ಹೋರಾಟಗಳು ದೇಶದ್ರೋಹಿ ಚಟುವಟಿಕೆಗಳೆಂದೇ ಸರಳೀಕರಿಸಿ ಅರ್ಥೈಸಲ್ಪಟ್ಟಿವೆ. ತಮ್ಮ ರಾಜಕೀಯಾರ್ಥಿಕ ಕಾರಣಗಳಿಗಾಗಿ ಮತ್ತು ಸಾಮಾಜಿಕ ಅವಮಾನಗಳನ್ನು ಮೀರಿ ನಿಲ್ಲುವುದಕ್ಕಾಗಿ ಸಂಘಟಿತವಾದ ಹೋರಾಟಗಳನ್ನು ನೆಹರು ತನ್ನ ಅಮಿತ ರಾಷ್ಟ್ರಪ್ರೇಮದ ಭ್ರಮೆಗಳಲ್ಲಿ ಕ್ಷುಲ್ಲಕವಾಗಿಯೇ ಕಂಡಿದ್ದಾರೆ. ಈ ಬಗೆಯ ಅಸೈದ್ಧಾಂತಿಕ ರಾಜಕೀಯ ನಿಲುವು ನೆಹರು ಅವರ ಆದಿವಾಸಿಗಳ ಕುರಿತ ಚಿಂತನೆಗಳಲ್ಲಿ ಪ್ರಕಟವಾಗುತ್ತಲೇ ಬಂದಿದೆ. ಆದಿವಾಸಿಗಳ ಹೋರಾಟಗಳನ್ನು ನೆಹರು ಸೈದ್ಧಾಂತಿಕವಾಗಿ ವಿವರಿಸಿಕೊಳ್ಳಲು ಸಾಧ್ಯವಾದಂತಿಲ್ಲ. ಅಸೈದ್ಧಾಂತಿಕ ರಾಷ್ಟ್ರೀಯತೆ ಮತ್ತು ಅಖಂಡ ಭಾರತದ ಕಲ್ಪನೆಗಳು ನೆಹರು ಅವರನ್ನು ನಿಯಂತ್ರಿಸಿವೆ.

ಆದಿವಾಸಿಗಳ ಬದುಕಿನಲ್ಲಿ ಯಾವ ಮೂಲಭೂತ ಬದಲಾವಣೆಗಳನ್ನು ತರದೆ, ಅವರು ಅಖಂಡ ಭಾರತದ ಭಾಗವಾಗಿ ಬದುಕಬೇಕೆಂಬ ಅವರ ಆಶಯವೇ ಅಪ್ಪಟ ಊಳಿಗಮಾನ್ಯಶಾಹಿ ಮೌಲ್ಯಗಳಿಂದ ಪ್ರೇರೇಪಿತವಾದದ್ದು. ದುಡಿವ ವರ್ಗಗಳ ಹಕ್ಕು ಬಾಧ್ಯತೆಗಳ ಕುರಿತು ಭಾರತದ ಆಡಳಿತ ವ್ಯವಸ್ಥೆ ಯಾವತ್ತೂ ಕುರುಡಾಗಿ ಬೇಜವಾಬ್ದಾರಿಯ ದಾಪುಗಾಲನ್ನಿಡುತ್ತಲೇ ಬಂದಿದೆ. ಒಂದು ಗಣರಾಜ್ಯವಾಗಿ, ಜಾತ್ಯತೀತ ನೆಲೆಗಟ್ಟಿನಲ್ಲಿ ಎಲ್ಲಾ ಸಾಮಾಜಿಕ ಅನನ್ಯತೆಗಳನ್ನು, ಅವುಗಳ ಸಹಜ ಹಕ್ಕುಗಳನ್ನು ರಕ್ಷಿಸುವ ಮತ್ತು ದುರ್ಬಲ ಸಮುದಾಯಗಳಿಗೆ ರಾಜಕೀಯಾರ್ಥಿಕ ಅವಕಾಶಗಳನ್ನು ಕಲ್ಪಿಸುವ ಸದಾಶಯಗಳಿಂದ ರೂಪಗೊಂಡ ಸಂವಿಧಾನಕ್ಕೆ ವ್ಯತಿರಿಕ್ತವಾಗಿ ಭಾರತದ ಶಕ್ತಿ

ರಾಜಕಾರಣ ನಡೆದುಕೊಂಡು ಬಂದಿದೆ. ಈ ದೇಶದ ಆದಿವಾಸಿಗಳ ಮತ್ತು ಕೆಳವರ್ಗಗಳ ಹೋರಾಟಗಳನ್ನು, ಹುಸಿ ರಾಷ್ಟ್ರೀಯತೆಯ ಕಾರಣಗಳಿಗಾಗಿ ಕ್ಷುಲ್ಲಕವಾಗಿ ಕಂಡು, ಅವುಗಳನ್ನು ಹತ್ತಿಕ್ಕುವ ಪ್ರಯತ್ನಗಳು ನೆಹರುವಿನ ಕಾಲದಿಂದಲೇ ಪ್ರಾರಂಭವಾದವು. ಇದಕ್ಕೆ ಬಹುದೊಡ್ಡ ಉದಾಹರಣೆಯೆಂದರೆ ನೆಹರು ಸರ್ಕಾರದ ಸೈನ್ಯ ತೆಲಂಗಾಣದ ರೈತ ಹೋರಾಟವನ್ನು ಹಿಂಸಾತ್ಮಕವಾಗಿ ಹತ್ತಿಕ್ಕಿದ್ದು. ಇದನ್ನು ನೆಹರುವಿನ ವ್ಯಕ್ತಿಗತ ತಾತ್ವಿಕ ಮಿತಿಯೆಂದು ನೋಡುವುದಕ್ಕಿಂತ ಅಂದಿನ ಭಾರತದ ರಾಷ್ಟ್ರೀಯತೆಯನ್ನು ವ್ಯಾಖ್ಯಾನಿಸಿದ ಊಳಿಗಮಾನ್ಯಶಾಹಿ ಆಶಯಗಳ ಭಾಗವಾಗಿ ಈ ರಾಜಕಾರಣವನ್ನು ಅರ್ಥಮಾಡಿಕೊಳ್ಳಬೇಕು.

ಅಂದಿನ ರಾಷ್ಟ್ರೀಯತೆಯ ಕಲ್ಪನೆಯೇ ಇಂದು 'ಸಾಂಸ್ಕೃತಿಕ ರಾಷ್ಟ್ರೀಯತೆ'ಯೆಂಬ ಭೂತವಾಗಿ ಭಾರತದ ಕೋಮು ಸಾಮರಸ್ಯವನ್ನು ಕದಡುತ್ತಿದೆ. ಭಾರತದ ಏಕರೂಪಿ ಸಮಾಜದ ನಿರ್ಮಾಣಕ್ಕೆ ಇಲ್ಲಿನ ವೈವಿಧ್ಯಮಯ ಜಗತ್ತುಗಳನ್ನು ಅದು ನಾಶಮಾಡುತ್ತಿದೆ. ಇತ್ತೀಚಿನ ಗುಜರಾತ್ ಹತ್ಯಾಕಾಂಡದಲ್ಲಿ ಅಲ್ಪಸಂಖ್ಯಾತರನ್ನು ಕೊಲ್ಲಲು ಅಲ್ಲಿನ ಸಂಘಪರಿವಾರ ಬಳಸಿಕೊಂಡದ್ದು ಅಮಾಯಕ ಆದಿವಾಸಿಗಳನ್ನು. ಈ ಬಗೆಯ ಮತೀಯ ಅತಿರೇಕಗಳು ಯಾವ ತಾತ್ವಿಕ ನೆಲೆಯಿಲ್ಲದ ಹುಸಿರಾಷ್ಟ್ರೀಯತೆಯಿಂದಲೇ ಹುಟ್ಟುವುದು. ನೆಹರು 'ಸರ್ವಶಕ್ತ ಭಾರತ'ವೆಂಬುದು ಕೇವಲ ಅಗಾಧ ರಾಷ್ಟ್ರಪ್ರೇಮದಿಂದ ಉದ್ಭವಿಸಬಲ್ಲದು, ಆ ಕಾರಣಕ್ಕಾಗಿ ಈ ಕ್ಷಣಕ್ಕೆ 'ಆಂತರಿಕ ಏರುಪೇರುಗಳನ್ನು' ಎಲ್ಲರೂ ಸಹಿಸಿಕೊಳ್ಳಬೇಕೆಂಬ ನಿಲುವನ್ನು ತಳೆದಿದ್ದರು. ಜೊತೆಗೆ ಆದಿವಾಸಿಗಳು ತಮ್ಮ ಸಹಜ ಹಕ್ಕುಗಳಿಗಾಗಿ ನಡೆಸಿದ ಹೋರಾಟಗಳನ್ನು ಅರಾಜಕ ದೊಂಬಿಗಳೆಂದು ಪರಿಗಣಿಸಿ, ಆದಿವಾಸಿಗಳನ್ನು ಉದ್ಧಾರ ಮಾಡುವ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ಯತ್ನಿಸಿದರು.

ಅಂಬೇಡ್ಕರ್ ಸಹ ಈ ಬಗೆಯ ಹೋರಾಟಗಳ ಕುರಿತು ಗಂಭೀರ ದನಿ ಎತ್ತಿದ್ದರು ಎಂದೆನ್ನಿಸುವುದಿಲ್ಲ. ಭಾಷಾವಾರು ಪ್ರಾಂತಗಳ ಕುರಿತು ಅವರ ಒಟ್ಟು ಚಿಂತನೆಯು ಬೃಹತ್ ಭಾರತದಲ್ಲಿ ಉಳಿದೆಲ್ಲ ಸಾಮಾಜಿಕ ಘಟಕಗಳು ಸಂಕರಗೊಳ್ಳಬೇಕು ಎಂಬುದನ್ನು ಒಪ್ಪಿಕೊಳ್ಳುತ್ತದೆ. "ಯಾವ ಪ್ರಾಂತವು ಸಾಮಾಜಿಕ ರಚನೆ ದೃಷ್ಟಿಯಿಂದ ಏಕರೂಪವಿರುತ್ತದೆಯೋ ಅದುವೇ ನಿಜವಾದ ಭಾಷಾವಾರು ಪ್ರಾಂತವೆಂದು ನನಗನ್ನಿಸುತ್ತದೆ"[೧೬] ಎಂದು ಅಂಬೇಡ್ಕರ್ ಯಾವ ಪ್ರಾಂತಗಳೂ ಅಂತಿಮವಾಗಿ ಈ ಅಖಂಡ ಭಾರತದ ಭಾಗವಾಗಿ ರೂಪಗೊಳ್ಳಬೇಕೆಂಬ ವಾದದ ಕಡೆಗೇ ಹೆಚ್ಚು ವಾಲುತ್ತಾರೆ. ಮತ್ತೆ ರಾಷ್ಟ್ರೀಯತೆಗಳ ಕುರಿತು ಕೆಲವು ಕಡೆ ಹೆಚ್ಚುಗೊಂದಲಕಾರಿ ನಿಲುವುಗಳೇ ಅವರ ಬರಹದಲ್ಲಿ ವ್ಯಕ್ತವಾಗಿವೆ. ಅದರಲ್ಲೂ ಇಡೀ ಭಾರತದ ಆಡಳಿತ ಭಾಷೆ ಹಿಂದಿಯಾಗಿರಬೇಕು ಎಂಬ ಕುರಿತು ಅಂಬೇಡ್ಕರ್ ತುಸು ಹೆಚ್ಚೆನ್ನಿಸುವಂತೆ ವಕಾಲತ್ತು ವಹಿಸುತ್ತಾರೆ. "ಪ್ರಾಂತ ಭಾಷೆಗಿಂತ ಭಿನ್ನವಾದ, ಅಖಿಲ ಭಾರತದ ಆಡಳಿತ ಭಾಷೆಯನ್ನು ಬಳಸಲಾಗು ವುದು. ಉಳಿದ ಕಡೆಗಳಲ್ಲಿ, ಅಂದರೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಾಂತ ಭಾಷೆಯನ್ನು ಬಳಸಲು ಮಾರ್ಗ ಇನ್ನೂ ಮುಕ್ತವಿರುತ್ತದೆ. ಆಡಳಿತ ಭಾಷೆ ಮತ್ತು ಆಡಳಿತಕ್ಕೆ ಬಳಸದ ಭಾಷೆಗಳ ನಡುವೆ ಆರೋಗ್ಯಕರ ಸ್ಪರ್ಧೆ ನಡೆಯಬಹುದು. ಒಂದು ಇನ್ನೊಂದನ್ನು ಹೊರಹಾಕಲು ಯತ್ನಿಸಬಹುದು. ಆಡಳಿತ ಭಾಷೆ ಪ್ರಾಂತಭಾಷೆಯನ್ನು ಹೊರಹಾಕುವಲ್ಲಿ ಯಶಸ್ವಿ ಯಾದರೆ ಅದಕ್ಕಿಂತ ಉತ್ತಮವಾದದ್ದು ಇನ್ನಾವುದೂ ಇಲ್ಲ"[೧೭] ಎನ್ನುತ್ತಾರೆ. ಪ್ರತ್ಯೇ ಕತೆಯ ಅಂತಿಮ ಗುರುತುಗಳ ಕುರಿತು ಅಂಬೇಡ್ಕರ್‌ಗೆ ಅಂತಹ ಒಲವಿದ್ದಂತೆ ಕಾಣುವುದಿಲ್ಲ. ಪ್ರತ್ಯೇಕಿಸುವ ಎಲ್ಲ ಗೆರೆಗಳೂ ಅಳಿಸಿ ಹೋಗಿ ಅಖಂಡತೆ ನೆಲೆಸುವುದರಿಂದ ಈ ಸಮಾಜದ

ಅಂಚಿನ ಸಮುದಾಯಗಳ ಸಂಕಟಗಳು ನಿವಾರಣೆಯಾಗುತ್ತವೆ ಎಂದು ಅಂಬೇಡ್ಕರ್ ನಂಬುತ್ತಾರೆ.

ಕೊನೆಯ ಮಾತುಗಳು

ಅಂಬೇಡ್ಕರ್ ತಮ್ಮ ಬರಹಗಳುದ್ದಕ್ಕೂ ಅಸ್ಪೃಶ್ಯರ, ಶೋಷಿತ ಆದಿವಾಸಿಗಳ ಈವತ್ತಿನ ಸ್ಥಿತಿಗೆ ಹಿಂದೂ ಧರ್ಮದಲ್ಲಿರುವ ಅಮಾನವೀಯ ವೈಚಾರಿಕತೆಯೇ ಕಾರಣ ಎಂಬುದನ್ನು ಸೂಕ್ತ ಸಾಕ್ಷ್ಯಾಧಾರಗಳ ಮೂಲಕ ವಿವರಿಸುತ್ತಾರೆ. ಅಂಬೇಡ್ಕರ್ ತಮ್ಮ ಪ್ರಖರ ವೈಚಾರಿಕ ದಾಳಿಗೆ ತಕ್ಕುದಾದ ಸಾಕ್ಷಿಗಳನ್ನು ಹಿಂದೂಧರ್ಮದ ಶಾಸ್ತ್ರಗ್ರಂಥಗಳ ಮೂಲಕವೇ ಹೆಕ್ಕಿ ತೆಗೆಯುತ್ತಾರೆ. ಮತ್ತು ಯಾವ ಧರ್ಮ ಪಂಡಿತನೂ ಎಂದಿಗೂ ಉತ್ತರಿಸಲಾರದ ಮಾರ್ಮಿಕ ಪ್ರಶ್ನೆಗಳನ್ನು ಕೇಳಿಬಿಡುತ್ತಾರೆ. ಧರ್ಮವನ್ನುವುದು ಅಲೌಕಿಕ ಆಚರಣೆಗಳ, ಅರ್ಥವಾಗದ ಶ್ಲೋಕ ನುಡಿಗಟ್ಟುಗಳಿಂದ ಕೂಡಿದ, ಶೂನ್ಯಕ್ಕೆ ಸಂಬಂಧಿಸಿದ ವಿಷಯವಲ್ಲ. ಧರ್ಮ ಮನುಷ್ಯನಿಗೆ ಸಂಬಂಧಿಸಿದ್ದು. ಅದು ಮನುಷ್ಯನ ಕಲ್ಯಾಣಕ್ಕೆ ಮತ್ತು ಮಾನವತೆಯ ನಿರ್ಮಾಣಕ್ಕೆ ಸಂಬಂಧಿಸಿದ್ದು ಎಂಬುದು ಅಂಬೇಡ್ಕರ್‌ವಾದದ ಬಹಳ ಮುಖ್ಯವಾದ ತಿರುಳುಗಳ ಲ್ಲೊಂದು ಅದಕ್ಕೆ ಅಂಬೇಡ್ಕರ್ "ಧರ್ಮವನ್ನು ಸ್ವೀಕರಿಸಿ ಬದುಕುವ ವ್ಯಕ್ತಿಗೆ ಈ ಧರ್ಮದಿಂದ ಸಮಾಜಕ್ಕೆ ಎಷ್ಟರ ಮಟ್ಟಿಗೆ ಕಲ್ಯಾಣ ಸಾಧನೆಯಾಗಿದೆ ಎಂದು ಪ್ರಶ್ನಿಸುವ ಹಕ್ಕು ಇರಬೇಕಾದದು ಅಗತ್ಯ" ಎನ್ನುತ್ತಾರೆ. ಪ್ರಾಯಶಃ ಆಧುನಿಕ ಜಗತ್ತಿನಲ್ಲಿ ಸದ್ದಿಲ್ಲದೆ ಹಿಂಸೆಗೆ ಕಾರಣವಾಗುವ ಎಲ್ಲ ಧರ್ಮಗಳಿಗೂ ಅಂಬೇಡ್ಕರ್ ಕೊಡುವ ಛಡಿ ಏಟು ಇದು.

ಹೀಗೆ ವರ್ತಮಾನದ ಶೋಷಿತ ವರ್ಗದವರ ಸ್ಥಿತಿಗತಿಗಳಿಗೆ ಚರಿತ್ರೆಯಲ್ಲಿ ಕಾರಣಗಳನ್ನು ಹುಡುಕುವ ಅಂಬೇಡ್ಕರ್‌ರವರಿಗೆ ವಿಪುಲ ಪುರಾವೆಗಳು ಲಭ್ಯವಾದದ್ದು ಸತ್ಯ. ಅಂಬೇಡ್ಕರ್‌ವಾದದ ಹೆಚ್ಚುಗಾರಿಕೆ ಇರುವುದೇ, ಅದು ಶೋಷಿತರ ವರ್ತಮಾನದ ಸ್ಥಿತಿಯನ್ನು ಚಾರಿತ್ರಿಕವಾಗಿ ವಿವರಿಸುವುದರಲ್ಲಿ. ಧಾರ್ಮಿಕ ಮತ್ತು ಆಧ್ಯಾತ್ಮಿಕವೆನ್ನುವ ಕಾರಣಗಳಿಗಾಗಿಯೇ ವಿಭಜಿಸಲ್ಪಟ್ಟ ಇಂಡಿಯಾದ ಸಮಾಜದ ಚಾರಿತ್ರಿಕ ಬೆಳವಣಿಗೆಯನ್ನು ಅಂಬೇಡ್ಕರ್‌ರವರಷ್ಟು ವಸ್ತುನಿಷ್ಠವಾಗಿ ವಿವರಿಸಿದ ಸಮಾಜ ಶಾಸ್ತ್ರಜ್ಞರಿಲ್ಲ. ಜೊತೆಗೆ, ಸಾವಿರಾರು ವರ್ಷಗಳ ವೈಚಾರಿಕ ನಡೆಗೆ ಇದೆ ಎಂದುಕೊಳ್ಳುವ ಧರ್ಮವೊಂದನ್ನು ಎದುರಿಗೆ ನಿಲ್ಲಿಸಿ ಗಟ್ಟಿದನಿಯಲ್ಲಿ ಪ್ರಶ್ನೆ ಮಾಡುತ್ತ ನಿರುತ್ತರಗೊಳಿಸಿ ದವರು ಸಹ ವಿರಳವೆ. ಧರ್ಮ ಮತ್ತು ಪರಂಪರೆಯ ಕುರಿತ ಈ ಬಗೆಯ ವೈಚಾರಿಕ ಪ್ರತಿರೋಧ ಅಂಬೇಡ್ಕರ್ ವಾದದ ಬಹುದೊಡ್ಡ ಹೆಚ್ಚುಗಾರಿಕೆ ಹೇಗೋ ಅದರ ಮಿತಿಯೂ ಹೌದು. ಹೆಚ್ಚುಗಾರಿಕೆ ಯಾವುದೆಂದರೆ, ಪರಂಪರೆಯೊಂದರ ಭಾಗವಾಗಿ ಬದುಕುತ್ತಲೇ ಅದರ ಚಾರಿತ್ರಿಕ ಅನ್ಯಾಯಗಳ ವಿರುದ್ಧ ಬಂಡೆದ್ದು ಸೆಣಸಾಡಲು ಸಿದ್ಧವಾಗುವುದು. ಮತ್ತು ಈ ಬಗೆಯ ಸಿದ್ಧತೆಯು ವರ್ತಮಾನದ ಚಲನೆಗಳನ್ನು ಗಮನಿಸಿದೆ ಮತ್ತು ಸಮಕಾಲೀನ ವೈರಿಯ ಸ್ವರೂಪವನ್ನು ಅರಿಯದೆ ಯುದ್ಧ ಮಾಡಲು ಪುರಾತನ ಆಯುಧಗಳನ್ನು ಆಯ್ಕೆ ಮಾಡಿಕೊಳ್ಳುವುದು ಮಾತ್ರ ವಿಪರ್ಯಾಸದ ಸಂಗತಿ

ಆದಿವಾಸಿಗಳ ಮತ್ತು ಅಸ್ಪೃಶ್ಯರ ವರ್ತಮಾನದ ಹಸಿವು ಮತ್ತು ಅಸಹಾಯಕತೆಗಳಿಗೆ ಚರಿತ್ರೆಯಲ್ಲಿ ಕಾರಣ ಹುಡುಕುವ ಪ್ರಖರ ವೈಚಾರಿಕತೆ, ತನ್ನ ಸಮಕಾಲೀನ ಬದುಕಿನ ಸಮಸ್ಯೆಗಳಿಗೆ ಮತ್ತದೇ ಧಾರ್ಮಿಕ ಚೌಕಟ್ಟಿನೊಳಗೆ ಪರಿಹಾರ ಕಂಡುಕೊಳ್ಳಲು ಪ್ರೇರೇಪಿಸುತ್ತದೆ. ಅಂಬೇಡ್ಕರ್ ತಾನು ಪ್ರತಿನಿಧಿಸುವ ಸಮುದಾಯದ ನಿಕೃಷ್ಟನ ಸ್ಥಿತಿಗತಿಯು ಪೌರಾಣಿಕ ಮತ್ತು ಚಾರಿತ್ರಿಕ ಸಂದರ್ಭದಲ್ಲಿ ಹಾದು ಬಂದ ರೀತಿಯನ್ನು ಅದ್ಭುತವಾಗಿ ವಿವರಿಸುತ್ತಾರೆ. ಚರಿತ್ರೆಯ ಆಯಾ ಕಾಲಘಟ್ಟದ ಉತ್ಪಾದನಾ ಸಂಬಂಧಗಳ ಕುರಿತು ವಿವರಿಸುವಾಗ ಮಾರ್ಕ್ಸ್‌ನ ಪರೋಕ್ಷ ಸಹಾಯ ಪಡೆಯುವ ಅಂಬೇಡ್ಕರ್, ವರ್ತಮಾನಕ್ಕೆ ಬರುತ್ತಲೇ ತಮ್ಮ ಸಮಕಾಲೀನ ಸಂದರ್ಭ ಎದುರಿಸುವ ಪ್ರಶ್ನೆಗಳಿಗೆ ನಿರುತ್ತರರಾಗುತ್ತಾರೆ. ಭಾರತದ ಸಮಾಜದಲ್ಲಿ ಅಮೂಲಾಗ್ರ ಬದಲಾವಣೆಯನ್ನು ಬಯಸಿದ್ದ ಅಂಬೇಡ್ಕರ್ ಅಂತಿಮವಾಗಿ ಸ್ವಾತಂತ್ರ್ಯಾನಂತರ ಸಂಸದೀಯ ಪ್ರಜಾಪ್ರಭುತ್ವವನ್ನು ಒಪ್ಪಿದ್ದು ಮತ್ತು ಬೌದ್ಧ ಧರ್ಮಕ್ಕೆ ಮತಾಂತರಗೊಂಡದ್ದು ಮೇಲಿನ ವಾದಕ್ಕೆ ಪೂರಕವಾಗಿದೆ. ವರ್ತಮಾನದಲ್ಲಿ ಅಂಬೇಡ್ಕರ್ ದಲಿತರ ಬದುಕಲ್ಲಿ ಸಂಭವಿಸುವ ಯಾವ ಅವಮಾನಗಳನ್ನೂ ಸಹಿಸುವಂತವರಾಗಿರಲಿಲ್ಲ. ದಲಿತನೊಬ್ಬ ಹೆಮ್ಮೆಯಿಂದ ಹೇಳಿಕೊಳ್ಳುವಂತಹ ಯಾವ ಘಟನೆಗಳೂ ಅವನ ನಿತ್ಯದ ಬದುಕಲ್ಲಿ ಸಂಭವಿಸುವಂತಿಲ್ಲ. ದಲಿತರ ಸಾಮಾಜಿಕ ಘನತೆಯನ್ನು ಹೆಚ್ಚಿಸುವ ಯಾವ ಆರ್ಥಿಕ ಮೂಲಗಳೂ ಅವರಿಗೆ ದಕ್ಕುತ್ತಿಲ್ಲ ಎಂಬುದನ್ನು ಅಂಬೇಡ್ಕರ್ ಅರಿತವರಾಗಿದ್ದರು. ಹಳ್ಳಿಗಳು ಫ್ಯೂಡಲಿಸಂ ಅನ್ನು ಸಾಕುವ ಕಾರ್ಯಾಗಾರಗಳೆಂಬ ಕಾರಣಕ್ಕಾಗಿಯೇ ಆಧುನಿಕ ನಾಗರಿಕತೆಯನ್ನು ಮೋಹಿಸುವ ಅಂಬೇಡ್ಕರ್, ಬಂಡವಾಳಶಾಹಿ ಪ್ರಣೀತ ಉತ್ಪಾದನಾ ವ್ಯವಸ್ಥೆಯಲ್ಲಿ ಶೋಷಿತರ ಬಿಡುಗಡೆಗೆ ದಾರಿಗಳನ್ನು ಹುಡುಕಲು ಯತ್ನಿಸುತ್ತಾರೆ. ಆಧುನಿಕತೆಯೆಂಬುದು ಬಂಡವಾಳಶಾಹಿ ವ್ಯವಸ್ಥೆಯ ಉಪ ಉತ್ಪನ್ನ, ಈ ಆಧುನಿಕತೆಯಿಂದ ಲಭ್ಯವಾಗುವ ಅವಕಾಶಗಳು ಶೋಷಿತರಿಗೆ ವ್ಯಕ್ತಿಗತವಾಗಿ ಸಿಗುತ್ತಿರುವ ಆಕಸ್ಮಿಕ ಕೊಡುಗೆಗಳೆಂದು ಅಂಬೇಡ್ಕರ್ ಭಾವಿಸುವುದು ಕಡಿಮೆ. ಹೀಗಿದ್ದ ದಲಿತರ ವರ್ತಮಾನಕ್ಕೆ ಹಿಂದೂ ಧರ್ಮ ಸಾಕಿಕೊಂಡು ಬಂದ 'ಪರಂಪರೆಯೇ' ಕಾರಣ ಎಂದು ಅಂಬೇಡ್ಕರ್ ಭಾವಿಸಿದ್ದರು.

ಧರ್ಮವನ್ನುವುದು ಅಲೌಕಿಕ ಆಚರಣೆಗಳ, ಅರ್ಥವಾಗದ ಶ್ಲೋಕ ನುಡಿಗಟ್ಟುಗಳಿಂದ ಕೂಡಿದ, ಶೂನ್ಯಕ್ಕೆ ಸಂಬಂಧಿಸಿದ ವಿಷಯವಲ್ಲ. ಧರ್ಮ ಮನುಷ್ಯನಿಗೆ ಸಂಬಂಧಿಸಿದ್ದು. ಅದು ಮನುಷ್ಯನ ಕಲ್ಯಾಣಕ್ಕೆ ಮತ್ತು ಮಾನವತೆಯ ನಿರ್ಮಾಣಕ್ಕೆ ಸಂಬಂಧಿಸಿದ್ದು ಎಂಬುದು ಅಂಬೇಡ್ಕರ್‌ವಾದದ ಬಹಳ ಮುಖ್ಯವಾದ ತಿರುಳುಗಳಲ್ಲೊಂದು ಅದಕ್ಕೆ ಅಂಬೇಡ್ಕರ್ "ಧರ್ಮವನ್ನು ಸ್ವೀಕರಿಸಿ ಬದುಕುವ ವ್ಯಕ್ತಿಗೆ ಈ ಧರ್ಮದಿಂದ ಸಮಾಜಕ್ಕೆ ಎಷ್ಟರ ಮಟ್ಟಿಗೆ ಕಲ್ಯಾಣ ಸಾಧನೆಯಾಗಿದೆ ಎಂದು ಪ್ರಶ್ನಿಸುವ ಹಕ್ಕು ಇರಬೇಕಾದದು ಅಗತ್ಯ" ಎನ್ನುತ್ತಾರೆ.



ಭಾರತದ ದಂಗೆಯ ಪ್ರವೃತ್ತಿಯ ವೈಚಾರಿಕ ಚಳುವಳಿಗಳಿಗೆ ಮೊದಲು ಮುಖಾಮುಖಿಯಾಗುವುದು ಪರಂಪರೆಯಲ್ಲಿನ ವಿಕಾರ ಆಕೃತಿಗಳು. ಆಧುನಿಕಪೂರ್ವ ಇಂಡಿಯಾದ ಸಾಮಾಜಿಕ ಸ್ಥಿತಿಯು, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬದಲಾಗುವ ಪರಿಯನ್ನು ಅರ್ಥಮಾಡಿಕೊಳ್ಳಲು ಬೇರೆಯದೇ ಆದ ರಾಜಕೀಯ ಸಿದ್ಧಾಂತ ಅವಶ್ಯವಾಗಿತ್ತು. ಆದರೆ ಅವರ ಬದುಕಿನ ಕಡೆಯ ಘಟ್ಟದಲ್ಲಿ, ಅಂಬೇಡ್ಕರ್ ಸಂಸದೀಯ ಪ್ರಜಾಪ್ರಭುತ್ವ ಮತ್ತು ಬೌದ್ಧ ಧರ್ಮವನ್ನು ಅಂತಿಮವಾಗಿ ಆಯ್ಕೆ ಮಾಡಿಕೊಂಡರು. ಬೌದ್ಧ ಧರ್ಮದ ಅವರ ಆಯ್ಕೆಯು ಅವರ ಚಾರಿತ್ರಿಕ ಮತ್ತು ಸಮಕಾಲೀನ ಹಿಂದೂ ಧರ್ಮದ ಸಮರ್ಥಕರನ್ನು ಸೈದ್ಧಾಂತಿಕವಾಗಿ ಮಣಿಸಿತು. ಆದರೆ ಅವರು ನಂಬಿದ ರಾಜಕೀಯ ಸಿದ್ಧಾಂತವು ವರ್ತಮಾನದ, ಆಧುನಿಕ ತರಾವರಿ ಶತ್ರುಗಳನ್ನು ಸೋಲಿಸಲು ಮತ್ತು ಎಲ್ಲ ಶೋಷಿತರ ದನಿಗಳನ್ನು ಹುರಿಗೊಳಿಸಲು ವಿಫಲವಾಯಿತು. ಕಾರಣ ಅಂಬೇಡ್ಕರ್‌ಗೆ ಸಹಜವಾಗಿಯೇ ಮೊದಲ ಶತ್ರುವಾಗಿದ್ದು ಹಿಂದೂಧರ್ಮ. ಆನಂತರ ಈ ಧರ್ಮವನ್ನು ರಾಜಕೀಯವಾಗಿ ಪೋಷಿಸಲು ಹೆಣಗುತ್ತಿದ್ದ ಕಾಂಗ್ರೆಸ್ ಪಕ್ಷ ಮತ್ತು ಈ ಧರ್ಮಕ್ಕೆ ಹಸುವಿನ ಮುಖವಾಡ ತೊಡಿಸಿ ಸೈದ್ಧಾಂತಿಕವಾಗಿ ಸಮರ್ಥಿಸಲು ಯತ್ನಿಸುತ್ತಿದ್ದ ಗಾಂಧೀಜಿಯವರು. ಅಂಬೇಡ್ಕರ್ ಈ ಮೂರೂ ಶತ್ರುಗಳನ್ನು ತಮ್ಮ ಜೀವಮಾನವಿಡೀ ಪ್ರತಿರೋಧಿಸುತ್ತಲೇ ಬಂದರು. ಅವರ ಬಹುಪಾಲು ಬರವಣಿಗೆಯನ್ನು ಈ ಮೂರು ಸಂಗತಿಗಳೇ ಆಕ್ರಮಿಸಿಕೊಂಡಿವೆ. □

ಹೊನ್ನಿನ ಹಂದರದಲ್ಲಿ
ಸುಂದರ ಕರ್ನಾಟಕ-

ಕರುನಾಡ ಸಿರಿನುಡಿ-ಕನ್ನಡ
ಕಸ್ತೂರಿ ಪರಿಮಳದ ಕುಡಿ-ಕನ್ನಡ ನುಡಿ
ಹಾಲ್ಜೇನಿನ ಮಧುರ ಝರಿ-ಕನ್ನಡ ನಾಣ್ಣುಡಿ

ಸುಮಾರು ೨೦೦೦ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ, ಸಾಹಿತ್ಯ ಅನನ್ಯ ಮತ್ತು ಅನುಕರಣೀಯ. ಇಂದು ಕೂಡ ಕರ್ನಾಟಕ ಸಮಗ್ರ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಆಟೋಮೊಬೈಲ್ ಉದ್ಯಮ, ಸಿದ್ಧ ಉಡುಪು, ಆಭರಣಗಳು, ಕ್ರೀಡೆ, ಪುಷ್ಪೋದ್ಯಮದಂತಹ ಪ್ರಮುಖ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿಯೂ ಶ್ಲಾಘನೀಯ, ಕರ್ನಾಟಕ ಭಾರತಕ್ಕಷ್ಟೇ ಮಾತ್ರವಲ್ಲ ಇಡೀ ವಿಶ್ವಕ್ಕೆ ಮಾದರಿ

ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯನಾಡಿಗೆ..... ಈಗ
ಸುವರ್ಣ ಸಂಭ್ರಮ

ಕರ್ನಾಟಕ ವಾರ್ತೆ
Karnataka Information

ಸುವರ್ಣ ಕರ್ನಾಟಕದ ವರ್ಷ:೨೦೦೬

ದಲಿತ ಕ್ಯಾಪಿಟಲಿಸ್ಟ್ ಎನ್ನೋದು ವಿರೋಧಾಭಾಸ!?

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ದಲಿತ್ ಡೈರಿ

ದಲಿತ ಕ್ಯಾಪಿಟಲಿಸಂ ಎನ್ನೋ ವಿಷಯದ ಕುರಿತು ತಲ್ಲಣಗೊಂಡ ದಲಿತೇತರರು ದೆಹಲಿಯಲ್ಲಿ ಅನೇಕರಿದ್ದಾರೆ. ಅವರಲ್ಲಿ ಅನೇಕ ಮಂದಿ ದಲಿತರು ದೆಹಲಿಯಲ್ಲಿ ಸೂಟು-ಬೂಟು ಹಾಕಿ ನಡೆದಾಡುವುದನ್ನು ಸಹಿಸರು. ಇದು ನಿಜಕ್ಕೂ ಖುಷಿಯ ಸಂಗತಿಯೇ ಸರಿ. ಆದರೆ, ದೆಹಲಿಯ ಕೆಲವು ದಲಿತೇತರರಲ್ಲಿ ಆ ಸೂಟು-ಬೂಟಿನ ಬಗ್ಗೆ ನಡೆಯುತ್ತಿರುವ ಅಸಹ್ಯ ಕರ ನಡಾವಳಿಯನ್ನು ಸುಲಭವಾಗಿ ವಿವರಿಸಿ ಕೊಳ್ಳಬಹುದಾಗಿದೆ. ಈ ಚರ್ಚೆ ನಡೆಯುತ್ತಿರುವಾಗಲೇ 'ದಲಿತ ಕ್ಯಾಪಿಟ ಲಿಸಂ' ಬಗ್ಗೆಯೂ ಸಹ ವಿಚಿತ್ರ ನಡಾವಳಿಯನ್ನು ಕಾಣಬಹುದಾಗಿದೆ. ಕಾರಣ ಅದೂ ಸಹ ಒಂದು ದೊಡ್ಡ ದಲಿತೇತರ ಗುಂಪನ್ನು ಸಿಟ್ಟಿಗೆಬ್ಬಿಸಿದೆ.

ಅನು: ಡಿ.ದಾ.ಜಿ

"ಇದು ನಿಜವೇ" ಎಂದು ತನ್ನ ವಿದ್ವತ್ ಮತ್ತು ಮಾನವೀಯತೆಗೆ ಹೆಸರುವಾಸಿಯಾದ ಭಾರತೀಯ ಉದ್ಯಮಿಯೊಬ್ಬ ಅರಚಿಕೊಂಡ. "ಹೌದಪ್ಪ... ಹೌದು. ಅಸಹ್ಯವೆನಿಸುವುದಾದರೂ ಅದು ನಿಜವೇ" ಎಂದು ಪ್ರತ್ಯುತ್ತರ ನೀಡಿದ ಮತ್ತೊಬ್ಬ ನುರಿತ ಉದ್ಯಮಿ ಮತ್ತು ಪರೋಪಕಾರಿ ವ್ಯಕ್ತಿ. ಆತನ ಕಣ್ಣುಗಳು ಊದಿಕೊಂಡಿದ್ದು ಆತ ಹಿಂದಿನ ರಾತ್ರಿ ತುಂಬಾ ಓದುತ್ತಿದ್ದನೆಂದೇನೂ ಅಲ್ಲ. ಬದಲು ಪ್ರಲಾಪಿಸಿ ಅತ್ತಿದ್ದ.

"ಆತ ನಾಚಿಕೆ ಇಲ್ಲದಂತೆ ವರ್ತಿಸುವುದಾದರೂ ಹೇಗೆ?" ಎಂದು ಆ ಮಾನವತಾವಾದಿ ಬೆಪ್ಪು ತಕ್ಕಡಿಯಂತೆ ತನ್ನ ಗುಲಾಬಿ ಮೊಗದಲ್ಲಿ ತೋಡಿಕೊಂಡ. "ಅಲ್ಲಾ... ಆತ ತನ್ನ ದಲಿತ ಪರಂಪರೆಯನ್ನು ಮರೆತು ರೋಲ್ಸ್- ರಾಯ್ಸ್ ಎಇ ೩೦೦೭ರ ಇಂಜಿನ್‌ಗಳ ಎಂಬ್ರಾಯರ್ ಲೀಗಸಿ ಎಕ್ಸಿಕ್ಯುಟಿವ್ ಜೆಟ್ ಖರೀದಿಸುವುದಾದರೂ ಹೇಗೆ?" ಎಂದು ಗಂಟಲು ಕಟ್ಟಿಕೊಂಡಂತೆ ಮತ್ತೆ ಉಸಿರಿದ ಮಾನವತಾವಾದಿ.

"ಕಳೆದ ಸಂಜೆ ನನಗೆ ಆಹ್ವಾನ ದೊರೆತ ಕ್ಷಣದಿಂದಲೇ ಅದು ನನ್ನನ್ನು ಆತಂಕಕ್ಕೀಡು ಮಾಡಿದೆ. ಮತ್ತಷ್ಟು ದುರದುಷ್ಟಕರ ಸಂಗತಿಯೆಂದರೆ ಹೊಸದಾಗಿ ಖಾಸಗೀ ಜೆಟ್ ಖರೀದಿಸಿದಕ್ಕಾಗಿ ಆತ ಔತಣಕೂಟ ಏರ್ಪಡಿಸುತ್ತಿದ್ದಾನಂತೆ" ಎಂದು ದುಃಖಿತನಾದ ಪರೋಪಕಾರಿ ಧ್ವನಿಗೂಡಿಸಿದ.

ಪ್ರಮುಖ ಇಂಗ್ಲಿಷ್ ಪತ್ರಿಕೆಯ ಸಂಪಾದಕನೊಬ್ಬ ಆಗಷ್ಟೆ ಅಲ್ಲಿಗೆ ಬಂದ. ಅಭಿಜಾತ ಮಾರ್ಕ್ಸ್‌ವಾದಿ ಪರಂಪರೆಗೆ ಸೇರಿದ ಆತ ಪ್ರಸಿದ್ಧ ಅಮೆರಿಕಾದ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದಿದ್ದ. ಅಂದರೆ ಆತ ಪ್ರೌಢವ್ಯಕ್ತಿಯೇ ಆಗಿದ್ದ. ಎಂಬ್ರಾಯರ್ ಲೀಗಸಿ ಕಥೆಯಿಂದ ದಂಗು ಬಡಿದವನಾಗಿ ತಾನೇನೋ ಸರಿಯಾದ ಜಾಗಕ್ಕೆ ಬಂದಿಲ್ಲವೆಂಬಂತೆ ನಡೆಯುತ್ತಿದ್ದ ಆತ, "ಇದು ನೈತಿಕ ಪ್ರಶ್ನೆ ತಾನೇ? ಅಥವಾ ಸಾರ್ವಜನಿಕ ವಲಯದಲ್ಲಿ ನೈತಿಕತೆ ಮುಗಿಯಿತೆಂದು ಕಾಣುತ್ತದೆ" ಎಂದು ಸ್ವಿಸ್ ಗ್ಲಾಸ್ ತುಂಬಾ ನೀರು ತುಂಬಿಸಿಕೊಂಡು ಗಲಿಬಿಲಿಗೊಂಡು ಉಸುರುತ್ತಿದ್ದ.

"ಈ ವಿಚಿತ್ರ ಘಟನೆಯು ದಲಿತರನ್ನು ಮತ್ತಷ್ಟು ಹಣದಾಹಿಗಳನ್ನಾಗಿ ಮಾಡುವುದಲ್ಲದೆ, ಅವರಲ್ಲಿ ಅನೇಕರು ಇಂತಹ ವಸ್ತುಗಳನ್ನು ಬಯಸುವಂತೆ ಮಾಡುತ್ತದೆಯಲ್ಲ" ಎಂದು ಆ ಸಂಪಾದಕ ವ್ಯಥೆಗೊಂಡ. "ಮಿಲಿಯನ್‌ಗಟ್ಟಲೆ ದಲಿತರು ರೇಷನ್ ಕಾರ್ಡು ಇಲ್ಲದಿರುವಾಗ ಈ ಹೃದಯಹೀನ ದಲಿತ ಒಂದು ಖಾಸಗಿ ಜೆಟ್ ಖರೀದಿಸುವುದಾದರೂ ಏತಕ್ಕೆ?" ಎಂದು ಆ ಕ್ರಾಂತಿಕಾರಿ ತನ್ನೊಳಗೇ ಚಕಿತನಾಗಿದ್ದ. ಆಕೆಯ ಕೂದಲಲ್ಲಿ ಇನ್ನೂ ಶಾಂಪೂ ಮೆತ್ತಿಕೊಂಡಿರುವುದನ್ನು ಮರೆತಂತೆ ಪ್ರಸಿದ್ಧ ಕಾದಂಬರಿಗಾರ್ತಿಯೊಬ್ಬಳು ಮಾತನಾಡಲಾರದವಳಾಗಿದ್ದಳು. ಆಕೆ ಬಂದದ್ದೇ ಹೊಸದಾಗಿ ಆಮದಾದ ಫ್ರೆಂಚ್ ಸೋಫಾದಲ್ಲಿ ಬಿದ್ದುಕೊಂಡಳು.

ಸಂಪಾದಕ ಸ್ನೇಹಿತನ ಸಹಾಯದಿಂದ ಆಕೆ ನಿಧಾನವಾಗಿ ಚೇತರಿಸಿಕೊಂಡು ಯಥಾಸ್ಥಿಗೆ ಬಂದು ಕಳೆದ ಸಂಜೆಯಿಂದ ಆಕೆಗಾದ ದುಗುಡಗಳನ್ನೆಲ್ಲಾ ಹೊರಹಾಕಲಾರಂಭಿಸಿದಳು. "ಆತ ದಲಿತನೆಂದು ಗೊತ್ತಾದ ಮೇಲೆಯಷ್ಟೆ ನಾನು ಆತನಿಗೆ ಒಂದಷ್ಟು ಮಂದಿ ಸಭಿಕರನ್ನು ಒಟ್ಟುಗೂಡಿಸಿದ್ದು" ಇದು ಆಕೆಯ ಮೊದಲ ಮಾತುಗಳು. "ಎಷ್ಟು ವಿಚಿತ್ರವೆಂದರೆ ಆತ ದಲಿತನೆಂದುಕೊಂಡು ಸೂಟು-ಬೂಟಿನಲ್ಲಿ ಕಾಣಿಸಿಕೊಂಡ. ನಾನು ಅನೇಕ ದಲಿತ ಕೇರಿಗಳಿಗೆ ಭೇಟಿ ನೀಡಿದ್ದೇನೆ ಮತ್ತು ಸಮುದಾಯವನ್ನು ಚೆನ್ನಾಗಿ ಬಲ್ಲೆ" ಎನ್ನುತ್ತಾ ನಯಾಗರ ಜಲಪಾತದಂತೆ ಸುರಿಯುತ್ತಿದ್ದ ತನ್ನ ಕಣ್ಣೀರನ್ನು ಗಮನಿಸದೆ ಮುಂದುವರೆದಿದ್ದಳು.

"ನಾನೆಂದೂ ಒಂದೇ ಒಂದು ಸ್ಪೋರ್ಟ್ಸ್ ಶೂಗಳನ್ನು ಆ ಕೇರಿಗಳಲ್ಲಿ ಕಂಡಿಲ್ಲ. ಆದರೆ ಈ ವ್ಯಕ್ತಿ ಆ ವೈಭವೋಪೇತ ದಲಿತ ಪರಂಪರೆಯನ್ನು ಬಿಟ್ಟು ಬೂಟುಗಳನ್ನು ಧರಿಸಿ ಬಂದಿದ್ದಾನೆ.

"ದಲಿತ ಹುಡುಗರು ಅದ್ಭುತ ಶೂ ಪಾಲಿಶ್ ಮಾಡುತ್ತಾರೆ. ಪಾಲಿಶ್ ಕಲೆಯಲ್ಲಿ ಪಳಗಿರುವ ಈ ಹುಡುಗರು ಕೇವಲ ಚಿಂದಿ ಚಪ್ಪಲಿ ಧರಿಸುತ್ತಾರೆ. ಅಂಥ ಶ್ರೇಷ್ಠ ಸಾಂಸ್ಕೃತಿಕ ಪರಂಪರೆಯನ್ನು ಬಿಟ್ಟು ಈ ವ್ಯಕ್ತಿ ನೀಲಿ ವಜ್ರದಂಥ ಹೊಳೆಯುತ್ತಿರುವ ಬೂಟುಗಳನ್ನು ಧರಿಸಿದ್ದಾನೆ" ಎಂದು ಆಘಾತಗೊಂಡ ಕಾದಂಬರಿಗಾರ್ತಿ ಹೇಳಿದಳು. "ಫ್ರೆಂಡ್ಸ್ ನನಗಿದು ನೈತಿಕ ಪ್ರಶ್ನೆಯಾಗಿದೆ. ಈ ನೀತಿಗೆಟ್ಟ ದಲಿತ ತನ್ನ ಹೆಂಡತಿಯೊಡನೆ ಬಂದಿದ್ದಾನೆ. ಆತನ ಹೆಂಡತಿ ರೇಷ್ಮೆ ಸೀರೆಯನ್ನು ತೊಟ್ಟಿದ್ದಾಳೆ" ಹೀಗೆ ಆಕೆಯ ಆಕ್ರೋಶ ವ್ಯಕ್ತಗೊಳ್ಳುತ್ತಿತ್ತು.

"ನಮ್ಮ ದಲಿತ ಮಹಿಳೆಯರು ಮತ್ತು ಪುರುಷರು ಗಟ್ಟಿ ಜನ. ಕಷ್ಟಪಟ್ಟು ದುಡಿಯುತ್ತಾರಾದರೂ ಸರಳ ಜೀವಿಗಳು. ಈ ಸರಳತೆಯಲ್ಲಿ ಅವರು ಯುಗಗಳಿಂದಲೂ ಜೀವಿಸುತ್ತಲೇ ಬಂದಿದ್ದಾರೆ. ಆದರೆ ಈ ದಲಿತನು ಎಲ್ಲ ದಲಿತ ಸಂಸ್ಕೃತಿ ಮತ್ತು ನಡಾವಳಿಯನ್ನು ಸರ್ವನಾಶ ಮಾಡ ಹೊರಟಿದ್ದಾನೆ" ಎಂದು ಸಿಟ್ಟಾಗುತ್ತಾ, ದಲಿತೇತರ ಸಭಿಕರಿಗೆ ಹೀಗೆಂದು ಎಚ್ಚರಿಸಿದಳು, "ನಿಮ್ಮ ಉಸಿರನ್ನು ಕ್ಷಣ ಹಿಡಿದುಕೊಳ್ಳಿ, ಆತನ ಮಗಳೂ ಸಹ ಆತನೊಡನೆ ಬಂದಿದ್ದಾಳೆ. ಮಿಲಿಯನ್‌ಗಟ್ಟಲೆ ದಲಿತ ಮಕ್ಕಳು ಅನಕ್ಷರಸ್ತರಾಗಿರುವಾಗ ಈಕೆ ಇತರರಂತೆ ಇಂಗ್ಲಿಷ್ ಮಾತ್ನಾಡ್ತಾಳೆ".

"ಇದು ಸಾಲದೆಂಬಂತೆ ಮಿಲಿಯನ್‌ಗಟ್ಟಲೆ ದಲಿತರು ಊಟಕ್ಕಿಲ್ಲದಿರುವಾಗ ಆಕೆ ಚೂಯಿಂಗ್ ಗಮ್ ತಿನ್ನುತ್ತಿದ್ದಾಳೆ!" ಎಂದು ಹೇಳುತ್ತಾ ಮತ್ತೊಮ್ಮೆ ಕಾದಂಬರಿಗಾರ್ತಿ ಸೋಫಾ ಮೇಲೆ ಸುಸ್ತಾಗಿ ಕುಸಿದಳು.

"ಎಲ್ಲರಿಗೂ ರಾಮ್-ರಾಮ್" ಎಂದು ವಂದಿಸುತ್ತಾ ಹಿರಿಯನೊಬ್ಬ ಹಿಂದು ಗ್ರಂಥಗಳನ್ನು ಕೈಯಲ್ಲಿ ಹಿಡಿದು ಪ್ರವೇಶಿಸಿ, "ಇದು ನಮ್ಮ ಧರ್ಮಕ್ಕೆ ಭಯಾನಕವಾದದ್ದು" ಎಂದು ಸಿಟ್ಟಾಗಿ ನುಡಿದ ಆ ಸಂತ.

"ಹೇ ರಾಮ್... ದಲಿತರೇಕೆ ತಮ್ಮ ಖಾಸಗೀ ಜೆಟ್‌ಗಳನ್ನು, ಸೂಟು ಬೂಟುಗಳನ್ನು ಹಾಗೂ ಆ ಹೆಣ್ಣು ಮಗಳು ಇಂಗ್ಲಿಷ್ ಮಾತನಾಡುವುದನ್ನು

ಪ್ರಶ್ನೆ ಮಾಡಬೇಕು" ಎಂದು ಬಿಕ್ಕಟ್ಟನ್ನು ಅರಿತವನಂತೆ ವೇದಾಂತ ಮಾತನಾಡಲಾರಂಭಿಸಿದ:

ಹೀಗೆ ಆ ಅದ್ಭುತ ಸಭೆಯು ಯಾವುದೇ ನಿರ್ಣಯವಿಲ್ಲದೆ ಕೊನೆಗೊಂಡಿತು. ಆ ಅಮೆರಿಕಾದ ದಲಿತ ಪ್ರಾಧ್ಯಾಪಕ ದಿ ಫ್ಲಯಿಂಗ್ ದಲಿತ್ ಎಂಬ ಕಾದಂಬರಿಯನ್ನು ಬರೆದು ಬೆಳೆಯುತ್ತಿರುವ ದಲಿತ ಕ್ಯಾಪಿಟಲಿಸಂ ಅನ್ನು ಹೊರ ಹಾಕಿದ್ದೇ ಬಿಕ್ಕಟ್ಟನ್ನು ಸೃಷ್ಟಿಸಿತು.

ಈ ಕಾದಂಬರಿಯ ವಿಷಯದಿಂದ ತಲ್ಲಣಗೊಂಡ ದಲಿತೇತರ ಪ್ರಗತೀಪರ ಬುದ್ಧಿಜೀವಿಗಳು ಒಂದು ಸೇರಿ ಪರಿಸ್ಥಿತಿಯನ್ನು ಚರ್ಚಿಸುತ್ತಿದ್ದರು. ಅವರಿಗೆಲ್ಲಾ ದಲಿತ ಕ್ಯಾಪಿಟಲಿಸಂ ಎಂಬ ಸಂಗತಿಯೇ ಮಾರ್ಕ್ಸ್‌ವಾದ ಮತ್ತು ಹಿಂದೂ ಧರ್ಮದ ಮೂಲಭೂತ ಸತ್ಯಗಳಿಗೆ ವಿರುದ್ಧವಾಗಿತ್ತು.

ಮನುವಿನ ಆಕ್ರೋಶ

ಜನವರಿ ೪/೧೯೨೮ರಲ್ಲಿ ಟೈಮ್ಸ್ ಆಫ್ ಇಂಡಿಯ ಈ ಕೆಳಗಿನ ಘಟನೆಯನ್ನು ವರದಿ ಮಾಡಿತ್ತು:

ಇಂದೋರ್‌ನ ೧೫ ಹಳ್ಳಿಗಳಲ್ಲಿ ಬಲಾಯಾ ಎಂಬ ಅಸ್ಪೃಶ್ಯ ಸಮುದಾಯದ ಮೇಲೆ ರಜಪೂತರು, ಬ್ರಾಹ್ಮಣರು ಮತ್ತು ಪಟೇಲರು ಸೇರಿ ಈ ಕೆಳಗಿನ ನಿರ್ಣಯಗಳನ್ನು ಮಂಡಿಸಿದ್ದರು:

- ಬಲಾಯಾದವರು ಚಿನ್ನದ ನೂಲಿನ ಮುಂಡಾಸು ಧರಿಸಬಾರದು.
- ಅವರು ಬಣ್ಣದ ಶೋಕಿ ಧೋತಿಗಳನ್ನು ತೊಡಬಾರದು.
- **ಆ ಸಮುದಾಯದ** ಹೆಂಗಸರು ಚಿನ್ನ ಮತ್ತು **ಬೆಳ್ಳಿಯ ಆಭರಣಗಳನ್ನು ಹಾಕಿಕೊಳ್ಳಬಾರದು;** ಅವರು **ಶೋಕಿಯ ಜಾಕೆಟ್** ಧರಿಸಬಾರದು (**ಡಾ॥ ಅಂಬೇಡ್ಕರ್**‌ರವರು ತಮ್ಮ ಜಾತಿನಿರ್ಮೂಲನೆ ಕೃತಿಯಲ್ಲಿ **ಉಲ್ಲೇಖಿ**ಸಿದ್ದಾರೆ).

ಫೆಬ್ರವರಿ ೪/೨೦೦೬ ರಂದು ದೈನಿಕ ಭಾಸ್ಕರ ಎಂಬ ಹಿಂದಿ ದಿನ ಪತ್ರಿಕೆಯು ಈ ಕೆಳಗಿನ ಘಟನೆಯನ್ನು ಪ್ರಕಟಿಸಿತ್ತು:

ಶೀರ್ಷಿಕೆ ಹೀಗಿತ್ತು "ದಲಿತ್ ಯುವಕ್ ಕೊಯಾ ಬೂಟ್, ಟೀ ಶರ್ಟ್, ವಾ ಜೀನ್ಸ್ ಪಹನನಾ ಮಂಹಗಾ ಪದಾ" (ಒಬ್ಬ ದಲಿತ ಯುವಕ ಹೊಸ ಬೂಟು, ಟೀ ಶರ್ಟ್, ಜೀನ್ಸ್ ತೊಟ್ಟಿದ್ದಕ್ಕಾಗಿ ಬೆಲೆತೆತ್ತ)

"ರಾಜಸ್ಥಾನದ ಜೋದ್‌ಪುರ ಜಿಲ್ಲೆಯ ಖಾನೋಡ್ ಹಳ್ಳಿಯ ಭಾಗ್ರಮ್ ಮೇಘ್‌ವಾಲ್ ಎಂಬ ದಲಿತ ಯುವಕನನ್ನು ದುಂಗೂರ್ ಸಿಂಗ್ ರಾಜ್ ಪುರೋಹಿತ್ ಎಂಬ ವ್ಯಕ್ತಿ ಥಳಿಸಿದ. ಕಾರಣ ಆತ ಹೊಸ ಬೂಟು, ಟೀ ಶರ್ಟ್, ಜೀನ್ಸ್ ತೊಟ್ಟು ಸನ್ ಗ್ಲಾಸ್ ಹಾಕಿ ಮೆರೆಯುತ್ತಿದ್ದ".

ದಲಿತ ಕ್ಯಾಪಿಟಲಿಸಂ ಎನ್ನೋ ವಿಷಯದ ಕುರಿತು ತಲ್ಲಣಗೊಂಡ ದಲಿತೇತರರು ದೆಹಲಿಯಲ್ಲಿ ಅನೇಕರಿದ್ದಾರೆ. ಅವರಲ್ಲಿ ಅನೇಕ ಮಂದಿ ದಲಿತರು ದೆಹಲಿಯಲ್ಲಿ ಸೂಟು-ಬೂಟು ಹಾಕಿ ನಡೆದಾಡುವುದನ್ನು ಸಹಿಸರು. ಇದು ನಿಜಕ್ಕೂ ಖುಷಿಯ ಸಂಗತಿಯೇ ಸರಿ. ಏಕೆಂದರೆ ನಾವು ೧೯೨೮ರ ಇಂದೋರ್ ಘಟನೆಯನ್ನು ಜೋದ್‌ಪುರ ಘಟನೆಯೊಂದಿಗೆ ಹೋಲಿಸಿ ನೋಡಬಹುದಾಗಿದೆ.

ಆದರೆ, ದೆಹಲಿಯ ಕೆಲವು ದಲಿತೇತರರಲ್ಲಿ ಆ ಸೂಟು-ಬೂಟಿನ ಬಗ್ಗೆ ನಡೆಯುತ್ತಿರುವ ಅಸಹ್ಯಕರ ನಡಾವಳಿಯನ್ನು ಸುಲಭವಾಗಿ ವಿವರಿಸಿಕೊಳ್ಳಬಹುದಾಗಿದೆ.



"ನಿಮ್ಮ ಉಸಿರನ್ನು ಕ್ಷಣ ಹಿಡಿದುಕೊಳ್ಳಿ, ಆತನ ಮಗಳೂ ಸಹ ಆತನೊಡನೆ ಬಂದಿದ್ದಾಳೆ. ಮಿಲಿಯನ್‌ಗಟ್ಟಲೆ ದಲಿತ ಮಕ್ಕಳು ಅನಕ್ಷರಸ್ತರಾಗಿರುವಾಗ ಈಕೆ ಇತರರಂತೆ ಇಂಗ್ಲಿಷ್ ಮಾತ್ನಾಡ್ತಾಳೆ". "ಇದು ಸಾಲದೆಂಬಂತೆ ಮಿಲಿಯನ್ ಗಟ್ಟಲೆ ದಲಿತರು ಊಟಕ್ಕಿಲ್ಲದಿರುವಾಗ ಆಕೆ ಚೂಯಿಂಗ್ ಗಮ್ ತಿನ್ನುತ್ತಿದ್ದಾಳೆ!" ಎಂದು ಹೇಳುತ್ತಾ ಮತ್ತೊಮ್ಮೆ ಕಾದಂಬರಿ ಗಾರ್ತಿ ಸೋಫಾ ಮೇಲೆ ಸುಸ್ತಾಗಿ ಕುಸಿದಳು.

ಈ ಚರ್ಚೆ ನಡೆಯುತ್ತಿರುವಾಗಲೇ ದಲಿತ ಕ್ಯಾಪಿಟಲಿಸಂ ಬಗ್ಗೆಯೂ ಸಹ ವಿಚಿತ್ರ ನಡಾವಳಿಯನ್ನು ಕಾಣಬಹುದಾಗಿದೆ. ಕಾರಣ ಅದೂ ಸಹ ಒಂದು ದೊಡ್ಡ ದಲಿತೇತರ ಗುಂಪನ್ನು ಸಿಟ್ಟಿಗೆಬ್ಬಿಸಿದೆ.

"ಉತ್ತರವು ಚರಿತ್ರಾ ಪುಟಗಳಲ್ಲಿ ಅಡಗಿದೆ" ಎಂದು ನನ್ನ ಸ್ನೇಹಿತ ನಿನ್ನೆ ಸಂಜೆ ನನಗೆ ಹೇಳಿದ. ಆತನ ಪ್ರಕಾರ, "ಡಾ॥ ಕೆ. ಪಿ. ಸಿಂಗ್‌ರ ಆಲೋಚನೆಯಂತೆ ದಲಿತರು ಸೂಟು - ಬೂಟುಗಳಲ್ಲಿ ನಡೆದಾಡುವುದು ಇಂದೋರ್ ಮತ್ತು ಜೋದ್‌ಪುರ್ ಘಟನೆಗಳನ್ನೊಳಗೊಂಡಂತೆ ಇರುವ ಹಲವಾರು ವೈಚಿತ್ರಗಳಿಗೆ ಉತ್ತರವನ್ನೀಯುತ್ತದೆ".

ಯಾವುದೇ ಒಂದು ಐಡಿಯಾದ ಹಿಂದೆ ಕೆಲವು ನಿರ್ದಿಷ್ಟ ಕಾರಣಗಳಿರುತ್ತವೆ. ಉದಾಹರಣೆಗೆ ಬೆಳಕು ಎನ್ನೋ ಐಡಿಯಾ ಕತ್ತಲೆಯ ವಾಸ್ತವತೆಯಲ್ಲಿ ಉದಯಿಸುತ್ತದೆ.

ಹಾಗೆಯೇ ಚಳಿಯ ವಾಸ್ತವತೆಯಲ್ಲಿ ಕಂಬಳಿ ಹುಟ್ಟುತ್ತದೆ. ಮರಳುಗಾಡಿನ ಅನುಭವವು ಒಂಟೆಗಳಿಗೆ ದಾರಿ ಮಾಡಿಕೊಡುತ್ತದೆ.

ಹಾಗಾದರೆ ದಲಿತರು ಸೂಟು-ಬೂಟು ಧರಿಸುದರ ಹಿಂದಿರುವ ಸತ್ಯವಾದರೂ ಏನು? ಡಾ॥ ಕೆ. ಪಿ. ಸಿಂಗ್ ಒಂದೇ ಏಟಿಗೆ ಚರಿತ್ರೆಯನ್ನು ಬಡಿದೆಬ್ಬಿಸಿದ್ದಾರೆ.

ದಲಿತರು ಮತ್ತು ದಲಿತೇತರರ ನಡುವೆ ಚರಿತ್ರೆ ಯುದ್ಧಕ್ಕೂ ನಡೆದಿರುವ ಯುದ್ಧವು ದಲಿತೇತರರ ಪರವಾಗಿ ನಿರ್ಣಯಗೊಂಡಿವೆ. ಆದರೆ ಅದೇ ಚರಿತ್ರೆಯನ್ನು ಈಗ ಮತ್ತೆ ತೆರೆಯಲಾಗಿದೆ. ಈಗದು ದಲಿತರ ಪರವಾಗಿ ನಿರ್ಣಯಗೊಳ್ಳಲಿದೆ.

ಇಂದೋರ್ ಮತ್ತು ಜೋದ್‌ಪುರ ಘಟನೆಗಳ ವಾಸ್ತವದಿಂದಲೇ ಸೂಟು-ಬೂಟಿನ ಆಲೋಚನೆ ಉದಯಿಸಿದ್ದು. ದಲಿತೇತರರಿಗೆ ಸೂಟು-ಬೂಟು ಧರಿಸಿದ ದಲಿತರು ಸಮಸ್ಯೆಯಾಗುತ್ತಾರೆ. ಅದರಂತೆಯೇ ದಲಿತ ಕ್ಯಾಪಿಟಲಿಸಂ ಎನ್ನೋದು ಸಹ ಸಮಸ್ಯೆಯಾಗುತ್ತದೆ.

ಆದ್ದರಿಂದ ದಲಿತೇತರರಿಗೆ ಅಂಥ ಘೋಷಣೆಯನ್ನು ಹುಟ್ಟುಹಾಕಲು ಬಲವಾದ ಕಾರಣಗಳೇನೂ ಇಲ್ಲ. ಆದರೆ ದಲಿತರು ಸೂಟು-ಬೂಟಿನಲ್ಲಿ ಕಾಣಿಸುವುದು ಮತ್ತು ದಲಿತ ಕ್ಯಾಪಿಟಲಿಸಂ ಎನ್ನೋದು ತಕ್ಷಣ ಅವರಿಗೆ ಬಲವಾದ ಕಾರಣಗಳಾಗಿ ತಲ್ಲಣಕ್ಕೊಳಗಾಗುತ್ತಾರೆ.

ಇಂದೋರ್‌ನ ದಲಿತರಿಗೆ ಡ್ರೆಸ್‌ಕೋಡ್ ಅನ್ನು ಹೇರುವಂತೆ ದಲಿತೇತರರಿಗೆ ಯಾರು ಹೇಳಿ ಕೊಟ್ಟರು ಎಂಬ ಪ್ರಶ್ನೆಯು ಒಗಟಾಗಿಯೇ ಉಳಿದುಬಿಡುತ್ತದೆ. ಅಲ್ಲದೆ ದಲಿತನೊಬ್ಬ ಹೊಸ ಡ್ರೆಸ್ ಧರಿಸಿಕೊಂಡನೆಂದು ಆತನನ್ನು ಥಳಿಸಬೇಕೆಂದು ಆ ಪುರೋಹಿತನಿಗೆ ಹೇಳಿ ಕೊಟ್ಟವರು ಯಾರು?

ಒಬ್ಬ ಪುರೋಹಿತ ದಲಿತನೊಬ್ಬನನ್ನು ಥಳಿಸುತ್ತಾನಾದರೆ ಇನ್ನೂ ಅನೇಕರು ಹಾಗೆ ಮಾಡಲು ಯೋಚಿಸಿ, ಹಲವಾರು ಕಾರಣಗಳಿಗಾಗಿ ಹಾಗೆ ಮಾಡಲಾಗಿಲ್ಲವಷ್ಟೆ.

ಇಲ್ಲಿರುವ ಪ್ರಶ್ನೆಯೆಂದರೆ ಇಂದೋರ್‌ನ ದಲಿತೇತರರನ್ನು, ಜೋದ್‌ಪುರ್‌ನ ಪುರೋಹಿತನನ್ನು ಅಥವಾ ದೆಹಲಿಯ ಅನೇಕ ದಲಿತೇತರರನ್ನು ಪ್ರೇರೇಪಿಸಿದ್ದಾದರೂ ಏನು? ಕೆಳಗಿನ ಕೆಲವು ಅಂಶಗಳು ಉತ್ತರ ನೀಡ ಬಹುದು:

- ಚಾಂಡಾಲರು ಮತ್ತು ಸ್ವಪಚಗಳು(ಅಕ್ಷರತಃ ನಾಯಿ ತಿನ್ನುವವರು) ಗ್ರಾಮದಾಚೆ ಜೀವಿಸತಕ್ಕದ್ದು; ಅವರ್‍ಯಾರು ಪಾತ್ರೆಗಳನ್ನು ಬಳಸುವಂತಿಲ್ಲ. ನಾಯಿಗಳು ಮತ್ತು ಕತ್ತೆಗಳು ಮಾತ್ರ ಅವರ ಆಸ್ತಿಯಾಗಿದೆ. (ನಿಯಮ ೫೧)
- ಅವರು (ಚಾಂಡಾಲರು) ಶವಗಳ ಮೇಲಿನ ಉಡುಗೆಯನ್ನು ಧರಿಸಬೇಕು. ಒಡೆದ ಮಡಕೆಯ ಚೂರುಗಳಲ್ಲಿ ಊಟ ಮಾಡಬೇಕು, ಕಬ್ಬಿಣದ ಆಭರಣಗಳನ್ನಷ್ಟೆ ಧರಿಸಬಹುದು, ಮತ್ತು ಅಲೆಮಾರಿಗಳಾಗಿ ಜೀವಿಸತಕ್ಕದ್ದು. (ನಿಯಮ ೫೨) ಮನು ಸಂಹಿತೆ ಅನು: ಮನ್ಮಥನಾಥ್ ದತ್ತ, ಪ್ರಕಟಣೆ ಹೆಚ್‌ಸಿ ದಾಸ್ ಎಲಿಸಿಯಂ ಪ್ರೆಸ್, ಕಲ್ಕತ್ತಾ.

ಈ ಮನು ಸಂಹಿತಾ ಅಥವಾ ಮನುವಿನ ನಿಯಮಗಳು ಎನ್ನೋದು ಹಿಂದೂಧರ್ಮದ ಕಟ್ಟಳೆಗಳೇ ಹೊರತು ಮತ್ತೇನು ಅಲ್ಲ. ವೇದಗಳು, ಪುರಾಣಗಳು, ಮಹಾಭಾರತ ಮತ್ತು ಇತರ ಹಿಂದೂ ಗ್ರಂಥಗಳಿಂದ ಉಲ್ಲೇಖಗಳನ್ನು ನೀಡುವ ಮೂಲಕ ಮನು ತನ್ನ ನಿಯಮಗಳನ್ನು ಸಮರ್ಥಿಸಿಕೊಳ್ಳುತ್ತಾನೆ. ಹಿಂದೂ ಸಮಾಜ ಮನುವಿನ ಕಾನೂನಿನಂತೆ ತನ್ನ ನಡಾವಳಿಯನ್ನು ನಿರೂಪಿಸಿಕೊಳ್ಳುತ್ತದೆ. ಈ ಮನುವಿನ ನಿಯಮಗಳನ್ನು ಹೊರತೆಗೆದು ಹಿಂದೂ ಧರ್ಮವನ್ನು ಗುರುತಿಸಲಾಗದು.

ಮೇಲಿನ ನಿರೂಪಣೆಯನ್ನು ಒಪ್ಪಿಕೊಳ್ಳುವುದಾದರೆ ದಲಿತರು ಸೂಟು-ಬೂಟು ಧರಿಸುವ ಮತ್ತು ದಲಿತ ಕ್ಯಾಪಿಟಲಿಸಂ ಐಡಿಯಾಗಳನ್ನೂ ಸಹ ಒಪ್ಪಬೇಕಾಗುತ್ತದೆ. ಏಕೆಂದರೆ ಈ ಐಡಿಯಾಗಳು ದಲಿತರಿಗೆ ಘನತೆಯನ್ನು ಮತ್ತು ಸಂತೋಷವನ್ನು ತಿರಸ್ಕರಿಸುವ ಹಿಂದೂ ಧರ್ಮದ ಮರ್ಮಸ್ಥಾನಕ್ಕೆ ಎದಿರೇಟನ್ನು ನೀಡುತ್ತದೆ.

ಬಾಬಾ ಸಾಹೇಬ್ ಅಂಬೇಡ್ಕರ್ ಸೂಟು-ಬೂಟಿನ ಸಂಕೇತವನ್ನು ಚೆನ್ನಾಗಿ ಅರ್ಥೈಸಿದ್ದರಲ್ಲದೆ ಅದನ್ನು ರೂಢಿಯಲ್ಲಿ ಅಳವಡಿಸಿಕೊಂಡಿದ್ದರು. ಹಿಂದೂ ಧರ್ಮವನ್ನು ಸರ್ವನಾಶ ಮಾಡುವ ಈ ಸಂಕೇತವನ್ನು ನಾವು ಅರ್ಥೈಸಲು ೫೦ ವರ್ಷಗಳನ್ನು ತೆಗೆದುಕೊಳ್ಳಬೇಕಾಯಿತು.

ಕೊಡೆಯ ರೂಪಕ

ದಲಿತ ಕ್ಯಾಪಿಟಲಿಸಂನ ಬಗ್ಗೆ ಡಾ॥ ಕೆ.ಪಿ.ಸಿಂಗ್ ನಡೆಸಬೇಕೆಂದಿರುವ ಜಾಗತಿಕ ದಲಿತ ಸಮ್ಮೇಳನ ನನ್ನನ್ನು ಉಲ್ಲಾಸಿತನನ್ನಾಗಿಸಿದೆ. ಆದರೆ ಅಕ್ಟೋಬರ್‌ನಲ್ಲಿ ನಡೆಯುವ ಆ ಸಮಾವೇಶಕ್ಕೆ ಕೊಡೆಗಳನ್ನು ಹಿಡಿದು ದಲಿತರು ಬರುವುದು ಕುತೂಹಲಕಾರಿಯಾದುದು.

ಈ ಹೊಸ ಸಂಕೇತದಿಂದ ಪುಳಕಿತರಾಗಿರುವ ದಲಿತರು ಒಂದೆಡೆಯಾದರೆ, ದಲಿತೇತರರು ಅದರ ಬಗ್ಗೆ ಸಂಶಯಗೊಂಡಿದ್ದಾರೆ. ಕೆಲವರಿಗೆ ಕಪ್ಪು ಕೊಡೆಯ ಸಂಕೇತವೆನ್ನುವುದೇ ಸಿಟ್ಟನ್ನು ತರುವಂತಾಗಿದೆ. ಈ ಎರಡು ಸಮುದಾಯಗಳು ಕಳೆದ ೩೦೦೦ ವರ್ಷಗಳಿಂದಲೂ ಯುದ್ಧದಲ್ಲಿ ತೊಡಗಿರುವಾಗ ಅವರಿಬ್ಬರೂ ಸಹ ಕೊಡೆಯ ಸಂಕೇತವನ್ನು ವಿಭಿನ್ನವಾಗಿ ಗ್ರಹಿಸುತ್ತಾರೆ.

ಡಾ॥ ಕೆ.ಪಿ.ಸಿಂಗ್

ಕ್ರಿಪೂ. ೩೦೦೦ದಲ್ಲಿ ಚೀನಾದವರಿಂದ ಆವಿಷ್ಕಾರವಾದ ಈ ಕೊಡೆಯು ಇಂದಿನವರೆಗೂ ಜಗತ್ತಿನಾದ್ಯಂತ ಅಧಿಕಾರ ಮತ್ತು ಪ್ರತಿಷ್ಠೆಯ ಸಂಕೇತವಾಗಿ ರಾರಾಜಿಸುತ್ತಿದೆ. ಒಂದು ವೆಬ್‌ಸೈಟ್‌ನ ಪ್ರಕಾರ, "ಭಾರತದ ಮರಾಠ ರಾಜಕುಮಾರರು ಕೆಲವೊಮ್ಮೆ ಛತ್ರಾಪತಿಗಳೆಂದೇ ಹೆಸರುವಾಸಿಗಳಾಗಿದ್ದಾರೆ." ಹೀಗಿದ್ದರೂ ಕೊಡೆಯನ್ನು ದಲಿತರ ವಿರುದ್ಧದ ಸಾಧನವನ್ನಾಗಿಯೂ ಬಳಸಲಾಗಿದೆ.

ಪಾಂಡಿಚೇರಿಯಲ್ಲಿ ವಾಸವಾಗಿರುವ ದಲಿತ ಸಿದ್ಧಾಂತಿ ರವಿಕುಮಾರ್ ತನ್ನ "ಕಾಸ್ಟ್ ಆಫ್ ದಿ ಟೈಗರ್: ಶ್ರೀಲಂಕಾ ತಮಿಳರಲ್ಲಿ ದಲಿತರು" ಕೃತಿಯಲ್ಲಿ ಶ್ರೀಲಂಕಾದಲ್ಲಿ ನಡೆದ ಒಂದು ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ. ಶ್ರೀಲಂಕಾ ತಮಿಳರಲ್ಲಿ ದಲಿತರು ಶೇ. ೧೫ ರಷ್ಟಿದ್ದಾರೆ. ೧೯೩೧ ರಲ್ಲಿ ಈ ಶ್ರೀಲಂಕಾದ ದಲಿತೇತರ ತಮಿಳರು ದಲಿತರ ವಿರುದ್ಧ ಈ ದಂಡನೆಗಳನ್ನು ವಿಧಿಸಿದ್ದರು: "ದಲಿತ ಮಹಿಳೆಯರು ಜಾಕೆಟ್ ತೊಡದೆ ಅರೆ ಬೆತ್ತಲೆಯಲ್ಲೇ ಇರಬೇಕು. ಅವರು ಆಭರಣಗಳನ್ನು ಧರಿಸುವಂತಿಲ್ಲ ಮತ್ತು ಕೊಡೆಗಳನ್ನು ಬಳಸಬಾರದು. ಅಲ್ಲದೆ ಜಾತಿ ಸೂಚಕ ನೂಲನ್ನು (ಜನಿವಾರ) ಮದುವೆಗಳಲ್ಲಿ

ದಲಿತ ಕ್ಯಾಪಿಟಲಿಸಂನ ಬಗ್ಗೆ ಡಾ॥ ಕೆ.ಪಿ. ಸಿಂಗ್ ನಡೆಸಬೇಕೆಂದಿರುವ ಜಾಗತಿಕ ದಲಿತ ಸಮ್ಮೇಳನ ನನ್ನನ್ನು ಉಲ್ಲಾಸಿತನನ್ನಾಗಿಸಿದೆ. ಆದರೆ ಅಕ್ಟೋಬರ್‌ನಲ್ಲಿ ನಡೆಯುವ ಆ ಸಮಾವೇಶಕ್ಕೆ ಕೊಡೆಗಳನ್ನು ಹಿಡಿದು ದಲಿತರು ಬರುವುದು ಕುತೂಹಲಕಾರಿಯಾದುದು. ಈ ಹೊಸ ಸಂಕೇತದಿಂದ ಪುಳಕಿತರಾಗಿರುವ ದಲಿತರು ಒಂದೆಡೆಯಾದರೆ, ದಲಿತೇತರರು ಅದರ ಬಗ್ಗೆ ಸಂಶಯಗೊಂಡಿದ್ದಾರೆ. ಕೆಲವರಿಗೆ ಕಪ್ಪು ಕೊಡೆಯ ಸಂಕೇತವೆನ್ನುವುದೇ ಸಿಟ್ಟನ್ನು ತರುವಂತಾಗಿದೆ. ಈ ಎರಡು ಸಮುದಾಯಗಳು ಕಳೆದ ೩೦೦೦ ವರ್ಷಗಳಿಂದಲೂ ಯುದ್ಧದಲ್ಲಿ ತೊಡಗಿರುವಾಗ ಸಂಕೇತವನ್ನು ವಿಭಿನ್ನವಾಗಿ ಗ್ರಹಿಸುತ್ತಾರೆ.

ಬಳಸುವಂತಿಲ್ಲ. ಸವರ್ಣೀಯರ ಹೆಸರುಗಳನ್ನು ದಲಿತ ಮಕ್ಕಳಿಗೆ ಇಡಬಾರದು. ಅವರು ಶವಗಳನ್ನು ಸುಡದೆ ಶವಸಂಸ್ಕಾರ ಮಾಡತಕ್ಕದ್ದು. ಅವರು ಚಪ್ಪಲಿ ಧರಿಸುವಂತಿಲ್ಲ. ಸಾರ್ವಜನಿಕ ಬಾವಿಗಳಿಂದ ನೀರನ್ನು ಬಳಸಬಾರದು. ಅವರು ಸಾರ್ವಜನಿಕ ಬಸ್ಸುಗಳಲ್ಲಿ ಕುಳಿತುಕೊಳ್ಳಬಾರದು. ಅಥವಾ ಅವರ ಮಕ್ಕಳನ್ನು ಶಾಲೆಗೆ ಕಳುಹಿಸಬಾರದು".

ಟಿಮ್ ಮ್ಯಾಕ್‌ಗ್ರಿಕ್/ಕಾರಿಸಕುಲಮ್ ತಮ್ಮ ಲೇಖನ (ಟೈಮ್ ಏಶಿಯಾ, ಅಕ್ಟೋಬರ್ ೨೦, ೧೯೯೭, ಸಂ. ೧೫೦, ನಂ೧೬)ದಲ್ಲಿ ಹೀಗೆ ಬರೆಯುತ್ತಾರೆ: "ದಕ್ಷಿಣದ ಕೆಲವು ಭಾಗಗಳಲ್ಲಿ ದಲಿತರು ಕೊಡೆಗಳನ್ನು ಬಳಸುವಂತಿಲ್ಲ." ದಕ್ಷಿಣ/ಉತ್ತರವಾಗಲೀ ಸಾಂಪ್ರದಾಯಿಕ ಭಾರತದಲ್ಲಿ ದಲಿತರಿಗೆ ಕೊಡೆಯನ್ನು ನಿಷೇಧಿಸಲಾಗಿದೆ. ಗ್ರಾಮಗಳಲ್ಲಿ ದಲಿತೇತರ ಕೇರಿಗಳಿಗೆ ಪ್ರವೇಶ ಮಾಡಿದಲ್ಲಿ ಕೊಡೆಗಳನ್ನು ಮಡಚಿಕೊಳ್ಳಬೇಕಾಗಿತ್ತು. ಶತಮಾನಗಳಿಂದ ಈ ಅವಮಾನವನ್ನು ಅನುಭವಿಸುತ್ತಲೇ ಬಂದ ಅವರು ಕಪ್ಪು ಕೊಡೆಗಳ ಸಂಕೇತವನ್ನು ಒಮ್ಮೆಗೆ ಸೆರೆಹಿಡಿದರು. ಈ ಹೊಸ ತಲೆಮಾರಿನ ದಲಿತರಿಗೆ ಕೊಡೆಗಳನ್ನು ಹಿಡಿದು ಶತ್ರು ಪಾಳೆಯದಲ್ಲಿ ನಡೆಯುವುದೆಂದರೆ ಶತ್ರುವಿನ ಸಿಡಿಮದ್ದನ್ನು ಅಪಹರಿಸಿದಂತೆಯೇ ಸರಿ. ಇಲ್ಲಿರುವ ಪ್ರಶ್ನೆಯೆಂದರೆ ದಲಿತರಿಂದ ಕೊಡೆಗಳ ಬಳಕೆಯನ್ನು ದಲಿತೇತರರು ನಿಷೇಧಿಸಲು ಯಾರಿಂದ ಪರವಾನಿಗೆ ಪಡೆದರು?

ಡಾ॥ ಅಂಬೇಡ್ಕರ್ ತಮ್ಮ ಕೃತಿ "ಅಸ್ಪೃಶ್ಯರು – ಯಾರು ಮತ್ತು ಅವರು ಅಸ್ಪೃಶ್ಯರು ಹೇಗಾದರು?" ಯಲ್ಲಿ ದಲಿತರು ಹಿಂದಿನ ಬೌದ್ಧರೇ ಆಗಿದ್ದರು ಎಂಬುದನ್ನು ಸಾಬೀತು ಮಾಡಿದ್ದಾರೆ. ಈ ಸಿದ್ಧಾಂತವನ್ನು ನಾವು ಒಪ್ಪುವುದಾದರೆ, ಈಗ ನಾವು ಈ ಹೊಸ ಚಿಂತನೆಯ ಬಗ್ಗೆಯೂ ಯೋಚಿಸಬೇಕಾಗಿದೆ: ಕೊಡೆಯು ಬೌದ್ಧರಿಗೆ ಸಂಬಂಧಿಸಿದ್ದರಿಂದ ದಲಿತರಿಗೆ ಅದನ್ನು ನಿಷೇಧಿಸಲಾಯಿತೇ?

ಮತ್ತೊಂದು ವೆಬ್‌ಸೈಟ್‌ನ ಪ್ರಕಾರ, "ಟಿಬೆಟಿನ ಬೌದ್ಧ ಪರಂಪರೆಯಲ್ಲಿ ಕೊಡೆಯು ೮ ಶುಭ ಸಂಕೇತಗಳಲ್ಲಿ ಒಂದಾಗಿದೆ. ಬುದ್ಧನ ಶವ ಸಂಸ್ಕಾರದಲ್ಲಿ ಆತನ ಶರೀರವನ್ನು ಒಂದು ಕೊಡೆಯು ರಕ್ಷಿಸಿತ್ತು ಎಂದು ನಂಬಲಾಗಿದೆ."

ಲೋನ್ಲಿ ಪ್ಲಾನೆಟ್ ಡಾಟ್ ಕಾಮ್ ಅನ್ನು ನೀವು ನೋಡಿದರೆ ಅಲ್ಲಿ ಈ ವಿಷಯ ಬಂದಿದೆ: "ಬುದ್ಧನ ಸಾವು ಮತ್ತು ಆತನ ಶವ ಸಂಸ್ಕಾರವನ್ನು ಮಾಡಿಯಾದ ಮೇಲೆ ಮಗಧ ದೇಶದ ರಾಜ ಮತ್ತು ಒಬ್ಬ ಬ್ರಾಹ್ಮಣ ಪುರೋಹಿತನಾದ ದ್ರೋಣ ಬುದ್ಧನ ಉಳಿದ ವಸ್ತುಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುತ್ತಾರೆ. ಅವರು ಅವುಗಳನ್ನು ೮ ಭಾಗಗಳನ್ನಾಗಿ ಮಾಡಿ ಎಂಟು ರಾಜರನ್ನು ನೇಮಿಸಿ ಎಂಟು ದಿಕ್ಕುಗಳಲ್ಲಿ (ಅಂದರೆ ಇವತ್ತಿನ ಉತ್ತರ ಭಾರತ ಮತ್ತು ದಕ್ಷಿಣ ನೇಪಾಳ ಜಾಗಗಳಲ್ಲಿ) ಆ ಪವಿತ್ರ ವಸ್ತುಗಳನ್ನು ಇಡಲು ಎಂಟು ಸ್ತೂಪಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ವಹಿಸಲಾಗುತ್ತದೆ.

"ಸಾಂಚಿಯಲ್ಲಿರುವ ಶ್ರೇಷ್ಠ ಸ್ತೂಪಗಳು ಮತ್ತು ಅದೇ ಮಾದರಿಗಳು ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನದಲ್ಲಿದ್ದು, ಅವುಗಳು ಪುರಾತನ ಮತ್ತು ಆಧುನಿಕ ಕಾಲದ ಅನೇಕ ಸ್ತೂಪಗಳ ಸ್ವರೂಪವನ್ನು ಪ್ರೇರೇಪಿಸಿವೆ.

"ಬೌದ್ಧಧರ್ಮದ ಉಗಮ ಕಾಲದ ಅನೇಕ ಶತಮಾನಗಳವರೆಗೆ ಸ್ತೂಪಗಳ ಗೋಪುರಗಳ ಮೇಲೆ ಸಣ್ಣ ಕ್ಯೂಬ್ ತರಹದ ಹರ್ಮಿಕವನ್ನು ಕಳಸದಂತೆ ಇಡುತ್ತಿದ್ದರು

ಈ ಹರ್ಮಿಕವನ್ನು ಕೊಡೆ ಅಥವಾ ಛತ್ರಾವಳಿ ಆವರಿಸುತ್ತಿತ್ತು. ಇನ್ನು ಕೆಲವು ಆಗಿನ ಸ್ತೂಪಗಳಲ್ಲಿ ಈ ಛತ್ರಾವಳಿಯನ್ನು ಮರದಂತೆ ಮಾರ್ಪಡಿಸಿ ಅದರ ಹಿಡಿಯನ್ನು ಮರದ ಕಾಂಡದಂತೆ ನಿರ್ಮಿಸಲಾಗುತ್ತಿತ್ತು. ಅಂದರೆ ಬೋಧಿ ಮರದ ರಕ್ಷಣೆಗಾಗಿ ಬುದ್ಧನು ತನ್ನ ರಾಜ್ಯಾಧಿಕಾರವನ್ನು ವಿನಿಮಯ ಮಾಡಿಕೊಂಡಂತಹ ಸಾಂಕೇತಿಕ ಅರ್ಥವನ್ನು ಹೊಮ್ಮಿಸುವಂತೆ ಮಾಡಲಾಗಿತ್ತು."

ಈ ಮೇಲಿನ ವಿವರಗಳಲ್ಲಿ ಏನಾದರೂ ಸತ್ಯಾಂಶ ಇರುವುದಾದರೆ ಡಾ॥ ಕೆ.ಪಿ.ಸಿಂಗ್ ಒಂದೇ ಏಟಿಗೆ ಬೌದ್ಧ ಧರ್ಮದ ಒಂದು ಶಕ್ತಿಯುತ ಸಂಕೇತವನ್ನು ಪುನರುಜ್ಜೀವಗೊಳಿಸುತ್ತಿದ್ದಾರೆ. ಈ ಕಾರಣಕ್ಕಾಗಿಯೇ ಕೊಡೆಯ ಸಂಕೇತ ದಲಿತ ಮನಸ್ಸನ್ನು ತೀವ್ರವಾಗಿ ಪ್ರಭಾವಿಸುತ್ತದೆ.

ದಲಿತರು ದಲಿತ ಕ್ಯಾಪಿಟಲಿಸಂನ ಘೋಷಣೆಗಳೊಂದಿಗೆ ನಡೆಯುವಾಗ ಅವರು ರ್‍ಯಾಡಿಕಲ್ ಅಂಬೇಡ್ಕರ್ ವಾದವನ್ನು ಸಮರ್ಥಿಸಿಕೊಂಡಂತೆಯೇ ಆಗುತ್ತದೆ. ಅಲ್ಲದೆ ತಮ್ಮ ಶಿರಗಳ ಮೇಲೆ ಸ್ತೂಪಗಳನ್ನು ಹಿಡಿದುಕೊಂಡ ಅವರು ರ್‍ಯಾಡಿಕಲ್ ಬೌದ್ಧಧರ್ಮವನ್ನು ಅನುಸರಿಸಲು ಪಣತೊಡುತ್ತಾರೆ. ಹೀಗಿರುವಲ್ಲಿ ಲಿಬರಲ್ ದಲಿತೇತರರು ಅದನ್ನು ಮೆಚ್ಚಿಕೊಂಡು ಈ ದಲಿತ ರ್‍ಯಾಲಿಯಲ್ಲಿ ಸೇರಿ ಕೊಳ್ಳಬಾರದೇ?

ಉದ್ಯಮಶೀಲ ದಲಿತರು

ದೆಹಲಿಯಲ್ಲಿರುವ ರಮಾನಂದ್, ಶೋಭ್‌ನಾಥ್, ಮತ್ತು ಘೂಲ್‌ಚಂದ್ ಯಶಸ್ವಿ ಉದ್ಯಮಶೀಲ ವ್ಯಕ್ತಿಗಳು. ಪೂರ್ವ ಉತ್ತರ ಪ್ರದೇಶದ ಆಝುಮ್‌ಘಡ್‌ದವರಾದ ಇವರೆಲ್ಲಾ ದಲಿತರಾಗಿದ್ದಾರೆ. ತಾಮ್ರ ವೈಯರ್ ತಯಾರಿಕೆಯಲ್ಲಿ ಬಳಸುವ ಡಯ್ ವಸ್ತುವನ್ನು ಉತ್ಪಾದಿಸುವ ಉದ್ದಿಮೆಯಲ್ಲಿ ರಮಾನಂದ್ ತೊಡಗಿದ್ದಾರೆ. ಈ ಡಯ್ ಅನ್ನು ಅವರು ಜರ್ಮನಿಗೆ ರಫ್ತು ಮಾಡುತ್ತಾರೆ. ಇವರಿಗೆ ದೆಹಲಿಯಲ್ಲಿ ಸ್ವಂತ ಮನೆಯಿದ್ದು, ತನ್ನದೇ ಆದ ಅಂಗಡಿಯನ್ನೂ ಸಹ ಹೊಂದಿದ್ದಾರೆ.

ಅವರ ಘಟಕದಲ್ಲಿ ಇಬ್ಬರು ಕೆಲಸ ಮಾಡುತ್ತಿದ್ದಾರೆ. ಅಲ್ಲದೆ ತನಗೆ ಒಂದು ಕಾರು ಮತ್ತು ಎರಡು ಚಕ್ರ ವಾಹನವೂ ಇದೆ.

ಶೋಭ್ನಾಥ್ ತಾಮ್ರ ವೈಯರ್ ತಯಾರಿಕಾ ಘಟಕವನ್ನು ಹೊಂದಿದ್ದು, ಅರ್ಧ ಡಜನ್ ಕೆಲಸಗಾರರು ಅಲ್ಲಿ ದುಡಿಯುತ್ತಿದ್ದಾರೆ. ಈತನೂ ಸಹ ತನ್ನದೇ ಆದ ಶಾಪ್ ಮತ್ತು ಮನೆಯನ್ನು ಹೊಂದಿದ್ದು, ಟಯೊಟಾ ಕ್ವಾಲಿಸ್ ಕಾರು ಮತ್ತು ಬುಲ್ಲೆಟ್ ಬೈಕ್ ಅನ್ನು ಹೊಂದಿದ್ದಾನೆ. ಘೂಲ್‌ಚಂದ್ ಟ್ರಾನ್ಸ್‌ಪೋರ್ಟ್ ಬಿಸಿನೆಸ್ ಮಾಡುತ್ತಿದ್ದು ನಾಲ್ಕು ಸಣ್ಣ ಲಾರಿಗಳನ್ನು ಹೊಂದಿದ್ದಾನೆ.

ಈ ಮೂರು ಮಂದಿ ದಲಿತ ಉದ್ಯಮಿಗಳು ದೆಹಲಿಗೆ ಕೆಲಸ ಹುಡುಕಿಕೊಂಡು ವಲಸೆ ಬಂದವರು. ಅವರೆಲ್ಲಾ ಅನೇಕ ವರ್ಷಗಳ ಕಾಲ ಕೂಲಿ ಕಾರ್ಮಿಕರಾಗಿ ದುಡಿಯುತ್ತಾ ಕೊಳೆಗೇರಿಗಳಲ್ಲಿ ಜೀವಿಸಿದ್ದವರು. ಹೀಗಿರುವಲ್ಲಿ ಅವರು ನಿಧಾನವಾಗಿ ವ್ಯವಹಾರದ ಮರ್ಮವನ್ನು ಅರಿತು, ಹಣ ಉಳಿತಾಯ ಮಾಡುತ್ತಾ, ಈಗ ಉದ್ಯಮಿಗಳಾಗಿ ಬೆಳೆದರು. ಆದ್ದರಿಂದಲೇ ಅವರು ಇಂದು ಸಮುದಾಯದ ಮಾದರಿಗಳಾಗಿ ನಿಂತಿರುವುದು. ಅಂಥ ನೂರಾರು ಮಂದಿ ದಲಿತರು ಇಂದು ದೆಹಲಿಯಲ್ಲಿ ಇದ್ದಾರೆ. ಇವರೆಲ್ಲರಿಗೆ ಶಿಕ್ಷಣವಾಗಲೀ ಅಥವಾ ವ್ಯಾಪಾರದ ಹಿನ್ನೆಲೆಯಾಗಲೀ ಇರದಿದ್ದರೂ ಸಹ ಯಶಸ್ವಿಯಾಗಿದ್ದಾರೆ.

೨೦೦೧ ರ ಅಖಿಲ ಭಾರತದ ದಲಿತರು ಮತ್ತು ಆದಿವಾಸಿ ಜನರ ಜನಗಣತಿ ಈಗ ಪ್ರಕಟವಾಗಿದೆ. ಅದರಲ್ಲಿ ಸರಣಿ-೧, ಟೇಬಲ್ ಎ-೮ ಎಂಬ ಪ್ರಾಥಮಿಕ ಸೆನ್ಸಸ್‌ನಲ್ಲಿ ದಲಿತ ಉದ್ಯಮಿಗಳ ಬಗ್ಗೆ ಒಂದು ಇಣುಕು ನೋಟವನ್ನು ನೀಡುತ್ತದೆ. ಈ ಅಂಕಿ-ಅಂಶಗಳು ಆದಿವಾಸಿಗಳ ಬಗ್ಗೆ ಇಲ್ಲ.

ಈ ಸೆನ್ಸಸ್ ವರದಿಯ ಪ್ರಕಾರ ಒಟ್ಟು ದಲಿತ ದುಡಿಮೆಗಾರರ ಸಂಖ್ಯೆಯಲ್ಲಿ ೨.೬ಮಿಲಿಯನ್ ಜನ ಕೌಟುಂಬಿಕ ಕೈಗಾರಿಕೆಯಲ್ಲಿ ಇದ್ದಾರೆ. ಇವರೆಲ್ಲಾ ತಯಾರಕರೇ ಆಗಿದ್ದಾರೆ. ಇವರೆಲ್ಲಾ ಕೈಗಾರಿಕೆಗಳ ಹಣೆಪಟ್ಟಿ ಇಲ್ಲದೆಯೇ ತಮ್ಮ ಮನೆಗಳಿಂದಲೇ ಕ್ರಿಯಾಶೀಲರಾಗಿದ್ದು ಮಾರುಕಟ್ಟೆಯ ಆರ್ಥಿಕತೆಯಲ್ಲಿ ಭಾಗವಾಗಿಬಿಟ್ಟಿದ್ದಾರೆ. ಅಂದರೆ ೨.೬ ಮಿಲಿಯನ್ ಮಂದಿ ದಲಿತರು ಮುಂದೊಂದು ದಿನ ರಮಾನಂದ್ ಮತ್ತು ಶೋಭ್‌ನಾಥ್‌ರಂತೆ ಆಗುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ.

ಡಾ॥ ಕೆ.ಪಿ.ಸಿಂಗ್ ಒಂದೇ ಏಟಿಗೆ ಬೌದ್ಧ ಧರ್ಮದ ಒಂದು ಶಕ್ತಿಯುತ ಸಂಕೇತವನ್ನು ಪುನರುಜ್ಜೀವಗೊಳಿಸುತ್ತಿದ್ದಾರೆ. ದಲಿತರು ದಲಿತ ಕ್ಯಾಪಿಟಲಿಸಂನ ಘೋಷಣೆಗಳೊಂದಿಗೆ ನಡೆಯುವಾಗ ಅವರು ರ್‍ಯಾಡಿಕಲ್ ಅಂಬೇಡ್ಕರ್ ವಾದವನ್ನು ಸಮರ್ಥಿಸಿಕೊಂಡಂತೆಯೇ ಆಗುತ್ತದೆ. ಅಲ್ಲದೆ ತಮ್ಮ ಶಿರಗಳ ಮೇಲೆ ಸ್ತೂಪಗಳನ್ನು ಹಿಡಿದುಕೊಂಡ ಅವರು ರ್‍ಯಾಡಿಕಲ್ ಬೌದ್ಧಧರ್ಮವನ್ನು ಅನುಸರಿಸಲು ಪಣತೊಡುತ್ತಾರೆ. ಹೀಗಿರುವಲ್ಲಿ ಲಿಬರಲ್ ದಲಿತೇತರರು ಅದನ್ನು ಮೆಚ್ಚಿಕೊಂಡು ಈ ದಲಿತ ರ್‍ಯಾಲಿಯಲ್ಲಿ ಸೇರಿ ಕೊಳ್ಳಬಾರದೇ?

ವಾಣಿಜ್ಯ ಮತ್ತು ವ್ಯಾಪಾರದಲ್ಲಿ ಎಷ್ಟು ಮಂದಿ ದಲಿತರು ಇದ್ದಾರೆ ಎಂಬುದರ ಬಗ್ಗೆ ಇನ್ನೂ ಅಂಕೆ-ಅಂಶಗಳು ಪ್ರಕಟವಾಗಿಲ್ಲ. ಆದರೆ ಮೇಲಿನ ಜನಗಣತಿ ಅಂಕಿ ಅಂಶಗಳು ಇಂದು ಮುನ್ನೋಟವನ್ನಂತೂ ನೀಡುತ್ತದೆ. ೧೯೯೧ರಲ್ಲಿ ಕೇವಲ ೧.೨ಮಿಲಿಯನ್ ದಲಿತರು ಈ ಕೌಟುಂಬಿಕ ಉದ್ಯಮದಲ್ಲಿ ತೊಡಗಿದ್ದರು. ಕೇವಲ ಒಂದು ದಶಕದಲ್ಲೇ ಅವರ ಸಂಖ್ಯೆ ೨.೬ಮಿಲಿಯನ್‌ಗೆ ಏರಿದೆ. ಈ ಅಂದಾಜಿನಲ್ಲಿ ಹೇಳುವುದಾದರೆ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ತೊಡಗಿರುವ ದಲಿತರು ಸುಮಾರು ೩ ಮಿಲಿಯನ್ ಇದ್ದಾರೆ. ಏಕೆಂದರೆ ೧೯೯೧ರಲ್ಲಿ ಅವರ ಸಂಖ್ಯೆ ೧.೪೭ಮಿಲಿಯನ್ ಇತ್ತು.

ಒಟ್ಟಿನಲ್ಲಿ ೫.೫೦ ಮಿಲಿಯನ್ ದಲಿತರು ಕೌಟುಂಬಿಕ ಉದ್ಯಮ ಮತ್ತು ವಾಣಿಜ್ಯ-ವ್ಯಾಪಾರಗಳಲ್ಲಿ ತೊಡಗಿದ್ದಾರೆ. ಮೂರು ದಶಕಗಳ ಹಿಂದೆ ಅಂದರೆ ೧೯೭೧ರಲ್ಲಿ ಅವರ ಸಂಖ್ಯೆ ಕೇವಲ ೧.೩೫ ಮಿಲಿಯನ್ ಮಾತ್ರವಾಗಿತ್ತು. ಅಂದರೆ ೧೯೭೧-೨೦೦೧ರ ನಡುವೆ ೧.೧೫ ಮಿಲಿಯನ್ ದಲಿತರು ಈ ತಯಾರಿಕಾ ಉದ್ಯಮಕ್ಕೆ ಸೇರ್ಪಡೆಯಾಗಿದ್ದಾರೆ. ೧೯೫೧ರಲ್ಲಿ ಅವರ ಅಂಕಿ ಅಂಶಗಳು ನಮಗೆ ದೊರೆಯುವುದಿಲ್ಲವಾದರೂ ಅಂದಾಜಿಸುವುದಾದರೆ ಕೆಲವು ಸಾವಿರಗಳಿರ ಬಹುದಷ್ಟೆ.

ಇದೊಂದು ಕಣ್ಣು ತೆರೆಸುವ ಸಕಾರಾತ್ಮಕ ಬೆಳವಣಿಗೆ. ಮೊದಲನೆಯದಾಗಿ ಅನೇಕ ಮಂದಿ ದಲಿತರು ಈ ಉದ್ಯಮ ಅಥವಾ ಸರ್ಕಾರಿ ಉದ್ಯೋಗಗಳಿಗೆ ಬಂದವರು ಸಾಮಾಜಿಕ ನರಕವಾಗಿದ್ದ ಬೇಸಾಯ ಆರ್ಥಿಕತೆಯ ಹಿನ್ನೆಲೆಯುಳ್ಳವರಾಗಿದ್ದಾರೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ೫.೫೦ ಮಿಲಿಯನ್‌ಗಿಂತ ಹೆಚ್ಚಿನ ದಲಿತರು ಮನುವಿನ ಸಾಮಾಜಿಕ ಕಟ್ಟುಪಾಡುಗಳಿಂದ ಮುಕ್ತರಾದವರು. ಇದೆಲ್ಲಾ ಬಂಡವಾಳಶಾಹಿ ಜಗತ್ತಿನ ವಿಸ್ತಾರದ ಸಹಜ ಪ್ರಕ್ರಿಯೆಯಿಂದಾಗಿ ತಾನೆ ಆದದ್ದು?

ಈ ವಿದ್ಯಮಾನದ ಪ್ರಮುಖ್ಯತೆಯನ್ನು ನಾವು ಮೆಚ್ಚಿಕೊಳ್ಳುವುದಾದರೆ, ಇದನ್ನು ಸರ್ಕಾರಿ ಉದ್ಯೋಗದ ಮೂಲಕ ವಿಮೋಚನೆ ಪಡೆದಿರುವವರೊಡನೆ ಇದನ್ನು ಹೋಲಿಸಿ ನೋಡಬೇಕಾಗಿದೆ.

ಭಾರತಾದ್ಯಂತ ಇರುವ ಒಟ್ಟು ಸರ್ಕಾರಿ ಉದ್ಯೋಗಗಳು ಸುಮಾರು ೨೦ಮಿಲಿಯನ್ ಅಷ್ಟೆ. ಮೀಸಲಾತಿಯಲ್ಲಿ ದಲಿತರಿಗೆ ಸಿಗುವುದು ಶೇ.೧೫ರಷ್ಟು ಮಾತ್ರ. ಅಂದರೆ ಅದು ೩ ಮಿಲಿಯನ್‌ಗಿಂತಲೂ ಕಮ್ಮಿಯಾದುದು. ಅಂದರೆ ಸರ್ಕಾರಿ ಉದ್ಯೋಗಳಿಂದ ಮುಕ್ತಿ ಪಡೆದವರ ಸಂಖ್ಯೆಗಿಂತಲೂ ಬಂಡವಾಳಶಾಹಿ ವಿಸ್ತಾರದ ಸಹಜ ಪ್ರಕ್ರಿಯೆಯಲ್ಲಿ ಮುಕ್ತಿಹೊಂದಿದವರೇ ಹೆಚ್ಚು.

ಹೀಗೆಂದು ಸರ್ಕಾರಿ ಉದ್ಯೋಗಗಳನ್ನು ಕಡೆಗಣಿಸಿದಂತೆ ಎಂದು ತಿಳಿಯಬಾರದು. ನಿಜವಾಗಿ ನೋಡಿದರೆ ಸರ್ಕಾರಿ ಉದ್ಯೋಗ ಘನತೆ ಮತ್ತು ಭದ್ರತೆಯನ್ನು ತರುತ್ತದೆ. ಇಲ್ಲಿ ಅದನ್ನು ಏಕೆ ಗಮನಿಸಲಾಗಿದೆಯೆಂದರೆ ಕ್ಯಾಪಿಟಲಿಸಂನ ಪ್ರಮುಖ್ಯತೆಯನ್ನಷ್ಟೆ. ದಲಿತರಿಗೆ ಗ್ರಾಮೀಣ/ಊಳಿಗಮಾನ್ಯ ವ್ಯವಸ್ಥೆಯು ನರಕವಾಗಿದೆ. ಎರಡನೆಯದಾಗಿ, ೫.೫೦ ಮಿಲಿಯನ್ ದಲಿತರು ಈ ತಯಾರಿಕಾ ಉದ್ಯಮ ಮತ್ತು ವಾಣಿಜ್ಯದಲ್ಲಿ ಇರುವವರಾದರೂ ಅವರಲ್ಲಿ ಯಾರೂ ಕೋಟ್ಯಾದೀಶ ಅಥವಾ ಬಿಲಿಯನ್ನರುಗಳಾಗಿಲ್ಲ.

ಈ ಹಂತದಲ್ಲೇ ವೈವಿಧ್ಯತಾ ನೀತಿ ಜಾರಿಗೆ ಬರುವುದು. ಪ್ರಸ್ತುತ ಭಾರತೀಯ ಕೈಗಾರಿಕೋದ್ಯಮಿಗಳು ಮನುವಿನ ಮೀಸಲಾತಿಯಿಂದ ಪ್ರಯೋಜನ ಪಡೆದವರಾಗಿದ್ದಾರೆ. ಅಲ್ಲಿ ಕೇವಲ ಕೆಲವು ವರ್ಗಗಳಿಗೆ ಮಾತ್ರ ವಾಣಿಜ್ಯ ಮತ್ತು ವ್ಯಾಪಾರದಲ್ಲಿ ತೊಡಗುವ ಅವಕಾಶವಾಗಿದೆ. ಇದುವೇ ಮನುವಿನ ವ್ಯವಸ್ಥೆ. ಅಮೆರಿಕಾದ ಕಪ್ಪುಜನರು ಸರಕು ಮತ್ತು ಗುತ್ತಿಗೆ ವಹಿವಾಟಿನಲ್ಲಿ ತೊಡಗಿದಂತೆ ಈ ೫.೫ ಮಿಲಿಯನ್ ದಲಿತರು ತೊಡಗಿದ್ದರೆ ಅವರೆಲ್ಲಾ ಕೋಟ್ಯಾದಿಪತಿಗಳು ಮತ್ತು ಬಿಲಿಯನ್ನೇರುಗಳಾಗಿ ಮಾರ್ಪಡುತ್ತಿದ್ದರು.

ಇದು ದುರಂತವೇ ಸರಿ! ಮನುವಿನ ಭಾರತದಲ್ಲಿ ಬದುಕುವ ದಲಿತರು ದಲಿತ ಕ್ಯಾಪಿಟಲಿಸಂನತ್ತ ನಡೆಯುವ ಕನಸ್ಸನ್ನು ಕಾಣುವಂತಿಲ್ಲ. ದಲಿತ ಎನ್‌ಆರ್‌ಐಗಳು ಯಶಸ್ವಿಯಾಗಿ ಬದುಕಿನ ಸುಖಗಳನ್ನು ಅರಿತು ಹಣ ಮತ್ತು ಉದ್ದಿಮೆಯ ಪ್ರಾಮುಖ್ಯತೆಯನ್ನು ಅರಿತಿದ್ದರಿಂದಲೇ ಒಬ್ಬ ಕೆ. ಪಿ. ಸಿಂಗ್‌ನನ್ನು ತಯಾರಿಸಿ, ಮನುಧರ್ಮದ ವಿರುದ್ಧ ನಿಂತು ನಿಜವಾದ ಅಂಬೇಡ್ಕರಿಸಂ ಅನ್ನು ಪುನರುಜ್ಜೀವನಗೊಳಿಸುವಂತೆ ಆದದ್ದು.

ಈ ತರ್ಕ ಸೂಚಿಸುವುದೇನೆಂದರೆ ರೇಷನ್ ಕಾರ್ಡುಗಳಿಗಾಗಿ ಹೋರಾಡುತ್ತಿರುವ ದಲಿತರಿಗಿಂತಲು ಹೆಚ್ಚು ಪರಿಣಾಮಕಾರಿಯಾಗಿ ದಲಿತ ಬಂಡವಾಳಿಗರು ಮನುಧರ್ಮವನ್ನು ಎದುರಿಸಲು ಸಾಧ್ಯ. □

ದೇವರೆಂದರೆ ನಾವು ನೋಡದ ಹೆಣ್ಣ ಪ್ರೀತಿಸಿದಂತೆ



ದೇವರು ಒಳ್ಳೆಯವನು ಎನ್ನುತ್ತೀರಿ. ಆತನಿಗೆ ನೈತಿಕ ಗುಣವನ್ನು ಆರೋಪಿಸುತ್ತೀರಿ. ಇದರ ಅಗತ್ಯವೇನು? ಅರ್ಥ ವೇನು? ದೇವರು ಒಳ್ಳೆ ಯವನೇ ಆಗಿದ್ದರೆ, ಜನ ಗಳೇಕೆ ಕಳ್ಳರಾದರು? ಸುಳ್ಳರಾದರು? ಕೊಲೆಗ ಡುಕರಾದರು? ವ್ಯಭಿಚಾರಿ ಗಳಾದರು? ಹೀಗಾಗಲು ಮೂಲ ದೇವರೆ ಇರ ಬೇಕು, ಈ ಎಲ್ಲ ಕೆಡುಕು ಗಳ ಮೂಲದೋಷ ದೇವರ ಅಸ್ಥಿತ್ವದಲ್ಲಿಯೇ ಇರಬೇಕು ಅಲ್ಲವೆ ಹಾಗಾ ದರೆ ಅವನು ದೇವರು ಮತ್ತು ಒಳ್ಳೆಯ ಗುಣವಂತನಾಗಲು ಹೇಗೆ ಸಾಧ್ಯ?

○ ಸಿ.ಎಚ್.ರಾಜಶೇಖರ್

ಒಮ್ಮೆ ಬುದ್ಧನು ಕೋಸಲದ ಮೂಲಕ ಸಂಚಾರ ಮಾಡುತ್ತಿದ್ದ. ಆತನೊಂದಿಗೆ ಭಿಕ್ಷುಗಳ ದೊಡ್ಡ ತಂಡವಿತ್ತು. ಮಾರ್ಗ ಮಧ್ಯದಲ್ಲಿ ಬ್ರಾಹ್ಮಣರ ಹಳ್ಳಿಯಾದ ಮನಸ್ಕಾತದಲ್ಲಿ ತಂಗಲು ನಿರ್ಧ ರಿಸಿದ. ಆ ಹಳ್ಳಿಯ ಅಕಿರಾವತಿ ನದಿ ದಡದ ಮೇಲಿದ್ದ ಪ್ರಶಾಂತ ಮಾವಿನ ತೋಪಿನಲ್ಲಿ ಬೀಡುಬಿಟ್ಟ. ಅದೇ ಗ್ರಾಮದಲ್ಲಿ ವಸೆಥ ಮತ್ತು ಭಾರದ್ವಾಜ ಎಂಬ ಮಹಾಪಂಡಿತರು, ಋಷಿಮುನಿಗಳು ವಾಸಿಸುತ್ತಿದ್ದರು. ಅವರಿಗೆ ತಮ್ಮ ಹಳ್ಳಿಯ ಹೊರ ವಲಯದಲ್ಲಿ ಬುದ್ಧ ತಂಗಿರುವ ವಿಷಯ ತಿಳಿಯಿತು. ತಮ್ಮ ಆರ್ಯವಾದದ ಸಂಪೂರ್ಣ ವಿರುದ್ಧವಾದ ಬೌದ್ಧವಾದದ ಬಗ್ಗೆ ಅಪಾರ ಕುತೂಹಲ, ಅಸಮಾಧಾನವಿತ್ತು. ತಮ್ಮಲ್ಲಿಯ ಸಂಶಯಗಳನ್ನು ನೇರವಾಗಿ ಬುದ್ಧನನ್ನೆ ಕಂಡು ನೀಗಿಕೊಳ್ಳಲು ನಿರ್ಧರಿಸಿದರು. ಅಂತೆಯೆ ಬುದ್ಧನ ಬಳಿ ಬಂದು ಆತನಿಗೆ ವಂದಿಸಿ ಅವರು ಸಮೀಪ ಕುಳಿತರು. ತಮ್ಮ ಪರಿಚಯ ಮತ್ತು ತಾವು ಬಂದ ಉದ್ದೇಶವನ್ನು ತಿಳಿಸಿದರು. ಬುದ್ಧನನ್ನು ಉದ್ದೇಶಿಸಿದ ಭಾರದ್ವಾಜನು ಹೀಗೆ ಪ್ರಶ್ನೆಯನ್ನು ಪ್ರಾರಂಭಿಸಿದ;

"ಗೌತಮರೇ, ದೇವರ ಅಸ್ತಿತ್ವವನ್ನು ನೀವೇಕೆ ನಂಬುವುದಿಲ್ಲ" ದೇವರ ಅಸ್ತಿತ್ವವನ್ನು ನೀವೇಕೆ ಪ್ರಶ್ನಿಸುತ್ತೀರಿ? ಆ ತಿರಸ್ಕಾರಕ್ಕೆ ನಿಮ್ಮ ಉತ್ತರವೇನು?" ಎನ್ನಲು ಬುದ್ಧ ಶಾಂತವಾಗಿ ನಸುನಕ್ಕು ಹೀಗೆ ಉತ್ತರಿಸತೊಡಗಿದ;

"ಪಂಡಿತೋತ್ತಮರದ ಭಾರದ್ವಾಜರೇ, ದೇವರ ಅಸ್ತಿತ್ವವನ್ನು ಪ್ರಶ್ನಿಸಲು ಹಲವು ಹತ್ತಾರು ಕಾರಣಗಳಿವೆ. ಅವುಗಳಲ್ಲಿ ಪ್ರಮುಖವೆಂದರೆ, ದೇವರ ಬಗ್ಗೆ ಋಷಿ ಮುನಿಗಳಂತೆಯೇ ಸಾಮಾನ್ಯ ಜನರೂ ಕೂಡ ಮಾತನಾಡುತ್ತಾರೆ. ಆದರೆ ಸ್ವತಃ ಋಷಿ ಮುನಿಗಳೇ ದೇವರನ್ನು ಕಂಡಿಲ್ಲ. ಆ ಬಗ್ಗೆ ಪ್ರಶ್ನಿಸಿದರೆ ದೇವರು ಅಜ್ಞಾತ ಮತ್ತು ಅಗೋಚರ ಎನ್ನುತ್ತಾರೆ. ಈ ರೀತಿ ತಲೆಮರೆಸಿಕೊಳ್ಳಲು ಗೈರು ಹಾಜರಿಯಾಗಲು ದೇವರಿಗಿರುವ ಅಂಕುಶವಾದರೂ ಏನು? ಆತ ಅಂಕುಶಕ್ಕೆ ಒಳಗಾಗುವುದಾದರೆ ಆತ ಹೇಗೆ ದೇವರಾಗಲು ಸಾಧ್ಯ? ಅದರೂ ದೇವರೇ ಜಗತ್ತಿನ ಸೃಷ್ಟಿ ಕರ್ತ ಎಂದು ವಾದಿಸುತ್ತಾರೆ. ಆದರೆ ಸಾಧಿಸಿ ಸಮರ್ಥಿಸುವಲ್ಲಿ ಏಕೆ ವಿಫಲರಾಗುತ್ತಾರೆ? ಈ ರೀತಿ ಬರೀ ನಂಬಿಕೆಯ ಆಧಾರದ ಮೇಲೆ ನಿಂತಿರುವ ದೇವರಿಂದ ಮಾನವರಿಗೆ ಏನು ಪ್ರಯೋಜನ? ಯಾವ ರೀತಿಯ ಲಾಭ ಸಾಧ್ಯ? ಹೀಗೆ ಊಹೆ ಮತ್ತು ನಂಬಿಕೆಯ ಮೇಲೆ ನಿಂತಿರುವ ದೇವರು ಹೇಗೆ ದೇವರಾಗುವೆ? ಇಂತಹ ದೇವರ ಮೇಲೆ ಆಧಾರಿತವಾದ ಧರ್ಮ ಮನುಕುಲಕ್ಕೆ ಯೋಗ್ಯವೆ? ಇದರಿಂದ ಮೌಢ್ಯ ಸೃಷ್ಟಿ ಮಾತ್ರವೇ ಸಾಧ್ಯವಲ್ಲವೇ. ಹೀಗೆ ಸತ್ಯದ ಸಿದ್ಧಾಂತದ ಮೇಲೆ ನಿಂತಿಲ್ಲದ ದೇವರ ಅಸ್ತಿತ್ವವನ್ನು ತಿರಸ್ಕರಿಸಲು ಯೋಗ್ಯವಲ್ಲವೇ?"

"ಗೌತಮರೇ, ನನಗೂ ಹಾಗೇ ಅನ್ನಿಸುತ್ತದೆ" ಎಂದ. ಆಗ ವಸೆಥನು ಬುದ್ಧನನ್ನು ಉದ್ದೇಶಿಸಿ;

"ಗೌತಮರೇ, ಊರಿಗೆ ನಾನಾ ದಾರಿಗಳು ಇರುವಂತೆ, ನಾನಾ ಬ್ರಾಹ್ಮಣರು ನಾನಾ ದಾರಿಯಲ್ಲಿ ಬೋಧಿಸುತ್ತಾರೆ. ಆ ಎಲ್ಲವೂ ಅಂತಿಮವಾಗಿ ಬ್ರಹ್ಮ ಸಾಯುಜ್ಯದಲ್ಲಿ ಲೀನವಾಗುವುದಿಲ್ಲವೇ?"

"ಪ್ರಿಯ ವಸೆಥ, ಅವುಗಳಲ್ಲಿ ಸರಿಯಾದ ಮಾರ್ಗದಲ್ಲಿ, ಸರಿಯಾದ ಗುರಿಯಲ್ಲಿ ನಡೆಯುತ್ತದೆ ಎಂಬುದು ನಿಮ್ಮ ಅಭಿಪ್ರಾಯವೆ?"

"ಗೌತಮರೇ, ನಾನು ಹಾಗೆನ್ನುತ್ತೇನೆ"

"ಪ್ರಿಯ ವಸೆಥರೇ, ಬ್ರಹ್ಮನನ್ನು ಯಾರೂ ನೋಡಿಲ್ಲ. ಬ್ರಹ್ಮನ ಬಗ್ಗೆ ಗ್ರಹಿತ ಜ್ಞಾನವಿಲ್ಲ? ಹೌದಲ್ಲವೆ?

"ಗೌತಮರೇ, ಹೌದು, ಅದು ನಿಜ"

"ಪ್ರಿಯ ವಸೆಥ, ಹಾಗಾದರೆ ಬ್ರಹ್ಮನ ಅಸ್ತಿತ್ವದ ಇರುವಿಕೆಯಾಗಲಿ, ಆಗುವಿಕೆಯಾಗಲಿ, ಅನುಭವವಾಗಲಿ ವಾಸ್ತವತೆಯಿಂದ ಕೂಡಿಲ್ಲ. ಸತ್ಯದ ಮೇಲೆ ಅವಲಂಭಿತವಾಗಿಲ್ಲ. ಹಾಗಿದ್ದರೂ ಬ್ರಾಹ್ಮಣರ ಪ್ರತಿಪಾದನೆಯನ್ನು ನೀನು ಹೇಗೆ ನಂಬುವೆ? ಇದು ಕುರುಡರ ಗುಂಪಿನ ಕಥೆಯಾಯಿತು. ಮುಂದಿನವನು, ಕೊನೆಯವನು ಮತ್ತು ಮಧ್ಯದವನು ಏನೂ ಕಾಣಿಸದೆ ಒಬ್ಬರಿಗೊಬ್ಬರು ಬರೀ ಆತುಕೊಂಡಿರುವಂತೆ, ಈ ಬ್ರಾಹ್ಮಣರ ವಾದ ಕೂಡ. ಇದು ಕುರುಡರ ಕಥೆಯಲ್ಲದೆ ಮತ್ತೇನು? ಇದು ಕೇವಲ ಹಾಸ್ಯಾಸ್ಪದ. ಒಣ ಪ್ರತಿಷ್ಠೆ ಮತ್ತು ಪೊಳ್ಳು ಶಬ್ದಾವಳಿಗಳಲ್ಲದೆ ಮತ್ತೇನು?"



"ಪ್ರಿಯ ವಸೆಥ, ಇದು ಹೇಗಾಯಿತೆಂದರೆ ತಾನು ಕಾಣದ, ತಾನು ನೋಡದ, ತಾನು ಮುಟ್ಟದ, ಸ್ಪರ್ಶವೂ ಪ್ರತಿಕ್ರಿಯೆಯೂ ಇಲ್ಲದ ಹೆಣ್ಣನ್ನು ಪ್ರೀತಿಸುವ ವರಿಸಿ ಮದುವೆ ಯಾಗುವ ಕಾಲ್ಪನಿಕ ಕಥೆಯಲ್ಲವೆ? ಆ ಹೆಣ್ಣ ತನಗೆ ದಕ್ಕುವಳೇ?"

"ಪ್ರಿಯ ಗೌತಮರೇ, ಹೌದು, ಅದು ಸತ್ಯ. ಖಂಡಿತಾ ಇಲ್ಲ.... ಖಂಡಿತ ದಕ್ಕಲಾರಳು..."

"ಪ್ರಿಯ ವಸೆಥ, ಈಗ ನಿನಗೆ ಏನು ಅನ್ನಿಸುತ್ತದೆ? ಒಂದು ಪಕ್ಷ ನಿನ್ನ ವಾದವೆ ಸರಿ ಎಂದು ಇಟ್ಟುಕೋ, ನೀನು ಪ್ರೀತಿಸುವ, ಹಾತೊರೆಯುವ ಆ ಸ್ಫುರದ್ರೂಪಿ ಹೆಣ್ಣು ಯಾರು? ಅವಳು ಕುಲೀನ ಕನ್ಯೆಯೆ? ಬ್ರಾಹ್ಮಣ ಹೆಂಗಸೇ? ವೈಶಳೇ? ಶೂದ್ರಳೇ? ಆ ಬಗ್ಗೆ ಜನರು ಕೇಳುವ ಪ್ರಶ್ನೆಗೆ ನೀವು ಏನೆಂದು ಉತ್ತರಿಸುವೀರಾ? ಮೊದಲು ಜನಿಸಿದ ವ್ಯಕ್ತಿ ಅಥವಾ ಸೃಷ್ಟಿ ಕರ್ತನಾದ ಮಹಾಬ್ರಹ್ಮನು ಹೀಗೆ ಯೋಚಿಸಲು ಪ್ರಾರಂಭಿಸುತ್ತಾನೆ. ನಾನು ಮೊದಲಿಗೆ, ನಾನೇ ಎಲ್ಲಾ, ಈಗಿರುವ ಮತ್ತು ಮುಂದೆ ಹುಟ್ಟುವ ಎಲ್ಲಕ್ಕೂ ನಾನೇ ಜನಕ. ನಾನೇ ಒಡೆಯ, ಅಂದರೆ, ನಿರಂತರ, ಮತ್ತು ಶಾಶ್ವತ ಹಾಗೂ ಅವನು ಎಲ್ಲ ಕಾಲಕ್ಕೂ ಅದೇ ರೀತಿ ಉಳಿಯುತ್ತಾನೆ. ಆದರೆ ನಾವು ಅಂದರೆ ಅದೇ ಬ್ರಹ್ಮನಿಂದ ಸೃಷ್ಟಿಯಾದ ನಾವುಗಳು ಕ್ಷಣಿಕ, ಅಸ್ಥಿರ, ಅಲ್ಪ, ಅಶಾಶ್ವತ ಮತ್ತು ಸಾವು ನಮಗೆ ಪೂರ್ವನಿರ್ಧರಿತ, ಹೀಗಿರುವಲ್ಲಿ ನಾವು ಇಲ್ಲಿಗೆ ಏಕೆ ಬಂದೆವು? ಅದರ ಅಗತ್ಯವೇನು? ಈ ತಾರತಮ್ಯ ನ್ಯಾಯುತವೆ? ಹೀಗೇಕೆ?"

"ಗೌತಮರೇ, ಈ ಬಗ್ಗೆ ನನ್ನ ಬಳಿ ಉತ್ತರವಿಲ್ಲ"

"ಪ್ರಿಯ ವಸೆಥ, ದೇವರು ಸರ್ವಶಕ್ತ ಎನ್ನುವುದಾದರೆ, ಮನುಷ್ಯನೇಕೆ ಏನನ್ನಾದರೂ ಮಾಡಬೇಕು? ಆ ಬಗ್ಗೆ ದೇವರೇಕೆ ಆಜ್ಞೆಯನ್ನು ವಿಧಿಸಬೇಕು? ನಿಯಮವನ್ನೇಕೆ ಮಾಡಬೇಕು? ಹಾಗಾದರೆ ರಕ್ಷೆ ಮತ್ತು ಶಿಕ್ಷೆ ಎಂಬುದು ನಾಟಕವಲ್ಲವೆ ಹಾಸ್ಯಾಸ್ಪದ ಅಲ್ಲವೆ? ಒಣ ಪ್ರತಿಷ್ಠೆ ಮತ್ತು ಟೊಳ್ಳುತನವಲ್ಲವೆ?

"ಗೌತಮರೇ, ಈ ಬಗ್ಗೆ ನನ್ನ ಬಳಿ ಉತ್ತರವಿಲ್ಲ"

"ಪ್ರಿಯ ವಸೆಥ, ಅದೇ ರೀತಿ ಜಗತ್ತಿನ ಸೃಷ್ಟಿ ಕರ್ತ ಬ್ರಹ್ಮನೇ ಅನ್ನುವುದಾದರೆ, ಜಗತ್ತಿನ ವ್ಯವಹಾರಗಳಲ್ಲಿ ಯಾವ ಪಾತ್ರವನ್ನು ವಹಿಸಲಾಗದೆ ಮನುಷ್ಯ ನಿಷ್ಕ್ರಿಯ ಜೀವಿ ಆಗುವುದಿಲ್ಲವೆ? ಹಾಗಾದರೆ ಮನುಷ್ಯನನ್ನು ಬ್ರಹ್ಮ ಯಾವ ಕಾರಣಕ್ಕಾಗಿ ಸೃಷ್ಟಿ ಮಾಡಿದ? ಅದರ ಅರ್ಥ ನಾಟಕವಲ್ಲವೆ? ಹಾಸ್ಯಾಸ್ಪದ ಅಲ್ಲವೆ? ಒಣ ಪ್ರತಿಷ್ಠೆ ಮತ್ತು ಟೊಳ್ಳುತನವಲ್ಲವೆ?"

"ಗೌತಮರೇ, ಈ ಬಗ್ಗೆಯೂ ನನ್ನಲ್ಲಿ ಉತ್ತರವಿಲ್ಲ"

"ಪ್ರಿಯ ವಸೆಥನೇ, ದೇವರು ಒಳ್ಳೆಯವನು ಎನ್ನುತ್ತೀರಿ. ಆತನಿಗೆ ನೈತಿಕ ಗುಣವನ್ನು ಆರೋಪಿಸುತ್ತೀರಿ. ಇದರ ಅಗತ್ಯವೇನು? ಅರ್ಥವೇನು? ಈ ವಾದ ಕಡೆಗೆ ಎಲ್ಲಿಗೆ ಕೊಂಡೊಯ್ಯುತ್ತದೆ? ಒಂದು ಪಕ್ಷ ನಿಮ್ಮ ವಾದದಂತೆ ದೇವರು ಒಳ್ಳೆಯವನೇ ಆಗಿದ್ದರೆ, ಜನಗಳೇಕೆ ಕಳ್ಳರಾದರು? ಸುಳ್ಳರಾದರು? ಕೊಲೆಗಡುಕರಾದರು? ವ್ಯಭಿಚಾರಿಗಳಾದರು? ಚಾಡಿಕೋರರು, ಒಡಕುಬಾಯಿಯ ದೂಷಕರು, ಕೇಡಿಗರು ಮತ್ತು ವಕ್ರಬುದ್ಧಿಯವರು ಆದರು? ಹೀಗಾಗಲು ಕಾರಣ ಈಶ್ವರನೇ ಇರಬೇಕು ಹೀಗಾಗಲು ಮೂಲ ದೇವರೆ ಇರಬೇಕು, ಈ ಎಲ್ಲ ಕೇಡುಕುಗಳ ಮೂಲದೋಷ ದೇವರ ಅಸ್ಥಿತ್ವದಲ್ಲಿಯೇ ಇರಬೇಕು ಅಲ್ಲವೆ ಹಾಗಾದರೆ ಅವನು ದೇವರು ಮತ್ತು ಒಳ್ಳೆಯ ಗುಣವಂತನು ಆಗಲು ಹೇಗೆ ಸಾಧ್ಯ?"

"ಗೌತಮರೇ, ಈ ಬಗ್ಗೆ ನನ್ನಲ್ಲಿ ಉತ್ತರವಿಲ್ಲ"

"ಪ್ರಿಯ ವಸೆಥನೇ, ದೇವರು ಸರ್ವಜ್ಞ, ನ್ಯಾಯಪರ ಮತ್ತು ಕರುಣಾಮಯಿ ಎಂದು ಪೂಜಿಸುತ್ತೀರಿ. ಒಂದು ಪಕ್ಷ ನಿಮ್ಮ ಜ್ಞಾನ ವಿವೇಕದಿಂದ ಕೂಡಿದ್ದ ಆದರೆ, ಈ ಪ್ರಪಂಚದಲ್ಲಿ ಇಷ್ಟೆಲ್ಲಾ ಅನ್ಯಾಯ, ಅಸಮಾನತೆ, ಹಿಂಸೆ ಮತ್ತು ಜಿಗುಪ್ಸೆ ಏಕೆ? ಆತನ ಶಕ್ತಿ ಅಪರಿಮಿತ ಎನ್ನುವುದಾದರೆ ಈ ಸಂಕಷ್ಟ ಮಯ ಜಗವನ್ನು ಕ್ಷಣ ಮಾತ್ರದಲ್ಲಿ ಸರಿಪಡಿಸಬಹುದಿತ್ತಲ್ಲಾ? ಅದರೂ ಏಕ್ಕೆಕ ಆತನ ಜೀವಿಗಳೆಲ್ಲಾ ಸಂಕಷ್ಟಕ್ಕೆ ಗುರಿಯಾಗಿದ್ದಾರೆ? ಸುಖ ಏಕೆ ಎಲ್ಲರಿಗೂ ಸಮಾನವಾಗಿಲ್ಲ. ಯಾಕಿಷ್ಟು ಮೌಢ್ಯ, ವಂಚನೆ, ಸುಳ್ಳು ತಾಂಡವವಾಡುತ್ತಿದೆ? ಸತ್ಯವೇ ಸರ್ವೋಚ್ಚ ಎನ್ನುವುದಾದರೆ ಸತ್ಯದ ಮೇಲೆ ಸುಳ್ಳು ಏಕೆ ಜಯ ಸಾಧಿಸುತ್ತದೆ? ಸತ್ಯ ಮತ್ತು ನ್ಯಾಯ ಸೋಲಲು ಕಾರಣವೇನು? ಏತಾಕ್ಕಾಗಿ? ಅಂದರೆ ಕೆಟ್ಟದ್ದಕ್ಕೆ ಆಶ್ರಯ ಕೊಡಲು ಮಾತ್ರ ಬ್ರಹ್ಮ ಈ ಜಗತ್ತನ್ನು ಸೃಷ್ಟಿಸಿದ್ದಾನೆ ಇದರ ಅಗತ್ಯವಿತ್ತೆ?"

"ಗೌತಮರೇ, ಈ ಬಗ್ಗೆ ನನ್ನ ಬಳಿ ಉತ್ತರವಿಲ್ಲ"

"ಪ್ರಿಯ ವಸೆಥ ಪ್ರತಿ ಜೀವಿಯಲ್ಲೂ ಸುಖ ದುಃಖ ಒಳಿತು ಮತ್ತು ಕೆಡುಕು ಕಾರ್ಯವನ್ನು ತುಂಬುವ ದೇವರು ಅಸ್ಥಿತ್ವದಲ್ಲಿ ಇದ್ದಾನೆ ಎನ್ನುವುದಾದರೆ ಆಗ ಆ ದೇವರು ಪಾಪದಿಂದ ಕಲುಷಿತಗೊಂಡಿದ್ದಾನೆ ಎಂದು ಅರ್ಥವಲ್ಲವೆ? ಹಾಗಾದರೆ ಮನುಷ್ಯ ತನ್ನ ಸಂಕಲ್ಪದಂತೆ ಕೆಲಸ ಮಾಡಲಾರ ಎಂದು ಅರ್ಥವಲ್ಲವೆ? ಅಂದರೆ ಇದು ಏನನ್ನು ಸಾಬೀತು ಪಡಿಸುತ್ತದೆ? ದೇವರು ಒಳ್ಳೆಯವನಾಗಿಯೂ, ನ್ಯಾಯಪರನಲ್ಲ. ಅಂದರೆ ಅನ್ಯಾಯ ಪರವೆಂದಲ್ಲವೆ? ದೇವರು ಸೃಷ್ಟಿ ಕರ್ತ ಎಂದಾದರೂ, ಕುರುಡ ಎಂದರ್ಥವಲ್ಲವೆ? ಈ ಪ್ರತ್ಯಾರೋಪಗಳ ಅಗತ್ಯ ಏಕಿತ್ತು ಅಲ್ಲವೆ?"

ದೇವರಲ್ಲಿನ ನಂಬಿಕೆ ತುಂಬಾ ಅಪಾಯಕಾರಿ ಎಂದು ನಾನೇಕೆ ಹೇಳುವೆನೆಂದರೆ, ಮತೀಯ ಶಾಸ್ತ್ರಗಳು ವಿಧಿಗಳು ಮತ್ತು ಆಚರಣೆಗಳು ಮೌಢ್ಯದ ಆವಾಸ ಸ್ಥಾನವಲ್ಲದೆ ಮತ್ತೇನು? ದೇವರಲ್ಲಿನ ನಂಬಿಕೆ, ಆರಾಧನೆ ಮತ್ತು ಪ್ರಾರ್ಥನೆಗಳ ಸಾಫಲ್ಯತೆ ಅಂತಿಮವಾಗಿ ಸೃಷ್ಟಿಸಿದ್ದೇನು ಕೇವಲ ಪುರೋಹಿತಶಾಹಿ ಮುಂದೆ, ತಾನೇ ದೇವರ ವಾರಸುದಾರನಾದ, ದೇವರ ಪ್ರತಿನಿಧಿಯಾದ ಜೀವಂತ ದೇವರಾದ, ಕಟ್ಟ ಕಡೆಗೆ ದುರ್ದೇವತೆಯಾಗಿ ವಿಜೃಂಭಿಸಿದನಲ್ಲವೆ?

"ಗೌತಮರೇ, ಹೌದು, ಈ ಬಗ್ಗೆಯೂ ನನ್ನ ಬಳಿ ಉತ್ತರವಿಲ್ಲ"

"ಪ್ರಿಯ ವಸೆಥ, ಇಷ್ಟೆಲ್ಲಾ ದೋಷ, ದೌರ್ಬಲ್ಯ ಮತ್ತು ಅಸಮಾನತೆಯ ಮೂಲ ದೇವರೇ ಆಗಿರುವಾಗ, ದೇವರ ಇರುವಿಕೆ ಲಾಭದಾಯಕವೇ? ನಷ್ಟದಾಯಕ ಅಲ್ಲವೆ? ಧರ್ಮದ ಮುಖ್ಯ ಉದ್ದೇಶ ಏನು? ಧರ್ಮದ ಮೂಲ ದೇವರೋ? ಅಥವಾ ಮನುಷ್ಯನೋ? ಧರ್ಮದ ಕೇಂದ್ರ ಇರುವುದು ದೇವರೊಂದಿಗಿನ ಮನುಷ್ಯನ ಸಂಬಂಧದಲ್ಲಿ ಇರಲು ಹೇಗೆ ಸಾಧ್ಯ? ಅದು ಮನುಷ್ಯ ಮನುಷ್ಯರ ನಡುವಿನ ಸಂಬಂಧದಲ್ಲಿ ಇರಬೇಕಲ್ಲವೆ? ಮನುಷ್ಯ ಬೇರೆ ಮನುಷ್ಯರೊಂದಿಗೆ ಹೇಗೆ ವರ್ತಿಸಬೇಕು? ಹೇಗೆ ಸಕಲರೂ ಸುಖವಾಗಿರಬೇಕು ಎಂಬುದನ್ನು ಮನುಷ್ಯನಿಗೆ ಬೋಧಿಸುವುದು ಧರ್ಮದ ಮುಖ್ಯ ಉದ್ದೇಶವಲ್ಲವೆ? ಹಾಗಾದರೆ ಈ ದೇವರ ಅಸ್ತಿತ್ವದ ಅಗತ್ಯವೇನು?"

"ಗೌತಮರೇ, ಈ ಬಗ್ಗೆ ನನ್ನ ಬಳಿ ಉತ್ತರವಿಲ್ಲ"

"ಪ್ರಿಯ ವಸೆಥ ದೇವರಲ್ಲಿನ ನಂಬಿಕೆ ತುಂಬಾ ಅಪಾಯಕಾರಿ ಎಂದು ನಾನೇಕೆ ಹೇಳುವೆನೆಂದರೆ, ಮತೀಯ ಶಾಸ್ತ್ರಗಳು ವಿಧಿಗಳು ಮತ್ತು ಆಚರಣೆಗಳು ಮೌಢ್ಯದ ಆವಾಸ ಸ್ಥಾನವಲ್ಲದೆ ಮತ್ತೇನು? ದೇವರಲ್ಲಿನ ನಂಬಿಕೆ, ಆರಾಧನೆ ಮತ್ತು ಪ್ರಾರ್ಥನೆಗಳ ಸಾಫಲ್ಯತೆ ಅಂತಿಮವಾಗಿ ಸೃಷ್ಟಿಸಿದ್ದೇನು ಕೇವಲ ಪುರೋಹಿತಶಾಹಿ ವರ್ಗವನ್ನಲ್ಲವೆ? ಇದರ ಫಲವೇನು? ಪುರೋಹಿತಶಾಹಿ ಮುಂದೆ, ತಾನೇ ದೇವರ ವಾರಸುದಾರನಾದ, ದೇವರ ಪ್ರತಿನಿಧಿಯಾದ ಜೀವಂತ ದೇವರಾದ, ಕಟ್ಟ ಕಡೆಗೆ ದುರ್ದೇವತೆಯಾಗಿ ವಿಜೃಂಭಿಸಿದನಲ್ಲವೆ? ಇದರ ಫಲ ಮತ್ತೂ ಹೆಚ್ಚಿನ, ವ್ಯವಸ್ಥಿತವಾದ ಮೂಢನಂಬಿಕೆಯ ಸೃಷ್ಟಿ ಅಲ್ಲವೆ? ಇದರಿಂದ ವಿವೇಕ, ವಿವೇಚನೆ, ಜ್ಞಾನ ಮತ್ತು ಪ್ರಜ್ಞೆ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಂತೆ ಆಗಲಿಲ್ಲವೆ? ಇಂತಹ ದೇವರ ನಂಬಿಕೆ ಅತ್ಯಂತ ಅಪಾಯಕಾರಿ ಅಲ್ಲದೆ ಮತ್ತೇನು?

"ಗೌತಮರೇ, ಈ ಬಗ್ಗೆ ಕೂಡ ನನ್ನಲ್ಲಿ ಉತ್ತರವಿಲ್ಲ"

"ಪ್ರಿಯ ವಸೆತ, ನಾನು ದೇವರು ವಿಶ್ವದ ಸೃಷ್ಟಿ ಕರ್ತ ಎಂಬುವ ನಂಬಿಕೆಯನ್ನು ಏಕೆ ಸುಳ್ಳಿನ ತರ್ಕಸರಣಿ ಎಂದು ಅಲ್ಲಗಳೆಯುತ್ತೇನೆಂದರೆ, ಇಲ್ಲೊಂದು ಮುಖ್ಯ ಪ್ರಶ್ನೆ ಉದ್ಭವಿಸುತ್ತದೆ ಅದೇನೆಂದರೆ, ಸೃಷ್ಟಿ ಕರ್ತ ಈ ವಿಶ್ವವನ್ನು ಹೇಗೆ ಸೃಷ್ಟಿಸಿದ? ದೇವರು ಶೂನ್ಯದಿಂದ ಏನನ್ನಾದರೂ ಸೃಷ್ಟಿಸಿದನೇ? ಅಥವಾ ಬೇರೆ ಯಾವುದರಿಂದಲಾದರೂ ಅವನು ಸೃಷ್ಟಿಸಿದನೆ? ಶೂನ್ಯದಿಂದ ಏನನ್ನೂ ಸೃಷ್ಟಿಸಲು ಸಾಧ್ಯವಿಲ್ಲ ಎನ್ನುವುದು ಕಣ್ಣೆದುರಿನ ಸತ್ಯ ಸಂಗತಿ ಅಲ್ಲವೆ? ಹಾಗಾದರೆ ದೇವರೆನ್ನುವವನು ಯಾವುದರಿಂದಲೋ, ಇನ್ಯಾವುದನ್ನೋ ಸೃಷ್ಟಿಸಿದ್ದರೆ, ಈ ಸೃಷ್ಟಿಗೆ ಮುನ್ನವೇ ಆ ಮೂಲವಸ್ತು ಅಸ್ತಿತ್ವದಲ್ಲಿ ಇತ್ತು ಎಂದಾಗಲಿಲ್ಲವೆ? ಹಾಗಾದರೆ ದೇವರು ಸೃಷ್ಟಿಸುವ ಮೊದಲೇ ಇನ್ನೊಂದು ವಸ್ತು ಇತ್ತೆಂದು ಖಚಿತವಾಯಿತಲ್ಲವೆ? ಇದರ ಫಲಿತಾಂಶ ದೇವರನ್ನು ಮೂಲ ಸೃಷ್ಟಿ ಕರ್ತ ಎಂದು ಹೇಗೆ ಕರೆಯಲಾಗುತ್ತದೆ?! ಅಥವಾ ದೇವರನ್ನು ಪ್ರಥಮ ಕಾರಣ ಕರ್ತ ಎಂದು ಹೇಗೆ ಗುರುತಿಸಲಾಗುತ್ತದೆ? ಈ ಸತ್ಯದ ಪ್ರತಿಪಾದನೆಗಾಗಿಯೇ ನಾನು ದೇವರು ವಿಶ್ವದ ಸೃಷ್ಟಿ ಕರ್ತ ಎನ್ನುವುದು ಸುಳ್ಳಿನ ತರ್ಕಸರಣಿ ಎಂತಲೂ, ಈ ಜಗತ್ತು ಕಾರ್ಯಕಾರಣ ಸಂಬಂಧಕ್ಕೆ ಒಳಪಟ್ಟಿದೆ ಎಂತಲೂ, ಬದಲಾವಣೆಯೇ ಅದರ ಪ್ರಕ್ರಿಯೆ ಎಂತಲೂ ಸಾರಿದ್ದು!"

"ಪ್ರಿಯ ವಸೆಥ, ಈಗ ಹೇಳು ನನ್ನ ವಿಚಾರ ಸರಣಿಯಲ್ಲಿ ಸ್ವಾರ್ಥವಾಗಲಿ, ಲೋಪವಾಗಲಿ, ದೋಷವಾಗಲಿ ಇದಿಯೆ? ಇದು ಸರ್ವರಿಗೂ ಹಿತಕಾರಿ ಅಲ್ಲವೆ? ಮೌಢದ ಜಾಗದಲ್ಲಿ ಅರಿವು, ಜಾಗೃತಿ ಮತ್ತು ಶೀಲವನ್ನು ಎತ್ತಿಹಿಡಿಯುವುದಿಲ್ಲವೆ?" ಎಂದು ಬುದ್ಧನು ಕೇಳಿದಾಗ ಬುದ್ಧನ ಜ್ಞಾನೋದಯಕ್ಕೆ ಬೆರಗಾಗಿ ವಸೆಥ ಮತ್ತು ಭಾರದ್ವಾಜರು ಹೀಗೆ ವಂದಿಸಿದರು;

"ಹೌದು ಗುರುದೇವಾ, ನಿನ್ನ ವಾದ ಸರಣಿ ಅದ್ಭುತ...! ನಿನ್ನ ವಿಚಾರ ಸರಣಿ ಅದ್ಭುತ...!! ನಿನ್ನ ಒಡನಾಟವೇ ಅತ್ಯದ್ಭುತ....!!!" ಎಂದರು. □

'SAMVADA' Kannada Monthly, APRIL 2006 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಕರ್ನಾಟಕದ ವೀರ ಮಹಿಳೆ ಕಿತ್ತೂರು ರಾಣಿ ಚನ್ನಮ್ಮ

"ಅಖಂಡ ಭಾರತದಲ್ಲಿ ದಾಸ್ಯ ಸಂಕೋಲೆಗೆ ತೀವ್ರ ಪ್ರತಿರೋಧ ಒಡ್ಡಿ ಸ್ವಾತಂತ್ರ್ಯ ಮತ್ತು ಸ್ವಾಭಿಮಾನದ ಕಿಚ್ಚು ಹೊತ್ತಿಸಿದ ಭಾರತದ ಮೊಟ್ಟ ಮೊದಲ ಮಹಿಳೆ ವೀರರಾಣಿ ಕಿತ್ತೂರು ಚನ್ನಮ್ಮ. ಸೂರ್ಯ ಮುಳುಗದ ಸಾಮ್ರಾಜ್ಯವೆಂಬ ಅಭಿದಾನದೊಂದಿಗೆ ಬೀಗುತ್ತಿದ್ದ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಯುದ್ಧದಲ್ಲಿ ಸೋಲಿನ ಕಹಿ ಉಣಿಸಿದ ದಿಟ್ಟ ರಾಣಿ ಚನ್ನಮ್ಮಾಜಿ.

ಈ ವೀರ ಸಾಮ್ರಾಜ್ಞಿಯ ಧೈರ್ಯ ಸಾಹಸಗಳನ್ನು ನೆನಪಿಸುವ ಮತ್ತು ರಾಷ್ಟ್ರದ ಸಾರ್ವಭೌಮತ್ವ ಮತ್ತು ಸ್ವಾಭಿಮಾನಕ್ಕೆ ಸದಾ ಸ್ಫೂರ್ತಿ ದೊರಕಿಸಿಕೊಡಲು ನವದೆಹಲಿಯ ಸಂಸತ್ ಭವನದ ಪ್ರಾಂಗಣದಲ್ಲಿ ರಾಣಿ ಚನ್ನಮ್ಮಾಜಿಯ ಅಶ್ವಾರೂಢ ಪುತ್ಥಳಿಯ ಅನಾವರಣ ಮಾಡಲಾಗುವುದು".

ಕರ್ನಾಟಕ ವಾರ್ತೆ
Karnataka Information